ಮಂಗಳೂರು
ಭಾನುವಾರ, 3 ಮೇ 2026
ಸಂಪುಟ 48, ಸಂಚಿಕೆ 45 ಪುಟಗಳು 12+6
■ ಬೆಂಗಳೂರು ■ ಮಂಗಳೂರು ■ ಶಿವಮೊಗ್ಗ ■ ಹುಬ್ಬಳ್ಳಿ
₹5
REG.No.MNG /121/2024-26 Posted at kodialbail P.O / RNI:29813/78/ Daily
hosadigantha.com
epaper.hosadigantha.com
Hosadigantha Digital

ರಾಷ್ಟ್ರ ಜಾಗೃತಿಯ ದೈನಿಕ

ಹೊಸ ದಿಗಂತ

ಲೋಕಹಿತಂ ಮಮ ಕರಣೀಯಂ







ಬಿಜೆಪಿ ಪಕ್ಷದ ದಕ್ಷಿಣ ಭಾರತದ ಭೀಷ್ಮ **ಶ್ರೀ ಬಿ.ಎಸ್. ಯಡಿಯೂರಪ್ಪ** ಅವರ ಐದು ದಶಕಗಳ ರಾಜಕೀಯ ಪಯಣವು ಕರುನಾಡಿನ ರಾಜಕೀಯದಲ್ಲಿ ಹೋರಾಟ, ಸಮರ್ಪಣೆ, ಸಂಘಟನೆ ಹಾಗೂ ಸಾಧನೆಗಳ ಸುವರ್ಣ ಅಧ್ಯಾಯವಾಗಿದೆ. ಕರ್ನಾಟಕದಲ್ಲಿ ಜನಸಾಮಾನ್ಯರು, ರೈತರು, ಕಾರ್ಮಿಕ ವರ್ಗ ಹಾಗೂ ಶೋಷಿತರ ಪರವಾದ ಅವರ ಅಚಲ ಹೋರಾಟ, ಆಡಳಿತದಲ್ಲಿನ ಬದ್ಧತೆ ಹಾಗೂ ದೂರದೃಷ್ಟಿಯ ದಿಟ್ಟ ನಿರ್ಧಾರಗಳು ರಾಜ್ಯದ ಇತಿಹಾಸದಲ್ಲಿ ಅಚ್ಚಳಿಯದೆ ಹೆಗ್ಗುರುತಾಗಿ ಉಳಿಯುವಂಥದ್ದು. ಅವರ ರಾಜಕೀಯ ಪಯಣ ಅಥವಾ ಸಾರ್ವಜನಿಕ ಬದುಕು ಕೇವಲ ವ್ಯಕ್ತಿಗತ ಸಾಧನೆಯಲ್ಲ; ಅದು ದಶಕಗಳ ಹೋರಾಟ, ತ್ಯಾಗ ಮತ್ತು ನಿಷ್ಠೆಯ ಸಂಕೇತ. ಎಂತಹದೇ ಸವಾಲು ಮತ್ತು ರಾಜಕೀಯ ವಿರೋಧ-ಸವಾಲುಗಳ ನಡುವೆಯೂ ಧೃತಿಗೆಡದೆ, ಅವರು ತಮ್ಮ ಧೈರ್ಯ ಮತ್ತು ನಾಯಕತ್ವವನ್ನು ಹಂತಹಂತವಾಗಿ ಸಾಬೀತುಪಡಿಸಿದ ಕರ್ನಾಟಕ ಕಂಡ ಅಪರೂಪದ ರಾಜಕೀಯ ಮುತ್ಸದ್ದಿ. ಅರ್ಧ ಶತಮಾನದ ಕಾಲ ಜನಸೇವೆಯನ್ನೇ ಉಸಿರಾಗಿಸಿಕೊಂಡು, ಪಾರ್ಟಿ ಮತ್ತು ನಾಡಿನ ಏಳಿಗೆಗಾಗಿ ತಮ್ಮ ಬದುಕನ್ನೇ ಮುಡಿಪಾಗಿಟ್ಟ ಈ 'ರಾಜಾಹುಲಿ'ಯ ಸುದೀರ್ಘ ಸಾರ್ವಜನಿಕ ಬದುಕು ಯುವ ಪೀಳಿಗೆ ಹಾಗೂ ಯುವ ನೇತಾರರಿಗೆ ಆದರ್ಶಪ್ರಾಯವಾಗಿದೆ. ದಕ್ಷಿಣ ಭಾರತದಲ್ಲಿ ಮೊಟ್ಟ ಮೊದಲ ಬಾರಿಗೆ ಕಮಲ ಅರಳಿಸಿದ ರೈತ ನಾಯಕನ ಅಭೂತಪೂರ್ವ ಸಾಧನೆಗೆ ಗೌರವಪೂರ್ವಕ ಅಭಿನಂದನೆಗಳು ಸಲ್ಲಬೇಕು.




ದಕ್ಷಿಣ ಭಾರತದಲ್ಲಿ ಮೊಟ್ಟ ಮೊದಲ ಬಾರಿಗೆ ಕಮಲ ಅರಳಿಸಿದ ರೈತ ನಾಯಕ

ಬಿ. ಎಸ್. ಯಡಿಯೂರಪ್ಪ



''ರೈತ ಸುಖವಾಗಿದ್ದರೆ ದೇಶ ಸುಭಿಕ್ಷ'' ಎಂಬ ಮಾತಿಗೆ ಅಕ್ಷರಶಃ ಜೀವ ತುಂಬಿದವರು ಶ್ರೀ ಬಿ. ಎಸ್. ಯಡಿಯೂರಪ್ಪನವರು. ದೇಶದಲ್ಲೇ ಮೊದಲ ಬಾರಿಗೆ ಪ್ರತ್ಯೇಕ ಕೃಷಿ ಬಜೆಟ್ ಮಂಡಿಸಿ ಕ್ರಾಂತಿಕಾರಿ ಹೆಜ್ಜೆಯಿಟ್ಟು ನಾಡಿನ ರೈತರ ಬಾಳನ್ನು ಬೆಳಗುವ ಮೂಲಕ ಇತಿಹಾಸ ಸೃಷ್ಟಿಸಿದವರು. ಬಡ ಕುಟುಂಬದ ಹೆಣ್ಣುಮಕ್ಕಳ ಭವಿಷ್ಯಕ್ಕೆ ಭದ್ರತೆ ನೀಡಿದ ಭಾಗ್ಯಲಕ್ಷ್ಮಿ ಯೋಜನೆ, ಶಾಲಾ ಮಕ್ಕಳಿಗೆ ಉಚಿತ ಸೈಕಲ್ ವಿತರಿಸಿ ಶಿಕ್ಷಣಕ್ಕೆ ಹೊಸ ವೇಗ ನೀಡಿದ ಸಾಧನೆ, ರೈತರ ಸಾಲಮನ್ನಾ ಮಾಡುವ ಮೂಲಕ ಅನ್ನದಾತರ ಸಂಕಷ್ಟಕ್ಕೆ ಸ್ಪಂದನೆ, ಮಠ-ಮಂದಿರ ಹಾಗೂ ಧಾರ್ಮಿಕ ಕ್ಷೇತ್ರಗಳ ಅಭಿವೃದ್ಧಿಗೆ ವಿಶೇಷ ಅನುದಾನ ಮತ್ತು ಪ್ರೋತ್ಸಾಹ, ಬೆಂಗಳೂರು ಸೇರಿದಂತೆ ರಾಜ್ಯಾದ್ಯಂತ ಮೂಲಸೌಕರ್ಯ ಮತ್ತು ರಸ್ತೆಗಳ ಅಭಿವೃದ್ಧಿಗೆ ಒತ್ತು, ಕೋವಿಡ್ ಸಂಕಷ್ಟದ ಕಾಲದಲ್ಲಿ ಜನಸಾಮಾನ್ಯರ ಹಿತ ಕಾಯಲು ವಿಶೇಷ ಪ್ಯಾಕೇಜ್ ಘೋಷಣೆ, ನೆರೆ ಹಾವಳಿಯಿಂದ ತತ್ತರಿಸಿದಾಗ ನಾಡಿನ ಜನತೆಗೆ ಧೈರ್ಯ ತುಂಬಿ, ಭಾಗಶಃ ಮನೆ ಹಾನಿಗೂ 3 ಲಕ್ಷ ರೂ. ಪರಿಹಾರ ಹಾಗೂ ಹೊಸ ಮನೆ ನಿರ್ಮಿಸಲು 5 ಲಕ್ಷ ರೂ. ಪರಿಹಾರ ಏರಿಸಿದ ಮಹಾನ್ ಸಾಧಕ. ನಾಡಿನ ಧೀಮಂತ ಶಕ್ತಿಯಾಗಿ ಜನಸೇವೆಗೈದ ಜನಾನುರಾಗಿ ಜನನಾಯಕ ಶ್ರೀ ಬಿ.ಎಸ್. ಯಡಿಯೂರಪ್ಪನವರ ಆಡಳಿತ ಅವಿಸ್ಮರಣೀಯ. ಬನ್ನಿ, ಜನಸೇವೆಯಲ್ಲಿ ಸಾರ್ಥಕ 50 ವರ್ಷ ಕಾಲ ಸೇವೆ ಸಲ್ಲಿಸಿದ, ಜನನಾಯಕ, ರೈತ ನಾಯಕ ಬಿ.ಎಸ್. ಯಡಿಯೂರಪ್ಪನವರ ಅಭಿಮಾನೋತ್ಸವದಲ್ಲಿ ಸಹಸ್ರ ಸಹಸ್ರ ಸಂಖ್ಯೆಯಲ್ಲಿ ಪಾಲ್ಗೊಳ್ಳಿ... ಅನ್ನದಾತನ ನಾಯಕನನ್ನು ಗೌರವಿಸಿ.

















ಕರಾವಳಿ ಮತ್ತು ಮಂಗಳೂರಿನ ಬಗ್ಗೆ ಹಾಗೂ ಇಲ್ಲಿನ ಕಾರ್ಯಕರ್ತರ ಬಗ್ಗೆ ವಿಶೇಷ ಅಭಿಮಾನವನ್ನು ಹೊಂದಿದ್ದ ಶ್ರೀ ಬಿ.ಎಸ್. ವೈ. ಅವರು ಮಂಗಳೂರು ನಗರದ ಮೂಲಸೌಕರ್ಯ ಅಭಿವೃದ್ಧಿಗೆ ವಿಶೇಷ ಒತ್ತು ನೀಡಿದ್ದರು. 2019ರಲ್ಲಿ ಭೀಕರ ನೆರೆಯ ಸಂದರ್ಭದಲ್ಲಿ ಬೆಳ್ತಂಗಡಿ ಭಾಗದ ಜನತೆ ಸಂಕಷ್ಟಕ್ಕೆ ಸಿಲುಕಿದ್ದಾಗ, ಶ್ರೀ ಬಿ.ಎಸ್.ವೈ. ಅವರು ತೋರಿದ ತ್ವರಿತ ಸ್ಪಂದನೆ ಮತ್ತು ಕಾಳಜಿ ಇಂದಿಗೂ ಅಲ್ಲಿನ ಜನರ ಮನಸ್ಸಿನಲ್ಲಿ ಹಸಿರಾಗಿ ಉಳಿದಿದೆ. ನುಡಿದಂತೆ ನಡೆದ ಅವರ ಆಡಳಿತಾತ್ಮಕ ದಕ್ಷತೆಯು, ಸಂತ್ರಸ್ತರ ಬದುಕಿಗೆ ಹೊಸ ಚೈತನ್ಯ ತುಂಬಿದ ಅಚಲ ಶಕ್ತಿಯಾಗಿದೆ. ಸೋಲಿಗೆ ಕುಗ್ಗದೆ, ಗೆಲುವಿಗೆ ಬೀಗದೆ ಜನಸೇವೆಗಾಗಿಯೇ ಮುಡಿಪಾಗಿಟ್ಟ ಅವರ ಜೀವನ ಯುವ ರಾಜಕಾರಣಿಗಳಿಗೆ ಪಠ್ಯಪುಸ್ತಕ.ಅವರು 50 ವರ್ಷಗಳ ತಮ್ಮ ರಾಜಕೀಯ ಜೀವನದಲ್ಲಿ ಎದುರಿಸಿದ ಅಸಂಖ್ಯಾತ ಸವಾಲು ಹಾಗೂ ಅಗ್ನಿಪರೀಕ್ಷೆಯೂ ಅವರ ವ್ಯಕ್ತಿತ್ವವನ್ನು ಪುಟವಿಟ್ಟ ಚಿನ್ನದಂತೆ ಮಾಡಿದೆ. ಶೂನ್ಯದಿಂದ ಸಂಘಟನೆಯನ್ನು ಕಟ್ಟಿ, ದಕ್ಷಿಣ ಭಾರತದಲ್ಲಿ ಬಿಜೆಪಿಯ ಭದ್ರ ಬುನಾದಿ ಹಾಕಿದ ಇವರು 'ಛಲ'ಕ್ಕೆ ಮತ್ತೊಂದು ಹೆಸರು.

ಇಂತಹ ಧೀಮಂತ ವ್ಯಕ್ತಿತ್ವಕ್ಕೆ ಗೌರವ ಸಲ್ಲಿಸುವ ಕ್ಷಣ ಈಗ ನಮ್ಮ ಪಾಲಿಗೆ ಒದಗಿ ಬಂದಿದೆ. ಈ 50 ವರ್ಷಗಳ ಸಾರ್ಥಕ ರಾಜಕೀಯ ಜೀವನಕ್ಕೆ ಗೌರವ ಸಲ್ಲಿಸುವ ಈ ಕಾರ್ಯಕ್ರಮಕ್ಕೆ ನಾವೆಲ್ಲ ಸಾಕ್ಷಿಗಳಾಗೋಣ. ನಾಡಿನ ಶಕ್ತಿಯಾಗಿ ಜನಸೇವೆಗೈದ ಜನಾನುರಾಗಿ ಜನ ನಾಯಕ ಶ್ರೀ ಬಿ. ಎಸ್. ಯಡಿಯೂರಪ್ಪನವರಿಗೆ ಗೌರವ ಸಲ್ಲಿಸೋಣ ಬನ್ನಿ...



ಕ್ಯಾಪ್ಟನ್ ಬ್ರಿಜೇಶ್ ಚೌಟ

ಸಂಸದರು, ದಕ್ಷಿಣ ಕನ್ನಡ
ರಾಜ್ಯ ಕಾರ್ಯದರ್ಶಿ, ಬಿಜೆಪಿ ಕರ್ನಾಟಕ

ಕಿರುಸುದ್ದಿ

ಆರ್ಯಭಟ ಪ್ರಶಸ್ತಿಗೆ ಡಾ.ಸಂಜೀವ ದಂಡೆಕೇರಿ ಆಯ್ಕೆ

• **ಮಂಗಳೂರು:** ಬೆಂಗಳೂರಿನ ಆರ್ಯಭಟ ಕಲ್ಚರಲ್ ಆರ್ಗನೈಸೇಷನ್ ಸಂಸ್ಥೆಯು ರಾಷ್ಟ್ರ– ಅಂತಾರಾಷ್ಟ್ರೀಯ ಮಟ್ಟದಲ್ಲಿ ಪ್ರಸಿದ್ಧಿ ಪಡೆದ ಅಸಾಧಾರಣ ಸಾಧಕರಿಗೆ ನೀಡುವ 51ನೇ ವರ್ಷದ ಅಂತಾರಾಷ್ಟ್ರೀಯ ಆರ್ಯಭಟ ಪ್ರಶಸ್ತಿಗೆ ಕರಾವಳಿ ಕರ್ನಾಟಕದ ಶ್ರೇಷ್ಠ ನಾಟಕಕಾರ, ನಿರ್ದೇಶಕ ತುಳು ರಂಗಭೂಮಿ ಮತ್ತು ಚಿತ್ರರಂಗಕ್ಕೆ ಅಮೂಲ್ಯ ಕೊಡುಗೆ ನೀಡಿದ ಡಾ.ಸಂಜೀವ ದಂಡೆಕೇರಿ ಆಯ್ಕೆಯಾಗಿದ್ದಾರೆ. ನಾಟಕ ರಂಗದೊಂದಿಗೆ ಡಾ.ಸಂಜೀವ ದಂಡೆಕೇರಿ ಮಾಡಿರುವ ಸಾಮಾಜಿಕ ಮತ್ತು ಸಾಂಸ್ಕೃತಿಕ ಸೇವೆಯನ್ನು ಪರಿಗಣಿಸಿ ಈ ಪ್ರಶಸ್ತಿ ನೀಡಲಾಗುತ್ತಿದೆ ಎಂದು ಪ್ರಕಟನೆ ತಿಳಿಸಿದೆ. ಆಯುರ್ವೇದ ವೈದ್ಯ ಡಾ.ಸಂಜೀವ ದಂಡೆಕೇರಿ, ತುಳು ಭಾಷೆಯಲ್ಲಿ ಸುಮಾರು 20 ಜನಪ್ರಿಯ ನಾಟಕಗಳನ್ನು ರಚಿಸಿದ್ದಾರೆ. ಅವರ ಪ್ರಥಮ ನಾಟಕ 'ಕಲ್ಪಂದಿ ತಿಮ್ಮೆ' 1962ರಲ್ಲಿ ರಂಗ ಪ್ರದರ್ಶನಗೊಂಡಿದೆ. ಅವರ 'ಬಯ್ಯ ಮಲ್ಲಿಗೆ' ತುಳು ನಾಟಕ 58 ವರ್ಷಗಳಲ್ಲಿ ದೇಶ – ವಿದೇಶಗಳಲ್ಲಿ ಸುಮಾರು 28 ಸಾವಿರ ಪ್ರದರ್ಶನಗಳನ್ನು ಕಂಡಿದೆ. ಪೊಣ್ಣ ಜನ್ಮ, ಕಾವೇರಿ, ಬೊಲ್ಲಿ ಮೂಡ್‌ಂಡ, ಪೂ ಪನ್ನೀರ್, ಪಾದ ಕಾಣಿಕ, ಸರಸ್ವತಿ, ಒಂಜೇ ಕರ್ಲ್, ಗಂಗಾ ರಾಮ್ ಮತ್ತಿತರ ನಾಟಕಗಳನ್ನೂ ರಚಿಸಿದ್ದಾರೆ. ಹಲವು ಚಲನ ಚಿತ್ರಗಳಿಗೆ ಕಥೆ, ಚಿತ್ರಕಥೆ ಮತ್ತು ಸಂಭಾಷಣೆ ಬರೆದ ಅವರು, ರಂಗಭೂಮಿ ಮತ್ತು ಚಲನಚಿತ್ರಗಳ ಜೊತೆಗೆ ಕಟ್ಟಡ ನಿರ್ಮಾಣ ಕ್ಷೇತ್ರದಲ್ಲೂ ತೊಡಗಿಸಿಕೊಂಡಿದ್ದರು. ಬಯ್ಯ ಮಲ್ಲಿಗೆ ನಾಟಕ ಅದೇ ಹೆಸರಿನಲ್ಲಿ ಸಿನಿಮಾ ಆಗಿಯೂ ಮೂಡಿ ಬಂದಿದೆ. ಬೊಳ್ಳಿದೋಟ ಸಿನಿಮಾವನ್ನು ಕೂಡಾ ನಿರ್ಮಿಸಿದ್ದಾರೆ. ತುಳು ಸಾಹಿತ್ಯ ಅಕಾಡೆಮಿ, ಕರ್ನಾಟಕ ನಾಟಕ ಅಕಾಡೆಮಿ, ರಂಗಚಾವಡಿ ಸಹಿತ ಅನೇಕ ಪ್ರಶಸ್ತಿಗಳನ್ನು ಪಡೆದುಕೊಂಡಿದ್ದಾರೆ. ಮೇ 23ರಂದು ಬೆಂಗಳೂರು ರವೀಂದ್ರ ಕಲಾಕ್ಷೇತ್ರದಲ್ಲಿ ನಡೆಯುವ ಪ್ರಶಸ್ತಿ ಪ್ರದಾನ ಸಮಾರಂಭ ದಲ್ಲಿ ಡಾ.ಸಂಜೀವ ದಂಡೆಕೇರಿ ಆರ್ಯಭಟ ಪ್ರಶಸ್ತಿ ಸ್ವೀಕರಿಸುವರು ಎಂದು ಪ್ರಕಟನೆ ತಿಳಿಸಿದೆ.



ಉಡುಪಿಯ ರಜತಾದ್ರಿ ಜಿಲ್ಲಾ ಪಂಚಾಯತ್ ಡಾ. ವಿ.ಎಸ್. ಆಚಾರ್ಯ ಸಭಾಂಗಣದಲ್ಲಿ ದಿಶಾ ಸಭೆ

ರೋಗಿಗೆ ಸೂಕ್ತ ಸೌಲಭ್ಯ: ಕೋಟ ಸೂಚನೆ

• **ಉಡುಪಿ :** ಆಯುಷ್ಮಾನ್ ಆರೋಗ್ಯ ಕರ್ನಾಟಕ ಯೋಜನೆಯಡಿ ವೈದ್ಯಕೀಯ ಚಿಕಿತ್ಸೆಗಾಗಿ ಜಿಲ್ಲಾ ಆಸ್ಪತ್ರೆಗಳಿಂದ ಹೆಚ್ಚಿನ ಚಿಕಿತ್ಸೆಗಾಗಿ ಖಾಸಗಿ ಆಸ್ಪತ್ರೆಗಳಿಗೆ ಚಿಕಿತ್ಸೆಗೆ ಶಿಫಾರಸ್ಸು ಮಾಡಿದಾಗ ರೋಗಿಗಳಿಗೆ ಅಗತ್ಯ ಚಿಕಿತ್ಸಾ ನೆರವುಗಳು ಸಿಗುವಂತೆ ನೋಡಿಕೊಳ್ಳಬೇಕು ಎಂದು ಆರೋಗ್ಯ ಇಲಾಖೆಯ ಅಧಿಕಾರಿಗಳಿಗೆ ಉಡುಪಿ – ಚಿಕ್ಕಮಗಳೂರು ಲೋಕಸಭಾ ಸಂಸದ ಕೋಟ ಶ್ರೀನಿವಾಸ ಪೂಜಾರಿ ಸೂಚನೆ ನೀಡಿದರು.

ಅವರು ಶನಿವಾರ ನಗರದ ಮಣಿಪಾಲ ರಜತಾದ್ರಿಯ ಜಿಲ್ಲಾ ಪಂಚಾಯತ್ ಡಾ.ವಿ.ಎಸ್. ಆಚಾರ್ಯ ಸಭಾಂಗಣದಲ್ಲಿ ನಡೆದ ಉಡುಪಿ ಜಿಲ್ಲಾ ಅಭಿವೃದ್ಧಿ ಸಮನ್ವಯ ಮತ್ತು ಉಸ್ತುವಾರಿ ಸಮಿತಿ (ದಿಶಾ) ಸಭೆಯ ಅಧ್ಯಕ್ಷತೆ ವಹಿಸಿ ಮಾತನಾಡುತ್ತಿದ್ದರು.

ಸರಕಾರ ಜನಸಾಮಾನ್ಯರಿಗೆ ಉತ್ತಮ ಆರೋಗ್ಯ ಸೇವೆಗಳನ್ನು ಒದಗಿಸುವ ಉದ್ದೇಶದಿಂದ ಅನೇಕ ಯೋಜನೆಗಳು ಹಾಗೂ ಕಾರ್ಯಕ್ರಮಗಳನ್ನು ಜಾರಿಗೆ ತಂದಿದೆ. ಇವು ಅವಶ್ಯವಿರುವವರಿಗೆ ಲಭ್ಯವಾಗುವಂತೆ ನೋಡಿಕೊಳ್ಳುವುದು ನಮ್ಮಗಳ ಜವಾಬ್ದಾರಿ. ಆಯುಷ್ಮಾನ್ ಭಾರತ್ ಆರೋಗ್ಯ ಕರ್ನಾಟಕ ಯೋಜನೆಯಡಿ ಜಿಲ್ಲಾ ಸರಕಾರಿ ಆಸ್ಪತ್ರೆಗಳಿಗೆ ಶಿಫಾರಸ್ಸು ಆದಂತಹ ರೋಗಿಗಳಿಗೆ ಚಿಕಿತ್ಸಾ ನೆರವು ದೊರಕುತ್ತಿಲ್ಲ ಎಂಬ ದೂರುಗಳು ಪದೇ ಪದೇ ಕೇಳಿ ಬರುತ್ತಿವೆ. ಇವರುಗಳಿಗೆ ಅಗತ್ಯ ಸೌಲಭ್ಯಗಳು ಸಿಗುವಂತೆ ನೋಡಿಕೊಳ್ಳಲು ಆಸ್ಪತ್ರೆವಾರು ಕೋ–ಆರ್ಡಿನೇಟರ್‌ಗಳನ್ನು ಸಹ ನೇಮಕ ಮಾಡಿದ್ದರೂ ಸಹ ಸರಿಯಾಗಿ ಸ್ಪಂದಿಸಿ, ಸಹಕಾರ ನೀಡುತ್ತಿಲ್ಲ. ಈ ಬಗ್ಗೆ ಸೂಕ್ತ ಕ್ರಮ ವಹಿಸಬೇಕು ಎಂದರು.

ಆಯುಷ್ಮಾನ್ ಯೋಜನೆಯಡಿ ಜಿಲ್ಲಾ ಆಸ್ಪತ್ರೆಯಿಂದ ರೆಫರಲ್ ಮಾಡಿದಂತಹ ರೋಗಿಗಳಿಗೆ ಚಿಕಿತ್ಸೆ ನೀಡಲು ಮಣಿಪಾಲ್ ಖಾಸಗಿ ಆಸ್ಪತ್ರೆ ಸ್ಪಂದಿಸುತ್ತಿಲ್ಲ. ಈ ಬಗ್ಗೆ ರಾಜ್ಯದ ನಿರ್ದೇಶಕರಿಗೆ ಪತ್ರ ಬರೆಯುವಂತೆ ಸೂಚನೆ ನೀಡಿದ ಅವರು, ಜಿಲ್ಲಾಧಿಕಾರಿಗಳ ಅಧ್ಯಕ್ಷತೆಯಲ್ಲಿ ಜಿಲ್ಲೆಯ ಜನಪ್ರತಿನಿಧಿಗಳನ್ನೊಳಗೊಂಡಂತೆ ಈ ಬಗ್ಗೆ ಒಂದು ವಾರದ ಒಳಗಾಗಿ ಸಭೆ ಕರೆಯುವಂತೆ ತಿಳಿಸಿದರು.



> ಮನೆ ಮನೆಗೆ ಎಲ್.ಪಿ.ಜಿ ಗ್ಯಾಸ್ ಸಂಪರ್ಕ ನೀಡುವ ಕಾಮಗಾರಿಯನ್ನು ಅದಾನಿ ಕಂಪನಿ ವತಿಯಿಂದ ಕೈಗೊಳ್ಳಲಾಗಿತ್ತು. ಈಗಾಗಲೆ ಕಾಮಗಾರಿಯನ್ನು ಕಳೆದ 10 ವರ್ಷಗಳಿಂದ ಕೈಗೊಳ್ಳಲಾಗುತ್ತಿದೆ. ಆದರೆ ಇವುಗಳ ಅನುಷ್ಠಾನ ಸಮರ್ಪಕವಾಗಿ ಆಗದೇ ಇರುವ ಬಗ್ಗೆ ಬೇಸರ ವ್ಯಕ್ತಪಡಿಸಿದ ಅವರು, ಮುಂದಿನ ಜೂನ್ ಮಾಹೆ ಒಳಗಾಗಿ ಪೈಪ್‌ಲೈನ್ ಕಾಮಗಾರಿ ಮುಗಿಸುವುದರೊಂದಿಗೆ ಗ್ಯಾಸ್ ಸಂಪರ್ಕ ಒದಗಿಸಬೇಕು.
>
> ■ ಕೋಟ ಶ್ರೀನಿವಾಸ ಪೂಜಾರಿ

ಬ್ರಹ್ಮಾವರ ತಾಲೂಕಿನಲ್ಲಿ ಇ.ಎಸ್.ಐ ಆಸ್ಪತ್ರೆಗೆ 2.5 ಕೋಟಿ ರೂ. ಮಂಜೂರಾಗಿದೆ. ಇದರ ಅನುಷ್ಠಾನ ತ್ವರಿತಗತಿಯಲ್ಲಿ ಆಗುವುದರೊಂದಿಗೆ ಫಲಾನುಭವಿಗಳಿಗೆ ಇದರ ಲಾಭ ದೊರಕಬೇಕು ಎಂದ ಅವರು, ಇದರ ಪ್ರಗತಿಗೆ ಸಂಬಂಧಿಸಿದ ಉತ್ತರ ಕೊಡಲು ಅಧಿಕಾರಿಗಳು ಗೈರು ಹಾಜರಾದ ಬಗ್ಗೆ ಅಸಮಾಧಾನ ವ್ಯಕ್ತಪಡಿಸಿದ ಅವರು, ಕಾರಣ ಕೇಳಿ ನೋಟೀಸ್ ನೀಡುವಂತೆ ಸೂಚನೆ ನೀಡಿದರು.

ಕೊಂಕಣ ರೈಲ್ವೆಗೆ ನೀರು ಸರಬರಾಜು ಮಾಡುವ ಕಾಮಗಾರಿಯನ್ನು ಆದ್ಯತೆಯ ಮೇಲೆ ಶೀಘ್ರದಲ್ಲಿಯೇ ಪ್ರಾರಂಭಿಸಬೇಕು. ಈಗಾಗಲೇ ನಗರಸಭೆ ವತಿಯಿಂದ ರೈಲ್ವೆ ನಿಲ್ದಾಣ ಹಾಗೂ ವಸತಿಗೃಹಗಳಿಗೆ ನೀರು ಸರಬರಾಜು ಮಾಡಲಾಗುತ್ತಿದೆ. ರೈಲಿಗೆ ನೀರನ್ನು ಒದಗಿಸಲು ನೀರಿನ ಮೂಲವನ್ನು ಗುರುತಿಸುವುದರೊಂದಿಗೆ ಕಾಮಗಾರಿ ಕೈಗೊಳ್ಳಬೇಕು. ಇದಕ್ಕೆ ಜಿಲ್ಲಾ ಪಂಚಾಯತ್‌ನ ನೀರು ನೈರ್ಮಲ್ಯ ವಿಭಾಗದ ತಾಂತ್ರಿಕ ಸಲಹೆಯನ್ನು ಪಡೆಯಬೇಕು ಎಂದರು.

ಎನ್.ಎಲ್.ನೆಟ್‌ವರ್ಕ್ ಸಮಸ್ಯೆ ಬಗೆಹರಿಸಲು ಅಧಿಕಾರಿಗಳಿಗೆ ಸೂಚನೆ

ಜಿಲ್ಲೆಯ ಗ್ರಾಮೀಣ ಭಾಗಗಳಲ್ಲಿ ಬಿ.ಎಸ್. ಎನ್.ಎಲ್. ನೆಟ್‌ವರ್ಕ್ ಸಮಸ್ಯೆ ಉಂಟಾಗುತ್ತಿದೆ. ಈಗಾಗಲೇ 196 ಟವರ್‌ಗಳು ಕಾರ್ಯನಿರ್ವಹಿಸುತ್ತಿದ್ದು, ಅವುಗಳಲ್ಲಿ 115 4–ಜಿಗೆ ಉನ್ನತೀಕರಿಸಲಾಗಿದೆ. ಬಾಕಿ ಉಳಿದವುಗಳನ್ನು ಶೀಘ್ರದಲ್ಲಿಯೇ ಕೈಗೊಳ್ಳಬೇಕು ಎಂದ ಅವರು, ವಿದ್ಯುಚ್ಛಕ್ತಿ ಕಡಿತದ ಸಂದರ್ಭದಲ್ಲಿ ಬಿ.ಎಸ್.ಎನ್.ಎಲ್. ನೆಟ್‌ವರ್ಕ್‌ಗಳು ಲಭ್ಯವಾಗುತ್ತಿಲ್ಲ. ಇವುಗಳಿಗೆ ಅಗತ್ಯವಿರುವ ಬ್ಯಾಟರಿ ಅಳವಡಿಕೆ ಕಾರ್ಯಗಳನ್ನು ಆದ್ಯತೆಯ ಮೇಲೆ ಕೈಗೊಳ್ಳಬೇಕು. ಈಗಾಗಲೇ 80 ಟವರ್‌ಗಳಿಗೆ 46 ಹೊಸ ಬ್ಯಾಟರಿಗಳು ಅಳವಡಿಸಲಾಗಿದ್ದು, ಉಳಿದವುಗಳಿಗೆ ಕೂಡಲೇ ಅಳವಡಿಸಲು ಕ್ರಮ ಕೈಗೊಳ್ಳಬೇಕೆಂದು ಕೋಟ ಶ್ರೀನಿವಾಸ ಪೂಜಾರಿ ಸೂಚನೆ ನೀಡಿದರು.

ಇಂದ್ರಾಳಿ ರೈಲ್ವೆ ನಿಲ್ದಾಣದಲ್ಲಿ ವಾಹನಗಳ ಪಾರ್ಕಿಂಗ್ ವ್ಯವಸ್ಥೆ ಸಮರ್ಪಕವಾಗಿಲ್ಲದೇ ಮಳೆಗಾಲದಲ್ಲಿ ವಾಹನಗಳ ನಿಲುಗಡೆಗೆ ತೊಂದರೆ ಉಂಟಾಗುತ್ತಿವೆ ಎಂಬ ದೂರುಗಳು ಸಾರ್ವಜನಿಕರಿಂದ ಕೇಳಿ ಬರುತ್ತಿವೆ. ಈ ಬಗ್ಗೆ ಸೂಕ್ತ ಕ್ರಮ ವಹಿಸಬೇಕು ಎಂದ ಅವರು, ರೈಲ್ವೆ ನಿಲ್ದಾಣಕ್ಕೆ ಪ್ರಸ್ತುತ ಇರುವ ರಸ್ತೆ ಅಗಲೀಕರಣಕ್ಕೆ ಭೂ ಸ್ವಾಧೀನ ಕೈಗೊಳ್ಳಲು ಪ್ರಸ್ತಾವನೆಯನ್ನು ಕಳುಹಿಸಿಕೊಡಬೇಕು. ಇದರ ಜೊತೆಗೆ ಬದಲಿ ರಸ್ತೆ ವ್ಯವಸ್ಥೆಗೂ ಕ್ರಮ ವಹಿಸಬೇಕು ಎಂದರು.

ಪ್ರಧಾನಮಂತ್ರಿ ಗ್ರಾಮ ಸಡಕ್ ಯೋಜನೆಗೆ ಸಂಬಂಧಿಸಿದಂತೆ ಜಿಲ್ಲೆಯ ಕುಂದಾಪುರ ಹಾಗೂ ಬೈಂದೂರು ಕ್ಷೇತ್ರಕ್ಕೆ ಒಟ್ಟು 9 ಕಾಮಗಾರಿಗಳಿಗೆ ಅನುಮೋದನೆ ನೀಡಿದ್ದು, ಕಾಮಗಾರಿಗಳನ್ನು ತ್ವರಿತಗತಿಯಲ್ಲಿ ಪೂರ್ಣಗೊಳಿಸಬೇಕು. ಜಿಲ್ಲೆಯಲ್ಲಿ ರಾಷ್ಟ್ರೀಯ ಹೆದ್ದಾರಿ ಕಾಮಗಾರಿಗಳನ್ನು ಆದ್ಯತೆಯ ಮೇಲೆ ಕೈಗೊಂಡು ಪೂರ್ಣಗೊಳಿಸಬೇಕು. ಅಗತ್ಯವಿರುವ ಭೂ–ಸ್ವಾಧೀನ ಪ್ರಕ್ರಿಯೆಯನ್ನು ತ್ವರಿತಗೊಳಿಸಬೇಕು ಎಂದರು.

ಕುಸುಮ್ –ಬಿ ಯೋಜನೆಯಡಿ ರೈತರ ಜಮೀನಿಗೆ ಪಂಪ್‌ಸೆಟ್ ಅಳವಡಿಸುವ ಪ್ರಗತಿ ಕಡಿಮೆ ಇದ್ದು, ಇದರ ಪ್ರಗತಿಯನ್ನು ಹೆಚ್ಚಿಸಬೇಕು ಎಂದ ಅವರು, ಕುಸುಮ್ –ಸಿ ಯೋಜನೆಯಡಿ ಜಿಲ್ಲೆಗೆ ಕೇಂದ್ರದಿಂದ ಬಿಡುಗಡೆಯಾದ 20 ಕೋಟಿ ರೂ. ಗಳ ಅನುದಾನ ಬಿಡುಗಡೆ ಆಗಿದ್ದು, ಇದರ ಅನುಷ್ಠಾನ ಆಗಬೇಕು ಎಂದರು. ಕುಸುಮ್– ಸಿ ಯೋಜನೆಯ ಅನುಷ್ಠಾನಕ್ಕೆ ಅಗತ್ಯವಿರುವ ಭೂಮಿಯ ಸಮಸ್ಯೆಯನ್ನು ಕೂಡಲೇ ಬಗೆಹರಿಸುವಂತೆ ಅರಣ್ಯ ಇಲಾಖೆಯ ಅಧಿಕಾರಿಗಳಿಗೆ ಸೂಚನೆ ನೀಡಿದರು.

ಜಲ್ ಜೀವನ್ ಮಿಷನ್ ಯೋಜನೆ ಅಡಿಯಲ್ಲಿ ಮನೆ ಮನೆ ನಳ ನೀರನ್ನು ಒದಗಿಸುವ ಪೈಪ್‌ಲೈನ್ ಕಾಮಗಾರಿಗಳು ಬಹುತೇಕ ಪೂರ್ಣಗೊಂಡಿವೆ. ಇವುಗಳಿಗೆ ನೀರಿನ ಮೂಲಗಳನ್ನು ಗುರುತಿಸಿ, ನಿರಂತರ ನೀರನ್ನು ಕಲ್ಪಿಸಲು ಕ್ರಮ ಕೈಗೊಳ್ಳಬೇಕು. ಬಹುಗ್ರಾಮ ಕುಡಿಯುವ ನೀರು ಯೋಜನೆಗಳ ಕಾಮಗಾರಿಗಳನ್ನು ಸಹ ಆದ್ಯತೆಯ ಮೇಲೆ ಪೂರ್ಣಗೊಳಿಸುವುದರೊಂದಿಗೆ ಗ್ರಾಮೀಣ ಭಾಗದಲ್ಲಿ ನೀರಿನ ಸಮಸ್ಯೆ ಉಂಟಾಗದಂತೆ ನೋಡಿಕೊಳ್ಳಬೇಕು ಎಂದರು.

ನಗರ ಹಾಗೂ ಗ್ರಾಮೀಣ ಭಾಗಗಳಲ್ಲಿ ಘನತ್ಯಾಜ್ಯ ವಿಲೇವಾರಿ ಗಳು ವೈಜ್ಞಾನಿಕವಾಗಿ ಕೈಗೊಳ್ಳಲು ಆದ್ಯತೆ ನೀಡಬೇಕು. ಆದರೆ, ರಸ್ತೆ ಬದಿಯಲ್ಲಿ ಎಲ್ಲೆಂದರಲ್ಲಿ ಘನತ್ಯಾಜ್ಯಗಳನ್ನು ಎಸೆಯುತ್ತಿರುವುದು ಕಂಡು ಬರುತ್ತಿದೆ. ಈ ಬಗ್ಗೆ ಪಿ.ಡಿ.ಓ ಗಳು ಹಾಗೂ ಸ್ಥಳೀಯ ಸಂಸ್ಥೆಯವರು ಕಸ ಎಲ್ಲೆಂದರಲ್ಲಿ ಎಸೆಯುವವರಿಗೆ ದಂಡ ವಿಧಿಸುವುದರೊಂದಿಗೆ ನೈರ್ಮಲ್ಯ ಕಾಪಾಡುವಲ್ಲಿ ಮುಂದಾಗಬೇಕು ಎಂದರು.

ಶೈಕ್ಷಣಿಕ ವರ್ಷದಲ್ಲಿ ಪಿ.ಯು.ಸಿ ಹಾಗೂ ಎಸ್.ಎಸ್.ಎಲ್.ಸಿ ಪರೀಕ್ಷೆಯಲ್ಲಿ ಉಡುಪಿ ಜಿಲ್ಲೆಯು ಉತ್ತಮ ಫಲಿತಾಂಶ ಲಭಿಸಿರುವ ಹಿನ್ನೆಲೆ, ವಿದ್ಯಾರ್ಥಿಗಳು, ಶಿಕ್ಷಕರುಗಳು, ಪೋಷಕರು ಹಾಗೂ ಇಲಾಖೆಯ ಅಧಿಕಾರಿಗಳಿಗೆ ಪ್ರಶಂಸೆ ವ್ಯಕ್ತಪಡಿಸಿದರು.

ಸಭೆಯಲ್ಲಿ ಶಾಸಕರುಗಳಾದ ಯಶ್‌ಪಾಲ್ ಎ. ಸುವರ್ಣ, ಗುರುರಾಜ್ ಶೆಟ್ಟಿ ಗಂಟಿಹೊಳೆ, ಎ. ಕಿರಣ್ ಕುಮಾರ್ ಕೊಡ್ಗಿ ಹಾಗೂ ಗುರ್ಮೆ ಸುರೇಶ್ ಶೆಟ್ಟಿ ವಿಧಾನ ಪರಿಷತ್ ಶಾಸಕ ಡಾ. ಮಂಜುನಾಥ ಭಂಡಾರಿ, ಜಿಲ್ಲಾಧಿಕಾರಿ ಸ್ವರೂಪ ಟಿ.ಕೆ, ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಹಣಾಧಿಕಾರಿ ಪ್ರತೀಕ್ ಬಾಯಲ್, ಡಿ.ಎಫ್.ಓ ರುಥ್ರೇನ್ ಪಿ, ವೈಲ್ಡ್‌ಲೈಫ್ ಡಿ.ಎಫ್.ಓ ಶಿವರಾಮ್ ಎಂ ಬಾಬು, ವಿವಿಧ ಜಿಲ್ಲಾ ಹಾಗೂ ತಾಲೂಕು ಮಟ್ಟದ ಅಧಿಕಾರಿಗಳು ಹಾಗೂ ಮತ್ತಿತರರು ಉಪಸ್ಥಿತರಿದ್ದರು.

ಬಿಜೆಪಿ ಕಾರ್ಯಕರ್ತರಲ್ಲಿ ಹುರುಪು ತಂದ ಬಿಎಸ್‌ವೈ ಅಭಿಮಾನೋತ್ಸವ

ಸ್ಟಿಕ್ಕರ್ ಅಭಿಯಾನಕ್ಕೆ ಸಿಕ್ಕಿತು ಚಾಲನೆ

• **ಮಂಗಳೂರು:** ಮಾಜಿ ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ ಅವರ ಸಮಾಜ ಸೇವೆಯ 50ನೇ ವರ್ಷದ ಸಂಭ್ರಮ ಹಿನ್ನೆಲೆಯಲ್ಲಿ ಚಿತ್ರದುರ್ಗದಲ್ಲಿ ಮೇ 9ರಂದು ನಡೆಯಲಿರುವ ಬಿಎಸ್‌ವೈ ಅಭಿಮಾ ನೋತ್ಸವ ಕಾರ್ಯಕ್ರಮ ಹಿನ್ನೆಲೆಯಲ್ಲಿ ವಾಹನಗಳಿಗೆ ಸ್ಟಿಕ್ಕರ್ ಅಂಟಿಸುವ ಅಭಿಯಾನಕ್ಕೆ ನಗರದ ಪಿವಿಎಸ್ ವೃತ್ತ ಬಳಿಯ ಬಿಜೆಪಿ ದಕ್ಷಿಣ ಕನ್ನಡ ಜಿಲ್ಲಾ ಕಚೇರಿ ಮುಂಭಾಗ ಶನಿವಾರ ಚಾಲನೆ ನೀಡಲಾಯಿತು.

ಈ ವೇಳೆ ಮಾತನಾಡಿದ ಬಿಜೆಪಿ ದಕ್ಷಿಣ ಕನ್ನಡ ಜಿಲ್ಲಾಧ್ಯಕ್ಷ ಸತೀಶ್ ಕುಂಪಲ, ಬಿಎಸ್‌ವೈ ಅಭಿಮಾನೋತ್ಸವ ಕಾರ್ಯಕ್ರಮದಲ್ಲಿ ದಕ್ಷಿಣ ಕನ್ನಡ ಜಿಲ್ಲೆಯ ಐದು ಸಾವಿರಕ್ಕೂ ಅಧಿಕ ಮಂದಿ ಬಿಜೆಪಿ ಕಾರ್ಯಕರ್ತರು ಭಾಗವಹಿಸಲಿದ್ದಾರೆ. ಈ ಹಿನ್ನೆಲೆಯಲ್ಲಿ ಎಲ್ಲ ವಿಧಾನಸಭಾ ಕ್ಷೇತ್ರದಲ್ಲಿ ಸಿದ್ಧತೆ ನಡೆಸಲಾಗಿದೆ. ಕಾರ್ಯಕ್ರಮದ ಪ್ರಚಾರಾರ್ಥ ಜಿಲ್ಲಾ ಪದಾಧಿಕಾರಿಗಳು, ಪ್ರಮುಖರ ಕಾರು, ವಾಹನಗಳಿಗೆ ಸ್ಟಿಕ್ಕರ್ ಅಂಟಿಸಲಾಗುತ್ತಿದೆ ಎಂದರು.

ಶಾಸಕ ವೇದವ್ಯಾಸ ಕಾಮತ್ ಮಾತನಾಡಿ, ಕರ್ನಾಟಕದ ಯಶಸ್ವಿ ರಾಜಕಾರಣಿ, ರೈತ ಬಜೆಟ್ ಮಂಡಿಸಿದ ನಾಯಕ, ಜನಪರ ಹೋರಾಟಗಾರ ಬಿ.ಎಸ್. ಯಡಿಯೂರಪ್ಪ ಅವರ ಅಭಿಮಾನೋತ್ಸವ ಬಿಜೆಪಿ ಕಾರ್ಯಕರ್ತರಿಗೆ ಸಂಭ್ರಮದ ಕಾರ್ಯಕ್ರಮವಾಗಿದೆ. ಈ ಕಾರ್ಯಕ್ರಮ ಮುಂದಿನ ಚುನಾವಣೆಗೆ ಶಕ್ತಿ ತುಂಬಲಿದೆ. ಈ ಹಿನ್ನೆಲೆಯಲ್ಲಿ ವಾಹನಗಳಿಗೆ ಸ್ಟಿಕ್ಕರ್ ಅಂಟಿಸಿ ಕಾರ್ಯಕ್ರಮದ ಪ್ರಚಾರ ನಡೆಸಲಾಗುತ್ತಿದೆ ಎಂದು ಹೇಳಿದರು.



> ನಾಲ್ಕು ಬಾರಿ ಮುಖ್ಯಮಂತ್ರಿ ಆಗಿರುವ ಬಿ.ಎಸ್. ಯಡಿಯೂರಪ್ಪ ಅವರ ಅಭಿಮಾನೋತ್ಸವ ಕಾರ್ಯಕ್ರಮದಲ್ಲಿ ಎಲ್ಲರೂ ಸಕ್ರಿಯವಾಗಿ ಭಾಗವಹಿಸಬೇಕು. ಕಾರ್ಯಕ್ರಮದಲ್ಲಿ ಕೇಂದ್ರ ಗೃಹ ಸಚಿವ ಅಮಿತ್ ಶಾ ಅವರು ಪಾಲ್ಗೊಳ್ಳುತ್ತಿದ್ದು, ಬಿಎಸ್‌ವೈ ಅವರ ಸಾಧನೆ, ಹೋರಾಟವನ್ನು ಮೆಲುಕು ಹಾಕಲಾಗುವುದು. ಆ ಮೂಲಕ ಬಿಜೆಪಿ ಕಾರ್ಯಕರ್ತರಿಗೆ ಉತ್ಸಾಹ, ಪ್ರೇರಣೆ ದೊರೆಯಲಿದೆ.
>
> ■ ಬ್ರಿಜೇಶ್ ಚೌಟ, ಸಂಸದ

ಶಾಸಕ ಡಾ. ವೈ. ಭರತ್ ಶೆಟ್ಟಿ ಮಾತನಾಡಿ, ಮಂಗಳೂರಿನ ಅಭಿವೃದ್ಧಿಗೆ ಬಿ.ಎಸ್. ಯಡಿಯೂರಪ್ಪ ಅವರು ದೊಡ್ಡ ಕೊಡುಗೆ ನೀಡಿದ್ದಾರೆ. ಭಾಗ್ಯಲಕ್ಷ್ಮಿ ಸಹಿತ ಮಹಿಳಾ ಸಬಲೀಕರಣಕ್ಕೆ ಯೋಜನೆ ರೂಪಿಸಿ, ಜಾರಿಗೊಳಿಸಿದ್ದರು. ಅವರ ಅಭಿಮಾನೋತ್ಸವ ಕಾರ್ಯಕ್ರಮ ಕಾರ್ಯಕರ್ತರಿಗೆ ಸಂಭ್ರಮ ತಂದಿದೆ ಎಂದು ತಿಳಿಸಿದರು.

ಬಿಜೆಪಿ ಜಿಲ್ಲಾ ಪ್ರಧಾನ ಕಾರ್ಯದರ್ಶಿ ಪ್ರೇಮಾನಂದ ಶೆಟ್ಟಿ, ಜಿಲ್ಲಾ ಕಾರ್ಯದರ್ಶಿ ಪೂರ್ಣಿಮಾ, ಯುವ ಮೋರ್ಚಾ ಅಧ್ಯಕ್ಷ ನಂದನ್ ಮಲ್ಯ, ಹಿಂದುಳಿದ ವರ್ಗಗಳ ಮೋರ್ಚಾ ಅಧ್ಯಕ್ಷ ಮಹೇಶ್ ಜೋಗಿ, ಪ್ರಮುಖರಾದ ಸುಧೀರ್ ಶೆಟ್ಟಿ, ರವೀಂದ್ರ ಶೆಟ್ಟಿ ಉಳಿದೊಟ್ಟು, ತಿಲಕ್‌ರಾಜ್ ಕೃಷ್ಣಾಪುರ, ಕವಿತಾ ಸನಿಲ್, ಸಂಜಯ ಪ್ರಭು, ನಿಕಟಪೂರ್ವ ಕಾರ್ಪೋರೇಟರ್‌ಗಳು ಉಪಸ್ಥಿತರಿದ್ದರು.

ಶಕ್ತಿನಗರ ಶ್ರೀ ಗೋಪಾಲಕೃಷ್ಣ ದೇವಸ್ಥಾನ: ಪ್ರತಿಷ್ಠಾ ವಾರ್ಷಿಕ ಮಹೋತ್ಸವ

• **ಮಂಗಳೂರು:** ಶಕ್ತಿನಗರದ ಶ್ರೀ ಗೋಪಾಲಕೃಷ್ಣ ದೇವಸ್ಥಾನದ ಪ್ರತಿಷ್ಠಾ ವಾರ್ಷಿಕ ಮಹೋತ್ಸವವು ಇತ್ತೀಚೆಗೆ ವೇ.ಮೂ.ಬ್ರಹ್ಮಶ್ರೀ ಉಳಿಯ ಶ್ರೀವಿಷ್ಣು ಅಸ್ರರ ನೇತೃತ್ವದಲ್ಲಿ ವಿಜೃಂಭಣೆಯಿಂದ ಜರುಗಿತು.

ಪ್ರತಿಷ್ಠಾ ವಾರ್ಷಿಕ ಮಹೋತ್ಸವ ಅಂಗವಾಗಿ ಭಜನಾ ನಾಮ ಸಂಕೀರ್ತನೆಯಲ್ಲಿ ವಿಶ್ವ ಕೊಂಕಣಿ ಕೇಂದ್ರದ ಅಧ್ಯಕ್ಷ ಸಿ.ಎ.ನಂದ ಗೋಪಾಲ ಶೆಣೈ ದೀಪ ಬೆಳಗಿಸುವುದರ ಮೂಲಕ ಉದ್ಘಾಟಿಸಿದರು. ಭಜನಾ ಮಂಗಲೋತ್ಸವದ ನಂತರ ದೇವರಿಗೆ ವಿಶೇಷ ಸೀಯಾಳಭಿಷೇಕ, ಪಂಚಾಮೃತಾಭಿಷೇಕ, ಶ್ರೀ ಗಣಪತಿ ಹವನ, ಚಂಡಿಕಾ ಹವನದ ಪೂರ್ಣಾಹುತಿ ನಡೆದು ಮಹಾಪೂಜೆ, ಅನ್ನಸಂತರ್ಪಣೆ ನಡೆಯಿತು.

ದಕ್ಷಿಣ ಕನ್ನಡ ಜಿಲ್ಲಾ ರಾಜ್ಯೋತ್ಸವ ಪ್ರಶಸ್ತಿ ಪುರಸ್ಕೃತ ಪ್ರಪಥಮ ಮಕ್ಕಳ ಮೇಳ, ಸರಾಯೂ ಬಾಲ ಯಕ್ಷ ವೃಂದ ಇವರಿಂದ ನರಕಾಸುರ ಮೋಕ್ಷ ಎಂಬ ಯಕ್ಷಗಾನವು ವರ್ಕಾಡಿ ರವಿ ಅಲೆವೂರಾಯ ನಿರ್ದೇಶನದಲ್ಲಿ ಮೂಡಿಬಂತು.



ರಾತ್ರಿ ದೇವರಿಗೆ ವಿಶೇಷ ರಂಗಪೂಜೆ ನಡೆಯಿತು. ಆಡಳಿತ ಮೊಕ್ತೇಸರ ಡಾ.ಕೆ.ಸಿ.ನ್ಯಾಕ್, ಟ್ರಸ್ಟಿ ಸಂಜೀತ್ ನ್ಯಾಕ್,ಅಂಜು ಅಳ್ವ ನ್ಯಾಕ್, ಗೌರವ ಸಲಹೆಗಾರ ಅನಂತಕೃಷ್ಣ ಭಟ್, ದೈವಜ್ಞ ಸಿ.ವಿ.ಪೊದುವಾಳ್, ರಮೇಶ್ ಕೆ. ಸೇರಿದಂತೆ ಸಾವಿರಾರು ಭಕ್ತರು ಉಪಸ್ಥಿತರಿದ್ದರು.

ಇಲ್ಲಿ ಪ್ರತಿದಿನ ಸಮರ್ಪಕ ನೀರು ಪೂರೈಕೆ | ರಾಜಕಾಲುವೆಯಲ್ಲಿ ಕೊಳಚೆ ನೀರು ಸಮಸ್ಯೆ

ಕಂಕನಾಡಿ: ನೀರು ಸರಬರಾಜು ಹೇರಳ

▸ ಹರೀಶ ಕುಲ್ಕುಂದ

ದಿಗಂತ ವಾಟರ್ ಚೆಕ್

• **ಮಂಗಳೂರು:** ನಗರ ಹಾಗೂ ಗ್ರಾಮೀಣ ಪ್ರದೇಶದ ಲಕ್ಷಣಗಳನ್ನು ಸಮಾನವಾಗಿ ಹಂಚಿಕೊಂಡಿರುವ, ಫ್ಲ್ಯಾಟ್‌ಗಳು, ಸ್ವತಂತ್ರ ಮನೆಗಳು ಇರುವ ಕಂಕನಾಡಿ ವಾರ್ಡ್‌ನಲ್ಲಿ ಈ ಬೇಸಿಗೆಯಲ್ಲಿ ನೀರಿನ ಸಮಸ್ಯೆ ಕಾಣಿಸಿಕೊಂಡಿಲ್ಲ. ಪಂಪ್‌ವೆಲ್‌ನ ಹಿಂಭಾಗ, ಉಜ್ಜೋಡಿ, ಎಕ್ಕೂರು, ಬಜಾಲ್ ಚರ್ಚ್, ನಾಗುರಿ, ಬಜಾಲ್ ಪಕ್ಕಲಡ್ಕ, ಜೆಎಂ ರೋಡ್ ಪ್ರದೇಶಗಳನ್ನು ಒಳಗೊಂಡಿರುವ ಕಂಕನಾಡಿ ವಾರ್ಡ್‌ಗೆ ಹೇರಳವಾಗಿ ನೀರು ಪೂರೈಕೆ ಆಗುತ್ತಿದೆ.

ಈ ವಾರ್ಡ್‌ಗೆ ಪಡೀಲ್ ಹಾಗೂ ಬೆಂದೂರುವೆಲ್ ಟ್ಯಾಂಕ್‌ನಿಂದ ನೀರು ಸರಬರಾಜು ಆಗುತ್ತಿದೆ. ಪಡೀಲ್ ಟ್ಯಾಂಕ್‌ನಿಂದ ಎಕ್ಕೂರು, ಬಜಾಲ್, ಕುಡ್ಪಡ್ಕ, ಜೆಎಂ ರೋಡ್, ಎಕ್ಕೂರು ಗುಡ್ಡೆ ಪ್ರದೇಶಗಳಿಗೆ ನೀರು ಬರುತ್ತಿದೆ. ಬೆಂದೂರುವೆಲ್ ಟ್ಯಾಂಕ್‌ನಿಂದ ನಾಗುರಿ, ಗರೋಡಿ, ಉಜ್ಜೋಡಿ ಮುಂತಾದ ಸ್ಥಳಗಳಿಗೆ ನೀರು ಪೂರೈಕೆ ಆಗುತ್ತಿದೆ. ನಾಗುರಿ, ಗರೋಡಿಯ ಕೆಲ ಮನೆಗಳಿಗೆ ತುಂಬೆಯಿಂದ ಆಗಮಿಸುವ ಮುಖ್ಯ ಕೊಳವೆಯಿಂದ ನೀರು ಒದಗಿಸಲಾಗುತ್ತಿದೆ.

ತುಂಬೆಯಿಂದ ನೀರು ಪೂರೈಕೆ ಸ್ಥಗಿತಗೊಂಡಾಗ, ವಾರ್ಡ್‌ನಲ್ಲಿ ಪೈಪ್‌ಲೈನ್‌ಗೆ ಹಾನಿ ಉಂಟಾದಾಗ, ಇತರ ತಾಂತ್ರಿಕ ಸಮಸ್ಯೆ ಎದುರಾದಾಗ ನೀರು ಪೂರೈಕೆ ಸ್ಥಗಿತ ಹೊರತು ಈ ವಾರ್ಡ್‌ನಲ್ಲಿ ಪ್ರತಿದಿನ ನೀರು ಪೂರೈಕೆ ಸರಾಗವಾಗಿ ಆಗುತ್ತಿದೆ ಎನ್ನುತ್ತಾರೆ ಸ್ಥಳೀಯರು.

ಕಂಕನಾಡಿ ವಾರ್ಡ್‌ನಲ್ಲಿ ಈ ಬೇಸಿಗೆಯಲ್ಲಿ ಇದುವರೆಗೆ ಮಂಗಳೂರು ಮಹಾನಗರ ಪಾಲಿಕೆವತಿಯಿಂದ ಟ್ಯಾಂಕರ್ ಮೂಲಕ ನೀರು ಪೂರೈಸುವ ಅನಿವಾರ್ಯತೆ ಸೃಷ್ಟಿಯಾಗಿಲ್ಲ. ಜೆ.ಎಂ. ರೋಡ್, ಕೋಸ್ಟ್ ಗಾರ್ಡ್ ಬಳಿ ಸರಕಾರಿ ಬಾವಿಗಳಿವೆ. ಪೈಪ್‌ಲೈನ್‌ನಲ್ಲಿ ಸಮರ್ಪಕವಾಗಿ ನೀರು ಬರುತ್ತಿರುವುದರಿಂದ ಬಾವಿ ನೀರು ಉಪಯೋಗಿಸುತ್ತಿಲ್ಲ.

ಕಂಕನಾಡಿ ವಾರ್ಡ್‌ನಲ್ಲಿ ಜಲಸಿರಿ ಯೋಜನೆ ಪೈಪ್‌ಲೈನ್ ಕಾಮಗಾರಿಗಳು ಶೇ.30ರಷ್ಟು ಮಾತ್ರ ಪೂರ್ಣಗೊಂಡಿವೆ. ನೆಟ್‌ವರ್ಕ್ ಲೈನ್‌ಗಳು ಆಗಿಲ್ಲ. ಜೆಎಂ ರೋಡ್‌ನಲ್ಲಿ ಜಲಸಿರಿ ಯೋಜನೆಯಡಿ ಹೊಸ ಟ್ಯಾಂಕ್ ನಿರ್ಮಾಣವಾಗಿದೆ.



ಎಕ್ಕೂರು ಕೆಳಭಾಗದಿಂದ ರಾಷ್ಟ್ರೀಯ ಹೆದ್ದಾರಿ ಸಂಪರ್ಕಿಸುವ ರಸ್ತೆ ಅಭಿವೃದ್ಧಿಪಡಿಸಲಾಗಿದೆ

ಕೃತಕ ನೆರೆ ಸಮಸ್ಯೆ

ಮಳೆಗಾಲದಲ್ಲಿ ಪಂಪ್‌ವೆಲ್‌ನಲ್ಲಿ ಕೃತಕ ನೆರೆ ಸೃಷ್ಟಿಯಾಗುವ ಸಂದರ್ಭ ಇದೇ ರಾಜಕಾಲುವೆಯ ಮುಂದಿನ ಭಾಗದಲ್ಲಿ ಕೃತಕ ನೆರೆ ಕಾಣಿಸಿಕೊಳ್ಳುತ್ತದೆ. ಮಳೆಗಾಲದಲ್ಲಿ ಉಜ್ಜೋಡಿ, ನೆಕ್ಕರೆಮಾರ್ ಪ್ರದೇಶದಲ್ಲಿ ರಾಜಕಾಲುವೆ ಉಕ್ಕಿ ಕೃತಕ ನೆರೆ ಸೃಷ್ಟಿಯಾಗುತ್ತದೆ. ಎಕ್ಕೂರು ಕೆಳಭಾಗದಲ್ಲೂ ಕೃತಕ ನೆರೆ ಸಮಸ್ಯೆಯಿದೆ.

ರಾಜಕಾಲುವೆ ಕೊಳಚೆ ನೀರು ವಾಸನೆ

ಕಂಕನಾಡಿ ವಾರ್ಡ್‌ನ ಪಂಪ್‌ವೆಲ್‌ನಿಂದ ಜಪ್ಪಿನಮೊಗರು ನೇತ್ರಾವತಿ ನದಿಗೆ ರಾಜಕಾಲುವೆ ಹಾದು ಹೋಗುತ್ತದೆ. ಈ ರಾಜಕಾಲುವೆಯಲ್ಲಿ ಮಂಗಳೂರು ಮಹಾನಗರ ಪಾಲಿಕೆಯ ವಿವಿಧ ವಾರ್ಡ್‌ಗಳಿಂದ ಒಳಚರಂಡಿ ನೀರು ಹರಿದುಬರುತ್ತಿದೆ. ಈ ರಾಜಕಾಲುವೆಗೆ ನಾಲ್ಕೈದು ವಾರ್ಡ್‌ಗಳ ತೋಡುಗಳಿಂದ ನೀರು ಹರಿದುಬರುತ್ತಿದ್ದು, ಜತೆಗೆ ಕೊಳಚೆ ನೀರೂ ಬರುತ್ತಿದೆ. ಹಿಂದಿನ ಕಾಲದಲ್ಲಿ ಈ ತೋಡಿನ ನೀರನ್ನು ಬಟ್ಟೆ ಒಗೆಯಲು ಉಪಯೋಗಿಸಲಾಗುತ್ತಿತ್ತು. ಈಗ ಕೊಳವೆ ನೀರು ಹರಿಯುವ ಕಾರಣ ರಾಜಕಾಲುವೆಯ ಸನಿಹಕ್ಕೆ ತೆರಳಲೂ ಸಾಧ್ಯವಾಗುತ್ತಿಲ್ಲ. ಉಳಿದ ವಾರ್ಡ್‌ಗಳಿಂದ ಹರಿದು ಬರುವ ಕೊಳಚೆ ನೀರಿನಿಂದಾಗಿ ಕಂಕನಾಡಿ ವಾರ್ಡ್‌ನ ಜನತೆ ದುರ್ವಾಸನೆ ಅನುಭವಿಸಬೇಕಿದೆ. ರಾಜಕಾಲುವೆಗೆ ಯುಜಿಡಿ ಕೊಳಚೆ ನೀರು ಹರಿಯುವುದನ್ನು ತಪ್ಪಿಸಲು ಮಂಗಳೂರು ಮಹಾನಗರ ಪಾಲಿಕೆ ಕ್ರಮ ಕೈಗೊಳ್ಳಬೇಕು ಎಂದು ಸ್ಥಳೀಯರು ಆಗ್ರಹಿಸಿದ್ದಾರೆ.

> ಕಂಕನಾಡಿ ವಾರ್ಡ್‌ನಲ್ಲಿ ನೀರಿನ ಪೂರೈಕೆ ಸಮರ್ಪಕವಾಗಿ ಆಗುತ್ತಿದೆ. ವಾರ್ಡ್‌ನ ಎಲ್ಲೂ ಈ ಬೇಸಿಗೆಯಲ್ಲಿ ನೀರು ಪೂರೈಕೆಗೆ ಸಂಬಂಧಿಸಿ ಯಾವುದೇ ದೂರುಗಳು ಕಂಡುಬಂದಿಲ್ಲ. ಪಡೀಲ್ ಹಾಗೂ ಬೆಂದೂರುವೆಲ್ ಟ್ಯಾಂಕ್‌ಗಳಿಂದ ಹೇರಳವಾಗಿ ನೀರು ಪೂರೈಕೆ ಆಗುತ್ತಿದೆ. ವಾರ್ಡ್‌ನಲ್ಲಿ ವಿವಿಧ ಅಭಿವೃದ್ಧಿ ಕಾಮಗಾರಿಗಳನ್ನು ನಡೆಸಲಾಗಿದೆ. ಎಕ್ಕೂರಿನಲ್ಲಿ ಆರೋಗ್ಯ ಕೇಂದ್ರ ಸ್ಥಾಪಿಸಿ, ಹೊಸ ಕಟ್ಟಡ ಒದಗಿಸಲಾಗಿದೆ. ಸದಾಶಿವ ನಗರ, ಕೆಎಚ್‌ಬಿ ಕಾಲನಿ, ಪ್ರಗತಿನಗರದಲ್ಲಿ ಉದ್ಯಾನವನಗಳನ್ನು ಅಭಿವೃದ್ಧಿಪಡಿಸಲಾಗಿದೆ. ವಾರ್ಡ್‌ನ ಬಹುತೇಕ ರಸ್ತೆಗಳನ್ನು ಅಭಿವೃದ್ಧಿ ಮಾಡಲಾಗಿದೆ. ಎಕ್ಕೂರು ಕೆಳಗಿನ ಭಾಗದಿಂದ ರಾಷ್ಟ್ರೀಯ ಹೆದ್ದಾರಿ ಸಂಪರ್ಕಿಸುವ ರಸ್ತೆ, ನಾಗುರಿ, ಸಾಯಿಮಂದಿರ ರಸ್ತೆ ಕಾಂಕ್ರೀಟೀಕರಣ ಮಾಡಲಾಗಿದೆ. ಪಕ್ಕಲಡ್ಕ–ಕುಡ್ಪಡ್ಕ, ಬಜಾಲ್ ರಸ್ತೆ ಅಭಿವೃದ್ಧಿಪಡಿಸಲಾಗಿದೆ. ಕೃತಕ ನೆರೆ ತಡೆಗೆ ಎಕ್ಕೂರು, ನೆಕ್ಕರೆಮಾರ್‌ನಲ್ಲಿ ರಾಜಕಾಲುವೆಗೆ ತಡೆಗೋಡೆ ನಿರ್ಮಿಸಲಾಗಿದೆ.
>
> 
>
> ■ ಟಿ. ಪ್ರವೀಣ್‌ಚಂದ್ರ ಆಳ್ವ, ಕಂಕನಾಡಿ ವಾರ್ಡ್ ನಿಕಟಪೂರ್ವ ಕಾರ್ಪೋರೇಟರ್

ಪೆರ್ಲ ನಾಲಂದ ಕಾಲೇಜು ಸಮೀಪದ ನಿವೇಶನದಲ್ಲಿ ವಿವೇಕಾನಂದ ಸೆಂಟ್ರಲ್ ಶಾಲಾ ಕಟ್ಟಡಕ್ಕೆ ಶಿಲಾನ್ಯಾಸ

ಮಕ್ಕಳಲ್ಲಿ ಧರ್ಮ, ರಾಷ್ಟ್ರದ ಬಗ್ಗೆ ಚಿಂತನೆ ಹಾಗೂ ಸಮಾಜದ ಬಗ್ಗೆ ಬದ್ಧತೆ ಇರಲಿ: ಎಡನೀರು ಶ್ರೀ

• **ಪೆರ್ಲ:** ನರಸಿಂಹ ಜಯಂತಿಯ ಪುಣ್ಯ ದಿನದಂದು ಪುತ್ತೂರಿನ ಶ್ರೀ ವಿವೇಕಾನಂದ ವಿದ್ಯಾವರ್ಧಕ ಸಂಘವು ಧ್ಯಾನ ಹಾಗೂ ಜ್ಞಾನದ ಮಂದಿರ ನಿರ್ಮಾಣಕ್ಕೆ ಜಾಗವನ್ನು ಸಮಾಜಕ್ಕೆ ಒಪ್ಪಿಸಿದೆ. ಈ ಎರಡೂ ಮಂದಿರಗಳು ಮಕ್ಕಳಲ್ಲಿ ಧರ್ಮ ಹಾಗೂ ರಾಷ್ಟ್ರದ ಬಗ್ಗೆ ಚಿಂತನೆ ಮತ್ತು ಸಮಾಜದ ಬಗ್ಗೆ ಬದ್ಧತೆ ಹಾಗೂ ರಾಷ್ಟ್ರೀಯತೆಯನ್ನು ತುಂಬಲಿ ಎಂದು ಎಡನೀರು ಮಠಾಧೀಶ ಶ್ರೀ ಸಚ್ಚಿದಾನಂದ ಭಾರತೀ ಸ್ವಾಮೀಜಿ ಹೇಳಿದ್ದಾರೆ.

ಪೆರ್ಲ ನಾಲಂದ ಕಾಲೇಜು ಸಮೀಪದ ನಿವೇಶನದಲ್ಲಿ ನಿರ್ಮಿಸಲಾಗುವ ವಿವೇಕಾನಂದ ಸೆಂಟ್ರಲ್ ಸ್ಕೂಲ್ ಕಟ್ಟಡದ ಶಿಲಾನ್ಯಾಸವನ್ನು ಗುರುವಾರ ನೆರವೇರಿಸಿ ನಾಲಂದಾ ಕಾಲೇಜು ಸಭಾಂಗಣದಲ್ಲಿ ನಡೆದ ಸಭಾ ಕಾರ್ಯಕ್ರಮದಲ್ಲಿ ಆಶೀರ್ವಚನ ನೀಡಿದರು.

ಪೆರ್ಲ ಕಾಟುಕುಕ್ಕೆ ರಸ್ತೆ ಬಳಿಯ ನಿವೇಶನದಲ್ಲಿ ನೂತನವಾಗಿ ನಿರ್ಮಿಸಲಾಗುವ ಧ್ಯಾನ ಮಂದಿರದ ಶಿಲಾನ್ಯಾಸವನ್ನು ನೆರವೇರಿಸಿದ ನಿವೇಶನದ ಉದಾರ ದಾನಿಗಳಲ್ಲಿ ಓರ್ವರಾದ ಎನ್‌ಐಟಿಕೆ ಸುರತ್ಕಲ್ ನಿವೃತ್ತ ಪ್ರಾಚಾರ್ಯ ಡಾ.ಪರ್ತಜೆ ಸುಬ್ಬಣ್ಣ ಭಟ್ ಮಾತನಾಡಿ, ವೇದಾಂತ ಶ್ರವಣ, ಮನನ, ನಿಧ್ಯಾಸನ ವ್ಯಕ್ತಿತ್ವವನ್ನು ರೂಪಿಸುತ್ತದೆ. ಮನಸ್ಸಿನಲ್ಲಿ ಸದ್ವಿಚಾರ, ಚಿಂತನೆಗಳು ಮೂಡಲು ಧ್ಯಾನ ಅಗತ್ಯ. ವೇದಗಳ ಅಂತಿಮ ಭಾಗವಾದ ಉಪನಿಷತ್ತುಗಳಲ್ಲಿ ಧ್ಯಾನ, ತತ್ವಶಾಸ್ತ್ರ ಮತ್ತು ಆಧ್ಯಾತ್ಮಿಕ ಜ್ಞಾನಕ್ಕೆ ಹೆಚ್ಚಿನ ಒತ್ತು ನೀಡಲಾಗಿದೆ ಎಂದರು.

ಸೆಂಟ್ರಲ್ ಸ್ಕೂಲ್ ಗೌರವ ಸಲಹೆಗಾರ ಕಜಂಪಾಡಿ ಸುಬ್ರಹ್ಮಣ್ಯ ಭಟ್ ಪ್ರಾಸ್ತಾವಿಕವಾಗಿ ಮಾತನಾಡಿದರು.



> ವಿವೇಕಾನಂದ ವಿದ್ಯಾವರ್ಧಕ ಸಂಘವು ಕಾಲೇಜು ಸ್ಥಾಪನೆ ಮೂಲಕ ಕಳೆದ 61 ವರ್ಷಗಳಿಂದ ರಾಷ್ಟ್ರೀಯ ಚಿಂತನೆಗೆ ಅವಕಾಶ ಮಾಡಿಕೊಟ್ಟಿದೆ. ಇಂದು ಧ್ಯಾನ ಹಾಗೂ ಕರ್ಮಯೋಗಕ್ಕೆ ಶಿಲಾನ್ಯಾಸ ನಡೆದಿದೆ. ಧ್ಯಾನ ಅಂತರ್ ಶಕ್ತಿಯನ್ನು ಹೆಚ್ಚಿಸಿದರೆ ವಿದ್ಯಾಲಯವು ಅದನ್ನು ಪರಿಣಾಮಕಾರಿಯಾಗಿ ಮಾಡುವುದು. ಸದ್ವಿಚಾರ, ಸತ್ ಚಿಂತನೆಯೊಂದಿಗೆ ಆಧ್ಯಾತ್ಮಿಕ ಮತ್ತು ಜೀವನಕ್ಕೆ ಮೌಲ್ಯವನ್ನು ನೀಡುವ ಜೊತೆಗೆ ಸಮಾಜ ಹಾಗೂ ರಾಷ್ಟ್ರದ ಬಗ್ಗೆ ನಿಷ್ಠೆ ತೋರಿಸಬೇಕು .
>
> ■ ಡಾ.ಪ್ರಭಾಕರ ಭಟ್ ಕಲ್ಲಡ್ಕ, ಅಧ್ಯಕ್ಷರು, ಪುತ್ತೂರು ಶ್ರೀ ವಿವೇಕಾನಂದ ವಿದ್ಯಾ ವರ್ಧಕ ಸಂಘ

ನಿವೇಶನದ ದಾನಿಗಳಾದ ಡಾ.ಪರ್ತಜೆ ಸುಬ್ಬಣ್ಣ ಭಟ್, ಶಾಂತ ಎಸ್.ಉಪಾಧ್ಯ, ಜಯಶ್ರೀ ರಾಜನ್, ರಸ್ತೆ ನಿರ್ಮಾಣಕ್ಕೆ ಉಚಿತವಾಗಿ ಜಾಗ ನೀಡಿದ ಹರೀಶ್ ಶೆಣೈ ಪೆರ್ಲ ಮತ್ತು ಮನೆಯವರನ್ನು ಸನ್ಮಾನಿಸಲಾಯಿತು.

ಮಣಿಪಾಲ ಅನಂತನಗರ, ಉದ್ಭವ್ ಡಿಸೈನ್ ಸ್ಟುಡಿಯೋ ಇಂಜಿನಿಯರ್ ಸುಮಂತ್ ಮಾತನಾಡಿದರು. ಉದ್ಯಮಿ ಶಶಿಧರ್ ಶೆಟ್ಟಿ ಬರೋಡಾ, ವಾಸ್ತುತಜ್ಞ ಸುಬ್ರಾಯ್ಯ ವರ್ಮುಡಿ, ನಾಲಂದ ಕಾಲೇಜು ಆಡಳಿತ ಮಂಡಳಿ ಅಧ್ಯಕ್ಷ ಸಿಎ ಸುಧೀರ್‌ಕುಮಾರ್ ರೈ ಎಣ್ಮಕಜೆ, ಕಾರ್ಯದರ್ಶಿ ಡಾ.ಜಯಗೋವಿಂದ ಉಕ್ಕಿನಡ್ಕ, ಪದಾಧಿಕಾರಿಗಳು, ಸದಸ್ಯರು ಹಾಗೂ ಶಿಕ್ಷಕ ಸಿಬ್ಬಂದಿ ಉಪಸ್ಥಿತರಿದ್ದರು.

ವಿವೇಕಾನಂದ ಸೆಂಟ್ರಲ್ ಸ್ಕೂಲ್ ಸಮಿತಿ ಅಧ್ಯಕ್ಷ ಶ್ರೀಹರಿ ಆರ್.ಭರಣೇಕರ್ ಸ್ವಾಗತಿಸಿ, ಸೆಂಟ್ರಲ್ ಸ್ಕೂಲ್ ಆಡಳಿತಾಧಿಕಾರಿ ದಯಾನಂದ ಕೆ.ಆರ್. ವಂದಿಸಿದರು. ನಾಲಂದ ಕಾಲೇಜು ಪ್ರಾಧ್ಯಾಪಕಿಯರಾದ ಪ್ರಮಾಥಿ ದೇವಧರ್ ಮತ್ತು ಅಕ್ಷಿತಾ ನಿರೂಪಿಸಿದರು.

ರಾಷ್ಟ್ರ ಜಾಗೃತಿಯ ದೈನಿಕ

ಹೊಸ ದಿಗಂತ

ಲೋಕಹಿತಂ ಮಮ ಕರಣೀಯಂ

ಮಂಗಳೂರು
ಭಾನುವಾರ, 3 ಮೇ 2026
ಸಂಪುಟ 48, ಸಂಚಿಕೆ 45 ಪುಟಗಳು 12+6
■ ಬೆಂಗಳೂರು ■ ಮಂಗಳೂರು ■ ಶಿವಮೊಗ್ಗ ■ ಹುಬ್ಬಳ್ಳಿ
₹5
REG.No.MNG /121/2024-26 Posted at kodialbail P.O / RNI:29813/78/ Daily
hosadigantha.com
epaper.hosadigantha.com
Hosadigantha Digital



ಲೇಖಕ ಪ್ರಸೂನ್ ಜೋಶಿ ಪ್ರಸಾರ ಭಾರತಿ ಅಧ್ಯಕ್ಷ

೦೭

ಭಾರತದತ್ತ ಅನಿಲ ಹೊತ್ತ ಹಡಗು



೦೭

ಶುಭ ದಿನ

ಕಲಿಯುಗಾಬ್ದ 5128, ಪರಾಭವ ಸಂವತ್ಸರ, ಉತ್ತರಾಯಣ, ವಸಂತ ಋತು, ವೈಶಾಖ ಮಾಸ, ಕೃಷ್ಣ ಪಕ್ಷ, ತಿಥಿ: ಬಿದಿಗೆ, ನಕ್ಷತ್ರ: ವಿಶಾಖೆ

ದಿನದ ಮಾತು

ಹಿಂದೆ ದೂಷಿಸಿ ಮುಂದೆ ಕಪಟದಿಂದ ಹುಸಿನಗೆ ಬೀರುವುದು ಕೆಟ್ಟದ್ದು.
▲ ನೀತಿಮಂಜರಿ

ನನ್ನ ಮುಂಜಿಯ ನಂತರದ ಪ್ರಕರಣಗಳು

ವಕ್ರದೃಷ್ಟಿ
• ಎನ್.ರಾಮನಾಥ್

• ಪುಟ ೬

ಕಿರುಸುದ್ದಿ

ವಿನಯ್ ಕುಲಕರ್ಣಿ ಶಾಸಕ ಸ್ಥಾನ ರದ್ದು

• **ಬೆಂಗಳೂರು:** ಧಾರವಾಡದ ಬಿಜೆಪಿ ಜಿಲ್ಲಾ ಪಂಚಾಯತ್ ಸದಸ್ಯ ಯೋಗೀಶ್‌ಗೌಡ ಅವರ ಹತ್ಯೆ ಪ್ರಕರಣದಲ್ಲಿ ವಿನಯ್ ಕುಲಕರ್ಣಿ ಅವರ ಶಾಸಕ ಸ್ಥಾನ ರದ್ದುಗೊಂಡಿದೆ. ಈ ಸಂಬಂಧ ಕರ್ನಾಟಕ ವಿಧಾನಸಭೆ ಶನಿವಾರ ಅಧಿಕೃತ ಅಧಿಸೂಚನೆ ಹೊರಡಿಸಿದೆ. ಮಾಜಿ ಸಚಿವ ವಿನಯ್ ಕುಲಕರ್ಣಿ ಸದ್ಯ ಜೈಲಿನಲ್ಲಿದ್ದು, ಕೇಸ್‌ನಲ್ಲಿ ಜೀವಾವಧಿ ಶಿಕ್ಷೆ ಅನುಭವಿಸುತ್ತಿದ್ದಾರೆ. ➡ ಪುಟ ೪

ಮರು ಎಣಿಕೆ: ಟಿ.ಡಿ. ರಾಜೇಗೌಡ ಗೆಲುವು ಖಚಿತ!

• **ಚಿಕ್ಕಮಗಳೂರು:** ರಾಜ್ಯ ರಾಜಕೀಯದಲ್ಲಿ ತೀವ್ರ ಕುತೂಹಲ ಮೂಡಿಸಿದ್ದ ಶೃಂಗೇರಿ ವಿಧಾನಸಭಾ ಕ್ಷೇತ್ರದ 2023ರ ಚುನಾವಣೆಯ ಅಂಚೆ ಮತಗಳ ಮರು ಎಣಿಕೆಯಲ್ಲೂ ಕಾಂಗ್ರೆಸ್‌ನ ಟಿ.ಡಿ.ರಾಜೇಗೌಡ ಅವರಿಗೆ ಗೆಲುವಾಗಿರುವುದು ಖಚಿತವಾಗಿದೆ. ಈ ಮೂಲಕ ಮೂರು ವರ್ಷಗಳ ಕಾನೂನು ಹೋರಾಟಕ್ಕೆ ತೆರೆಬಿದ್ದಂತಾಗಿದೆ.

• ಪುಟ ೪

ನಾಸಿಕ್ ಮತಾಂತರ ಪ್ರಕರಣ: ನಿದಾಗೆ ಇಲ್ಲ ಜಾಮೀನು

• ಪುಟ ೭

ಎಲ್‌ಪಿಜಿ ಅನಿಲ ದರ: ಕೇಂದ್ರ ಸರ್ಕಾರದ ಪಾತ್ರವಿಲ್ಲ: ಜೋಶಿ

• ಪುಟ ೫

ಕೃಷಿಯತ್ತ ಯುವಕರು ಮುಖ ಮಾಡಲಿ: ಸಿಎಂ

• ಪುಟ ೫

ಲಕ್ಕುಂಡಿಗೆ ರಾಷ್ಟ್ರಮಟ್ಟದ ಸ್ಥಾನ

• ಪುಟ ೫



ಅಲೆಗಳ ಮೇಲೆ ವಿಮಾನಯಾನ

• ಪುಟ ೭

ಸುದ್ದಿ ಸಮಗ್ರ

ಆಯೋಗದ ಸುತ್ತೋಲೆ ಸರಿ: ಕೋರ್ಟ್ | ಟಿಎಂಸಿ ಅರ್ಜಿ ತಿರಸ್ಕೃತ

ದೀದಿಗೆ ಸುಪ್ರೀಂ ಶಾಖ



> ನಿಯಮಾವಳಿಯ ಪ್ರಕಾರ ಚುನಾವಣಾ ಆಯೋಗಕ್ಕೆ ಕೇಂದ್ರ ಅಥವಾ ರಾಜ್ಯ ಸರ್ಕಾರದ ಅಧಿಕಾರಿಗಳನ್ನು ಬಳಸುವ ಸಂಪೂರ್ಣ ಅಧಿಕಾರವಿದೆ.ಕೇಂದ್ರ ಸಿಬ್ಬಂದಿಯನ್ನೇ ನಿಯೋಜಿಸಿದರೂ ಅದನ್ನು ಕಾನೂನುಬಾಹಿರ ಎಂದು ಹೇಳಲು ಸಾಧ್ಯವಿಲ್ಲ.
> ■ ಸುಪ್ರೀಂಕೋರ್ಟ್

• **ಹೊಸದಿಲ್ಲಿ:** ಪಶ್ಚಿಮ ಬಂಗಾಳ ವಿಧಾನಸಭೆ ಚುನಾವಣೆಯ ಮತ ಎಣಿಕೆಗೆ ಕೇಂದ್ರ ಸರ್ಕಾರ ಮತ್ತು ಸಾರ್ವಜನಿಕ ವಲಯದ ಸಂಸ್ಥೆಗಳ(ಪಿಎಸ್‌ಯು) ಸಿಬ್ಬಂದಿ ನಿಯೋಜಿಸುವ ಚುನಾವಣಾ ಆಯೋಗದ ನಿರ್ಧಾರಕ್ಕೆ ಸುಪ್ರೀಂ ಕೋರ್ಟ್ ಶನಿವಾರ ಹಸ್ತಕ್ಷೇಪ ಮಾಡಲು ನಿರಾಕರಿಸಿದೆ. ಇದರಿಂದ ಮುಖ್ಯಮಂತ್ರಿ ಮಮತಾ ಬ್ಯಾನರ್ಜಿಗೆ ಮುಖಭಂಗವಾಗಿದ್ದು, ತೃಣಮೂಲ ಕಾಂಗ್ರೆಸ್‌ಗೆ(ಟಿಎಂಸಿ) ದೊಡ್ಡ ಹಿನ್ನಡೆಯಾಗಿದೆ.



ನ್ಯಾಯಮೂರ್ತಿಗಳಾದ ಪಿ.ಎಸ್. ನರಸಿಂಹ ಹಾಗೂ ಜಾಯ್ಮಲ್ಯ ಬಾಗ್ಚಿ ಅವರ ವಿಶೇಷ ದ್ವಿಸದಸ್ಯ ಪೀಠವು, ಮತ ಎಣಿಕೆಗೆ ಯಾರನ್ನು ನಿಯೋಜಿಸಬೇಕು ಎಂಬುದನ್ನು ನಿರ್ಧರಿಸುವ ಅಧಿಕಾರ ಚುನಾವಣಾ ಆಯೋಗಕ್ಕೆ ಇದೆ ಎಂದು ಸ್ಪಷ್ಟಪಡಿಸಿತು. ಕೇಂದ್ರ ಅಥವಾ ರಾಜ್ಯ ಸರ್ಕಾರದ ಸಿಬ್ಬಂದಿ ಎಂಬ ವ್ಯತ್ಯಾಸ ಇಲ್ಲದೆ, ಮತ ಎಣಿಕೆ ಕರ್ತವ್ಯ ನಿರ್ವಹಿಸುವ ಎಲ್ಲರೂ ಚುನಾವಣಾ ಆಯೋಗದ ನಿಯಂತ್ರಣದಲ್ಲಿರುತ್ತಾರೆ ಎಂದು ನ್ಯಾಯಪೀಠ ಹೇಳಿತು.

ಏ.13ರಂದು ಚುನಾವಣಾ ಆಯೋಗ ಹೊರಡಿಸಿದ್ದ ಸುತ್ತೋಲೆಯಲ್ಲಿ ಮತ ಎಣಿಕೆಗೆ ಕೇಂದ್ರ ಹಾಗೂ ರಾಜ್ಯ ಸರ್ಕಾರದ ಸಿಬ್ಬಂದಿ ಬಳಸುವ ವ್ಯವಸ್ಥೆ ಮಾಡಲಾಗಿತ್ತು. ಆದರೆ, ಈ ನಿರ್ಧಾರವನ್ನು ಟಿಎಂಸಿ ಪ್ರಶ್ನಿಸಿ ಕಲ್ಕತ್ತಾ ಹೈಕೋರ್ಟ್ ಮೊರೆಹೋಗಿತ್ತು. ➡ ಪುಟ ೪

ಹೆಚ್ಚುವರಿ ವೀಕ್ಷಕರ ನೇಮಿಸಿದ ಇಸಿ

ಪಶ್ಚಿಮ ಬಂಗಾಳದಲ್ಲಿ ಮೇ 4ರಂದು ನಡೆಯಲಿರುವ ವಿಧಾನಸಭೆ ಚುನಾವಣೆಯ ಮತ ಎಣಿಕೆಗೆ ಮುನ್ನ, ಚುನಾವಣಾ ಆಯೋಗವು ಹೆಚ್ಚುವರಿಯಾಗಿ 165 ಮತ ಎಣಿಕೆ ವೀಕ್ಷಕರು ಹಾಗೂ 77 ಪೊಲೀಸ್ ವೀಕ್ಷಕರನ್ನು ನಿಯೋಜಿಸಿದೆ. ಈಗಾಗಲೇ ಪ್ರತಿ ಕ್ಷೇತ್ರಕ್ಕೂ ನಿಯೋಜಿಸಲಾದ 294 ಮತ ಎಣಿಕೆ ವೀಕ್ಷಕರಿಗೆ ಇವರು ಸಹಕಾರ ನೀಡಲಿದ್ದಾರೆ. ➡ ಪುಟ ೪

ಶೇ.90 ಮತದಾನ



ಪಶ್ಚಿಮ ಬಂಗಾಳದ ದಕ್ಷಿಣ 24 ಪರಗಣ ಜಿಲ್ಲೆಯ ಮಗ್ರಾಹಾಟ್ ಪಶ್ಚಿಮ ಮತ್ತು ಡೈಮಂಡ್ ಹಾರ್ಬರ್ ವಿಧಾನಸಭಾ ಕ್ಷೇತ್ರಗಳ 15 ಮತಗಟ್ಟೆಗಳಲ್ಲಿ ನಡೆದ ಮರುಮತದಾನ ಶನಿವಾರ ಸಂಜೆ 6ಕ್ಕೆ ಅಂತ್ಯಗೊಂಡಿದ್ದು, ಸುಮಾರು ಶೇ.90 ಮತದಾನ ದಾಖಲಾಗಿದೆ.

15 ಮತಗಟ್ಟೆಗಳಲ್ಲಿ ಮರುಮತದಾನ

ಸಂಜೆ 5 ಗಂಟೆ ವೇಳೆಗೆ ಡೈಮಂಡ್ ಹಾರ್ಬರ್‌ನಲ್ಲಿ ಶೇ.87.60 ಹಾಗೂ ಮಗ್ರಾಹಾಟ್ ಪಶ್ಚಿಮದಲ್ಲಿ ಶೇ.86.11 ಮತದಾನವಾಗಿದೆ ಎಂದು ಚುನಾವಣಾ ಆಯೋಗ ತಿಳಿಸಿದೆ. ಏ.29ರಂದು ನಡೆದ 2ನೇ ಹಂತದ ಮತದಾನದ ವೇಳೆ ಅಕ್ರಮಗಳ ಆರೋಪ ಕೇಳಿ ಬಂದ ಹಿನ್ನೆಲೆಯಲ್ಲಿ ಚುನಾವಣಾ ಆಯೋಗ ಮರುಮತದಾನಕ್ಕೆ ಆದೇಶಿಸಿತ್ತು. ➡ ಪುಟ ೪

ಮೇ 21ಕ್ಕೆ ಫಾಲ್ಟಾ ಕ್ಷೇತ್ರದಲ್ಲಿ ಮರುಮತದಾನ!

ಪಶ್ಚಿಮ ಬಂಗಾಳದ ಫಾಲ್ಟಾ ವಿಧಾನಸಭೆ ಕ್ಷೇತ್ರದ ಎಲ್ಲಾ 285 ಮತಗಟ್ಟೆಗಳಲ್ಲಿ ಮೇ 21ರ ಬೆಳಗ್ಗೆ 7ರಿಂದ ಸಂಜೆ 6ರೊಳಗೆ ಮರುಮತದಾನ, ಮೇ 24ರಂದು ಮತ ಎಣಿಕೆ ನಡೆಸಬೇಕೆಂದು ಚುನಾವಣಾ ಆಯೋಗ ಶನಿವಾರ ಆದೇಶ ಹೊರಡಿಸಿದೆ. ಏ.29ರಂದು ಎರಡನೇ ಹಂತದ ಮತದಾನ ಸಂದರ್ಭ ಫಾಲ್ಟಾ ಕ್ಷೇತ್ರದ ಮತಗಟ್ಟೆಗಳಲ್ಲಿ ಹಲವೆಡೆ ಚುನಾವಣಾ ಅಪರಾಧಗಳು ನಡೆದಿದ್ದವು. ಈ ಹಿನ್ನೆಲೆಯಲ್ಲಿ ಮರುಮತದಾನ ನಡೆಸಲು ಚುನಾವಣಾ ಆಯೋಗ ಆದೇಶ ಹೊರಡಿಸಿದೆ.

ಟಿಎಂಸಿ-ಬಿಜೆಪಿ ನಡುವೆ ಘರ್ಷಣೆ

• ಪುಟ ೪

ಪ್ರಗತಿ ಪರಿಶೀಲನಾ ಸಭೆಯಲ್ಲಿ ಸೂಚನೆ

ಅಧಿಕಾರಿಗಳಿಂದ ತಪ್ಪು ಮಾಹಿತಿ ಬೇಡ: ಸಿಎಂ

• **ಬೆಂಗಳೂರು:** ಪ್ರಸಕ್ತ ಬಜೆಟ್‌ನಲ್ಲಿನ ಘೋಷಣೆಗಳ ಪೈಕಿ ಕೇವಲ 5 ಘೋಷಣೆಗಳ ಬಗ್ಗೆ ಮಾತ್ರ ಸರ್ಕಾರಿ ಆದೇಶ ಮಾಡಲಾಗಿದೆ. ಮೇ ತಿಂಗಳೊಳಗಾಗಿ ಎಲ್ಲಾ ಸರ್ಕಾರಿ ಆದೇಶಗಳನ್ನು ಜಾರಿಗೊಳಿಸಿ, ಅನುಷ್ಠಾನ ಕಾರ್ಯ ಆರಂಭಿಸಬೇಕು ಇಲ್ಲದಿದ್ದರೆ ಆಯಾ ಕಾರ್ಯದರ್ಶಿಗಳೇ ಜವಾಬ್ದಾರರು ಎಂದು ಸಿಎಂ ಸಿದ್ದರಾಮಯ್ಯ ಎಚ್ಚರಿಕೆ ನೀಡಿದ್ದಾರೆ.

ವಿಧಾನಸೌಧದ ಸಭಾಂಗಣದಲ್ಲಿ ಶನಿವಾರ ಎಲ್ಲಾ ಇಲಾಖೆಗಳ ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳು, ಪ್ರಧಾನ ಕಾರ್ಯದರ್ಶಿಗಳು/ ಕಾರ್ಯದರ್ಶಿಗಳ ಜತೆಗೆ ಪ್ರಗತಿ ಪರಿಶೀಲನಾ ಸಭೆ ನಡೆಸಿದ ಸಿಎಂ ಸಿದ್ದರಾಮಯ್ಯ ಅವರು, ಅಧಿಕಾರಿಗಳಿಗೆ ಹಲವು ಸೂಚನೆ ನೀಡಿದರು.



ಅಧಿಕಾರಿಗಳು ಯಾವತ್ತೂ ಸರ್ಕಾರಕ್ಕೆ ತಪ್ಪು ಮಾಹಿತಿ ನೀಡಬಾರದು ಹಾಗೂ ತಪ್ಪು ಹಾದಿಗೆ ಎಳೆಯಬಾರದು. ನಮ್ಮ ನಿಲುವುಗಳು, ತೀರ್ಮಾನಗಳು ಯಾವತ್ತೂ ಜನಪರವಾಗಿರಬೇಕು. ಅಧಿಕಾರಿಗಳು 30-35 ವರ್ಷ ಕಾಲ ಆಡಳಿತ ವ್ಯವಸ್ಥೆಯಲ್ಲಿದ್ದರೆ, ಜನಪ್ರತಿನಿಧಿಗಳು ಕೇವಲ 5 ವರ್ಷ ಕಾಲ ಮಾತ್ರ ಇರುತ್ತಾರೆ. ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಅಧಿಕಾರಿಗಳ ಜವಾಬ್ದಾರಿ ಹೆಚ್ಚಾಗಿದೆ ಎಂದು ಕಿವಿಮಾತು ಹೇಳಿದರು.

ಬಜೆಟ್ ಘೋಷಣೆಗಳ ಜಾರಿ ಅಧಿಕಾರಿಗಳದ್ದು: ಬಜೆಟ್‌ನಲ್ಲಿನ ಘೋಷಣೆಗಳನ್ನು ಜಾರಿಗೊಳಿಸುವ ಕಾರ್ಯ ಅಧಿಕಾರಿಗಳದ್ದು. ➡ ಪುಟ ೪

> **ಅಧಿಕಾರಿಗಳು ರಾಜಕಾರಣಿಗಳ ಓಲೈಕೆ ಮಾಡಬಾರದು. ಇದು ಸರ್ವಾಧಿಕಾರಕ್ಕೆ ಹಾದಿ ಮಾಡುತ್ತದೆ. ಅಧಿಕಾರಿಗಳು ಕಾನೂನಿನ ಚೌಕಟ್ಟಿನಲ್ಲಿ ಕಾರ್ಯ ನಿರ್ವಹಿಸಿ. ಸಚಿವರಿಗೆ ಕಾನೂನಿನ ವ್ಯಾಪ್ತಿಯೊಳಗೆ ಸಲಹೆಗಳನ್ನು ನೀಡಿ. ಸರ್ಕಾರಕ್ಕೆ ಒಳ್ಳೆಯ ಹೆಸರು ತರುವುದು ಕಾರ್ಯದರ್ಶಿಗಳ ಕಾರ್ಯಚಟುವಟಿಕೆಗಳ ಮೇಲೆ ಅವಲಂಬಿತವಾಗಿದೆ.**
> ■ ಸಿದ್ದರಾಮಯ್ಯ, ಮುಖ್ಯಮಂತ್ರಿ

ಸರ್ಕಾರಿ ಆದೇಶ ಅನುಷ್ಠಾನಗೊಳಿಸದಿದ್ದರೆ ಕಾರ್ಯದರ್ಶಿಗಳೇ ಹೊಣೆ



ಕುಡಿಯುವ ನೀರಿನ ಪರಿಸ್ಥಿತಿ ನಿಗಾ ವಹಿಸಿ

ಈ ವರ್ಷ ಮಳೆ ಶೇ.5ರಷ್ಟು ಮಳೆ ಕಡಿಮೆಯಾಗುವ ಸಾಧ್ಯತೆಯಿದ್ದು, ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿಗಳು ತಮ್ಮ ವ್ಯಾಪ್ತಿಯ ಜಿಲ್ಲೆಯಲ್ಲಿನ ಕುಡಿಯುವ ನೀರಿನ ಪರಿಸ್ಥಿತಿ ಬಗ್ಗೆ ನಿರಂತರ ನಿಗಾ ವಹಿಸಬೇಕು.



ಈ ಕುರಿತು ಜಿಲ್ಲಾಧಿಕಾರಿಗಳು ಹಾಗೂ ಜಿಲ್ಲಾ ಪಂಚಾಯತ್ ಸಿಇಒಗಳ ಜತೆ ಸಭೆ ನಡೆಸಬೇಕು. ತಮ್ಮ ಉಸ್ತುವಾರಿಯಲ್ಲಿನ ಜಿಲ್ಲೆಯ ಸಮಸ್ಯೆ ಬಗೆಹರಿಸುವುದು ಆಯಾ ಕಾರ್ಯದರ್ಶಿಗಳ ಜವಾಬ್ದಾರಿಯಾಗಿದೆ. ಯಾವುದೇ ಕಾರಣಕ್ಕೂ ಕುಡಿಯುವ ನೀರಿಗೆ ತೊಂದರೆಯಾಗಬಾರದು.

ಅಭಿಮಾನೋತ್ಸವ ಸಿದ್ಧತೆ ಪರಿಶೀಲಿಸಿದ ಕೇಂದ್ರ ಸಚಿವ ಜೋಶಿ

ಬಿಜೆಪಿ ಬೆಳೆಯಲು ಬಿಎಸ್‌ವೈ ಕಾರಣ

• **ಚಿತ್ರದುರ್ಗ:** ಕರ್ನಾಟಕ ರಾಜ್ಯದಲ್ಲಿ ಬಿಜೆಪಿ ಹೆಮ್ಮರ ವಾಗಿ ಬೆಳೆದು ಅಧಿಕಾರ ಹಿಡಿಯುವಲ್ಲಿ ಬಿ.ಎಸ್. ಯಡಿಯೂರಪ್ಪನವರ ಪಾತ್ರ ಬಹಳ ದೊಡ್ಡದು ಎಂದು ಕೇಂದ್ರ ಸರ್ಕಾರದ ಗ್ರಾಹಕ ವ್ಯವಹಾರಗಳ ಆಹಾರ ಮತ್ತು ಸಾರ್ವಜನಿಕ ವಿತರಣೆ ಹಾಗೂ ಹೊಸ ನವೀಕರಿಸಬಹುದಾದ ಇಂಧನ ಸಚಿವ ಪ್ರಲ್ಹಾದ್ ಜೋಶಿ ಹೇಳಿದರು.



ನಗರದ ಹೊರವಲಯದ ಶ್ರೀ ಮಾದಾರ ಚೆನ್ನಯ್ಯ ಗುರುಪೀಠದ ಪಕ್ಕದಲ್ಲಿರುವ ಮೈದಾನದಲ್ಲಿ ಮೇ 9ರಂದು ನಡೆಸಲುದ್ದೇಶಿಸಿರುವ ಬಿಎಸ್‌ವೈ ಅಭಿಮಾನೋತ್ಸವ ಕಾರ್ಯಕ್ರಮ ನಡೆಯುವ ಸ್ಥಳಕ್ಕೆ ಭೇಟಿ ನೀಡಿ ಪೆಂಡಾಲ್ ನಿರ್ಮಾಣ ಕಾಮಗಾರಿ ವೀಕ್ಷಿಸಿದ ನಂತರ ಸುದ್ದಿಗಾರರೊಂದಿಗೆ ಅವರು ಮಾತನಾಡಿದರು. ➡ ಪುಟ ೪



> **ದಕ್ಷಿಣ ಭಾರತದ ಯಾವ ರಾಜ್ಯದಲ್ಲೂ ಅಧಿಕಾರ ಬಾರದ, ಉತ್ತರ ಭಾರತದ, ವ್ಯಾಪಾರಿಗಳ, ಮೇಲ್ವರ್ಗದವರ ಪಕ್ಷವೆಂದು ಕರೆಯುತ್ತಿದ್ದ ವೇಳೆ ಯಡಿಯೂರಪ್ಪ ಅವರು ವರ್ಗಾತೀತ, ರೈತಪರ ಕಾಳಜಿಯೊಂದಿಗೆ ರಾಜ್ಯದಲ್ಲಿ ಆಡಳಿತ ನೀಡಿದ್ದಾರೆ.**
> ■ ಪ್ರಲ್ಹಾದ್ ಜೋಶಿ, ಕೇಂದ್ರ ಸಚಿವ

ವಿಪತ್ತು ನಿರ್ವಹಣಾ ಸನ್ನದ್ಧತೆ ಬಲಪಡಿಸಲು ಕೇಂದ್ರ ಕ್ರಮ

ತುರ್ತು ಎಚ್ಚರಿಕೆ ವ್ಯವಸ್ಥೆ ಪರೀಕ್ಷೆ

• **ಹೊಸದಿಲ್ಲಿ:** ದೇಶದ ವಿಪತ್ತು ನಿರ್ವಹಣಾ ಸನ್ನದ್ಧತೆಯನ್ನು ಬಲಪಡಿಸಲು ಮೊಬೈಲ್ ಆಧಾರಿತ ತುರ್ತು ಎಚ್ಚರಿಕೆ ವ್ಯವಸ್ಥೆಯ ರಾಷ್ಟ್ರವ್ಯಾಪಿ ಪರೀಕ್ಷೆ ಆರಂಭಿಸಿರುವ ಕೇಂದ್ರ ಸರ್ಕಾರ, ದೇಶಾದ್ಯಂತ ಮೊಬೈಲ್ ಬಳಕೆದಾರರಿಗೆ ಪ್ರಾಯೋಗಿಕ ಸಂದೇಶಗಳನ್ನು ರವಾನಿಸುತ್ತಿದೆ.



ದೂರಸಂಪರ್ಕ ಇಲಾಖೆ ಮತ್ತು ರಾಷ್ಟ್ರೀಯ ವಿಪತ್ತು ನಿರ್ವಹಣಾ ಪ್ರಾಧಿಕಾರ, ವಿಪತ್ತುಪೀಡಿತ ಪ್ರದೇಶಗಳಲ್ಲಿ ನೈಜ-ಸಮಯದ ಎಚ್ಚರಿಕೆಗಳನ್ನು ನೀಡಲು ಈ ಪ್ರಯೋಗ ನಡೆಸುತ್ತಿವೆ. ಪ್ರಸ್ತುತ ಮೊಬೈಲ್‌ಗಳಿಗೆ ಬರುತ್ತಿರುವ ಸಂದೇಶಗಳು ಕೇವಲ ತಾಂತ್ರಿಕ ಪರೀಕ್ಷೆಯ ಭಾಗವಾಗಿದ್ದು, ಇವು ನೈಜ ಎಚ್ಚರಿಕೆಗಳಲ್ಲ ಎಂದು ಅಧಿಕಾರಿಗಳು ಸ್ಪಷ್ಟಪಡಿಸಿದ್ದಾರೆ. ರಾಷ್ಟ್ರೀಯ ವಿಪತ್ತು ನಿರ್ವಹಣಾ ಪ್ರಾಧಿಕಾರವು 'ಸಚೇತ್' ಎಂಬ ಸಂಯೋಜಿತ ಎಚ್ಚರಿಕೆ ವ್ಯವಸ್ಥೆಯನ್ನು ಜಾರಿಗೆ ತಂದಿದೆ. ➡ ಪುಟ ೪

ಹಿನ್ನೆಲೆ ಮತ್ತು ತಂತ್ರಜ್ಞಾನ

ಈ ವ್ಯವಸ್ಥೆಯನ್ನು ಔಪಚಾರಿಕವಾಗಿ ರಾಷ್ಟ್ರಕ್ಕೆ ಸಮರ್ಪಿಸುವ ಮೊದಲು ಅದರ ಕಾರ್ಯಕ್ಷಮತೆ ಮತ್ತು ವಿಶ್ವಾಸಾರ್ಹತೆ ಮೌಲ್ಯಮಾಪನ ಮಾಡಲು ಈ ರಾಷ್ಟ್ರವ್ಯಾಪಿ ಪರೀಕ್ಷೆಗಳನ್ನು ನಡೆಸಲಾಗುತ್ತಿದೆ. ಸಿ-ಡಾಟ್ ಸಂಸ್ಥೆ, ಈ ಸೆಲ್ ಬ್ರಾಡ್‌ಕಾಸ್ಟ್ ಆಧಾರಿತ ತುರ್ತು ಎಚ್ಚರಿಕೆ ವ್ಯವಸ್ಥೆಯ ಸ್ವದೇಶಿ ಅಭಿವೃದ್ಧಿಯ ಜವಾಬ್ದಾರಿ ಹೊತ್ತಿದೆ. ಈ ಸಂದೇಶಗಳಿಗೆ ಪ್ರತಿಕ್ರಿಯೆ ನೀಡುವ ಅಗತ್ಯವಿಲ್ಲ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ವಾಣಿಜ್ಯ ಸಿಲಿಂಡರ್ ದುಬಾರಿ ಜಿಎಸ್ಟಿ ಶೇ.5ಕ್ಕಿಳಿಸಲು ಮನವಿ

• **ಬೆಂಗಳೂರು:** ವಾಣಿಜ್ಯ ಅಡುಗೆ ಅನಿಲ ಸಿಲಿಂಡರ್ ಬೆಲೆ ಏರಿಕೆ ಹೋಟೆಲ್ ಉದ್ಯಮಕ್ಕೆ ಬರ ಸಿಡಿಲಿನಂತಾಗಿದ್ದು, ಉದ್ಯಮ ರಕ್ಷಣೆಗೆ 19 ಕೆ.ಜಿ. ವಾಣಿಜ್ಯ ಎಲ್‌ಪಿಜಿ ಸಿಲಿಂಡರ್‌ಗಳ ಮೇಲಿನ ಸರಕು ಮತ್ತು ಸೇವಾ ತೆರಿಗೆಯನ್ನು ತಕ್ಷಣ ಶೇ.18ರಿಂದ 5ಕ್ಕೆ ಇಳಿಸಲು ಕರ್ನಾಟಕ ರಾಜ್ಯ ಹೋಟೆಲ್ಸ್ ಅಸೋಸಿಯೇಷನ್ (ಕೆಎಸ್‌ಎಚ್‌ಎ) ಅಧ್ಯಕ್ಷ ಜಿ.ಕೆ.ಶೆಟ್ಟಿ ಮನವಿ ಮಾಡಿದ್ದಾರೆ. ಈ ಕುರಿತು ಶನಿವಾರ ಕೇಂದ್ರ ಸರ್ಕಾರಕ್ಕೆ ಪತ್ರ ಬರೆದಿರುವ ಅವರು, ಸರ್ಕಾರವು ತೈಲ ಮಾರಾಟ ಕಂಪನಿಗಳ ಮೂಲಕ ಕಳೆದ 60 ದಿನಗಳಲ್ಲಿ ಸಿಲಿಂಡರ್ ಬೆಲೆಯನ್ನು 1,308 ರೂ. ಹೆಚ್ಚಿಸಿದೆ. ಇದು ಇತ್ತೀಚಿನ ವರ್ಷಗಳಲ್ಲಿ ಮಾಡಲಾದ ಅತಿ ದೊಡ್ಡ ಏರಿಕೆಯಾಗಿದೆ. ➡ ಪುಟ ೪

ಕೇಂದ್ರ ಸರ್ಕಾರಕ್ಕೆ ಕರ್ನಾಟಕ ಹೋಟೆಲ್ಸ್ ಅಸೋಸಿಯೇಷನ್ ಪತ್ರ

ರಾಜ್ಯದ ಎಂಟು ಆಸ್ಪತ್ರೆಗಳ ರೋಗಿಗಳಿಗೆ ವಿತರಣೆ

ಇಸ್ಕಾನ್‌ನಿಂದ ಪೌಷ್ಟಿಕ ಆಹಾರ

▶ ನಂದಿನಿ ಎನ್.

• **ಬೆಂಗಳೂರು:** ರಾಜ್ಯದ ಸರ್ಕಾರಿ ಆಸ್ಪತ್ರೆಗಳಲ್ಲಿ ದಾಖಲಾಗುವ ರೋಗಿಗಳಿಗೆ ಪೌಷ್ಟಿಕ ಆಹಾರ ಒದಗಿಸುವ ನಿಟ್ಟಿನಲ್ಲಿ ಇಸ್ಕಾನ್ ಸಂಸ್ಥೆ ರಿಯಾಯಿತಿ ದರದಲ್ಲಿ ಉಪಾಹಾರ ವಿತರಣಾ ಯೋಜನೆ ಜಾರಿಗೊಳಿಸಿದೆ.

ದಿಗಂತ ವಿಶೇಷ

ಕಳೆದ ಜನವರಿಯಿಂದ ಮಂಗಳೂರು ಮತ್ತು ಧಾರವಾಡ ಜಿಲ್ಲಾಸ್ಪತ್ರೆಗಳನ್ನು ಒಳಗೊಂಡಂತೆ ನಗರದ ಎಂಟು ಸರ್ಕಾರಿ ಆಸ್ಪತ್ರೆಗಳಲ್ಲಿ ಒಟ್ಟು 14.23 ಕೋಟಿ ರೂ. ವೆಚ್ಚದಲ್ಲಿ ಪಥ್ಯಾಹಾರ ಪದ್ಧತಿ ಅನ್ವಯ ಈ ಯೋಜನೆ ಆರಂಭಿಸಿದೆ.

ರೋಗಿಗಳಿಗೆ ಪೌಷ್ಟಿಕ ಹಾಗೂ ಶುದ್ಧ ಆಹಾರ ಒದಗಿಸುವ ಉದ್ದೇಶದಿಂದ ರಾಜ್ಯ ಸರ್ಕಾರವು ಇಸ್ಕಾನ್ ಸಂಸ್ಥೆಗೆ 14,00,23,800 ರೂ. ವೆಚ್ಚದಲ್ಲಿ ಅನುದಾನ ಮಂಜೂರು ಮಾಡಿದೆ. ಈ ಯೋಜನೆಯಲ್ಲಿ ಎಂಟೂ ಸರ್ಕಾರಿ ಆಸ್ಪತ್ರೆಗಳಲ್ಲಿ ಚಿಕಿತ್ಸೆ ಪಡೆಯುತ್ತಿರುವ ರೋಗಿಗಳಿಗೆ ಅವರ ಆರೋಗ್ಯ ಸ್ಥಿತಿಗೆ ಅನುಗುಣವಾಗಿ ಪೌಷ್ಟಿಕ, ಆರೋಗ್ಯಕರ ಆಹಾರ ಒದಗಿಸುತ್ತಿದೆ. ➡ ಪುಟ ೪



ತಂಡ ನಿಯೋಜನೆ

ಆಸ್ಪತ್ರೆಗಳಲ್ಲಿ ರೋಗಿಗಳಿಗೆ ಸಮಯಕ್ಕೆ ಸರಿಯಾಗಿ ಉಪಾಹಾರ ವಿತರಿಸುವ ವ್ಯವಸ್ಥೆ ಕಲ್ಪಿಸಲಾಗಿದ್ದು, ಯಾವುದೇ ತೊಂದರೆ ಆಗದಂತೆ ನಿರ್ವಹಣೆಗೆ ವಿಶೇಷ ತಂಡಗಳನ್ನು ನಿಯೋಜಿಸಲಾಗಿದೆ. ಈ ಯೋಜನೆ ಯಶಸ್ವಿಯಾದಲ್ಲಿ ರಾಜ್ಯದ ಮತ್ತಷ್ಟು ಸರ್ಕಾರಿ ಆಸ್ಪತ್ರೆಗಳಿಗೆ ವಿಸ್ತರಿಸುವ ಸಾಧ್ಯತೆಯಿದೆ.

ಇರಾನ್-ಅಮೆರಿಕ ಯುದ್ಧಕ್ಕೆ ಸನ್ನದ್ಧತೆ

• **ಟೆಹ್ರಾನ್:** ಯುದ್ಧ ಕೊನೆಗೊಳಿಸಲು ಇರಾನ್‌ನ ಹೊಸ ಪ್ರಸ್ತಾವವನ್ನು ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ತಿರಸ್ಕರಿಸಿದ ಹಿನ್ನೆಲೆಯಲ್ಲಿ ಅಮೆರಿಕ-ಇರಾನ್ ಕದನ ವಿರಾಮ ಬೂದಿಮುಚ್ಚಿದ ಕೆಂಡದಂತಾಗಿದ್ದು, ಯುದ್ಧ ಪುನರಾರಂಭ ಆಗುವುದು ಬಹುತೇಕ ಖಚಿತವಾಗಿದೆ. ಅಮೆರಿಕ-ಇರಾನ್ ನಡುವಿನ ಮೂರು ವಾರಗಳ ತಾತ್ಕಾಲಿಕ ಕದನ ವಿರಾಮ ಒಪ್ಪಂದವು ಮುಂದುವರಿಯುವ ಸಾಧ್ಯತೆಯಿಲ್ಲ. ಪಾಕಿಸ್ತಾನಿ ಮಧ್ಯವರ್ತಿಗಳ ಮೂಲಕ ಯುದ್ಧ ಕೊನೆಗೊಳಿಸಲು ಅಮೆರಿಕ ಅಧ್ಯಕ್ಷರಿಗೆ ಇರಾನ್ ಪ್ರಸ್ತಾವನೆ ಕಳುಹಿಸಿತ್ತು. ಇರಾನ್ ನಮ್ಮೊಂದಿಗೆ ಒಪ್ಪಂದ ಮಾಡಿಕೊಳ್ಳಲು ಬಯಸಿದೆ. ಆದರೆ ಇರಾನ್‌ನವರ ಪಸ್ತಾವದಲ್ಲಿ ನನಗೆ ಸಮಾಧಾನವಿಲ್ಲ ಎಂದು ಟ್ರಂಪ್ ಹೇಳಿದ್ದಾರೆ.

• ವಿವರ ಪುಟ ೭

ಬೆಳ್ಳಿ ಬಂಗಾರ (ಬೆಂಗಳೂರು)	ಬೆಳ್ಳಿ: 2,53,200(2,47,300)	ಅಪರಂಜಿ ಚಿನ್ನ 14,860(15,000)	ಆಭರಣ ಚಿನ್ನ 13,835(13,965)	ಚಿನ್ನ 1 ಗ್ರಾಂ.ಗೆ, ಬೆಳ್ಳಿ 1 ಕೆ.ಜಿಗೆ, ರೂ.ಗಳಲ್ಲಿ (ಆವರಣದಲ್ಲಿ ಹಿಂದಿನ ದಿನದ ದರ)

$1 = ₹94.92

ಬಾಹ್ಯಾಕಾಶ ತಂತ್ರಜ್ಞಾನ ಶ್ರೇಷ್ಠತಾ ಕೇಂದ್ರ ಆರಂಭ

• **ಬೆಂಗಳೂರು:** ವ್ಯಾಪಕವಾಗಿ ಬೆಳೆಯುತ್ತಿರುವ ದೇಶದ ಬಾಹ್ಯಾಕಾಶ ಆರ್ಥಿಕತೆಗೆ ಗಮನಾರ್ಹ ಉತ್ತೇಜನ ನೀಡಲು ರಾಜ್ಯ ಸರ್ಕಾರದ ನೇತೃತ್ವದಲ್ಲಿನ ದೇಶದ ಮೊಟ್ಟ ಮೊದಲ ಬಾಹ್ಯಾಕಾಶ ತಂತ್ರಜ್ಞಾನ ಶ್ರೇಷ್ಠತಾ ಕೇಂದ್ರವು ಬೆಂಗಳೂರಿನಲ್ಲಿ ಕಾರ್ಯಾರಂಭ ಮಾಡಿದೆ. ಬಾಹ್ಯಾಕಾಶ ವಲಯದಲ್ಲಿನ ನಾವೀನ್ಯತೆಯ ಪ್ರಯೋಜನವನ್ನು ವಿವಿಧ ವಲಯಗಳಲ್ಲಿ ಬಳಕೆಗೆ ತರಲು ಹಾಗೂ ವಾಣಿಜ್ಯ ಉದ್ದೇಶಗಳಿಗೆ ಬಳಸಿಕೊಳ್ಳುವುದಕ್ಕೆ ದೇಶದ ಸಾಮರ್ಥ್ಯಗಳನ್ನು ಬಲಪಡಿಸುವಲ್ಲಿ ಈ ಉಪಕ್ರಮವು ಒಂದು ಪ್ರಮುಖ ಹೆಜ್ಜೆಯಾಗಿದೆ. ರಾಜ್ಯ ಸರ್ಕಾರವು ಎಸ್‌ಐಎ ಇಂಡಿಯಾ ಸಹಯೋಗದಲ್ಲಿ ಕರ್ನಾಟಕ ನಾವೀನ್ಯತೆ ಮತ್ತು ತಂತ್ರಜ್ಞಾನ ಸಂಸ್ಥೆ (ಕೆಐಟಿಎಸ್) ಮೂಲಕ ಸ್ಥಾಪಿಸಿರುವ ಕೇಂದ್ರವನ್ನು ಐಟಿ, ಬಿಟಿ ಸಚಿವ ಪ್ರಿಯಾಂಕ್ ಖರ್ಗೆ ಉದ್ಘಾಟಿಸಿದರು. ದೇಶದ ತಂತ್ರಜ್ಞಾನ ಮತ್ತು ನಾವೀನ್ಯತೆಯ ಪಯಣದಲ್ಲಿ ಕರ್ನಾಟಕವು ನಿರಂತರವಾಗಿ ಮುಂಚೂಣಿಯಲ್ಲಿದೆ. ಈ ಬಾಹ್ಯಾಕಾಶ ತಂತ್ರಜ್ಞಾನ ಶ್ರೇಷ್ಠತಾ ಕೇಂದ್ರವನ್ನು ಪ್ರಾರಂಭಿ ಸುವುದರೊಂದಿಗೆ, ನಾವು ರಾಜ್ಯದ ನಾಯಕತ್ವವನ್ನು ಭವಿಷ್ಯದ ಅತ್ಯಂತ ಮಹತ್ವದ ಕ್ಷೇತ್ರಗಳಲ್ಲಿ ಒಂದಾಗಿರುವ ಬಾಹ್ಯಾಕಾಶ ತಂತ್ರಜ್ಞಾನಕ್ಕೆ ವಿಸ್ತರಿಸುತ್ತಿದ್ದೇವೆ ಹೇಳಿದರು. ಸಂಶೋಧನೆಗಳನ್ನು ಮುಂದುವರಿಸುವುದರ ಬಗ್ಗೆ ಮಾತ್ರ ನಾವು ಗಮನ ಕೇಂದ್ರೀಕರಿಸಿಲ್ಲ ಎಂದರು.

ದೀದಿಗೆ ಸುಪ್ರೀಂ ಶಾಕ್

ಪುಟ 1 ➡ ಹೈಕೋರ್ಟ್ ಅರ್ಜಿ ತಳ್ಳಿಹಾಕಿದ ಬಳಿಕ ಟಿಎಂಸಿ ಸುಪ್ರೀಂ ಕೋರ್ಟ್‌ಗೆ ಮೇಲ್ಮನವಿ ಸಲ್ಲಿಸಿತ್ತು. ಟಿಎಂಸಿ ಪರ ಹಿರಿಯ ವಕೀಲ ಕಪಿಲ್ ಸಿಬಲ್ ವಾದ ಮಂಡಿಸಿ, ಕೇಂದ್ರ ಸಿಬ್ಬಂದಿ ನೇಮಿಸುವ ನಿರ್ಧಾರ ನಮಗೆ ಏ.29ರಂದು ಗೊತ್ತಾಗಿದೆ. ಈಗಾಗಲೇ ಪ್ರತಿ ಎಣಿಕೆ ಮೇಜಿನಲ್ಲೂ ಕೇಂದ್ರ ಸೂಕ್ಷ್ಮ ವೀಕ್ಷಕರಿದ್ದಾರೆ. ಹಾಗಿದ್ದರೂ ಹೆಚ್ಚುವರಿ ಕೇಂದ್ರ ಸಿಬ್ಬಂದಿ ಏಕೆ ಬೇಕು ಎಂದು ಪ್ರಶ್ನಿಸಿದರು. ಇದಕ್ಕೆ ಪ್ರತಿಕ್ರಿಯಿಸಿದ ನ್ಯಾಯಪೀಠ, ನಿಯಮಾವಳಿಯ ಪ್ರಕಾರ ಚುನಾವಣಾ ಆಯೋಗಕ್ಕೆ ಕೇಂದ್ರ ಅಥವಾ ರಾಜ್ಯ ಸರ್ಕಾರದ ಅಧಿಕಾರಿಗಳನ್ನು ಬಳಸುವ ಸಂಪೂರ್ಣ ಅಧಿಕಾರವಿದೆ ಎಂದು ತಿಳಿಸಿತು. 'ಕೇಂದ್ರ ಸಿಬ್ಬಂದಿಯನ್ನೇ ನಿಯೋಜಿಸಿದರೂ ಅದನ್ನು ಕಾನೂನುಬಾಹಿರ ಎಂದು ಹೇಳಲು ಸಾಧ್ಯವಿಲ್ಲ' ಎಂದು ನ್ಯಾಯಮೂರ್ತಿ ಬಾಗ್ಚಿ ಹೇಳಿದರು. ಚುನಾವಣಾ ಆಯೋಗ ಪರ ಹಿರಿಯ ವಕೀಲ ಡಿ.ಎಸ್. ನಾಯ್ಡು ವಾದ ಮಂಡಿಸಿ, ಮತ ಎಣಿಕೆಯಲ್ಲಿ ರಾಜ್ಯ ಸರ್ಕಾರದ ಸಿಬ್ಬಂದಿಯೂ ಭಾಗಿಯಾಗುತ್ತಾರೆ ಎಂದು ಭರವಸೆ ನೀಡಿದರು. ಪ್ರತಿ ಅಭ್ಯರ್ಥಿಗೂ ತಮ್ಮದೇ ಮತ ಎಣಿಕೆ ಪ್ರತಿನಿಧಿಗಳು ಇರುವುದರಿಂದ ಅಕ್ರಮದ ಭೀತಿ ಅಸಂಬದ್ಧ ಎಂದು ಹೇಳಿದರು. ಇದನ್ನೆಲ್ಲ ಪರಿಗಣಿಸಿದ ಸುಪ್ರೀಂ ಕೋರ್ಟ್, ಚುನಾವಣಾ ಆಯೋಗ ತನ್ನ ಸುತ್ತೋಲೆಯನ್ನು 'ಅಕ್ಷರಶಃ ಮತ್ತು ಆತ್ಮಸ್ಫೂರ್ತಿಯಿಂದ' ಜಾರಿಗೆ ತರುತ್ತದೆ ಎಂಬ ಭರವಸೆಯನ್ನು ದಾಖಲಿಸಿ ಅರ್ಜಿಯನ್ನು ಇತ್ಯರ್ಥ ಮಾಡಿತು.

ಶೇಕಡ 90 ಮತದಾನ

ಪುಟ 1 ➡ ಬಿಜೆಪಿ ಹಲವು ಮತಗಟ್ಟೆಗಳಲ್ಲಿ ಅಕ್ರಮ ನಡೆದಿರುವುದಾಗಿ ದೂರು ನೀಡಿದ್ದರಿಂದ ಆಯೋಗ ವಿಶೇಷ ವೀಕ್ಷಕ ಸುಬ್ರತ ಗುಪ್ತರನ್ನು ನಿಯೋಜಿಸಿತು. ಫಲ್ತಾ ಕ್ಷೇತ್ರದಲ್ಲಿ ಮರುಮತದಾನ ನಡೆಸುವ ಕುರಿತು ಆಯೋಗ ಶೀಘ್ರದಲ್ಲೇ ತೀರ್ಮಾನ ಕೈಗೊಳ್ಳಲಿದೆ.

ಹೆಚ್ಚುವರಿ ವೀಕ್ಷಕರ ನೇಮಿಸಿದ ಇಸಿ

ಪುಟ 1 ➡ ಚುನಾವಣಾ ಆಯೋಗದ ಪ್ರಕಾರ, ಮತ ಎಣಿಕೆ ಪ್ರಕ್ರಿಯೆ ಸುರಕ್ಷಿತ, ಶಾಂತಿಯುತ, ಪಾರದರ್ಶಕ ಹಾಗೂ ಬೆದರಿಕೆರಹಿತ ವಾತಾವರಣದಲ್ಲಿ ನಡೆಯಲು ಈ ಕ್ರಮ ಕೈಗೊಳ್ಳಲಾಗಿದೆ. ಹೆಚ್ಚುವರಿ ವೀಕ್ಷಕರನ್ನು ಸಂವಿಧಾನದ ವಿಧಿ 324 ಮತ್ತು ಜನಪ್ರತಿನಿಧಿಗಳ ಕಾಯ್ದೆಯಲ್ಲಿ ನಿಯೋಜಿಸಲಾಗಿದೆ. ಒಂದಕ್ಕಿಂತ ಹೆಚ್ಚು ಮತ ಎಣಿಕೆ ಸಭಾಂಗಣಗಳಿರುವ 165 ಕ್ಷೇತ್ರಗಳಲ್ಲಿ ಹೆಚ್ಚುವರಿ ಮತ ಎಣಿಕೆ ವೀಕ್ಷಕರು ಕಾರ್ಯನಿರ್ವಹಿಸಲಿದ್ದಾರೆ. ಪೊಲೀಸ್ ವೀಕ್ಷಕರು ಮತ ಎಣಿಕೆ ಕೇಂದ್ರಗಳ ಹೊರಭಾಗದಲ್ಲಿ ಕಾನೂನು ಸುವ್ಯವಸ್ಥೆ ಹಾಗೂ ಭದ್ರತೆ ಮೇಲ್ವಿಚಾರಣೆ ಮಾಡಲಿದ್ದಾರೆ. ಅವರಿಗೆ ಮತ ಎಣಿಕೆ ಸಭಾಂಗಣ ಪ್ರವೇಶಕ್ಕೆ ಅನುಮತಿ ಇರುವುದಿಲ್ಲ. ಇದರ ಜತೆಗೆ, ಮತ ಎಣಿಕೆ ವೇಳೆ ಕೇವಲ ಮತ ಎಣಿಕೆ ವೀಕ್ಷಕರು ಮತ್ತು ರಿಟರ್ನಿಂಗ್ ಅಧಿಕಾರಿಗಳಿಗೆ ಮಾತ್ರ ಮೊಬೈಲ್ ಫೋನ್ ತೆಗೆದುಕೊಂಡು ಹೋಗಲು ಅವಕಾಶ ಇದೆ ಎಂದು ಆಯೋಗ ಸ್ಪಷ್ಟಪಡಿಸಿದೆ.

ಟಿಎಂಸಿ-ಬಿಜೆಪಿ ನಡುವೆ ಘರ್ಷಣೆ

ಪಶ್ಚಿಮ ಬಂಗಾಳದ ದಕ್ಷಿಣ 24 ಪರಗಣ ಜಿಲ್ಲೆಯ 15 ಮತಗಟ್ಟೆಗಳಲ್ಲಿ ನಡೆದ ಮರುಮತದಾನದ ವೇಳೆ ತೃಣಮೂಲ ಕಾಂಗ್ರೆಸ್ ಹಾಗೂ ಬಿಜೆಪಿ ಬೆಂಬಲಿಗರ ನಡುವೆ ಘರ್ಷಣೆ ಸಂಭವಿಸಿದೆ. ಘಟನಾ ಸ್ಥಳದ ದೃಶ್ಯಗಳಲ್ಲಿ ಎರಡೂ ಪಕ್ಷಗಳ ಕಾರ್ಯಕರ್ತರು ಗಲಾಟೆ ನಡೆಸುತ್ತಿರುವುದು ಕಂಡುಬಂದಿದೆ. ಮಗ್ರಾಹಾಟ್ ಪಶ್ಚಿಮದ 11 ಮತ್ತು ಡೈಮಂಡ್ ಹಾರ್ಬರ್‌ನ 4 ಮತಗಟ್ಟೆಗಳಲ್ಲಿ ಮರುಮತದಾನ ಶಾಂತಿಯುತವಾಗಿ ಆರಂಭ ವಾಗಿದ್ದರೂ ನಂತರ ಉದ್ವಿಗ್ನತೆ ಹೆಚ್ಚಾಯಿತು. ಡೈಮಂಡ್ ಹಾರ್ಬರ್‌ನ ಚಂದಾ ಪ್ರಾಥಮಿಕ ಶಾಲೆಯ ಮತಗಟ್ಟೆಯಲ್ಲಿ ವಿಶಿಷ್ಟಚೇತನ ಮತದಾರ, ಅವರ ತಾಯಿ ಯನ್ನು ಕೇಂದ್ರ ಭದ್ರತಾ ಪಡೆಗಳು ಕಿರುಕುಳ ನೀಡಿದರೆಂದು ಟಿಎಂಸಿ ಆರೋಪಿಸಿ ಪ್ರತಿಭಟಿಸಿತು. ನಂತರ ಅಧಿಕಾರಿಗಳು ಪರಿಸ್ಥಿತಿ ನಿಯಂತ್ರಿಸಿದರು. ಇದೇ ವೇಳೆ, ಫಾಲ್ತಾ ಪ್ರದೇಶದ ನಿವಾಸಿಗಳು ಟಿಎಂಸಿ ಕಾರ್ಯಕರ್ತರಿಂದ ಬೆದರಿಕೆ ರಾಜಕೀಯ ನಡೆಯುತ್ತಿದೆ ಎಂದು ಆರೋಪಿಸಿ ಪ್ರತಿಭಟನೆ ನಡೆಸಿದರು.

ಮೇ 20ರಿಂದ ಸಾರಿಗೆ ನೌಕರರ ಮುಷ್ಕರ

• **ಬೆಂಗಳೂರು:** ಸಾರಿಗೆ ನೌಕರರ ವಿವಿಧ ಬೇಡಿಕೆಗಳ ಈಡೇರಿಕೆ ಕುರಿತು ಸರ್ಕಾರ ಸಕಾರಾತ್ಮಕವಾಗಿ ಸ್ಪಂದಿಸದ ಹಿನ್ನೆಲೆಯಲ್ಲಿ ಮೇ 20ರಿಂದ ರಾಜ್ಯಾದ್ಯಂತ ಬಸ್ ಸೇವೆ ರಹಿತ ಅನಿರ್ದಿಷ್ಟಾವಧಿ ಮುಷ್ಕರಕ್ಕೆ ಕರೆ ನೀಡಲಾಗಿದೆ ಎಂದು ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮಗಳ ಕಾರ್ಮಿಕ ಸಂಘಟನೆಗಳ ಜಂಟಿ ಕ್ರಿಯಾ ಸಮಿತಿಯ ಸಂಚಾಲಕ ಬಿ.ಜಯದೇವರಾಜೇ ಅರಸು ಹೇಳಿದರು.

ಶನಿವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿ, ಮುಖ್ಯಮಂತ್ರಿಗಳು, ಸಾರಿಗೆ ಸಚಿವರ ನೇತೃತ್ವದಲ್ಲಿ 12 ಸಭೆಗಳನ್ನು ಮಾಡಲಾಗಿದೆ. 38 ತಿಂಗಳ ವೇತನ ಬಾಕಿ ನೀಡಬೇಕು. 2024ರ ಜನವರಿಯಿಂದ ಜಾರಿಗೆ ಬರುವಂತೆ ವೇತನ ಪರಿಷ್ಕರಣೆ ಮಾಡಬೇಕು. ಶೇ.25ರಷ್ಟು ವೇತನ ಹೆಚ್ಚಳ ಮಾಡಬೇಕು. ಇತರೆ ಬೇಡಿಕೆಗಳನ್ನು ಕಾಲಮಿತಿಯ ಒಳಗೆ ಈಡೇರಿಸಬೇಕು ಎಂದು ಸಾರಿಗೆ ಸಚಿವರಿಗೆ ಮನವಿ ಮಾಡಿದ್ದೆವು. ಅವರು ಶೇ.7ರಷ್ಟು ವೇತನ ಹೆಚ್ಚಳ ಮಾಡುವುದಾಗಿ, 2025ರ ಏಪ್ರಿಲ್ 10ರಿಂದ ಪರಿಗಣಿಸುವುದಾಗಿ ಹೇಳಿದರು. ಹಾಗಾಗಿ, ಮಾತುಕತೆ ಫಲಪ್ರದವಾಗಲಿಲ್ಲ. ಜತೆಗೆ ಸರ್ಕಾರ 38 ತಿಂಗಳ ಬದಲು 26 ತಿಂಗಳ ಹಿಂಬಾಕಿ ನೀಡಲು ಮುಂದಾಗಿದ್ದಕ್ಕೆ ನಮ್ಮ ಒಪ್ಪಿಗೆ ಇಲ್ಲ. ಸರ್ಕಾರ ನಮ್ಮ ಬೇಡಿಕೆ ಈಡೇರಿಸಲು ಮನಸ್ಸು ಮಾಡಿಲ್ಲ. ಈ ಹಿನ್ನಲೆಯಲ್ಲಿ ಅನಿರ್ದಿಷ್ಟಾವಧಿ ಮುಷ್ಕರ ಮಾಡಲು ತೀರ್ಮಾನಿಸಲಾಗಿದೆ ಎಂದು ಹೇಳಿದರು.

ಕಿಡಿ ನುಡಿ

• ವಾಸುದೇವರಾವ್ ಕಕ್ಕೆನೇಜಿ

◈ ಪೆಟ್ರೋಲ್, ಡೀಸೆಲ್ ಬೆಲೆ ಏರಿಕೆಯಾಗಿದೆ ಎಂದು ರಾಹುಲ್ ಗಾಂಧಿ ಹೇಳಿರುವುದು ಸತ್ಯವೇ ಆಗಿದೆ, ಆದರೆ ಅದು ಆಗಿರುವುದು ಪಾಕಿಸ್ತಾನದಲ್ಲಿ – **ಅಮಿತ್ ಶಾ**

– ನಾನು ಇರುವುದು ಭಾರತದಲ್ಲಿ ಎಂಬುದೇ ಅವರಿಗೆ ಮರೆತು ಹೋಗಿರಬಹುದಾ?

ದಿನ ಭವಿಷ್ಯ

ಮೇಷ
ಮನಸ್ಸಿನ ಶಾಂತಿ ಕಾಯ್ದುಕೊಳ್ಳಲು ಆದ್ಯತೆ ಕೊಡಿ. ಸಂಘರ್ಷಕ್ಕೆ ಇಳಿಯದಿರಿ. ಹೊಸ ವ್ಯವಹಾರ ಆರಂಭಕ್ಕೆ ಕಾಲ ಸುಸೂತ್ರವಾಗಿದೆ.

ವೃಷಭ
ನಿಮ್ಮ ಮೃದು ಸ್ವಭಾವ ಇತರರು ನಿಮ್ಮನ್ನು ದುರ್ಬಳಕೆ ಮಾಡಲು ಅವಕಾಶ ನೀಡುತ್ತದೆ. ಕಠಿಣವಾಗಿ ವರ್ತಿಸಲು ಕಲಿಯಿರಿ.

ಮಿಥುನ
ಕೆಲ ಅಹಿತಕರ ಪ್ರಸಂಗದಿಂದಾಗಿ ನಿಮ್ಮ ಆತ್ಮವಿಶ್ವಾಸ ಕುಸಿತ. ಹೋರಾಟ ಮನೋಭಾವ ಬಿಡಬೇಡಿ. ಇತರರ ಒಳ್ಳೆಕೆ ಕಾರ್ಯ ಬಿಟ್ಟುಬಿಡಿ.

ಕಟಕ
ಶುಭ ಸುದ್ದಿ ಕೇಳುವಿರಿ. ಕೌಟುಂಬಿಕ ಸಂಭ್ರಮ. ಆರೋಗ್ಯ ಸಮಸ್ಯೆ ನಿವಾರಣೆ. ನಿಮ್ಮ ಆರ್ಥಿಕ ಸ್ಥಿತಿ ಉತ್ತಮ ಪಡಿಸಲು ಯೋಜಿಸಿ.

ಸಿಂಹ
ಹಳಬರ ಭೇಟಿ ಸಂಭವ. ಹಳೆ ನೆನಪು ಕೆದಕುವಿರಿ. ನಿಮ್ಮ ವ್ಯವಹಾರದಲ್ಲಿ ಅಡ್ಡಿ ಒದಗೀತು. ಸಹನೆಯ ನಡೆ ಒಳ್ಳೆಯದು.

ಕನ್ಯಾ
ಅಹಿತಕರ ಪ್ರಸಂಗ ಎದುರಿಸುವಿರಿ. ಜಾಣ್ಮೆಯಿಂದ ನಿಭಾಯಿಸಿ. ವ್ಯಕ್ತಿಯೊಬ್ಬರ ಜತೆ ಸ್ನೇಹ ಬೆಳೆಯಿತು. ಭಾವುಕ ಸ್ಪಂದನೆಕ್ಕೆ ಸಾಕ್ಷಿ.

ತುಲಾ
ಸಂಘಟಿತ ಕಾರ್ಯದಿಂದ ಯಶಸ್ಸು. ಏಕಾಂಗಿ ಪ್ರಯತ್ನ ಫಲ ನೀಡದು. ಕೇಳಿದವರಿಗೆಲ್ಲ ಹಣ ನೀಡಬೇಡಿ. ಕೌಟುಂಬಿಕ ಹೊಣೆ ಹೆಚ್ಚಳ.

ವೃಶ್ಚಿಕ
ಕಲಾವಿದರಿಗೆ ಉತ್ತಮ ದಿನ. ಕೌಟುಂಬಿಕ ಪರಿಸರ ಉಲ್ಲಾಸದಾಯಕ. ನೆಂಟರಿಷ್ಟರ ಸಮ್ಮುಖ ಆತ್ಮೀಯ ಕಾಲಕ್ಷೇಪ. ಆರ್ಥಿಕ ಉನ್ನತಿ.

ಧನು
ಸ್ಪಷ್ಟವಾಗಿ ನಿಮ್ಮ ಅಭಿಪ್ರಾಯ ವ್ಯಕ್ತಪಡಿಸಿ. ಕಹಿಸತ್ಯ ಹೇಳಲು ಹಿಂಜರಿಕೆ ಬೇಡ. ವ್ಯವಹಾರದಲ್ಲಿ ತುಸು ಹಿನ್ನಡೆ ಉಂಟಾದೀತು.

ಮಕರ
ಮುತುವರ್ಜಿಯಿಂದ ಕೆಲಸ ನಿರ್ವಹಿಸಿ. ಉದಾಸೀನತೆ ಕಾರ್ಯ ಕೆಡಿಸಬಹುದು. ಸಂಬಂಧ ಪಡದ ವಿಚಾರದಲ್ಲಿ ಹಸ್ತಕ್ಷೇಪ ಮಾಡಬೇಡ.

ಕುಂಭ
ಹಣದ ವಿವಾದ ಪರಿಹಾರ. ಸಂಬಂಧದಲ್ಲಿ ಯಾವುದೇ ಅನುಮಾನ ಇಟ್ಟುಕೊಳ್ಳದಿರಿ. ಸಂವಹನ ಕೊರತೆಯಿಂದ ಆಪ್ತರ ಜತೆ ಮುನಿಸು ಸಂಭವ.

ಮೀನ
ಕಠಿಣ ಪರಿಸ್ಥಿತಿ ಒದಗಿದರೂ ಆತ್ಮವಿಶ್ವಾಸ ಬಿಡಬೇಡ. ಎಲ್ಲ ಕಷ್ಟವೂ ತಾತ್ಕಾಲಿಕ. ಅನಿರೀಕ್ಷಿತ ನೆರವು ಒದಗಲಿದೆ. ಬಂಧು ಭೇಟಿಯಿಂದ ಸಂತಸ.


ರಾಹುಕಾಲ: 4.30-6.00
ಗುಳಿಕಕಾಲ: 3.00-4.30

ಅದೃಷ್ಟ ಸಂಖ್ಯೆ : 3,7,4,6

450 ಎಕರೆ ಭೂಮಿ ಸ್ವಾಧೀನ: ಕೃಷಿ ಮಾರುಕಟ್ಟೆ ಸಚಿವ ಶಿವಾನಂದ ಪಾಟೀಲ

ಎಪಿಎಂಸಿ ಪರವಾಗಿ ತೀರ್ಪು

• **ಬೆಂಗಳೂರು:** ಮೂರು ಪ್ರಮುಖ ಭೂಸ್ವಾಧೀನ ಪ್ರಕರಣಗಳಲ್ಲಿ ಸುದೀರ್ಘ ಕಾನೂನು ಹೋರಾಟದ ಬಳಿಕ ಎಪಿಎಂಸಿ ಪರವಾಗಿ ತೀರ್ಪು ಬಂದಿದ್ದು, ಒಟ್ಟು 410 ಕೋಟಿ ರೂ. ಪರಿಹಾರ ಧನ ಪಾವತಿಸಿ ಸುಮಾರು 450 ಎಕರೆ ಭೂಮಿಯನ್ನು ಸ್ವಾಧೀನಕ್ಕೆ ಪಡೆಯಲಾಗಿದೆ ಎಂದು ಕಬ್ಬು ಅಭಿವೃದ್ಧಿ, ಸಕ್ಕರೆ, ಜವಳಿ ಹಾಗೂ ಕೃಷಿ ಮಾರುಕಟ್ಟೆ ಸಚಿವ ಶಿವಾನಂದ ಪಾಟೀಲ ತಿಳಿಸಿದರು.



ಕರ್ನಾಟಕ ರಾಜ್ಯ ಕೃಷಿ ಮಾರಾಟ ಮಂಡಳಿ ಕಚೇರಿಯಲ್ಲಿ ನಡೆದ ಸುದ್ದಿಗೋಷ್ಠಿಯಲ್ಲಿ ಮಾತನಾಡಿ, ಹಿಂದಿನ ಸರ್ಕಾರದ ಎಪಿಎಂಸಿ ಕಾಯ್ದೆ ತಿದ್ದುಪಡಿ ಪರಿಣಾಮವಾಗಿ ಅನೇಕ ಎಪಿಎಂಸಿಗಳು ದುರ್ಬಲ ಸ್ಥಿತಿಗೆ ತಲುಪಿದ್ದವು. ಆಸ್ತಿಗಳು ಕೈತಪ್ಪುವ ಪರಿಸ್ಥಿತಿಯೂ ನಿರ್ಮಾಣವಾಗಿತ್ತು. ಇಲಾಖೆಯ ಜವಾಬ್ದಾರಿ ಸ್ವೀಕರಿಸಿದ ತಕ್ಷಣ ಎಪಿಎಂಸಿಗಳ ಪುನಶ್ಚೇತನ ಹಾಗೂ ಆಸ್ತಿಗಳ ರಕ್ಷಣೆಗೆ ಆದ್ಯತೆ ನೀಡಲಾಗಿದ್ದು, ರೈತ ಸ್ನೇಹಿ ಮಾರುಕಟ್ಟೆ ವ್ಯವಸ್ಥೆ ನಿರ್ಮಾಣಕ್ಕೆ ಕ್ರಮ ಕೈಗೊಳ್ಳಲಾಗಿದೆ. ಇದರ ಪರಿಣಾಮವಾಗಿ ಮೂರು ಭೂಸ್ವಾಧೀನ ಪ್ರಕರಣಗಳಲ್ಲೂ ಎಪಿಎಂಸಿ ಪರವಾಗಿ ತೀರ್ಪು ಬಂದು, ಮೆಗಾ ಮಾರುಕಟ್ಟೆ ಸೇರಿದಂತೆ ಯೋಜನೆಗಳಿಗೆ ಇದ್ದ ಅಡ್ಡಿಗಳು ನಿವಾರಣೆಯಾಗಿದೆ ಎಂದು ವಿವರಿಸಿದರು.

ಪ್ರಕರಣಗಳು ಯಾವುವು?: 1994ರಲ್ಲಿ ಯಶವಂತಪುರ ಎಪಿಎಂಸಿಯಿಂದ ಶ್ರೀಗಂಧ ಕಾವಲು ಗ್ರಾಮದ 172 ಎಕರೆ 22 ಗುಂಟೆ ಹಾಗೂ ಹೇರೋಹಳ್ಳಿ ಗ್ರಾಮದ 100 ಎಕರೆ 11 ಗುಂಟೆ ಭೂಮಿಯನ್ನು ಮೆಗಾ ಮಾರುಕಟ್ಟೆ ನಿರ್ಮಾಣಕ್ಕಾಗಿ ಸ್ವಾಧೀನಪಡಿಸಿಕೊಳ್ಳಲಾಗಿತ್ತು. ಈ ಕುರಿತು ಜಮನ್ ಲಾಲ್ ಬಜಾಜ್ ಸೇವಾ ಟ್ರಸ್ಟ್ ಹೈಕೋರ್ಟ್‌ನಲ್ಲಿ ಪ್ರಶ್ನೆ ಮಾಡಿದ್ದು, ಬಳಿಕ ಸುಪ್ರೀಂ ಕೋರ್ಟ್‌ಗೆ ಮೇಲ್ಮನವಿ ಸಲ್ಲಿಸಿತ್ತು. ಅಂತಿಮವಾಗಿ ಸುಪ್ರೀಂ ಕೋರ್ಟ್ ಎಪಿಎಂಸಿ ಪರ ತೀರ್ಪು ನೀಡಿದ್ದು, 186 ಕೋಟಿ ರೂ. ಪರಿಹಾರ ಪಾವತಿಸಲಾಗಿದೆ.

2003ರಲ್ಲಿ ಸರ್ಜಾಪುರ ಹೋಬಳಿಯ ಗೂಳಿ ಮಂಗಲದಲ್ಲಿ ಹಣ್ಣು, ಹೂವು, ತರಕಾರಿ ಮಾರುಕಟ್ಟೆ ಯೋಜನೆಗಾಗಿ 42 ಎಕರೆ 31 ಗುಂಟೆ ಭೂಮಿಯನ್ನು ಸ್ವಾಧೀನಪಡಿಸಿಕೊಳ್ಳಲಾಗಿತ್ತು. ಈ ಪ್ರಕರಣವೂ ಸುಪ್ರೀಂ ಕೋರ್ಟ್‌ಮೆಟ್ಟಿಲೇರಿ ಹೋಗಿದ್ದು, ನಂತರ ಹೈಕೋರ್ಟ್‌ನಲ್ಲಿ ಇತ್ಯರ್ಥಗೊಂಡು ಎಪಿಎಂಸಿ ಪರ ತೀರ್ಪು ಬಂದಿದೆ. ಈ ಹಿನ್ನೆಲೆಯಲ್ಲಿ 211.37 ಕೋಟಿ ರೂ. ಪರಿಹಾರ ನ್ಯಾಯಾಲಯಕ್ಕೆ ಪಾವತಿಸಲಾಗಿದೆ.

ಕೊಪ್ಪಳ ಜಿಲ್ಲೆಯ ಗಂಗಾವತಿ ತಾಲೂಕು ಕಾರಟಗಿಯಲ್ಲಿ 2012ರಲ್ಲಿ ರೈಸ್ ಟೆಕ್ನಾಲಜಿ ಪಾರ್ಕ್ ನಿರ್ಮಾಣಕ್ಕಾಗಿ 136 ಎಕರೆ ಭೂಮಿಯನ್ನು ಸ್ವಾಧೀನಪಡಿಸಿಕೊಳ್ಳಲಾಗಿತ್ತು.

ಜಿಲ್ಲಾ ನ್ಯಾಯಾಲಯದ ತೀರ್ಪು ವಿರುದ್ಧ ಹೈಕೋರ್ಟ್‌ನಲ್ಲಿ ಮೇಲ್ಮನವಿ ಸಲ್ಲಿಸಲಾಗಿದ್ದು, ಅಂತಿಮವಾಗಿ ಎಪಿಎಂಸಿ ಪರ ತೀರ್ಪು ಬಂದಿದೆ. ಈ ಪ್ರಕರಣದಲ್ಲಿ 12 ಕೋಟಿ ರೂ. ಪರಿಹಾರ ಪಾವತಿಸಲಾಗಿದೆ.

ಸ್ವಾಧೀನಗೊಂಡ ಭೂಮಿ ವಿವರ

ಒಟ್ಟು ಮೂರು ಪ್ರಕರಣಗಳಲ್ಲಿ 450 ಎಕರೆ ಎಪಿಎಂಸಿ ಸ್ವಾಧೀನಕ್ಕೆ 410 ಕೋಟಿ ರೂ. ಪರಿಹಾರ ಪಾವತಿಸಲಾಗಿದೆ. ಶ್ರೀಗಂಧ ಕಾವಲು ಮತ್ತು ಹೇರೋಹಳ್ಳಿಯಲ್ಲಿ 272 ಎಕರೆ 33 ಗುಂಟೆಗೆ 186 ಕೋಟಿ ರೂ. ಪರಿಹಾರ, ಗೂಳಿ ಮಂಗಲದಲ್ಲಿ 42 ಎಕರೆ 31 ಗುಂಟೆಗೆ 211.37 ಕೋಟಿ ರೂ. ಪರಿಹಾರ ಹಾಗೂ ಗಂಗಾವತಿ ತಾಲೂಕು ಕಾರಟಗಿಯಲ್ಲಿ 136 ಎಕರೆಗೆ 12 ಕೋಟಿ.ರೂ. ಪರಿಹಾರ ನೀಡಲಾಗಿದೆ. ಒಟ್ಟಾರೆ, ಭೂಸ್ವಾಧೀನ ಪ್ರಕರಣಗಳ ಅಂತ್ಯದಿಂದ ಎಪಿಎಂಸಿ ಅಭಿವೃದ್ಧಿ ಯೋಜನೆಗಳಿಗೆ ಹೊಸ ವೇಗ ದೊರಕಿದೆ ಎಂದು ಸಚಿವರು ಹೇಳಿದರು.

ಮುಂದಿನ ಯೋಜನೆಗಳೇನು

ಶ್ರೀಗಂಧ ಕಾವಲು ಮತ್ತು ಹೇರೋಹಳ್ಳಿ ಪ್ರದೇಶದಲ್ಲಿ ಮೆಗಾ ಮಾರುಕಟ್ಟೆ, ಗೂಳಿಮಂಗಲದಲ್ಲಿ ಹಣ್ಣು, ಹೂವು, ತರಕಾರಿ ಮಾರುಕಟ್ಟೆ ಹಾಗೂ ಕಾರಟಗಿಯಲ್ಲಿ ರೈಸ್ ಟೆಕ್ನಾಲಜಿ ಪಾರ್ಕ್ ನಿರ್ಮಿಸಲು ಯೋಜನೆ ರೂಪಿಸಲಾಗಿದೆ. ಭೂಸ್ವಾಧೀನ ಪ್ರಕರಣಗಳಲ್ಲಿ ತೀರ್ಪು ಬಂದಿರುವುದರಿಂದ ಈ ಯೋಜನೆಗಳಿಗೆ ಇದ್ದ ಅಡ್ಡಿಗಳು ನಿವಾರಣೆಯಾಗಿದೆ.

ರಾಜೇಗೌಡ ಗೆಲುವು?

ಚಿಕ್ಕಮಗಳೂರು: ರಾಜ್ಯ ರಾಜಕೀಯದಲ್ಲಿ ತೀವ್ರ ಕುತೂಹಲ ಮೂಡಿಸಿದ್ದ ಶೃಂಗೇರಿ ವಿಧಾನಸಭಾ ಕ್ಷೇತ್ರದ 2023ರ ಚುನಾವಣೆಯ ಅಂಚೆ ಮತಗಳ ಮರು ಎಣಿಕೆಯಲ್ಲೂ ಕಾಂಗ್ರೆಸ್‌ನ ಟಿ.ಡಿ.ರಾಜೇಗೌಡ ಅವರೇ ಗೆಲುವಾಗಿರುವುದು ಖಚಿತವಾಗಿದೆ. ಈ ಮೂಲಕ ಮೂರು ವರ್ಷಗಳ ಕಾನೂನು ಹೋರಾಟಕ್ಕೆ ತೆರೆಬಿದ್ದಂತಾಗಿದೆ.



ಅಂಚೆ ಮತಗಳ ಎಣಿಕೆಯಲ್ಲಿ ವ್ಯತ್ಯಾಸವಾಗಿದೆ ಎಂದು ಪರಾಜಿತ ಅಭ್ಯರ್ಥಿ ಬಿಜೆಪಿಯ ಡಿ.ಎನ್.ಜೀವರಾಜ್ ತಕರಾರು ಅರ್ಜಿ ಸಲ್ಲಿಸಿದ್ದ ಹಿನ್ನೆಲೆಯಲ್ಲಿ ತಿರಸ್ಕೃತ ಅಂಚೆ ಮತಗಳ ಮರು ಎಣಿಕೆ ಮಾಡುವಂತೆ ಉಚ್ಚನ್ಯಾಯಾಲಯ ಆದೇಶಿಸಿತ್ತು.

ಅದರಂತೆ ಚುನಾವಣಾ ಆಯೋಗವು ಇಂದು ನಗರದ ಐಡಿಎಸ್‌ಜಿ ಕಾಲೇಜಿನಲ್ಲಿ ಮರು ಮತ ಎಣಿಕೆ ಪ್ರಕ್ರಿಯೆ ಕೈಗೊಂಡಿತು. ಜಿಲ್ಲಾ ಚುನಾವಣಾಧಿಕಾರಿ ಗೌರವ ಶೆಟ್ಟಿ, ಜಿಲ್ಲಾಧಿಕಾರಿ ಎನ್.ಎಂ.ನಾಗರಾಜ ಅವರ ನೇತೃತ್ವದಲ್ಲಿ ಮರು ಎಣಿಕೆ ಕಾರ್ಯ ನಡೆದಿದ್ದು, ಹಾಲಿ ಶಾಸಕ ಕಾಂಗ್ರೆಸ್‌ನ ಟಿ.ಡಿ.ರಾಜೇಗೌಡ, ಪರಾಜಿತ ಅಭ್ಯರ್ಥಿಗಳಾದ ಬಿಜೆಪಿಯ ಡಿ.ಎನ್.ಜೀವರಾಜ್, ಜೆಡಿಎಸ್ ಪರಾಜಿತ ಅಭ್ಯರ್ಥಿ ಸುಧಾಕರ ಶೆಟ್ಟಿ, ಅವರ ಚುನಾವಣಾ ಏಜೆಂಟರುಗಳು ಈ ಸಂದರ್ಭದಲ್ಲಿ ಹಾಜರಿದ್ದರು.

ಕೈ ವಿಜಯೋತ್ಸವ

ತಿರಸ್ಕೃತಗೊಂಡಿದ್ದ 279 ಮತಗಳ ಮರು ಎಣಿಕೆ ವೇಳೆ ಕಾಂಗ್ರೆಸ್‌ನ ಟಿ.ಡಿ.ರಾಜೇಗೌಡ ಅವರಿಗೆ ಹೆಚ್ಚುವರಿಯಾಗಿ 2 ಮತಗಳು ಹಾಗೂ ಬಿಜೆಪಿ ಪರಾಜಿತ ಅಭ್ಯರ್ಥಿ ಡಿ.ಎನ್. ಜೀವರಾಜ್ ಅವರಿಗೆ ಹೆಚ್ಚುವರಿಯಾಗಿ 1 ಮತ ಲಭಿಸಿತ್ತು. ಇದರ ಆಧಾರದಲ್ಲಿ ಟಿ.ಡಿ.ರಾಜೇಗೌಡ ಅವರ ಗೆಲುವಿನ ಅಂತರ 201 ರಿಂದ 203 ಕ್ಕೆ ಏರಿಕೆಯಾಗಿದೆ ಎಂದು ಹೇಳಲಾಗಿದೆ. ಶಾಸಕ ಟಿ.ಡಿ.ರಾಜೇಗೌಡ ಮತ್ತು ಬೆಂಬಲಿಗರು ವಿಜಯೋತ್ಸವ ಆಚರಿಸಿದರು.

ಶೃಂಗೇರಿ ಕ್ಷೇತ್ರದಲ್ಲಿ ಒಟ್ಟು 1,822 ಅಂಚೆ ಮತಗಳು ಚಲಾವಣೆಯಾಗಿದ್ದವು. ಈ ಪೈಕಿ ಆರಂಭದಲ್ಲಿ 279 ಮತಗಳನ್ನು ವಿವಿಧ ತಾಂತ್ರಿಕ ಕಾರಣಗಳಿಂದ ತಿರಸ್ಕರಿಸಲಾಗಿತ್ತು. ಈ ತಿರಸ್ಕೃತ ಮತಗಳ ಮರು ಎಣಿಕೆಯಲ್ಲೇ ಗೊಂದಲ ಸೃಷ್ಟಿಯಾಗಿದ್ದು, ಅವುಗಳಲ್ಲಿ 12 ಮತಗಳು ನಾಪತ್ತೆಯಾಗಿರುವುದಾಗಿ ವರದಿಯಾಗಿದೆ. ಉಳಿದಂತೆ 3 ಮತಗಳು ನೋಟಾಗೆ ಚಲಾವಣೆಯಾಗಿದ್ದು, ಅಂತಿಮವಾಗಿ 1,540 ಅಂಚೆ ಮತಗಳನ್ನು ಮರು ಎಣಿಕೆಗೆ ಪರಿಗಣಿಸಲಾಗಿತ್ತು. ಸಂಪೂರ್ಣ ಪ್ರಕ್ರಿಯೆಯನ್ನು ವೀಡಿಯೋ ಚಿತ್ರೀಕರಣ ಮಾಡಲಾಯಿತು.

ಬಿಜೆಪಿ ಬೆಳೆಯಲು ಬಿಎಸ್‌ವೈ ಕಾರಣ

ಪುಟ 1 ➡ ದಕ್ಷಿಣ ಭಾರತದ ಯಾವ ರಾಜ್ಯದಲ್ಲೂ ಅಧಿಕಾರ ಬಾರದ, ಉತ್ತರ ಭಾರತದ, ವ್ಯಾಪಾರಿಗಳ, ಮೇಲ್ವರ್ಗದವರ ಪಕ್ಷವೆಂದು ಕರೆಯುತ್ತಿದ್ದ ವೇಳೆ ಯಡಿಯೂರಪ್ಪ ಅವರು ತಥಾಕಥಿತ ವರ್ಗಾತೀತ, ರೈತಪರ ಕಾಳಜಿಯೊಂದಿಗೆ ರಾಜ್ಯ ದಲ್ಲಿ ಆಡಳಿತ ನೀಡಿದ್ದಾರೆ ಎಂದರು.

ಅಂತಹ ಧೀಮಂತ ನಾಯಕರ ರಾಜಕೀಯ ಜೀವನ 50 ವರ್ಷ ಪೂರೈಸಿದ ಹಿನ್ನಲೆಯಲ್ಲಿ ಅವರಿಗೆ ಅಭೂತಪೂರ್ವ ಸತ್ಕಾರ, ಸನ್ಮಾನ ಮಾಡಲಾಗುತ್ತಿದೆ. ಯಾರೂ ಇಲ್ಲದ ಸಂದರ್ಭದಲ್ಲಿ ಪಕ್ಷ ಕಟ್ಟಿ ಬೆಳೆಸಿ, ತಾನು ಯಾವ ರೀತಿ ಎತ್ತರಕ್ಕೆ ಬೆಳೆಯಬಲ್ಲೆ ಎಂಬುದಕ್ಕೆ ಬಿಎಸ್‌ವೈ ಉತ್ತಮ ನಿದರ್ಶನ. ಅದು ಈಗಿನ ಹಾಗೂ ಮುಂದಿನ ಪೀಳಿಗೆಗೆ ತಿಳಿಸಲು ಈ ಬೃಹತ್ ಅಭಿಮಾನೋತ್ಸವ ನಡೆಸಲಾಗುತ್ತಿದೆ ಎಂದರು.

ಮಾಜಿ ಶಾಸಕ ಜಿ.ಎಚ್.ತಿಪ್ಪಾರೆಡ್ಡಿ, ವಿಪ ಮಾಜಿ ಸದಸ್ಯ ವೈ.ಎ.ನಾರಾಯಣಸ್ವಾಮಿ, ರಾಜ್ಯ ಕಾರ್ಯದರ್ಶಿ ತಮೇಶ್ ಗೌಡ್ರು, ಶರಣು ತಳ್ಳಿಕೆರೆ, ವಿಭಾಗ ಸಹ ಪ್ರಭಾರಿ ಎ.ಮುರಳಿ, ಜಿಲ್ಲಾಧ್ಯಕ್ಷ ಕೆ.ಟಿ.ಕುಮಾರಸ್ವಾಮಿ ಇದ್ದರು.



ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ. ವಿಜಯೇಂದ್ರ ಅವರು ಮೈಸೂರಿನ ಸುತ್ತೂರು ಮಠಕ್ಕೆ ಶನಿವಾರ ಭೇಟಿ ನೀಡಿ ಯಡಿಯೂರಪ್ಪ ಅಭಿಮಾನೋತ್ಸವ ಕಾರ್ಯಕ್ರಮಕ್ಕೆ ಸುತ್ತೂರು ದೇಶಿಕೇಂದ್ರ ಶ್ರೀಗಳನ್ನು ಆಹ್ವಾನಿಸಿದರು.

ಕುಲಕರ್ಣಿ ಶಾಸಕ ಸ್ಥಾನ ರದ್ದು

ಪುಟ 1 ➡ ಧಾರವಾಡ ಕ್ಷೇತ್ರವನ್ನು ಪ್ರತಿನಿಧಿಸುವ ವಿಧಾನಸಭೆಯ ಸದಸ್ಯ ವಿನಯ್ ಕುಲಕರ್ಣಿ ಅವರನ್ನು ಬೆಂಗಳೂರು ನಗರದ (CCH&82) LXXXI ಹೆಚ್ಚುವರಿ ನಗರ ಸಿವಿಲ್ ಮತ್ತು ಸೆಷನ್ಸ್ ನ್ಯಾಯಾಧೀಶರು ವಿಶೇಷ ಇಇ ಸಂಖ್ಯೆ 565/2021 ರಲ್ಲಿ ದೋಷಾರೋಪಣೆ ಮಾಡಿದ ಪರಿಣಾಮವಾಗಿ ಅವರು ಶಿಕ್ಷೆಗೊಳಗಾದ ದಿನಾಂಕದಿಂದ ಅಂದರೆ ಏಪ್ರಿಲ್ 15, 2026 ರಿಂದ ಕರ್ನಾಟಕ ವಿಧಾನಸಭೆಯ ಸದಸ್ಯತ್ವದಿಂದ ಅನರ್ಹರಾಗಿದ್ದಾರೆ ಎಂದು ತಿಳಿಸಲಾಗಿದೆ.

ಬಿಡುಗಡೆ ಬಳಿಕವೂ 6 ವರ್ಷ

ಅನರ್ಹತೆ ಮುಂದುವರಿಕೆ: 1951ರ ಜನತಾ ಪ್ರಾತಿನಿಧ್ಯ ಕಾಯ್ದೆಯ ಸೆಕ್ಷನ್ 8 ಮತ್ತು ಭಾರತ ಸಂವಿಧಾನದ 191(1)(e) ವಿಧಿಯ ನಿಬಂಧನೆಗಳ ಪ್ರಕಾರ ಮತ್ತು ಅಂತಹ ಅನರ್ಹತೆಯು ಅವರ ಬಿಡುಗಡೆಯ ನಂತರ ಆರು ವರ್ಷಗಳ ಅವಧಿಗೆ ಮುಂದುವರಿಯುತ್ತದೆ. ಸಂಬಂಧಿಸಿದ ನ್ಯಾಯಾಲಯವು ಶಿಕ್ಷೆಯನ್ನು ತಡೆಹಿಡಿಯದ ಹೊರತು ಅನರ್ಹತೆ ಮುಂದುವರಿಯಲಿದೆ. ಆದ್ದರಿಂದ, ಕರ್ನಾಟಕ ವಿಧಾನಸಭೆಯ ಒಂದು ಸ್ಥಾನ ಖಾಲಿಯಾಗಿದೆ ಎಂದು ಅಧಿಸೂಚನೆಯಲ್ಲಿ ಹೇಳಲಾಗಿದೆ.

ವಾಣಿಜ್ಯ ಸಿಲಿಂಡರ್ ದುಬಾರಿ ಜಿಎಸ್ಟಿ ಶೇ.5ಕ್ಕಿಳಿಸಲು ಮನವಿ

ಪುಟ 1 ➡ ಮಾರ್ಚ್‌ನಲ್ಲಿ ಸುಮಾರು 1,800ರಿಂದ 2 ಸಾವಿರ ರೂ. ಇದ್ದ ಬೆಲೆಗಳು ಈಗ 3,100ಕ್ಕೂ ಅಧಿಕ ಮಟ್ಟಕ್ಕೆ ಏರಿವೆ ಎಂದು ಹೇಳಿದ್ದಾರೆ. ಜಾಗತಿಕ ವಿಕೋಪ-ಯುದ್ಧಗಳ ನೇರ ಪರಿಣಾಮ ಹೋಟೆಲ್ ಮತ್ತು ರೆಸ್ಟೋರೆಂಟ್ ಉದ್ಯಮದ ಮೇಲೆ ಬಿದ್ದಿದೆ. ವಾಣಿಜ್ಯ ಎಲ್‌ಪಿಜಿಯ ಕೊರತೆ ಹಾಗೂ ಬೆಲೆಗಳ ಭಾರೀ ಏರಿಕೆ ರಾಜ್ಯದಾದ್ಯಂತ ಹೋಟೆಲ್‌ಗಳ ಕಾರ್ಯಾಚರಣಾ ವೆಚ್ಚಗಳನ್ನು ಗಣನೀಯವಾಗಿ ಹೆಚ್ಚಿಸಿದೆ ಎಂದು ಕಳವಳ ವ್ಯಕ್ತಪಡಿಸಿದ್ದಾರೆ.

ವಾಣಿಜ್ಯ ಎಲ್‌ಪಿಜಿ ಬೆಲೆಯಲ್ಲಿ ಇತ್ತೀಚಿನ ಏರಿಕೆ ಹಣದುಬ್ಬರದ ಒತ್ತಡವನ್ನು ಮತ್ತಷ್ಟು ಹೆಚ್ಚಿಸುತ್ತದೆ ಎಂದು ಜಿ.ಕೆ.ಶೆಟ್ಟಿ ಹೇಳಿದರು. ಈ ಬೆಲೆ ಏರಿಕೆಯ ದುಷ್ಪರಿಣಾಮ ತಡೆಯಲು ಸರ್ಕಾರಗಳು ತಕ್ಷಣ ಮಧ್ಯಪ್ರವೇಶಿಸದಿದ್ದರೆ, ಬೆಲೆ ಏರಿಕೆಯ ಒತ್ತಡವನ್ನು ಗ್ರಾಹಕರ ಮೇಲೆ ವರ್ಗಾಯಿಸುವುದರ ಹೊರತಾಗಿ ಇತರ ಯಾವುದೇ ಮಾರ್ಗೋಪಾಯ ವಿಲ್ಲ. ಇದರಿಂದ ಜನಸಾಮಾನ್ಯರ ಮೇಲೆ ಅಧಿಕ ಒತ್ತಡ ಬೀಳಲಿದ್ದು, ಉದ್ಯಮದ ಮೇಲೆ ಕೂಡಾ ದುಷ್ಪರಿಣಾಮ ಬೀರಲಿದೆ ಎಂದು ಎಚ್ಚರಿಸಿದ್ದಾರೆ.

ತುರ್ತು ಎಚ್ಚರಿಕೆ ವ್ಯವಸ್ಥೆ ಪರೀಕ್ಷೆ

ಪುಟ 1 ➡ ಇದನ್ನು ಸಿ-ಡಾಟ್ ಸಂಸ್ಥೆ ಅಭಿವೃದ್ಧಿಪಡಿಸಿದೆ.

ಕಾರ್ಯಾಚರಣೆ ವ್ಯಾಪ್ತಿ: ಈ ವ್ಯವಸ್ಥೆ ಅಂತಾರಾಷ್ಟ್ರೀಯ ದೂರಸಂಪರ್ಕ ಒಕ್ಕೂಟದ ಶಿಫಾರಸಿನಂತೆ ಸಾಮಾನ್ಯ ಎಚ್ಚರಿಕೆಯ ಶಿಷ್ಟಾಚಾರ ಆಧರಿಸಿದೆ. ಇದು ಭಾರತದ ಎಲ್ಲಾ 36 ರಾಜ್ಯಗಳು ಮತ್ತು ಕೇಂದ್ರಾಡಳಿತ ಪ್ರದೇಶಗಳಲ್ಲಿ ಕಾರ್ಯನಿರ್ವಹಿಸುತ್ತಿದೆ. ಈವರೆಗೆ ಹವಾಮಾನ ವೈಪರೀತ್ಯ ಮತ್ತು ಚಂಡಮಾರುತದ ಸಂದರ್ಭಗಳಲ್ಲಿ 19ಕ್ಕೂ ಹೆಚ್ಚು ಭಾರತೀಯ ಭಾಷೆಗಳಲ್ಲಿ 134 ಶತಕೋಟಿಗೂ ಹೆಚ್ಚು ಎಸ್‌ಎಂಎಸ್ ಎಚ್ಚರಿಕೆಗಳನ್ನು ರವಾನಿಸಲಾಗಿದೆ. ಭೂಕಂಪ, ಸುನಾಮಿ ಮತ್ತು ಅನಿಲ ಸೋರಿಕೆಯಂತಹ ತುರ್ತು ಸಂದರ್ಭಗಳಲ್ಲಿ ಪ್ರತಿಕ್ರಿಯಿಸುವ ಸಮಯ ಸುಧಾರಿಸಲು ಈಗ ಸೆಲ್ ಬ್ರಾಡ್‌ಕಾಸ್ಟ್ ತಂತ್ರಜ್ಞಾನ ಸಂಯೋಜಿಸಲಾಗುತ್ತಿದೆ.

ಪರೀಕ್ಷಾ ವಿಧಾನಗಳು: ಸೆಲ್ ಬ್ರಾಡ್‌ಕಾಸ್ಟ್ ತಂತ್ರಜ್ಞಾನ, ನಿರ್ದಿಷ್ಟ ಭೌಗೋಳಿಕ ಪ್ರದೇಶದ ಎಲ್ಲಾ ಮೊಬೈಲ್ ಸಾಧನಗಳಿಗೆ ಏಕಕಾಲದಲ್ಲಿ ಸಂದೇಶಗಳನ್ನು ತಲುಪಿಸಲು ಅನುವು ಮಾಡಿಕೊಡುತ್ತದೆ. ಪರೀಕ್ಷಾ ಹಂತದಲ್ಲಿ ಬಳಕೆದಾರರು ಇಂಗ್ಲಿಷ್, ಹಿಂದಿ, ಪ್ರಾದೇಶಿಕ ಭಾಷೆಗಳಲ್ಲಿ ಸಂದೇಶಗಳನ್ನು ಸ್ವೀಕರಿಸಬಹುದು. ಮೊಬೈಲ್‌ನ ಸುರಕ್ಷತಾ ಸೆಟ್ಟಿಂಗ್‌ಗಳಲ್ಲಿ ಟೆಸ್ಟ್ ಅಲರ್ಟ್ ಆಯ್ಕೆಯನ್ನು ಸಕ್ರಿಯಗೊಳಿಸಿದ ಸಾಧನಗಳಿಗೆ ಮಾತ್ರ ಈ ಸಂದೇಶಗಳು ಬರುತ್ತವೆ.

ಇಸ್ಕಾನ್‌ನಿಂದ ಪೌಷ್ಟಿಕ ಆಹಾರ

ಪುಟ 1 ➡ ಆಸ್ಪತ್ರೆಗಳಲ್ಲಿ ಚಿಕಿತ್ಸೆ ಪಡೆಯುತ್ತಿರುವ ರೋಗಿಗಳಿಗೆ ಆರೋಗ್ಯಪೂರಕ, ಸ್ವಚ್ಛತೆ ಹಾಗೂ ಸಮತೋಲನಯುತ ಪಥ್ಯಾಹಾರವನ್ನು ನಿಯಮಿತವಾಗಿ ಒದಗಿಸುವುದು ಈ ಯೋಜನೆಯ ಉದ್ದೇಶ.

ಇಸ್ಕಾನ್ ಸಂಸ್ಥೆ ಈಗಾಗಲೇ ದೇಶದ ವಿವಿಧ ಭಾಗಗಳಲ್ಲಿ ಅನ್ನದಾನ ಮತ್ತು ಪೌಷ್ಟಿಕ ಆಹಾರ ವಿತರಣೆಯಲ್ಲಿ ಅನುಭವ ಹೊಂದಿರುವುದರಿಂದ, ಈ ಜವಾಬ್ದಾರಿಯನ್ನು ಇಸ್ಕಾನ್‌ಗೆ ವಹಿಸಲಾಗಿದೆ ಎಂದು ಸರ್ಕಾರದ ಮೂಲಗಳು ತಿಳಿಸಿವೆ.

ಬೆಳಗಿನ ಉಪಾಹಾರದಲ್ಲಿ ಉಪ್ಪಿಟ್ಟು, ಪೊಂಗಲ್, ಗೋದಿ ಪಾಯಸ, ಮೊಳಕೆ ಕಾಳುಗಳು, ಪ್ರತಿದಿನ ಬಾಳೆಹಣ್ಣು ಅಥವಾ ಮಜ್ಜಿಗೆ, ಮಧ್ಯಾಹ್ನ ರಾಗಿ ಮುದ್ದೆ-ಅನ್ನಸಾರು ಹಾಗೂ ಸೋಯಾಚಂಕ್ಸ್, ಸಂಜೆ ಲಘು ಆಹಾರವಾಗಿ ಕಾಫಿ-ಬಿಸ್ಕೆಟ್ ಮತ್ತು ರಾತ್ರಿ ಚಪಾತಿ-ಅನ್ನಸಾರು, ಮೊಳಕೆ ಕಾಳುಪಲ್ಯ-ಸೋಯಾಚಂಕ್ಸ್ ಆಹಾರವನ್ನು ಪಥ್ಯಾಹಾರ ಮಾನದಂಡಗಳಿಗೆ ಅನುಗುಣವಾಗಿ ತಯಾರಿಸಿ ವಿತರಿಸಲಾಗುತ್ತದೆ.

ವಿವಿಧ ಕಾಯಿಲೆಗಳ ಪ್ರಕಾರ ವಿಶೇಷ ಆಹಾರ ಕ್ರಮಗಳನ್ನು ಸಹ ಅನುಸರಿಸುವ ವ್ಯವಸ್ಥೆ ಮಾಡಲಾಗಿದೆ.

ಆಸ್ಪತ್ರೆಗಳ ಹೆಸರು	ವೆಚ್ಚ
ಕೆ.ಸಿ. ಜನರಲ್ ಆಸ್ಪತ್ರೆ	1,83,27,600 ರೂ.
ಜಯನಗರ ಜನರಲ್ ಆಸ್ಪತ್ರೆ	1,83,27,600 ರೂ.
ಸರ್ ಸಿ.ವಿ.ರಾಮನ್ ಆಸ್ಪತ್ರೆ	1,83,27,600 ರೂ.
ಮಂಗಳೂರಿನ ವೆನ್‌ಲಾಕ್ ಜಿಲ್ಲಾಸ್ಪತ್ರೆ	5,13,17,280 ರೂ.
ಧಾರವಾಡ ಜಿಲ್ಲಾಸ್ಪತ್ರೆ	2,19,93,120 ರೂ.
ಯಲಹಂಕ ಸಾರ್ವಜನಿಕ ಆಸ್ಪತ್ರೆ	36,65,520 ರೂ.
ಕೆ.ಆರ್.ಪುರ ಸಾರ್ವಜನಿಕ ಆಸ್ಪತ್ರೆ	36,65,520 ರೂ.
ನೆಲಮಂಗಲದ ಸಾರ್ವಜನಿಕ ಆಸ್ಪತ್ರೆ	43,99,560 ರೂ.
ಒಟ್ಟು	14,00,23,800 ರೂ.

ಮೇ 6ಕ್ಕೆ ಪ್ರಶಸ್ತಿ ಪ್ರದಾನ

• **ಬೆಂಗಳೂರು:** ಕಾಯಕಯೋಗಿ ಶ್ರೀ ಶಿವಯೋಗಿ ಸಿದ್ಧರಾಮೇಶ್ವರ ಜಯಂತಿ 2026 ಮತ್ತು 2025-26 ನೇ ಸಾಲಿನ ಕಾಯಕಯೋಗಿ ಶ್ರೀ ಸಿದ್ಧರಾಮೇಶ್ವರ ಪ್ರಶಸ್ತಿ ಪ್ರದಾನ ಸಮಾರಂಭವು ಮೇ 6ರಂದು ಬೆಳಗ್ಗೆ 10.30 ಗಂಟೆಗೆ ಮೈಸೂರಿನ ಕಲಾಮಂದಿರದಲ್ಲಿ ಹಮ್ಮಿಕೊಳ್ಳಲಾಗಿದೆ ಎಂದು ಭೋವಿ ಅಭಿವೃದ್ಧಿ ನಿಗಮದ ಅಧ್ಯಕ್ಷ ಡಾ.ಎಂ.ರಾಮಪ್ಪ ತಿಳಿಸಿದ್ದಾರೆ. ಸಾಹಿತಿ ಎಸ್.ಜಿ.ಸಿದ್ದರಾಮಯ್ಯ ಅವರಿಗೆ ಕಾಯಕಯೋಗಿ ಶ್ರೀ ಸಿದ್ಧರಾಮೇಶ್ವರ ಪ್ರಶಸ್ತಿ ಪ್ರಧಾನ ಮತ್ತು ಸಿದ್ಧರಾಮೇಶ್ವರರ ವಚನಗಳ ಪುಸ್ತಕ ಬಿಡುಗಡೆ ಸಮಾರಂಭ ನಡೆಯಲಿದೆ. ಚಿತ್ರದುರ್ಗ ಭೋವಿ ಗುರುಪೀಠಾಧ್ಯಕ್ಷ ಶ್ರೀ ಇಮ್ಮಡಿ ಸಿದ್ಧರಾಮೇಶ್ವರ ಸ್ವಾಮೀಜಿಯವರು ದಿವ್ಯ ಸಾನಿಧ್ಯ ವಹಿಸಲಿದ್ದು, ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಕಾರ್ಯಕ್ರಮ ಉದ್ಘಾಟನೆ ಮಾಡಿ ಪ್ರಶಸ್ತಿ ಪ್ರಧಾನ ಮಾಡಲಿದ್ದಾರೆ. ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್, ಸಚಿವರಾದ ಡಾ. ಎಚ್.ಸಿ. ಮಹದೇವಪ್ಪ, ಶಿವರಾಜ್ ತಂಗಡಗಿ, ಭಾಗವಹಿಸಲಿದ್ದಾರೆ. ಶಾಸಕ ಕೆ.ಹರೀಶ್ ಗೌಡ ಅವರು ಸಮಾರಂಭದ ಅಧ್ಯಕ್ಷತೆ ವಹಿಸುವರು.

ಅರ್ಜಿ ಸಲ್ಲಿಕೆ ಆರಂಭ

• **ಬೆಂಗಳೂರು:** ಕೃಷಿ ಅಧಿಕಾರಿ ಮತ್ತು ಸಹಾಯಕ ಕೃಷಿ ಅಧಿಕಾರಿಗಳ ನೇಮಕಾತಿ ಸಂಬಂಧ ಹೊರಡಿಸಿರುವ ಅಧಿಸೂಚನೆಯನ್ನು ಹಿಂಪಡೆಯಲು ಕೃಷಿ ಇಲಾಖೆ ಕೋರಿರುವ ಕಾರಣ ಅರ್ಜಿ ಸಲ್ಲಿಕೆ ಪ್ರಕ್ರಿಯೆಯನ್ನು ಸ್ಥಗಿತಗೊಳಿಸಲಾಗಿದೆ ಎಂದು ಕರ್ನಾಟಕ ಪರೀಕ್ಷಾ ಪ್ರಾಧಿಕಾರ (ಕೆಇಎ)ದ ಕಾರ್ಯನಿರ್ವಾಹಕ ನಿರ್ದೇಶಕ ಎಚ್.ಪ್ರಸನ್ನ ತಿಳಿಸಿದ್ದಾರೆ. ಪರಿಶಿಷ್ಟ ಜಾತಿಗೆ ಶೇ.15ರಷ್ಟು ಮೀಸಲಾತಿ ನಿಗದಿಪಡಿಸಿ ಸರ್ಕಾರ ಆದೇಶ ಹೊರಡಿಸಿದೆ.

ಸ್ವಯಂ ದೂರು ದಾಖಲಿಸಲು ಸಿಜೆಐಗೆ ಪತ್ರ

• **ಬೆಂಗಳೂರು:** ಕರ್ನಾಟಕದಲ್ಲಿ ಸ್ಥಳೀಯ ಸಂಸ್ಥೆಗಳ ಚುನಾವಣೆ ನಡೆಸದೆ ಸಂವಿಧಾನದ ಆಶಯಗಳನ್ನು ಗಾಳಿಗೆ ತೂರಲಾಗುತ್ತಿದೆ. ಈ ಸಂಬಂಧ ಕೂಡಲೇ ಸುಪ್ರೀಂ ಕೋರ್ಟ್ ಸ್ವಯಂ ಪ್ರೇರಿತ ದೂರು ದಾಖಲಿಸಿಕೊಳ್ಳಬೇಕೆಂದು ಸುಪ್ರೀಂ ಕೋರ್ಟ್ ಮುಖ್ಯ ನ್ಯಾಯಮೂರ್ತಿಗೆ ಜೆಡಿಎಸ್ ಕಾನೂನು ಘಟಕದ ಮುಖ್ಯಸ್ಥ ಎ.ಪಿ. ರಂಗನಾಥ್ ಪತ್ರ ಬರೆದಿದ್ದಾರೆ.

ದೇಶದ ಐಟಿ ಹಬ್ ಬೆಂಗಳೂರಿನಲ್ಲಿ ಸುಮಾರು 1.3 ಕೋಟಿ ಜನಸಂಖ್ಯೆ ಇದ್ದರೂ, ಕಳೆದ 2020 ಸೆಪ್ಟೆಂಬರ್‌ನಿಂದ ಚುನಾಯಿತ ಪ್ರತಿನಿಧಿ ಇಲ್ಲದಿರುವುದು ದುರದೃಷ್ಟಕರ. ಗ್ರೇಟರ್ ಬೆಂಗಳೂರು ಪ್ರಾಧಿಕಾರ(ಜಿಬಿಎ)ಕ್ಕೆ ಚುನಾವಣೆ ನಡೆದು ಹತ್ತು ವರ್ಷಗಳೇ ಕಳೆಯುತ್ತಾ ಬಂದಿದೆ. ಪ್ರಸ್ತುತ ನಗರವನ್ನು ಕೇವಲ ಅಧಿಕಾರಿಗಳ ಮೂಲಕ ಆಳಲಾಗುತ್ತಿದ್ದು, ಇದು ಪ್ರಜಾಪ್ರಭುತ್ವ ವಿರೋಧಿ ಎಂದು ಪತ್ರದಲ್ಲಿ ವಿವರಿಸಿದ್ದಾರೆ.

ಹಿಂದೆ ಹೈಕೋರ್ಟ್ ಮತ್ತು ಸುಪ್ರೀಂ ಕೋರ್ಟ್ ಹಲವು ಬಾರಿ ಗಡುವು ನೀಡಿದರೂ, ವಾರ್ಡ್ ವಿಂಗಡಣೆ ಮತ್ತು ಮೀಸಲಾತಿಯ ನೆಪವೊಡ್ಡಿ ರಾಜ್ಯ ಸರ್ಕಾರಗಳು ಚುನಾವಣೆ ಮುಂದೂಡುತ್ತಾ ಬಂದಿವೆ. 2026ರ ಜೂನ್ 30ರೊಳಗೆ ಚುನಾವಣೆ ನಡೆಸಬೇಕೆಂಬ ಸುಪ್ರೀಂ ಕೋರ್ಟ್ ನಿರ್ದೇಶನವಿದ್ದರೂ, ಪ್ರಸ್ತುತ ಸರ್ಕಾರದ ನಡವಳಿಕೆಗಳು ನ್ಯಾಯಾಂಗ ನಿಂದನೆಯಂತಿವೆ ಎಂದು ಪತ್ರದಲ್ಲಿ ಉಲ್ಲೇಖಿಸಲಾಗಿದೆ.

ರಾಜ್ಯಕ್ಕೆ 6,000 ಕೋಟಿ ರೂ. ಆರ್ಥಿಕ ನಷ್ಟದ ಭೀತಿ: ಸ್ಥಳೀಯ ಸಂಸ್ಥೆಗಳಿಗೆ ಚುನಾವಣೆ ನಡೆಸದಿದ್ದರೆ 16ನೇ ಹಣಕಾಸು ಆಯೋಗದ ಅನುದಾನದಲ್ಲಿ ಭಾರಿ ಕಡಿತವಾಗಲಿದೆ. ಚುನಾಯಿತ ಸಂಸ್ಥೆಗಳ ಅನುಪಸ್ಥಿತಿಯಲ್ಲಿ ಕರ್ನಾಟಕವು ವಾರ್ಷಿಕ ಸುಮಾರು 6,000 ಕೋಟಿ ರೂಪಾಯಿಗಳಷ್ಟು ಅನುದಾನವನ್ನು ಕಳೆದುಕೊಳ್ಳುವ ಭೀತಿಯಲ್ಲಿದೆ. ಇದು ರಾಜ್ಯದ ಮೂಲಸೌಕರ್ಯ ಮತ್ತು ಅಭಿವೃದ್ಧಿಗೆ ಮಾರಕವಾಗಲಿದೆ ಎಂದು ಪತ್ರದಲ್ಲಿ ತಿಳಿಸಲಾಗಿದೆ.

ಪ್ರಜೆಗಳ ಸಾಂವಿಧಾನಿಕ ಹಕ್ಕಿನ ಹರಣ

ಸುಪ್ರೀಂ ಕೋರ್ಟ್ ಈ ವಿಷಯವನ್ನು ಗಂಭೀರವಾಗಿ ಪರಿಗಣಿಸಿ ತಕ್ಷಣ ವಿಚಾರಣೆ ನಡೆಸಬೇಕು. ನ್ಯಾಯಾಲಯದ ಆದೇಶವನ್ನು ಪದೇ ಪದೇ ಉಲ್ಲಂಘಿಸುತ್ತಿರುವ ಅಧಿಕಾರಿಗಳು ಮತ್ತು ಸಂಬಂಧಪಟ್ಟವರ ವಿರುದ್ಧ ಕಠಿಣ ಕ್ರಮ ಕೈಗೊಳ್ಳಬೇಕು. ಯಾವುದೇ ನೆಪಕ್ಕೂ ಅವಕಾಶ ನೀಡದೆ, ಜೂನ್ 30, 2026ರೊಳಗೆ ಚುನಾವಣೆ ಪ್ರಕ್ರಿಯೆ ಪೂರ್ಣಗೊಳಿಸಲು ನಿರ್ದೇಶಿಸಬೇಕೆಂದು ಪತ್ರದಲ್ಲಿ ಮನವಿ ಮಾಡಲಾಗಿದೆ. ಜಿಬಿಎ ಮಾತ್ರವಲ್ಲದೆ ವಿವಿಧ ಹಂತದ ಪಂಚಾಯತ್ ಹಾಗೂ ಇತರ ಸ್ಥಳೀಯ ಸಂಸ್ಥೆ ಚುನಾವಣೆಗಳು ಸರಿಯಾಗಿ ನಡೆಯದೆ ಸ್ವರಾಜ್ಯ ಕನಸು ಭಗ್ನಗೊಂಡಿದೆ. ಸ್ಥಳೀಯ ಸಂಸ್ಥೆಗಳ ಚುನಾವಣೆ ನಡೆಸದಿರುವುದು ಕೇವಲ ಆಡಳಿತಾತ್ಮಕ ವೈಫಲ್ಯವಲ್ಲ, ಇದು ಪ್ರಜೆಗಳ ಸಾಂವಿಧಾನಿಕ ಹಕ್ಕಿನ ಹರಣವಾಗಿದೆ. ನ್ಯಾಯಾಂಗವು ಈಗ ಅಂತಿಮ ಭರವಸೆಯಾಗಿದ್ದು, ಸಂವಿಧಾನದ ರಕ್ಷಣೆಗಾಗಿ ಸುಪ್ರೀಂ ಕೋರ್ಟ್ ಮಧ್ಯಪ್ರವೇಶಿಸಬೇಕೆಂದು ಪತ್ರದಲ್ಲಿ ವಿನಂತಿಸಲಾಗಿದೆ.

ಅಧಿಕಾರಿಗಳಿಂದ ತಪ್ಪು ಮಾಹಿತಿ ಬೇಡ: ಸಿಎಂ

ಪುಟ 1 ➡ ಕಳೆದ ವರ್ಷದ ಬಜೆಟ್‌ನ 15 ಘೋಷಣೆ ಜಾರಿ ಇನ್ನೂ ಆಗಿಲ್ಲ. ಇದಕ್ಕೆ ಯಾರು ಹೊಣೆ? ಈ ವರ್ಷದ ಬಜೆಟ್‌ನಲ್ಲಿ 218 ಹೊಸ ಘೋಷಣೆಗಳು ಸೇರಿದಂತೆ ಒಟ್ಟಾರೆ 565 ಘೋಷಣೆ ಮಾಡಿದ್ದೇವೆ. ಈ ಘೋಷಣೆಗಳನ್ನು ಅದೇ ವರ್ಷ ಜಾರಿಗೊಳಿಸುವುದು ಅಧಿಕಾರಿಗಳ ಜವಾಬ್ದಾರಿ ಯಾಗಿದೆ. ಬಜೆಟ್ ಘೋಷಣೆಗಳು ಯಾವುದೇ ಕಾರಣಕ್ಕೂ ಅನುಷ್ಠಾನಗೊಳ್ಳದೆ ಇರಬಾರದು. ಅನುಷ್ಠಾನದಲ್ಲಿನ ಪ್ರಾಯೋಗಿಕ ತೊಡಕುಗಳನ್ನು ನೇರವಾಗಿ ನನ್ನ ಅಥವಾ ಮುಖ್ಯ ಕಾರ್ಯದರ್ಶಿಯವರ ಗಮನಕ್ಕೆ ತರಬೇಕು ಎಂದು ಸಿಎಂ ಸೂಚಿಸಿದರು.

ಅಧಿಕಾರಕ್ಕೆ ಬಂದ ಬಳಿಕ ರಾಜ್ಯಮಟ್ಟದಲ್ಲಿ ಎರಡು ಜನಸ್ಪಂದನ ಸಭೆಯಲ್ಲಿ ಸ್ವೀಕರಿಸಲಾಗಿದ್ದ 15,334 ಸ್ವೀಕೃತಿಗಳ ಪೈಕಿ 15,295 ಅರ್ಜಿ ಗಳನ್ನು ವಿಲೇವಾರಿ ಮಾಡಲಾಗಿದೆ. ಬಾಕಿಯಿರುವ 45 ಅರ್ಜಿಗಳನ್ನು ವಿಲೇವಾರಿ ಮಾಡಬೇಕು. ಸಾರ್ವಜನಿಕ ಕುಂದುಕೊರತೆಯಲ್ಲಿ 3,27,052 ಅರ್ಜಿಗಳನ್ನು ಸ್ವೀಕರಿಸಲಾಗಿದ್ದು, 3,17,576 ವಿಲೇವಾರಿ ಮಾಡ ಲಾಗಿದೆ. 1828 ಅರ್ಜಿಗಳ ವಿಲೇವಾರಿ ನಿಗದಿತ ಕಾಲಾವಧಿ ಮುಗಿದಿದೆ. ಸಾರ್ವಜನಿಕರ ಕುಂದುಕೊರತೆಗಳನ್ನು ಸಕಾಲದಲ್ಲಿ ವಿಲೇವಾರಿ ಮಾಡದಿದ್ದರೆ ಜನರಿಗೆ ಸರ್ಕಾರದ ಮೇಲಿನ ನಂಬಿಕೆಯೇ ಹೊರಟು ಹೋಗುತ್ತದೆ ಎಂದರು.

ಆರ್ಥಿಕ ಇಲಾಖೆಯಿಂದ 24,300 ಹುದ್ದೆಗಳ ಭರ್ತಿಗೆ ಮಂಜೂರಾತಿ ನೀಡಲಾಗಿದೆ. ಕಲ್ಯಾಣ ಕರ್ನಾಟಕಕ್ಕೆ ಸಂಬಂಧಿಸಿದ ವೃಂದದಲ್ಲಿ ನೇಮಕಾತಿ ಪ್ರಕ್ರಿಯೆ ಪ್ರಾರಂಭವಾಗದೆ ಬಾಕಿಯಿರುವ 32,132 ಹುದ್ದೆಗಳಿವೆ. ಕೆಲವು ಇಲಾಖೆಗಳಲ್ಲಿ ವೃಂದ ಮತ್ತು ನೇಮಕಾತಿ ನಿಯಮಾವಳಿ ಪರಿಷ್ಕರಣೆ ಬಾಕಿಯಿದ್ದು, ಇದನ್ನು ಆದಷ್ಟು ಬೇಗ ಮುಗಿಸಬೇಕು ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಸೂಚಿಸಿದರು. ವಿವಿಧ ಕೇಂದ್ರ ಪುರಸ್ಕೃತ ಕಾರ್ಯಕ್ರಮಗಳಲ್ಲಿ 2025-26ನೇ ಸಾಲಿನಲ್ಲಿ ರಾಜ್ಯ ಸರ್ಕಾರ ತನ್ನ ಪಾಲಿನ 22,768 ಕೋಟಿ ರೂ. ಬಿಡುಗಡೆ ಮಾಡಿದ್ದು, ಕೇಂದ್ರ ಸರ್ಕಾರ 16,729 ಕೋಟಿ ರೂ. ಬಿಡುಗಡೆ ಮಾಡಿದೆ. ಕೇಂದ್ರದಿಂದ 11,367 ಕೋಟಿ ರೂ. ಅನುದಾನ ಬಿಡುಗಡೆಗೆ ಬಾಕಿಯಿದೆ.

ಸಿಎಂ ಬದಲಾವಣೆ ಶೀಘ್ರ: ಬಿವೈವಿ

ಮೈಸೂರು: ಎಐಸಿಸಿ ಮಲ್ಲಿಕಾರ್ಜುನ ಖರ್ಗೆಯವರು ಸಿಎಂ ಬದಲಾವಣೆ ಕುರಿತು ನೀಡಿರುವ ಹೇಳಿಕೆ ಗಮನಿಸಿದರೆ ರಾಜ್ಯದಲ್ಲಿ ಶೀಘ್ರದಲ್ಲೇ ಸಿಎಂ ಬದಲಾವಣೆ ಆಗಬಹುದೆಂದು ಅನಿಸುತ್ತದೆ ಎಂದು ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ.ವಿಜಯೇಂದ್ರ ಹೇಳಿದರು.


ಶನಿವಾರ ನಗರದ ಚಾಮುಂಡಿಬೆಟ್ಟದ ತಪ್ಪಲಿನಲ್ಲಿರುವ ಸುತ್ತೂರು ಮಠಕ್ಕೆ ಭೇಟಿ ನೀಡಿ, ಮಠದ ಪೀಠಾಧಿಪತಿಗಳಾದ ಶ್ರೀಶಿವರಾತ್ರಿದೇಶಿಕೇಂದ್ರಸ್ವಾಮಿಯವರ ಆಶೀರ್ವಾದ ಪಡೆದ ಬಳಿಕ ಸುದ್ದಿಗಾರರೊಂದಿಗೆ ಮಾತನಾಡಿ, ಕಾಂಗ್ರೆಸ್‌ನಲ್ಲಿರುವ ಕೆಲವರು ಮಲ್ಲಿಕಾರ್ಜುನ ಖರ್ಗೆಯವರೇ ಸಿಎಂ ಆಗಲಿ ಎನ್ನುತ್ತಾರೆ ಮತ್ತೆ ಕೆಲವರು ಡಿಸಿಎಂ ಡಿ. ಕೆ. ಶಿವಕುಮಾರ್ ಮೇ 15ಕ್ಕೆ ಸಿಎಂ ಆಗುತ್ತಾರೆ ಎನ್ನುತ್ತಾರೆ ಎಂದರು.

ಚುನಾವಣೆ ಸಮೀಪ ಕಾರ್ಯಕ್ರಮ ಆಯೋಜನೆ ಮಾಡಿದರೆ, ವಿಜಯೇಂದ್ರ ಅಥವಾ ಬಿಜೆಪಿಗೆ ಬೂಸ್ಟ್ ಆಗುತ್ತಿತ್ತು. ಈಗ ಯಾವುದೇ ಚುನಾವಣೆ ಇಲ್ಲ, ಚಿತ್ರದುರ್ಗದಲ್ಲಿ ಆಯೋಜಿಸಲಾಗಿರುವ ಕಾರ್ಯಕ್ರಮ ಮಾಜಿ ಸಿಎಂ ಬಿ.ಎಸ್. ಯಡಿಯೂರಪ್ಪ ಅವರಿಗೆ ಕೃತಜ್ಞತೆ ಸಲ್ಲಿಸುವ ಕಾರ್ಯಕ್ರಮ. ಈ ರಾಜ್ಯದಲ್ಲಿ ಅನೇಕರು ಅದೃಷ್ಟದ ಸಿಎಂ ಆಗಿದ್ದಾರೆ. ಆದರೆ, ಬಿ.ಎಸ್. ಯಡಿಯೂರಪ್ಪನವರು ಅದೃಷ್ಟದ ಸಿಎಂ ಅಲ್ಲ. ಜನರಿಂದ ಜನರಿಗಾಗಿ ಜನನಾಯಕರಾಗಿದ್ದವರು. ಅದಕ್ಕಾಗಿ ಕಾರ್ಯಕ್ರಮ ಮಾಡುತ್ತಿದ್ದೇವೆ. ಗೋವಿಂದ ಕಾರಜೋಳ ಅವರ ಅಪೇಕ್ಷೆಯಂತೆ ಚಿತ್ರದುರ್ಗದಲ್ಲಿ ಕಾರ್ಯಕ್ರಮ ಮಾಡುತ್ತಿದ್ದೇವೆ ಎಂದರು.

ರಾಜ್ಯದಲ್ಲಿ ಭ್ರಷ್ಟಾಚಾರ ಹೆಚ್ಚಳ: ವಿಜಯೇಂದ್ರ

ಮೈಸೂರು ಉಡ್ತಾ ಪಂಜಾಬ್ ಆಗಿದೆ, ಇಲ್ಲಿ ಡ್ರಗ್ಸ್ ಹಾವಳಿ ವಿಪರೀತವಾಗಿ ಜಾಸ್ತಿಯಾಗಿದೆ. ರಾಜ್ಯ ಕಾಂಗ್ರೆಸ್ ಸರ್ಕಾರ ಮನುಷ್ಯತ್ವ ಇಲ್ಲದ ಸರ್ಕಾರ. ಮೈಸೂರಿನಲ್ಲಿ 3 ವರ್ಷದಿಂದ ಒಂದೇ ಒಂದು ಅಭಿವೃದ್ಧಿ ಕೆಲಸ ಆಗಿಲ್ಲ. ರಾಜ್ಯದ ಅಭಿವೃದ್ಧಿಗೆ ಕಾಂಗ್ರೆಸ್ ಮನಸ್ಸು ಮಾಡಿಲ್ಲ. ಭ್ರಷ್ಟಾಚಾರ ತಾಂಡವವಾಡುತ್ತಿದೆ. ಕೇವಲ ಕುರ್ಚಿ ಉಳಿಸಿಕೊಳ್ಳುವ ಹಪಾಹಪಿ ಅಷ್ಟೇ ಕಾಣಿಸುತ್ತಿದೆ. ದಿಲ್ಲಿ ಒಬ್ಬರ ಹಿಂದೆ ಒಬ್ಬರು ಹೋಗ್ತಿದ್ದಾರೆ ಎಂದು ವಿಜಯೇಂದ್ರ ಟೀಕಿಸಿದರು.

ಬಿಎಸ್‌ವೈಗೆ ಶುಭಾಶಯ



ಬಿಜೆಪಿ ರಾಷ್ಟ್ರೀಯ ಸಂಘಟನಾ ಪ್ರಧಾನ ಕಾರ್ಯದರ್ಶಿ ಬಿ.ಎಲ್.ಸಂತೋಷ್ ಅವರು ಮಾಜಿ ಮುಖ್ಯಮಂತ್ರಿ ಬಿ.ಎಸ್.ಯಡಿಯೂರಪ್ಪ ಅವರ ಮನೆಗೆ ಭೇಟಿ ನೀಡಿ 50 ವರ್ಷಗಳ ಯಶಸ್ವಿ ರಾಜಕೀಯ ಪಯಣಕ್ಕೆ ಶುಭಾಶಯ ಕೋರಿದರು.

ಎಲ್‌ಪಿಜಿ ಅನಿಲ ದರ: ಕೇಂದ್ರ ಸರ್ಕಾರದ ಪಾತ್ರವಿಲ್ಲ: ಜೋಶಿ

ದಾವಣಗೆರೆ: ಜಾಗತಿಕ ಮಾರುಕಟ್ಟೆಯಲ್ಲಿನ ಏರಿಳಿತ ಹಾಗೂ ಯುದ್ಧದ ಸನ್ನಿವೇಶದಿಂದಾಗಿ ವಾಣಿಜ್ಯ ಬಳಕೆಯ ಎಲ್‌ಪಿಜಿ ಅನಿಲ ದರದಲ್ಲಿ ಏರಿಕೆಯಾಗಿದೆಯೇ ಹೊರತು ಇದರಲ್ಲಿ ಸರ್ಕಾರದ ಪಾತ್ರವಿಲ್ಲ ಎಂದು ಕೇಂದ್ರ ಸಚಿವ ಪ್ರಲ್ಹಾದ್ ಜೋಶಿ ಸ್ಪಷ್ಟಪಡಿಸಿದರು.



ನಗರದಲ್ಲಿ ಶನಿವಾರ ಸುದ್ದಿಗಾರರೊಂದಿಗೆ ಮಾತನಾಡಿ, ವಾಣಿಜ್ಯ ಬಳಕೆಯ ಸಿಲಿಂಡರ್ ಬೆಲೆಯನ್ನು ತೈಲ ಕಂಪನಿಗಳೇ ನಿರ್ಧರಿಸುತ್ತವೆ. ಈ ಹಿಂದೆ ಯುಪಿಎ ಸರ್ಕಾರವಿದ್ದಾಗಲೇ ಬೆಲೆ ನಿರ್ಧಾರದ ಪ್ರಕ್ರಿಯೆಯನ್ನು ಕಂಪನಿಗಳಿಗೆ ಬಿಡಲಾಗಿತ್ತು. ಹಾಗಾಗಿ ಮಾರುಕಟ್ಟೆಯ ಸ್ಥಿತಿಗತಿಗಳಿಗೆ ಅನುಗುಣವಾಗಿ ದರಗಳು ನಿಗದಿಯಾಗುತ್ತವೆ. ನೆರೆಯ ರಾಷ್ಟ್ರಗಳಿಗೆ ಹೋಲಿಸಿದರೆ ಭಾರತದ ಸ್ಥಿತಿ ಉತ್ತಮವಾಗಿದೆ. ಪಾಕಿಸ್ತಾನದಂತಹ ದೇಶಗಳಲ್ಲಿ ಇಂಧನ ಕೊರತೆಯಿಂದಾಗಿ ಇಡೀ ವ್ಯವಸ್ಥೆಯೇ ಸ್ಥಗಿತಗೊಳ್ಳುವ ಹಂತಕ್ಕೆ ತಲುಪಿದೆ. ಆದರೆ, ನಮ್ಮಲ್ಲಿ ಎಷ್ಟೇ ಕಷ್ಟವಿದ್ದರೂ ಪೂರೈಕೆಯಲ್ಲಿ ವ್ಯತ್ಯಯವಾಗದಂತೆ ಕೇಂದ್ರ ಸರ್ಕಾರ ಕ್ರಮ ಕೈಗೊಂಡಿದೆ ಎಂದು ಸಮರ್ಥಿಸಿಕೊಂಡರು.

ಜಾಗತಿಕ ಬೆಲೆ ಇಳಿಕೆ ಆದ ಕೂಡಲೇ ಇಲ್ಲೂ ಇಳಿಕೆ

ಭಾರತವು ತನ್ನ ಅಗತ್ಯದ ಶೇ.50ರಷ್ಟು ಅಡುಗೆ ಅನಿಲವನ್ನು ವಿದೇಶಗಳಿಂದ ಆಮದು ಮಾಡಿಕೊಳ್ಳುತ್ತಿದೆ. ಪ್ರಸ್ತುತ ಜಾಗತಿಕ ಮಟ್ಟದಲ್ಲಿ ನಡೆಯುತ್ತಿರುವ ಯುದ್ಧಗಳಿಂದಾಗಿ ಪೂರೈಕೆ ಸರಪಳಿಯಲ್ಲಿ ವ್ಯತ್ಯಯ ಉಂಟಾಗಿದೆ. ಹಾರ್ಮುಜ್ ಜಲಸಂಧಿಯ ಮೂಲಕ ಅನಿಲ ಪೂರೈಕೆಯಾಗುವುದರಿಂದ ಅಲ್ಲಿನ ಅಸ್ಥಿರತೆಯು ಬೆಲೆಯ ಮೇಲೆ ಪ್ರಭಾವ ಬೀರಿದೆ. ಜಾಗತಿಕವಾಗಿ ಬೆಲೆ ಇಳಿಕೆಯಾದ ತಕ್ಷಣ ದೇಶೀಯವಾಗಿಯೂ ದರ ತಗ್ಗಲಿದೆ. ದೇಶದ ಇಂಧನ ಭದ್ರತೆಯನ್ನು ಕಾಪಾಡಲು, ಆಮದು ಮೇಲಿನ ಅವಲಂಬನೆ ಕಡಿಮೆಗೊಳಿಸಲು ನಮ್ಮ ಸರ್ಕಾರವು ದೇಶೀಯ ಉತ್ಪಾದನೆಗೆ ಹೆಚ್ಚಿನ ಒತ್ತು ನೀಡುತ್ತಿದೆ ಎಂದು ತಿಳಿಸಿದರು.

ಕಿರುಸುದ್ದಿ

ಆದಾಯ ತೆರಿಗೆ: ಮಠದ ಪರ ತೀರ್ಪು

ಗೋಕರ್ಣ: ಇಲ್ಲಿನ ಮಹಾಬಲೇಶ್ವರ ದೇವಾಲಯವನ್ನು ರಾಮಚಂದ್ರಾಪುರ ಮಠದ ಆಡಳಿತ ಅವಧಿಯಲ್ಲಿನ ಆದಾಯ ತೆರಿಗೆ ಕಟ್ಟುವ ಕುರಿತು ಆದಾಯ ತೆರಿಗೆ ಕಮಿಷನರ್ ನ್ಯಾಯಾಲಯದಲ್ಲಿ ಮಾಡಿಕೊಂಡಿದ್ದ ಮೇಲ್ಮನವಿ ಪುರಸ್ಕರಿಸಿ ಮಠದ ಪರವಾಗಿ ತೀರ್ಪು ನೀಡಿದೆ. ಮಠದ ನಿರ್ವಹಣೆಯ ಮೌಲ್ಯಮಾಪನ ವರ್ಷ 2016–17 ಸಾಲಿಗೆ ರೂ.13 ಲಕ್ಷ ಮತ್ತು 2019–20ನೇ ಸಾಲಿಗೆ ರೂ.90 ಲಕ್ಷ ತೆರಿಗೆ ಬಾಕಿ ಪಾವತಿಸುವಂತೆ ಆದಾಯ ತೆರಿಗೆ ಇಲಾಖೆಯು ಆದೇಶಿಸಿತ್ತು. ಈ ಆದೇಶದ ವಿರುದ್ಧವಾಗಿ ಮೇಲ್ಮನವಿ ಮಾಡಲಾಗಿ; ಇದೀಗ ಮೇಲ್ಮನವಿಯ ಆದೇಶ ಬಂದಿದ್ದು, ದೇವಾಲಯಕ್ಕೆ ಜಯ ಲಭಿಸಿದೆ ಹಾಗೂ ಆ ಮೂಲಕ ತೆರಿಗೆ ಬಾಕಿ ಕಟ್ಟಬೇಕು ಎಂಬುದನ್ನು ಆದಾಯ ತೆರಿಗೆ ಇಲಾಖೆಯ ಕಮಿಷನ್ ನ್ಯಾಯಾಲಯದ ಆದೇಶದಲ್ಲಿ ದ್ವಂದ್ವೀಕರಿಸಿದ್ದಾರೆ. ಇದಕ್ಕೂ ಮುನ್ನ 2015–16ನೇ ವರ್ಷದ ಪ್ರಕರಣದಲ್ಲಿಯೂ ರೂ.1.42 ಕೋಟಿ ತೆರಿಗೆ ಬಾಕಿ ಪ್ರಕರಣದಲ್ಲೂ ದೇವಸ್ಥಾನದ ಆಡಳಿತಕ್ಕೆ ಜಯ ಲಭಿಸಿದ್ದನ್ನು ಸ್ಮರಿಸಬಹುದಾಗಿದೆ. ಇದೀಗ ದೇವಾಲಯದ ಆಡಳಿತ ವಿರುದ್ಧದ ಎಲ್ಲಾ ಆದಾಯ ತೆರಿಗೆ ಪ್ರಕರಣಗಳೂ ಮುಕ್ತಾಯಗೊಂಡಿವೆ. ಇದರ ಮೇಲ್ಮನವಿ ಆದೇಶದನ್ವಯ ತೆರಿಗೆ ಬಾಕಿ ಶೂನ್ಯವಾಗಿರುವುದು ಭಕ್ತಾದಿಗಳ ಗೊಂದಲಗಳನ್ನು ನಿವಾರಿಸಿದ್ದು ಮಾತ್ರವಲ್ಲದೇ, ದೇಗುಲದ ಇಂದಿನ ಆಡಳಿತ ಮಂಡಳಿಯ ಸ್ಪಷ್ಟೀಕರಣವನ್ನು ಆದಾಯ ತೆರಿಗೆ ಇಲಾಖೆ ಮಾನ್ಯ ಮಾಡಿರುವುದು ಅಂದಿನ ಶ್ರೀ ರಾಮಚಂದ್ರಾಪುರಮಠದ ಮಾದರಿ ಆಡಳಿತ ವ್ಯವಸ್ಥೆಗೆ ಸಂದ ಜಯವಾಗಿದೆ.

ಲಕ್ಕುಂಡಿ ಪುರಾತತ್ವ ಕೇಂದ್ರವಾಗಿಸಲು ಯೋಜನೆಗೆ ಸಿದ್ಧತೆ: ಸಚಿವ ಎಚ್.ಕೆ. ಪಾಟೀಲ

ಲಕ್ಕುಂಡಿಗೆ ರಾಷ್ಟ್ರಮಟ್ಟದ ಸ್ಥಾನ

ಗದಗ: ಐತಿಹಾಸಿಕ ಲಕ್ಕುಂಡಿಯನ್ನು ರಾಷ್ಟ್ರ ಮಟ್ಟದಲ್ಲಿ ಅಗ್ರ ಪುರಾತತ್ವ ಕೇಂದ್ರವನ್ನಾಗಿ ರೂಪಿಸಲು ರಾಜ್ಯ ಸರ್ಕಾರ ಸಮಗ್ರ ಯೋಜನೆ ರೂಪಿಸುತ್ತಿದೆ. ಮುಂದಿನ ಒಂದು ವರ್ಷದಲ್ಲಿ 100ಕ್ಕೂ ಹೆಚ್ಚು ದೇವಾಲಯಗಳು ಮತ್ತು ಬಾವಿಗಳನ್ನು ಅನಾವರಣಗೊಳಿಸುವ ಗುರಿ ಹೊಂದಲಾಗಿದೆ ಎಂದು ಜಿಲ್ಲಾ ಉಸ್ತುವಾರಿ ಸಚಿವ ಎಚ್.ಕೆ.ಪಾಟೀಲ ಹೇಳಿದರು.

ತಾಲೂಕಿನ ಲಕ್ಕುಂಡಿಯಲ್ಲಿ ಶನಿವಾರ ಏರ್ಪಡಿಸಿದ್ದ 6 ಸ್ಮಾರಕಗಳ ಸಂರಕ್ಷಣೆ, ಅಭಿವೃದ್ಧಿ ಕಾಮಗಾರಿ ಶಿಲಾನ್ಯಾಸ, ದಶ ಬಾವಿ, ದಶ ದೇವಾಲಯ ಅನಾವರಣ, ಪ್ರಾಚ್ಯ ಶೇಷಗಳ ಅನ್ವೇಷಣಾ ಸಪ್ತಾಹ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದರು. ಈಗಾಗಲೇ ಪಂಚ ದೇವಾಲಯ ಮತ್ತು ಪಂಚಬಾವಿಗಳ ಅನಾವರಣ ಯಶಸ್ವಿಯಾಗಿ ನಡೆದಿದೆ. ಇದೀಗ 10 ಬಾವಿ, ದೇವಾಲಯಗಳನ್ನು ಸಾರ್ವಜನಿಕರಿಗೆ ಪರಿಚಯಿಸಲಾಗಿದೆ. ಈ ಮೂಲಕ ಪುರಾತತ್ವ ಸ್ಮಾರಕಗಳ ಸಂಖ್ಯೆ 70ರ ಗಡಿ ದಾಟಿದೆ ಎಂದು ಹೇಳಿದರು.

ಲಕ್ಕುಂಡಿಯ ಅನೇಕ ದೇವಾಲಯಗಳು ಮತ್ತು ಬಾವಿಗಳು ಕಾಲಕ್ರಮೇಣ ನಿರ್ಲಕ್ಷ್ಯದಿಂದ ತಮ್ಮ ಗುರುತನ್ನು ಕಳೆದುಕೊಂಡಿದ್ದವು. ಅವುಗಳನ್ನು ಪತ್ತೆ ಹಚ್ಚಿ ಪುನರುಜ್ಜೀವನಗೊಳಿಸುವ ಕಾರ್ಯವನ್ನು ಸರ್ಕಾರ ಮತ್ತು ಸ್ಥಳೀಯರ ಸಹಕಾರದಿಂದ ಯಶಸ್ವಿಯಾಗಿ ಕೈಗೊಳ್ಳಲಾಗಿದೆ. 2026ರೊಳಗೆ ಕನಿಷ್ಠ 50 ಬಾವಿ ಮತ್ತು 50 ದೇವಾಲಯಗಳನ್ನು ಅನಾವರಣಗೊಳಿಸಿ 100ರ ಗಡಿಯನ್ನು ದಾಟುವ ಗುರಿ ಹೊಂದಲಾಗಿದೆ. ಇದಕ್ಕೆ ಲಕ್ಕುಂಡಿ ಜನರ ಸಹಕಾರ ಅತ್ಯಗತ್ಯ ಎಂದು ಮನವಿ ಮಾಡಿದರು.



ಶಾಸಕ ಸಿ.ಸಿ.ಪಾಟೀಲ, ರಾಜ್ಯ ವಿಕೇಂದ್ರೀಕರಣ ಯೋಜನೆ ಮತ್ತು ಅಭಿವೃದ್ಧಿ ಸಮಿತಿಯ ಉಪಾಧ್ಯಕ್ಷ ಡಿ.ಆರ್.ಪಾಟೀಲ, ನಗರಾಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ ಅಕ್ಬರಸಾಬ ಬಬರ್ಚಿ, ಜಿಲ್ಲಾ ಗ್ಯಾರಂಟಿ ಯೋಜನೆಗಳ ಅನುಷ್ಠಾನ ಪ್ರಾಧಿಕಾರದ ಅಧ್ಯಕ್ಷ ಬಿ.ಬಿ.ಅಸೂಟಿ, ತಾಲೂಕು ಗ್ಯಾರಂಟಿ ಯೋಜನೆಗಳ ಅನುಷ್ಠಾನ ಪ್ರಾಧಿಕಾರದ ಅಧ್ಯಕ್ಷ ಅಶೋಕ ಮಂದಾಲಿ,ಅಪರ ಜಿಲ್ಲಾಧಿಕಾರಿ ಡಾ.ದುರಗೇಶ ಕೆ.ಆರ್, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ರೋಹನ್ ಜಗದೀಶ, ಪುರಾತತ್ತ್ವ ಇಲಾಖೆ ಆಯುಕ್ತ ಎ.ದೇವರಾಜು, ಲಕ್ಕುಂಡಿ ಪ್ರಾಧಿಕಾರ ಆಯುಕ್ತ ಡಾ. ಶರಣು ಗೋಗೇರಿ, ಜಿಪಂ ಉಪಕಾರ್ಯದರ್ಶಿ ಸಿ.ಆರ್. ಮುಂಡರಗಿ, ಉಪ ವಿಭಾಗಾಧಿಕಾರಿ ಎಂ.ಗಂಗಪ್ಪ, ಪ್ರವಾಸೋದ್ಯಮ ಇಲಾಖೆ ಸಹಾಯಕ ನಿರ್ದೇಶಕ ಕೊಟ್ರೇಶ ವಿಭೂತಿ, ಸಲಹಾ ಸಮಿತಿ ಸದಸ್ಯರಾದ ಜಿ.ಸಿ. ಬೇಟಸೂರುಮಠ, ಸಿದ್ದು ಪಾಟೀಲ ಇದ್ದರು.

10 ಕೋಟಿ ರೂ.ಬಿಡುಗಡೆ

ಸ್ಮಾರಕಗಳ ಅಭಿವೃದ್ಧಿಗೆ ಪ್ರಸ್ತುತ 10.16 ಕೋಟಿ ಅನುದಾನ ಬಿಡುಗಡೆ ಮಾಡಲಾಗಿದೆ. ಹಾಲಗುಂಡಿಯಲ್ಲಿ ಬಸವೇಶ್ವರ ದೇವಾಲಯಕ್ಕೆ 1.58 ಕೋಟಿ, ಕನ್ನೇರ ಬಾವಿಗೆ 1.70 ಕೋಟಿ, ಮಲ್ಲಿಕಾರ್ಜುನ ದೇವಾಲಯಕ್ಕೆ 1.67 ಕೋಟಿ, ವಿರೂಪಾಕ್ಷೇಶ್ವರ ದೇವಾಲಯಕ್ಕೆ 1.81 ಕೋಟಿ, ಚಂದ್ರಮೌಳೇಶ್ವರ ದೇವಾಲಯಕ್ಕೆ 1.80 ಕೋಟಿ, ಕಲ್ಮಠ ದ್ವಾರಬಾಗಿಲು ಮತ್ತು ಬಾವಿಗೆ 1.50 ಕೋಟಿ ಮಂಜೂರಾಗಿದೆ. ಲಕ್ಕುಂಡಿಯಲ್ಲಿ ದೇಶದಲ್ಲೇ ಅತ್ಯುತ್ತಮ ಬಯಲು ವಸ್ತು ಸಂಗ್ರಹಾಲಯ ಸ್ಥಾಪಿಸಲು ಯೋಜನೆ ರೂಪಿಸಲಾಗಿದೆ ಈಗಾಗಲೇ 1200ಕ್ಕೂ ಹೆಚ್ಚು ಪ್ರಾಚ್ಯಾವಶೇಷಗಳಿಗೆ ಸಂಖ್ಯೆ ನೀಡಲಾಗಿದೆ. ಶೀಘ್ರದಲ್ಲೇ ಈ ಸಂಖ್ಯೆ 2000 ದಾಟುವ ನಿರೀಕ್ಷೆಯಿದೆ ಎಂದು ಹೇಳಿದರು.

ಕೃಷಿಯತ್ತ ಯುವಕರು ಮುಖ ಮಾಡಲಿ: ಸಿಎಂ

ಬೆಂಗಳೂರು: ಕೃಷಿಯನ್ನು ಲಾಭದಾಯಕವಾಗಿಸಲು ವೈಜ್ಞಾನಿಕ ನೆರವನ್ನು ನೀಡಲು ಸರ್ಕಾರ ಬದ್ಧವಾಗಿದೆ ಎಂದು ಸಿಎಂ ಸಿದ್ದರಾಮಯ್ಯ ತಿಳಿಸಿದರು.



ಶನಿವಾರ ಒಕಲಿಪುರದಲ್ಲಿ ರೇಷ್ಮೆ ಮತ್ತು ಕೃಷಿ ಭವನ ನಿರ್ಮಾಣಕ್ಕೆ ಶಂಕುಸ್ಥಾಪನೆ ಹಾಗೂ ಇ-ರೇಷ್ಮೆ ಪೋರ್ಟಲ್ ಬಿಡುಗಡೆ ನೆರವೇರಿಸಿ ಮಾತನಾಡಿದರು. ರೇಷ್ಮೆ ಮೇಲೆ 1.50 ಲಕ್ಷ ಕುಟುಂಬಗಳು ಇದರ ಮೇಲೆ ಅವಲಂಬಿಸಿದ್ದು, ರೇಷ್ಮೆ ಲಾಭದಾಯಕವಾದ ಕಸುಬು. ಅದಕ್ಕಾಗಿಯೇ ಹೆಚ್ಚು ಜನ ವ್ಯವಸಾಯದ ಜೊತೆಗೆ ಉಪಕಸುಬು ಮಾಡಬೇಕು ಎಂದರು. ಕೃಷಿಯಿಂದ ವಿಮುಖರಾಗುತ್ತಿರುವ ಯುವ ಜನಾಂಗವನ್ನು ಪುನಃ ಸೆಳೆಯಲು ರೇಷ್ಮೆ ತೋಟಗಾರಿಕೆ, ಪಶುಸಂಗೋಪನೆಗೆ ಸರ್ಕಾರ ಹೆಚ್ಚಿನ ಒತ್ತು ನೀಡುತ್ತಿದೆ ಎಂದರು.

ಬೈವೋಲ್ಟೀನ್ ರೇಷ್ಮೆಗೆ ಬೇಡಿಕೆ: ಬೈವೋಲ್ಟೀನ್ ರೇಷ್ಮೆಗೆ ಬೇಡಿಕೆ ಹೆಚ್ಚಾಗಿದ್ದು, ನಮ್ಮ ಸರ್ಕಾರದ ಅವಧಿಯಲ್ಲಿ ಸಾಗಾಣಿ ವೆಚ್ಚವನ್ನು 10 ರಿಂದ 20. ರೂ. ಗಳಿಗೆ ಹೆಚ್ಚಿಸಲಾಯಿತು ಮತ್ತು ಬೈವೋಲ್ಟೀನ್ ಬೆಳೆಯಲು ಹೆಚ್ಚಿನ ನೆರವನ್ನು ನೀಡಲು ಬದ್ಧವಾಗಿದೆ ಎಂದರು. ಕಚ್ಚಾ ರೇಷ್ಮೆ ಉತ್ಪಾದನೆಯಲ್ಲಿ ಕರ್ನಾಟಕ ದೇಶದಲ್ಲಿಯೇ ಮೊದಲ ಸ್ಥಾನದಲ್ಲಿದೆ. ಹಾಲು ಉತ್ಪಾದನೆಯಲ್ಲಿ ಎರಡನೇ ಸ್ಥಾನ ಹಾಗೂ ಕಾಫಿ ಉತ್ಪಾದನೆಯಲ್ಲಿಯೂ ಮೊದಲ ಸ್ಥಾನದಲ್ಲಿದ್ದೇವೆ. ಒಂದು ದಿನಕ್ಕೆ 1 ಕೋಟಿ ಲೀ. ಹಾಲು ಹಾಲು ಉತ್ಪಾದನೆಯಲ್ಲಿ 1.22 ಲಕ್ಷ ಹೆಕ್ಟೇರ್ ಪ್ರದೇಶದಲ್ಲಿ ರೇಷ್ಮೆ ಬೆಳೆ ಹಾಕಲಾಗಿದೆ ಎಂದು ವಿವರಿಸಿದರು.

ಇತರೆ ಇಲಾಖೆಗಳಿಗೂ ಸ್ಥಳಾವಕಾಶ: ಒಕಲೀಪುರದಲ್ಲಿರುವ 4 ಎಕರೆ 25 ಗುಂಟೆ ವಿಸ್ತೀರ್ಣದ ಈ ಸ್ಥಳ ರೇಷ್ಮೆ ಇಲಾಖೆಗೆ ಸೇರಿದ್ದು 1995 ರಲ್ಲಿ ಇದನ್ನು ಖರೀದಿಸಲಾಗಿತ್ತು ಎಂದರು. ಸಚಿವರಾದ ದಿನೇಶ್ ಗುಂಡೂರಾವ್, ವೆಂಕಟೇಶ್, ಖನಿಜ ನಿಗಮದ ಅಧ್ಯಕ್ಷ ಜಿ.ಎಸ್ .ಪಾಟೀಲ್, ಉಪಾಧ್ಯಕ್ಷ ಹೆಚ್. ಲಕ್ಷ್ಮಣ್, ರೇಷ್ಮೆ ಇಲಾಖೆ ಅಧಿಕಾರಿಗಳು ಉಪಸ್ಥಿತರಿದ್ದರು

ಬಿ.ಎಸ್. ಯಡಿಯೂರಪ್ಪ ಮತ್ತು ಬಸವ ಪ್ರಜ್ಞೆ

ಬಿ. ವಿ. ವಸಂತಕುಮಾರ್, ಪ್ರಾಧ್ಯಾಪಕರು


1026ರಲ್ಲಿ ಘಜ್ನಿ ಮಹಮದ್ ಗುಜರಾತಿನ ಸೋಮನಾಥ ದೇವಾಲಯವನ್ನು ಅಲ್ಲಿರುವ ಲಿಂಗವನ್ನು ಭಂಜಿಸಿ ಹಿಂದೂ ಧರ್ಮ, ಹಿಂದೂ ಸಮಾಜಕ್ಕೆ ಕಂಟಕಪ್ರಾಯವಾದನು. ಅದರ ಪರಿಣಾಮ ಗುಜರಾತಿನ ಓಹಿಲಯ್ಯ, ಒರಿಸ್ಸಾದ ಉದ್ಭವಯ್ಯ ಮೊದಲಾದ ಶಿವಭಕ್ತರು ಕರ್ನಾಟಕಕ್ಕೆ ಬಂದರು.

ಲಕುಳೇಶ್ವರ ಪಂಡಿತ ಎಂಬ ಕಾಳಾ ಮೂರ್ಖಿ ಗುರು ಶಿಕಾರಿಪುರ ತಾಲೂಕಿನ ಬಳ್ಳಿಗಾವೆಯನ್ನು ತನ್ನ ಕರ್ಮ ಭೂಮಿಯನ್ನಾಗಿಸಿಕೊಂಡರು. ಅದರ ಪರಿಣಾಮ ಎರಡು ನೂರು ವರ್ಷ ಬಳ್ಳಿಗಾವೆಯ ಕೋಡಿಮಠ ಕಾಳಾಮುಖ ಕೇಂದ್ರವಾಗಿ ಒಂದು ಶ್ರೇಷ್ಠ ವಿಶ್ವವಿದ್ಯಾಲಯವಾಗಿ ಕರ್ನಾಟಕವನ್ನೂ, ಭಾರತವನ್ನೂ, ಹಿಂದೂ ಧರ್ಮವನ್ನೂ, ಹಿಂದೂ ಸಮಾಜವನ್ನೂ, ಹಿಂದೂ ದರ್ಶನವನ್ನೂ ಉಳಿಸಿ ಬೆಳೆಸುವ ಶಿವಪ್ರಜ್ಞೆಗೂ, ಬಸವಪ್ರಜ್ಞೆಗೂ ವೀರಶೈವ ಲಿಂಗಾಯತ ಚಳವಳಿಗೂ ಕಾರಣವಾಗಿದೆ. ಮಧ್ಯಕಾಲೀನ ಭಾರತದ ಇತಿಹಾಸದ ಶುಭಪ್ರಜ್ಞೆಯನ್ನು ಬಸವಪ್ರಜ್ಞೆಯನ್ನು ಮತ್ತೆ ಮತ್ತೆ ನಾಡಿನಾದ್ಯಂತ ಎಚ್ಚರಿಸುತ್ತಿರುವವರು ಶರಣರು. ಅವರ ವಿಶಿಷ್ಟ ಪ್ರತಿನಿಧಿ ಶಿವಪ್ರಜ್ಞೆಯ, ಹೊಸ ಪ್ರಜ್ಞೆಯ, ಕಾಯಕದಾಸೋಹಿ ಹೋರಾಟಗಾರರು ಬಿ. ಎಸ್. ಯಡಿಯೂರಪ್ಪ ಇವರೂ ಕೂಡಾ ಮಂಡ್ಯ ಜಿಲ್ಲೆಯಿಂದ ಬಂದು ಶಿಕಾರಿಪುರ ತಾಲೂಕನ್ನು ಕರ್ಮ ಭೂಮಿಯನ್ನಾಗಿಸಿಕೊಂಡವರು. ದಕ್ಷಿಣ ಭಾರತದಲ್ಲಿ ಮೊಟ್ಟ ಮೊದಲ ಬಿಜೆಪಿ ಸರ್ಕಾರವನ್ನು ಕರ್ನಾಟಕದಲ್ಲಿ ತಂದವರು. ಆ ಮೂಲಕ 'ಅಹಿಂದು' ಮಾನಸಿಕತೆಯನ್ನು ಬಿತ್ತಿ ಬೆಳೆಯುತ್ತಿದ್ದ ದಕ್ಷಿಣ ಭಾರತದಲ್ಲಿ ಶಿವ ಪ್ರಜ್ಞೆಯ, ಬಸವಪ್ರಜ್ಞೆಯ 'ಹಿಂದುತ್ವ'ವನ್ನು ಜಾಗೃತಗೊಳಿಸಿದವರು. ಜಾತಿಯತೆ, ಅಸ್ಪೃಶ್ಯತೆ, ಅಸಮಾನತೆಗಳಿಲ್ಲದ ಹಿಂದೂ ಧರ್ಮವನ್ನು, ಹಿಂದೂ ಸಮಾಜವನ್ನು ಕಟ್ಟ ಬಯಸಿದವರು, ಕಟ್ಟಿದವರು. ಶಿಕಾರಿಪುರ ತಾಲೂಕಿನ ಸಾವಿರಾರು ವರ್ಷಗಳ ಸಂಸ್ಕೃತಿಯೇ ಮೈವೆತ್ತಂತೆ ಮೈದಾಳಿದವರು ಬಿಎಸ್ ಯಡಿಯೂರಪ್ಪ. ತಾಳಗುಂದದ ಮಯೂರ ಶರ್ಮನ ಸ್ವಾಭಿಮಾನದ ಕ್ಷಾತ್ರಗುಣ, ಬಳ್ಳಿಗಾವೆಯ ದೀನ ದಲಿತೋದ್ಧಾರಕ ಜ್ಞಾನ ಯೋಗಿ ಅಲ್ಲಮ ಪ್ರಭುವಿನ ಸಂಘಟನಾ ಶಕ್ತಿ, ಉಡುತಡಿಯ ವೀರ ವಿರಾಗಿಣಿ ಅಕ್ಕಮಹಾದೇವಿಯ ನಿರ್ಭೀತ ನಿಷ್ಕಾಮ ಪ್ರೇಮದ ಹೃದಯವಂತ ಮುಗ್ಧತೆ ಮುಪ್ಪುರಿಗೊಂಡವರಂತೆ ಗೋಚರಿಸುವವರು ಬಿ.ಎಸ್. ಯಡಿಯೂರಪ್ಪ. ಅವರ ಪ್ರಜ್ಞೆ ಔಪಚಾರಿಕ ಶಾಲೆ, ಕಾಲೇಜು, ವಿಶ್ವವಿದ್ಯಾನಿಲಯಗಳಿಂದ ರೂಪುಗೊಂಡದ್ದಲ್ಲ. ಅವರ ಪ್ರಜ್ಞೆ ಅವರ ತಾಯಿ ಪುಟ್ಟ ತಾಯಮ್ಮ, ತಂದೆ ಸಿದ್ದಲಿಂಗಪ್ಪ, ಅಜ್ಜ ಸಂಗಪ್ಪ, ಪತ್ನಿ ಮೈತ್ರಿದೇವಿ ಹಾಗೂ ಅವರನ್ನು ಬೆಳೆಸಿದ ರಾಷ್ಟ್ರೀಯ ಸ್ವಯಂಸೇವಕ ಸಂಘದಿಂದ ,ಶಿಕಾರಿಪುರ ತಾಲೂಕಿನ ಕರ್ನಾಟಕದ ಶ್ರೀಸಾಮಾನ್ಯರ ಜೀವನಾನುಭವಿಗಳಿಂದ ರೂಪುಗೊಂಡ ಪ್ರಜ್ಞೆ. ಅದು ಶಿವಪ್ರಜ್ಞೆ.ಅದು ಬಸವಪ್ರಜ್ಞೆ. ಅದು ಯಡಿಯೂರಪ್ಪ ಪ್ರಜ್ಞೆ.

ಬಿಎಸ್ ಯಡಿಯೂರಪ್ಪ ಅವರನ್ನು ಪ್ರಾಥಮಿಕ ಶಾಲೆಯಲ್ಲಿ ಸರ್ಕಾರಿ ನೌಕರರ ಮಗನಲ್ಲ ಎಂಬ ಕಾರಣಕ್ಕೆ ಹಿಂದಿನ ಬೆಂಚಿಗೆ ಕಳಿಸಿದ ಘಟನೆಯನ್ನು ಅವರ ಸಹಪಾಠಿ ಎಸ್. ಶಂಕರರಾವ್ ಅವರು 'ನಾ ಬಲ್ಲ ಯಡಿಯೂರಪ್ಪ' ಎಂಬ ಲೇಖನದಲ್ಲಿ ದಾಖಲಿಸಿದ್ದಾರೆ. ಐದು ಆರನೆಯ ತರಗತಿಯಿಂದಲೇ ಇಂಥ ಅಪಮಾನವನ್ನು ಶಾಲೆಯಿಂದ, ಉಪಾಧ್ಯಾಯರಿಂದಲೇ ಅನುಭವಿಸುತ್ತಾ ಜೀವನ ಪಾಠ ಕಲಿತ ಯಡಿಯೂರಪ್ಪನವರು ಅಪಮಾನಗಳಿಂದ ಕೊರಗುತ್ತಾ ಕುಳಿತು ಶರಣಾಗತಿ ಅಥವಾ ಪಲಾಯನವಾದವನ್ನು ಮಾಡಿದವರಲ್ಲ. ಅಪಮಾನಗಳನ್ನು ಮೆಟ್ಟಿಲುಗಳನ್ನಾಗಿಸಿಕೊಂಡು ಸಿಡಿಲಿನಂತೆ ಘರ್ಜಿಸಿ ಸ್ವಯಂ ಮೇವ ಮೃಗೇಂದ್ರತಾ ಅಂದರೆ ನಿನಗೆ ನೀನೇ ಸಿಂಹನಾಗು, ನಿನಗೆ ನೀನೇ ಶಿಲ್ಪಿ ಎಂಬ ಸ್ವಾಮಿ ವಿವೇಕಾನಂದರ ಮಾತಿನಂತೆ ಬೆಳೆದು ನಿಂತವರು. ಒಂದು ಸರ್ಕಾರವನ್ನೇ ಮುನ್ನಡೆಸುವ ಮುಖ್ಯಮಂತ್ರಿ ಪಟ್ಟದಲ್ಲಿ ನಾಲ್ಕು ಬಾರಿ ಕುಳಿತವರು. ಅವರ ಶುಭ್ರವಾದ ಬಿಳಿಯ ಸಫಾರಿ ಅಂಗಿಯಲ್ಲಿ ಯಾವಾಗಲೂ ಒಂದು ಪೆನ್ನು ಮತ್ತು ಒಂದು ಹಾಳೆ ಇದ್ದೇ ಇರುತ್ತದೆ. ಮಾಡಬೇಕಾದ ಕೆಲಸಗಳ ಪಟ್ಟಿ ಆ ಹಾಳೆಯನ್ನು ತುಂಬಿರುತ್ತದೆ. ಆದ ಕೆಲಸವನ್ನು ತಕ್ಷಣವೇ ಸಂಬಂಧಪಟ್ಟವರಿಗೆ ಮರೆಯದೆ ತಿಳಿಸುವ ತಾಯ್ತನದ ಸೇವಾ ತುಡಿತ ಅವರ ಎದೆ– ಮೆದುಳು– ಕಣ್ಣು –ಕೈ ಕಾಲುಗಳಲ್ಲಿದೆ. ಇದು ಅವರ ಬಸವ ಪ್ರಜ್ಞೆಯ ಭಕ್ತಿ ಭಂಡಾರಿತನ. ಬಿಎಸ್ ಯಡಿಯೂರಪ್ಪನವರ ಎದೆ ಸೀಳಿದರೆ ಬಸವಣ್ಣ ಕಾಣುವುದಿಲ್ಲ, ಏಕೆಂದರೆ ಸ್ವತಹ ಅವರೇ ಆಧುನಿಕ ಬಸವಣ್ಣ . ಅವರ ಎದೆ ಸೀಳಿದರೆ ಅಲ್ಲಿ ಜನ ,ಜನ, ಜನ, ನೊಂದ ಜನರು ಮಾತ್ರ ಕಾಣಿಸುತ್ತಾರೆ. ಜನಸೇವೆಯನ್ನೇ ಜನಾರ್ದನ ಸೇವೆ ಎಂದು ಭಾವಿಸಿ ಬದುಕಿದವರು ಯಡಿಯೂರಪ್ಪ.

ಯಡಿಯೂರಪ್ಪನವರು ಸಿಟ್ಟು ಮಾಡಿಕೊಂಡು ಯಾರಿಗೆ ಎಷ್ಟೇ ಏನೇ ಗದರಿದರೂ ಎಂದೂ ಅವರು ಶಿಕ್ಷಕರಿಗೆ ಮತ್ತು ಮಹಿಳೆಯರಿಗೆ ಬೈದಿರುವುದನ್ನು ನಾನು ಕಂಡಿಲ್ಲ. ಪೊಲೀಸರ, ಇಂಜಿನಿಯರ್‌ಗಳ ಮೇಲೆ ಅವರ ಅನ್ಯಾಯಗಳ ಕಂಡು ಕೆಂಡದುಂಡೆಯಾಗುವ ಯಡಿಯೂರಪ್ಪನವರು ಶಿಕ್ಷಕರು ಮತ್ತು ಮಹಿಳೆಯರನ್ನು ಅತೀವವಾಗಿ ಗೌರವಿಸುತ್ತಾರೆ. ಅವರ ಕೆಲಸಗಳನ್ನು ಮೊದಲ ಆದ್ಯತೆಯಿಂದ ಆಗು ಮಾಡಿದ್ದಾರೆ. ಶಿಕ್ಷಕ ಪ್ರೇಮಿ, ಮಾತೃ ಪ್ರೇಮಿ ಬಿಎಸ್ ಯಡಿಯೂರಪ್ಪ. ಶಿಕಾರಿಪುರ ತಾಲೂಕಿನಾದ್ಯಂತ ಶಿಕ್ಷಣ ಸಂಸ್ಥೆಗಳು ಸರ್ವಾಂಗೀಣವಾಗಿ ಬೆಳೆಯಲು ಬೇಕಾದ ಎಲ್ಲಾ ಅತ್ಯಗತ್ಯವಾದ ಕ್ರಮಗಳನ್ನು 1975ರಿಂದಲೇ ನೀಡುತ್ತಾ ಬಂದವರು. ಅವರಿಗೆ ಭೌತಿಕ ಪ್ರಗತಿ ಎಷ್ಟು ಮುಖ್ಯವೋ ಸಾಂಸ್ಕೃತಿಕ ಸಮೃದ್ಧಿಯು ಅಷ್ಟೇ ಮುಖ್ಯ.

ಬಿಎಸ್ ಯಡಿಯೂರಪ್ಪನವರ ಮೈ ಮತ್ತು ಮಾತು ಎಷ್ಟು ಗಟ್ಟಿಯೋ ಅವರ ಮನಸ್ಸು ಮತ್ತು ಆತ್ಮ ಅಷ್ಟೇ ಮೃದು ಮತ್ತು ಕಾಂತಿಮಯ. ಗಟ್ಟಿ ಗುಂಡಿಗೆ ಇರೋ ವ್ಯಕ್ತಿ ಯಡಿಯೂರಪ್ಪ ಎನ್ನುವ ಗುರುಮೂರ್ತಿ ಅವರು 'ಎಲ್ಲಿಯವರೆಗೆ ಹೋರಾಟ, ಗೆಲ್ಲುವವರೆಗೂ ಹೋರಾಟ' ಎಂಬ ತಮ್ಮ ಲೇಖನದಲ್ಲಿ "ನಾನು ಗಮನಿಸಿದ ಹಾಗೆ ಯಡಿಯೂರಪ್ಪನವರು ತಮ್ಮ ಭಾಷಣಗಳಲ್ಲಿ ರೈತರ, ಮಹಿಳೆಯರ, ದಲಿತ– ದಮನಿತರ ವಿಷಯಗಳ ಬಗ್ಗೆ ಬಹಳ ಒತ್ತುಕೊಡುತ್ತಾರೆ. ಅದರ ಪರಿಣಾಮವೇ ಅವರು ಒಬ್ಬ ಜನನಾಯಕನಾಗಿ ಬೆಳೆದಿದ್ದು" ಎಂದು ಬರೆಯುತ್ತಾ ಯಡಿಯೂರಪ್ಪನವರ ತೀವ್ರವಾದ ಹೃದಯವಂತಿಕೆಗೆ ಸಾಕ್ಷಿಯಾದ ಒಂದು ಘಟನೆ ಬಗ್ಗೆ ಬರೆಯುತ್ತಾ "ತಮ್ಮ ಕ್ಷೇತ್ರದಲ್ಲಿ ಸಂಚರಿಸುವಾಗ ದಾರಿಯಲ್ಲಿ ಸಿಕ್ಕ ತಬ್ಬಲಿ ನಾಯಿಮರಿಯನ್ನು ತಮ್ಮ ಕಾರಿನಲ್ಲಿ ಮನೆಗೆ ತಂದವರು ಯಡಿಯೂರಪ್ಪ. ಅದನ್ನು ತಮ್ಮ ಸೊಸೆಯ ಸುಪರ್ದಿಗೆ ಬಿಟ್ಟು ಅದರ ಆರೈಕೆಯ ಕಾಳಜಿ ವಹಿಸಿದ್ದರು ಎಂಬುದು ಬಹಳ ಜನರಿಗೆ ಗೊತ್ತಿರದ ಸಂಗತಿ" ಎಂದಿದ್ದಾರೆ. ಹೌದು ಜೀತ ವಿಮುಕ್ತಿ ಬಗರ್ ಹುಕುಂ ಹೋರಾಟಗಳಾದಿಯಾಗಿ ತಬ್ಬಲಿ ನಾಯಿಮರಿಯ ಆರೈಕೆವರೆಗೆ ಸ್ಪಂದಿಸಿರುವ ಪ್ರಜ್ಞೆ ಬಿ.ಎಸ್. ಯಡಿಯೂರಪ್ಪನವರ ಪ್ರಜ್ಞೆ. ಇದು ಕೇವಲ ಬೌದ್ಧಿಕವಾದ ವಿಚಾರವಾದಿ ಆಷಾಢಭೂತಿ ಪ್ರಜ್ಞೆಯಲ್ಲ. ಇದು ಸಾಮಾಜಿಕ ಕಳಕಳಿ, ಜೀವನಾನು ಭವ, ರಾಷ್ಟ್ರ ಪುನರ್ ನಿರ್ಮಾಣದ ಧ್ಯೇಯವಾದದ ಕಿಚ್ಚಿನಿಂದ ಬಸವಾದಿ ಶರಣರ ನಡೆನುಡಿ ಒಂದಾದ ಸಿದ್ಧಾಂತದಿಂದ ಪಡಿ ಮೂಡಿದ ಪ್ರಜ್ಞೆ. ಹಾಗಾಗಿಯೇ ಇದರ ಮೂಲ ಶಿವಪ್ರಜ್ಞೆ, ಬಸವ ಪ್ರಜ್ಞೆಯಲ್ಲಿದೆ.



ಬಿಎಸ್ ಯಡಿಯೂರಪ್ಪನವರಿಗೆ ಶಿಕ್ಷಣ ಮತ್ತು ಸಂಸ್ಕೃತಿಯ ಬಗ್ಗೆ ಅಪಾರವಾದ ಪ್ರೀತಿ. ಅವರ ನಡೆ–ನುಡಿಯಲ್ಲಿ ಅದು ಎದ್ದು ಕಾಣುತ್ತದೆ. ಅವರ ಒಡನಾಟ ಸಿಕ್ಕವರಿಗೆಲ್ಲ ಅವರ ಹೃದಯಸ್ಪರ್ಶಿ ಅಂತಃಕರಣದ ಮಾನವೀಯ ಸ್ಪರ್ಶ ಆಗಿಯೇ ಇರುತ್ತದೆ. ಅವರನ್ನು ಕುರಿತು ಚಿಕ್ಕಣ್ಣ ಜೋಯಿಸ್ ಎಸ್. ಕೆ. ಅವರು "ಸಂಕಷ್ಟದಲ್ಲಿದ್ದವರ ಸಹಾಯಕ್ಕೆ ಸದಾ ಸಿದ್ಧ" ಎಂಬ ಲೇಖನದಲ್ಲಿ ಬರೆಯುತ್ತಾ– ಯಡಿಯೂರಪ್ಪನವರ ಆತ್ಮೀಯರಲ್ಲಿ ನಾನು ಒಬ್ಬನಾಗಿದ್ದೆ . ಒಂದು ಸಾರಿ ಒಂದು ಪ್ರಶ್ನೆಯನ್ನು ಮುಂದಿಟ್ಟರು. ಏನೆಂದರೆ ಭವಾನಿ ರಾವ್ ಕೇರಿಯಲ್ಲಿ ಒಂದು ಶಾಲೆ ಮಾಡಬೇಕೆಂದು ಕೊಂಡಿದ್ದೇನೆ. ಮಾಡಲೋ, ಬೇಡವೋ ಎಂದು. ಆಗ ನಾನು ಹೇಳಿದೆ ಬೇಡವೇ ಬೇಡ ಎಂದು, ಏಕೆ ? ಎಂದು ಪ್ರಶ್ನಿಸಿದರು. ಮುಂದೆ ಸಂಸ್ಥೆ ಬೆಳೆದಂತೆಲ್ಲಾ ಸತ್ಯಾಗ್ರಹ ಚಳುವಳಿ ಪ್ರಾರಂಭವಾಗಬಹುದು ಎಂದು ಹೇಳಿದೆ. ಆದರೆ ಅವರು ನನ್ನ ಮಾತನ್ನು ಕೇಳದೆ ಹಠದಿಂದ ಶಾಲೆಯನ್ನು ಬಿಟ್ಟರು. ಹೀಗೆ ಯಾವುದೇ ಕೆಲಸ ಬಂದರೂ ಚಾಲೆಂಜ್ ಆಗಿ ತೆಗೆದುಕೊಂಡು ಕೆಲಸ ಮಾಡುತ್ತಿದ್ದುದರಿಂದ ಮುಂದೆ ಯಶಸ್ವಿಯಾದರು.

ಹೀಗೆ ಭವಾನಿರಾವ್ ಕೇರಿಯಲ್ಲಿ ಅಕ್ಕಮಹಾದೇವಿ ಪ್ರಾಥಮಿಕ ಶಾಲೆಯನ್ನು 1990ರ ದಶಕದಲ್ಲಿ ಪ್ರಾರಂಭಿಸಿದ ಬಿಎಸ್ ಯಡಿಯೂರಪ್ಪನವರು ಮುಂದೆ ಶಿಕಾರಿಪುರದಲ್ಲಿ ಕುಮದ್ವತಿ ಬಿಎಡ್ ಕಾಲೇಜು ತೆರೆದರು. ಸ್ವಾಮಿ ವಿವೇಕಾನಂದ ಶಿಕ್ಷಣ ಸಂಸ್ಥೆ ಹೆಸರಿನಲ್ಲಿ ಶಿಕಾರಿಪುರವನ್ನು ಇಂದು ಶಿಕ್ಷಣ ಕಾಶಿಯನ್ನಾಗಿಸಿದ್ದಾರೆ. ಶಿವಮೊಗ್ಗ ನಗರದಲ್ಲೂ ಶಿಕ್ಷಣ ಸಂಸ್ಥೆಗಳನ್ನು ಬೆಳೆಸಿದ್ದಾರೆ. ಆ ದಿನಗಳಲ್ಲಿ ಶಿಕಾರಿಪುರದಲ್ಲಿ ಮಂಗಳ ಭವನವನ್ನು ನಿರ್ಮಾಣ ಮಾಡಿ ಶಿಕಾರಿಪುರದ ಜನತೆಗೆ ಒಂದು 'ಸೌರಭ' ಎಂಬ ಹೆಸರಿನ ಸಾಂಸ್ಕೃತಿಕ ಸಂಸ್ಥೆಯನ್ನೂ ಕಟ್ಟಿ ಬೆಳೆಸಿದರು. ತಾಲೂಕಿನಾದ್ಯಂತ ಸರ್ಕಾರಿ ಶಾಲಾ ಕಾಲೇಜುಗಳನ್ನೂ ಸರ್ವಾಂಗೀಣವಾಗಿ ಬಲಗೊಳಿಸಿದರು. ಯಾವುದೇ ವರ್ಗಾವಣೆಯಾದಾಗಲೂ ತಾಲೂಕಿಗೆ ಶಿಕ್ಷಕರ ಕೊರತೆ ಆಗದಂತೆ ನೋಡಿಕೊಂಡರು. ಉತ್ತಮ ಶಿಕ್ಷಕರಿಗೆ ಪ್ರೀತಿ, ಪ್ರೋತ್ಸಾಹ ನೀಡಿ ಬೆನ್ನು ತಟ್ಟಿ ಬೆಳೆಸಿದರು. ಉತ್ತಮ ಶಿಕ್ಷಕರು, ಶೈಕ್ಷಣಿಕ ಆಡಳಿತಗಾರರು ಎಲ್ಲೇ ಇದ್ದರೂ ಗುರುತಿಸಿ ತಾಲೂಕಿಗೆ ಕರೆತರುವ ಕೆಲಸ ಮಾಡಿದರು. ಇದೆಲ್ಲದರ ಪರಿಣಾಮ ಶಿಕಾರಿಪುರ ತಾಲೂಕು ಭೌತಿಕವಾಗಿ ಎಷ್ಟು ಪ್ರಗತಿ ಸಾಧಿಸಿದೆಯೋ ಅಷ್ಟೇ ಪ್ರಗತಿಯನ್ನು ಶೈಕ್ಷಣಿಕ –ಸಾಂಸ್ಕೃತಿಕವಾಗಿಯೂ ಸಾಧಿಸಿದೆ. ಕಣ್ಣು ಬಿಟ್ಟಾಗಲೂ ಕಣ್ಣು ಮುಚ್ಚಿದಾಗಲೂ ಲೋಕ ಕಲ್ಯಾಣದ ಕನಸುಗಳನ್ನು ಕಾಣುವ ಅಪರೂಪದ ವ್ಯಕ್ತಿ ಬಿಎಸ್ ಯಡಿಯೂರಪ್ಪ .ಅದಕ್ಕೆ ಅವರು ಉಪಮುಖ್ಯಮಂತ್ರಿ ,ಮುಖ್ಯಮಂತ್ರಿಗಳಾದಾಗ ಸಾಧಿಸಿರುವ ಸಾಧನೆಗಳೇ ಸಾಕ್ಷಿ.

ಕನ್ನಡಕ್ಕೆ ಶಾಸ್ತ್ರೀಯ ಭಾಷೆ ಸ್ಥಾನಮಾನ ತರಲು ಕೇಂದ್ರ ಸರ್ಕಾರದ ಎದುರು ಧರಣಿಗೆ ಮುಂದಾದ ಮುಖ್ಯಮಂತ್ರಿ ಬಿಎಸ್ ಯಡಿಯೂರಪ್ಪ. ಶಾಸ್ತ್ರೀಯ ಸ್ಥಾನಮಾನ ತಂದ ಬಳಿಕ ಕರ್ನಾಟಕ ರಾಜ್ಯದ ಎಲ್ಲಾ ವಿಶ್ವವಿದ್ಯಾನಿಲಯಗಳಿಗೆ ತಲ ಎರಡೆರಡು ಕೋಟಿ ರೂಪಾಯಿಗಳನ್ನು ನೀಡಿ ಕನ್ನಡ ಭಾಷೆಯ ಆಳವಾದ ಸಂಶೋಧನೆಗೆ ಪುಸ್ತಕಗಳ ಪ್ರಕಟಣೆಗೆ ಕಾರಣರಾದವರು ಶಿಕ್ಷಣ– ಸಂಸ್ಕೃತಿ ಪ್ರೇಮಿ ಯಡಿಯೂರಪ್ಪ. ಯಡಿಯೂರಪ್ಪನವರು ಉಪಮುಖ್ಯಮಂತ್ರಿ ಡಿ. ಎಚ್. ಶಂಕರಮೂರ್ತಿ, ಉನ್ನತ ಶಿಕ್ಷಣ ಮಂತ್ರಿ ಕುಮಾರಸ್ವಾಮಿ ಅವರು ಮುಖ್ಯಮಂತ್ರಿ ಅವರೆಲ್ಲ ಸೇರಿ ಕರ್ನಾಟಕ ರಾಜ್ಯದಲ್ಲಿ 167ಕ್ಕೂ ಹೆಚ್ಚು ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳನ್ನು ಪ್ರಾರಂಭಿಸಿದರು. ಗ್ರಾಮಗಳ ಮಟ್ಟಕ್ಕೆ ಬಡವರ ಮನೆ ಬಾಗಿಲಿಗೆ ಉನ್ನತ ಶಿಕ್ಷಣ ಕೊಂಡೊಯ್ದ ಕೀರ್ತಿ ಇವರದು.

ರಾಜ್ಯದಲ್ಲಿ ಅನೇಕ ಶಾಲೆ, ಕಾಲೇಜು, ವಿಶ್ವವಿದ್ಯಾನಿಲಯಗಳನ್ನು ತೆರೆದರು. ಪುಸ್ತಕ ಖರೀದಿ, ಗ್ರಂಥಾಲಯಗಳ ಬಲವರ್ಧನೆಗೆ ಆದ್ಯತೆ ನೀಡಿದರು. ಹತ್ತಾರು ಮಹಾಪುರುಷರ ಜಯಂತಿಗೆ ರಜೆ ನೀಡಿ ಸರ್ಕಾರ– ಸಮುದಾಯ– ಸಮಾಜ ಒಟ್ಟಾಗಿ ಜಯಂತಿಗಳನ್ನು ಹಬ್ಬವನ್ನಾಗಿ ಸಾಂಸ್ಕೃತಿಕ ಶೈಕ್ಷಣಿಕ ಆದರ್ಶವನ್ನಾಗಿ ಆಚರಿಸಲು ಬಿಎಸ್ ಯಡಿಯೂರಪ್ಪನವರು ಕಾರಣರಾದರು. ಜಾತಿ, ಮತ ,ಪಂಥವನ್ನು ಮೀರಿ ಎಲ್ಲಾ ಜಾತಿ, ಮತ, ಪಂಥಗಳಿಗೂ ಸೇರಿದ ಸಾವಿರಾರು ಮಠಮಾನ್ಯಗಳಿಗೆ ಅನುದಾನ ನೀಡಿ ಕರ್ನಾಟಕ ರಾಜ್ಯದ ಧರ್ಮ– ಸಂಸ್ಕೃತಿ ಆಧ್ಯಾತ್ಮವನ್ನು ಬಲಪಡಿಸಿದರು.

ನಾಡೋಜ ಹಂಪನಾ ಅವರು "ಹೊಸ ಯುಗ ಪುರುಷ" ಎಂದು ಕರೆಯುತ್ತಾ ಅದೇ ಹೆಸರಿನ ತಮ್ಮಲ್ಲಿ ಲೇಖನದಲ್ಲಿ ಬಿಎಸ್ ಯಡಿಯೂರಪ್ಪನವರ ಗುರು ಪ್ರೀತಿ ಎಂಥದ್ದು ಎಂಬುದನ್ನು ಕುರಿತು "ಉಪಮುಖ್ಯಮಂತ್ರಿಯವರು (ಯಡಿಯೂರಪ್ಪ) ಸೀದಾ ನಾನು ಕುಳಿತಿದ್ದ ಸ್ಥಳಕ್ಕೆ ಬಂದು 2 ಕೈಜೋಡಿಸಿ ತಲೆಬಾಗಿ ನಮಸ್ಕರಿಸುತ್ತಾ "ಸರ್ ನಾನು ಮಂಡ್ಯದಲ್ಲಿ ತಮ್ಮ ವಿದ್ಯಾರ್ಥಿ, ನೆನಪಿದೆಯಾ ಸಾರ್, ಆಶೀರ್ವದಿಸಬೇಕು" ಎಂದು ವಿನಯ ಮೂರ್ತಿಯಾಗಿ ನುಡಿದರು" ಎಂದು ನೆನೆದಿದ್ದಾರೆ, ದಾಖಲಿಸಿದ್ದಾರೆ. ಇದು ಬಿಎಸ್ ಯಡಿಯೂರಪ್ಪನವರ ವ್ಯಕ್ತಿತ್ವ. ಎಲ್ಲಾ ಕಾಲದ ಎಲ್ಲಾ ತಲೆಮಾರಿನ ಅಧಿಕಾರಿ ವರ್ಗ, ಮಂತ್ರಿಮಹೋದಯರು ತಮ್ಮ ತಮ್ಮ ಗುರುಗಳ ಬಗ್ಗೆ ತಾವು ತಾಳಬೇಕಾದ ಅನುಕರಣೆಯ ಜೀವನ ಆದರ್ಶ. ಇದು ಭಾರತೀಯ ಹಿಂದೂ ಸಂಸ್ಕೃತಿಯ ಜೀವಾಳ. ಅರಮನೆಯ ಮೇಲೆ ಗುರು ಮನೆ, ರಾಜ ದಂಡದ ಮೇಲೆ ಗುರುದಂಡ. "ಶಿವಪಥವನರಿವದೆ ಗುರುಪಥವೇ ಮೊದಲು ' ಎಂಬ ಆದರ್ಶ ಗುರು ಹುಟ್ಟಿನಿಂದ, ಜಾತಿಯಿಂದ, ಅಂತಸ್ತಿನಿಂದ ಆಗುವುದಿಲ್ಲ . ತನ್ನ ನೈತಿಕ ನಡವಳಿಕೆಯಿಂದಾಗುತ್ತಾನೆ. ಇದು ಗುರುಶಿಷ್ಯರ ಭೇಟಿಯ ಭೇಟಿಯ ಅಪೂರ್ವ ಸಂದರ್ಭ. ಬಿಎಸ್ ಯಡಿಯೂರಪ್ಪನವರು ಅಂದಿನ ಬಸವಣ್ಣನವರಂತೆ ಗುರು–ಲಿಂಗ–ಜಂಗಮ ಪ್ರೇಮಿ ಎಂಬುದು ಗಮನಾರ್ಹ ಅಂಶ. 'ಹೈದರಾಬಾದ್ ಕರ್ನಾಟಕ ' ಹೆಸರನ್ನು ಬದಲಾಯಿಸಿ 'ಕಲ್ಯಾಣ ಕರ್ನಾಟಕ' ಎಂದು ಮರುನಾಮಕರಣ ಮಾಡಿದ ಕೀರ್ತಿ ಯಡಿಯೂರಪ್ಪನವರಿಗೆ ಸಲ್ಲುತ್ತದೆ. ಬೀದರಿನ ಕಲ್ಯಾಣ, ಬಸವಕಲ್ಯಾಣ ಮೃಣ್ಮಯವನ್ನು ಚಿನ್ಮಯವನ್ನಾಗಿಸಿರುವ ಪುಣ್ಯಭೂಮಿ 'ಕಲ್ಯಾಣ' ಎಂಬುದು ಕೇವಲ ಹೆಸರಲ್ಲ. ಅದೊಂದು ಪ್ರಜ್ಞೆ. ಆ ಪ್ರಜ್ಞೆಯೇ ಬಿಎಸ್ ಯಡಿಯೂರಪ್ಪನವರನ್ನು ಕೈಹಿಡಿದು ಮುನ್ನಡೆಸಿರುವ ಪ್ರಜ್ಞೆ, ಅದನ್ನು ಅವರು ಪುರಸಭಾ ಸದಸ್ಯ ಸ್ಥಾನದಿಂದ ಹಿಡಿದು ಮುಖ್ಯಮಂತ್ರಿ ಸ್ಥಾನದಲ್ಲಿದ್ದಾಗಲೂ ತಪ್ಪದೆ ಅನುಸರಿಸುತ್ತಾ ಬಂದಿದ್ದಾರೆ. ಶಿಕಾರಿಪುರ ಶರಣರ ನಾಡು. ಕರ್ನಾಟಕವನ್ನೂ ಶರಣರ ನಾಡನ್ನಾಗಿ ಮಾಡಿದ ಕೀರ್ತಿ ಬಸವಣ್ಣನವರಿಗೆ ಸಲ್ಲುತ್ತದೆ. ಆ ಪರಂಪರೆಯ ವಾರಸುದಾರರು ಬಿ ಎಸ್ ಯಡಿಯೂರಪ್ಪ.

ಮುಕುಡಪ್ಪನವರು ತಮ್ಮ "ನಂಬಿಕಸ್ಥ ನಾಯಕ" ಎಂಬ ಲೇಖನದಲ್ಲಿ "ಯಡಿಯೂರಪ್ಪನವರು ಕನಕ ಜಯಂತಿಯ ದಿನ ಸಾರ್ವಜನಿಕ ರಜ ಘೋಷಣೆ ಮಾಡಿದ್ದಲ್ಲದೆ ಸರ್ಕಾರವೇ ಕನಕ ಜಯಂತಿಯನ್ನು ಆಚರಿಸಲು ಆದೇಶ ನೀಡಿದ, ಸಮಾಜಮುಖಿ ಕಾಗಿನೆಲೆ ಗುರುಪೀಠಕ್ಕೆ ಧನಸಹಾಯ ಮಾಡಿದ ಧೀಮಂತ ನಾಯಕ" ಎಂದು ಬರೆಯುತ್ತಾ ಮುಂದುವರೆದು "ನಾವು ಬಿಜೆಪಿ ಸೇರದೆ ಭಿನ್ನ ನಿಲುವು ವ್ಯಕ್ತಪಡಿಸಿದಾಗ, ಎಂ. ಡಿ. ಲಕ್ಷ್ಮೀನಾರಾಯಣ ಮೂಲಕ ನನ್ನನ್ನು ಯಡಿಯೂರಪ್ಪನವರ ಮನೆಗೆ ಕರೆಸಿಕೊಂಡು ನನ್ನ ಜೊತೆಯಲ್ಲಿರಿ. ನಿಮ್ಮಂಥವರು ಇರಬೇಕು ಎಂದು ನನ್ನನ್ನು ಕೇಳಿಕೊಂಡಾಗ ನಾನು ಅವರ ಜೊತೆಯಲ್ಲಿ ಹೋಗಬೇಕಿತ್ತು, ಹೋಗಲಿಲ್ಲ. ಅದರಿಂದ ಅವರಿಗಲ್ಲ ನಷ್ಟವಾಗಿದ್ದು, ನನಗೆ ಮತ್ತು ನನ್ನ ಕುರುಬ ಸಮಾಜಕ್ಕೆ (ಧಣಿವರಿಯದ ಧೀಮಂತ ಪುಟ ಸಂಖ್ಯೆ 387) ಎಂದಿದ್ದಾರೆ.

ಹೌದು ಬಿ ಎಸ್ ಯಡಿಯೂರಪ್ಪನವರ ಜೊತೆ ಹೋದರೆ ಎಲ್ಲಾ ಸಮಾಜಗಳಿಗೆ ಎಲ್ಲಾ ಜಾತಿ, ಮತ, ಪಂಥ, ಪ್ರದೇಶಗಳಿಗೆ ಒಳಿತಾಗುತ್ತದೆ. ಏಕೆಂದರೆ ಅವರದು ಶಿವಪ್ರಜ್ಞೆ, ಬಸವ ಪ್ರಜ್ಞೆ, ಕಲ್ಯಾಣ ಪ್ರಜ್ಞೆ. ಅದನ್ನು ರೂಪಿಸಿದ್ದು ದೇಶ ಮತ್ತು ದೇಶದ ಸಂಸ್ಕೃತಿ. ಡಿ.ಎಸ್. ವೀರಯ್ಯನವರು ಬಿಎಸ್ ಯಡಿಯೂರಪ್ಪನವರನ್ನು ಕುರಿತು ಬರೆಯುತ್ತಾ "ಎಸ್ ಎಸ್ ಎಲ್ ಸಿ ಮತ್ತು ಪಿಯುಸಿಯಲ್ಲಿ ಪಾಸಾದವರಿಗೆ ಮೆರಿಟ್ ಸ್ಕಾಲರ್‌ಶಿಪ್‌ನಲ್ಲಿ ಕ್ರಮವಾಗಿ 5000 ಮತ್ತು 5000 ರೂ. ಗಳನ್ನು ನೀಡಿ ಶಿಕ್ಷಣಕ್ಕೆ ಒತ್ತು. ಗುಲ್ಬರ್ಗಾದಲ್ಲಿರುವ ಬುದ್ಧ ವಿಹಾರದ ಅಭಿವೃದ್ಧಿಗಾಗಿ ಧನ ಸಹಾಯ. ವೀರ ಮಹಿಳೆ "ಒನಕೆ ಓಬವ್ವ" ಜನ್ಮ ಜಯಂತಿ ಆಚರಿಸಲು ಅನುದಾನ. ಸಂಶೋಧನಾ ವಿದ್ಯಾರ್ಥಿಗಳಿಗೆ ಸಂಪೂರ್ಣ ವೆಚ್ಚ ಭರಿಸುವುದು, ಪರಿಶಿಷ್ಟರು ಪ್ರಕಟಿಸುವ ಪುಸ್ತಕ, ಗ್ರಂಥ ಇತ್ಯಾದಿಗಳಿಗೆ ಧನಸಹಾಯ ನೀಡುವ ಕಾರ್ಯಕ್ರಮ ಜಾರಿ. ಇಂಥ ಅನೇಕ ಕಾರ್ಯಕ್ರಮಗಳು ಯಡಿಯೂರಪ್ಪನವರು ಮುಖ್ಯಮಂತ್ರಿಯಾಗಿದ್ದಾಗ ತಂದ ವಿಶೇಷ ಕಾರ್ಯಕ್ರಮಗಳು. ಈ ಕಾರ್ಯಕ್ರಮಗಳು ಹಿಂದಿನ ಸರ್ಕಾರಗಳ ಎಲ್ಲಾ ದಾಖಲೆಗಳನ್ನು ಮುರಿದಿವೆ. ಈ ಕಾರ್ಯಕ್ರಮಗಳು ಯಡಿಯೂರಪ್ಪನವರಿಗೆ ಪರಿಶಿಷ್ಟರ ಬಗ್ಗೆ ಇರುವ ಬದ್ಧತೆ, ಇಚ್ಛಾಶಕ್ತಿ, ದೂರ ದೃಷ್ಟಿಗೆ ಸಾಕ್ಷಿಯಾಗಿವೆ. ಈ ಕಾರ್ಯಕ್ರಮಗಳು ಪರಿಶಿಷ್ಟರ ಸ್ವಾಯಂ ಪುನಶ್ಚೇತನಕ್ಕೆ. ಈ ವರ್ಗದ ಆರ್ಥಿಕ ಸಬಲೀಕರಣಕ್ಕೆ ,ಈ ವರ್ಗವನ್ನು ಸಮಾಜದ ಮುಖ್ಯವಾಹಿನಿಗೆ ತರುವ ಉದ್ದೇಶಕ್ಕಾಗಿ ತಂದಹುವು ಹಾಗೂ ಡಾ. ಬಿ. ಆರ್. ಅಂಬೇಡ್ಕರ್‌ರವರ ಸಮಾನತೆ, ಬಸವಣ್ಣನವರ ಜಾತ್ಯಾತೀತ ಸಮಾಜ ನಿರ್ಮಾಣ, ಬುದ್ಧನ ಕರುಣೆ ಮತ್ತು ಕಣ್ಣೀರೊರೆಸುವ ಆದರ್ಶಗಳಿಗಾಗಿ ಪೂರಕವಾಗಿವೆ" ಎಂದಿದ್ದಾರೆ. (ಧಣಿವರಿಯದ ಧೀಮಂತ ಪುಟ ಸಂಖ್ಯೆ 373, 374) ಈ ಮಾತುಗಳು ಬಿ ಎಸ್ ಯಡಿಯೂರಪ್ಪನವರ ಒಳಗಿರುವ ಅಂಬೇಡ್ಕರ್, ಬಸವಣ್ಣ, ಬುದ್ಧರ ಜೀವನಾದರ್ಶಗಳ ಸಂಗಮವನ್ನು ಸೂಚಿಸುತ್ತದೆ.

ಬಿಎಸ್ ಯಡಿಯೂರಪ್ಪನವರು ನಿಜವಾದ ಸಾಮಾಜಿಕ ನ್ಯಾಯದ ಹರಿಕಾರರು. ನುಡಿದಂತೆ ನಡೆದ ನಿಜಶರಣರು. ವೀರಶೈವ ಲಿಂಗಾಯತರ ಭಿನ್ನತೆ ಹೋಗಲಾಡಿಸಿ, ಏಕತೆ ಸಾಧಿಸಿ ವೀರೇಂದ್ರ ಪಾಟೀಲರ ಬಳಿಕ ವೀರಶೈವ ಲಿಂಗಾಯತರ ಆತ್ಮಗೌರವವನ್ನು ಎತ್ತಿ ಹಿಡಿದವರು. ಇಂದು ಮತ್ತೆ ವೀರಶೈವ ಲಿಂಗಾಯತ ಎಂದು ಸಮಾಜವನ್ನು ಭಂಜಿಸುತ್ತಿರುವ ವಿಗ್ರಹ ಭಂಜಕ ಸಮಾಜ ಭಂಜಕ ಶಕ್ತಿಗಳು ಎಲ್ಲೆಲ್ಲೂ ಕುಣಿದಾಡುತ್ತಿರುವಾಗ ಬಿಎಸ್ ಯಡಿಯೂರಪ್ಪನವರ ರಾಜಕೀಯ ಜೀವನದ 50 ವರ್ಷಗಳ ಅಭಿಮಾನೋತ್ಸವ ಸಂದರ್ಭದಲ್ಲಿ ವೀರಶೈವ ಲಿಂಗಾಯತ ನಾಯಕರು, ಜನಸಾಮಾನ್ಯರು ಕಲಿಯಬೇಕಾದ ಕಲಿಸಬೇಕಾದ ಪಾಠಗಳೇನು?

ಬಿಎಸ್ ಯಡಿಯೂರಪ್ಪನವರು ಹಿಂದೂ ಸಮಾಜದ ಎಲ್ಲಾ ಜಾತಿ, ಮತ, ಪಂಥ, ಪ್ರದೇಶಗಳನ್ನು ಸಮಾನವಾಗಿ ಕಂಡು "ಸರ್ವಸ್ಪರ್ಶಿ– ಸರ್ವ ವ್ಯಾಪ್ತಿ –ಸರ್ವ ಹಿತೈಷಿ" ಬಜೆಟ್, ಆಡಳಿತ, ಸಂಘಟನೆ ಮೂಲಕ ದಕ್ಷಿಣ ಭಾರತದಲ್ಲಿ ಹಿಂದುತ್ವವನ್ನು ಜನಮಾನಸದಲ್ಲಿ ಬಿತ್ತಿ ಬೆಳೆದವರು. ಇಂದು ಮತ್ತೆ ಬ್ರಾಹ್ಮಣ– ಅಬ್ರಾಹ್ಮಣ; ಶೂದ್ರ–ದಲಿತ; ಎಡಗೈ– ಬಲಗೈ ಎಂದು ಸಮಾಜವನ್ನು ಭಂಜಿಸಲು ಜಾತಿವಾದಿಗಳು ಹಾಗೂ ಜಾತ್ಯಾತೀತರು ಕೂಡಿ ಪರಮ ಸ್ವಾರ್ಥಿಗಳಾಗುತ್ತಿರುವಾಗ, ನನ್ನದು ಎರಡು ಕಣ್ಣುಗಳು ಹೋದರೂ ಪರವಾಗಿಲ್ಲ. ನಿನ್ನದು ಒಂದು ಕಣ್ಣು ಹೋಗಲಿ ಎಂದ ಪಕ್ಷದ ಒಳಗೇ ಒಡಕು ಒಳ ಸಂಚುಗಳಲ್ಲಿ ನಾಯಕರುಗಳೇ ತೊಡಗಿಕೊಂಡಿರುವಾಗ ಬಿಎಸ್ ಯಡಿಯೂರಪ್ಪನವರ 50 ವರ್ಷಗಳ ರಾಜಕೀಯ ಜೀವನದಿಂದ ಯುವಕರು, ನಾಯಕರು, ಕಾರ್ಯ ಕರ್ತರು, ಜನಸಾಮಾನ್ಯರು ಕಲಿಯಬೇಕಾದ ಪಾಠಗಳೇನು?

ಹಿಂದೂ– ಮುಸ್ಲಿಂ– ಕ್ರಿಶ್ಚಿಯನ್ ಎಂಬ ಯಾವ ತಾರತಮ್ಯವೂ ಇಲ್ಲದಂತೆ ಬಿಎಸ್ ಯಡಿಯೂರಪ್ಪ ಅವರು ರಾಜ್ಯವನ್ನು ಮುನ್ನಡೆಸಿದರು. ಜಾತಿಗಲಭೆ, ಕೋಮು ಗಲಭೆ, ಭಯೋತ್ಪಾದನೆ ಇಲ್ಲದ ಸರ್ವ ಜನಾಂಗದ ಶಾಂತಿಯ ತೋಟವನ್ನಾಗಿ ಸರ್ವರಿಗೂ ಸಮಪಾಲು ಸರ್ವರಿಗೂ ಸಮಬಾಳು ನೀಡಿದ ಹಿರಿಯ ಚೇತನ ನನ್ನ ಜೀವನಾದರ್ಶ ಬಿಎಸ್ ಯಡಿಯೂರಪ್ಪ ಅವರು ನನ್ನ ಬಾಳಿನಲ್ಲಿ 1989ರಿಂದ ಇಂದಿನವರೆಗೂ ಬಲವಾಗಿದ್ದಾರೆ, ಬೆಳಕಾಗಿದ್ದಾರೆ. ಅವರಿಗೆ ಅವರ ರಾಜಕೀಯ ಜೀವನದ 50ನೇ ವರ್ಷದ ಅಭಿಮಾನೋತ್ಸವ ಸಂದರ್ಭದಲ್ಲಿ ಅದು ನನ್ನೂರಾದ ಚಿತ್ರದುರ್ಗದಲ್ಲಿ ನಡೆಯುತ್ತಿರುವ ಸಂದರ್ಭದಲ್ಲಿ ಆದರಣೀಯ ಬಿ.ಎಸ್. ಯಡಿಯೂರಪ್ಪನವರಿಗೆ ಅನಂತಾನಂದ ವಂದನೆಗಳನ್ನು ಅಭಿನಂದನೆಗಳನ್ನು ತುಂಬು ಹೃದಯದಿಂದ ಮನಸಾರೆ ಅರ್ಪಿಸುತ್ತೇನೆ. ಶಿಕಾರಿಪುರ ತಾಲ್ಲೂಕು ಒಂದು ಕರ್ಮ ಭೂಮಿ, ಪುಣ್ಯಭೂಮಿ, ಧರ್ಮಭೂಮಿ. ಅಲ್ಲಿ ಮಾಡುವ ಪ್ರತಿಯೊಂದು ಪುಣ್ಯದ ಕೆಲಸ ಸಾವಿರ ಫಲ ನೀಡುತ್ತದೆ ಎಂಬ ಶಾಸನದ ಮಾತು ಬಿ ಎಸ್ ವೈ ಜೀವನದಲ್ಲಿ ನಿಜವಾಗಿದೆ . ಪ್ರೀತಿ ಎಂದರೆ ಶಿಕಾರಿಪುರ. ಶಿಕಾರಿಪುರವೆಂದರೆ ಪ್ರೀತಿ ಎನ್ನುವಂತೆಯೇ, ಯಡಿಯೂರಪ್ಪ ಎಂದರೆ ಶಿಕಾರಿಪುರ. ಶಿಕಾರಿಪುರವೆಂದರೆ ಯಡಿಯೂರಪ್ಪ ಎನ್ನುವುದೂ ಅಷ್ಟೇ ಸತ್ಯ. ಅವರದು ಶಿವಪ್ರಜ್ಞೆ, ಬಸವ ಪ್ರಜ್ಞೆ, ಕಲ್ಯಾಣ ಪ್ರಜ್ಞೆ. ಜೀವ ಪ್ರೀತಿ, ಜೀವನ ಪ್ರೀತಿ, ಜಂಗಮ ಪ್ರೀತಿ. ಅಂಥ ಯಡಿಯೂರಪ್ಪನವರಿಗೆ ಮತ್ತೊಮ್ಮೆ ಶರಣು ಶರಣಾರ್ಥಿ.

ಕನ್ನಡ ವಿಭಾಗ,
ಶ್ರೀ ಡಿ. ದೇವರಾಜ ಅರಸು ಸ.ಪ್ರ.ದ. ಕಾಲೇಜು, ಹುಣಸೂರು



ಪ್ರಶ್ನೋತ್ತರ ರತ್ನಮಾಲಿಕೆ

◆ ವಿದ್ವಾನ್ ನರಸಿಂಹ ಭಟ್

ವಿದ್ವಾಂಸರನ್ನು ಆಕರ್ಷಿಸುವುದು ಯಾವುದು?

▶ ಒಳ್ಳೆಯ ಕವಿತೆ ಮತ್ತು ವಿದ್ಯೆಯೆಂಬ ಸ್ತ್ರೀ.

ಈ ಪ್ರಶ್ನೋತ್ತರದಲ್ಲಿ ನಾವು ಚಿಂತಿಸಬೇಕಾದ ವಿಷಯ ವಿದ್ವಾಂಸ ಎಂದರೆ ಯಾರು? ಒಳ್ಳೆಯ ಕವಿತೆ-ವಿದ್ಯೆ ಎಂದರೇನು ಎಂದು. ಯಾವನು ವಿದ್ಯೆಯನ್ನು ಉಳ್ಳವನೋ ಅವನು 'ವಿದ್ವಾನ್' ಎಂಬುದಾಗಿ ಕರೆಯುತ್ತಾರೆ. ಇಂದು ನಾವು ಯಾವ ಶಿಕ್ಷಣ ಅಥವಾ ಎಜುಕೇಶನ್ ಎಂಬುದಾಗಿ ಹೇಳುತ್ತೇವೋ ಅದನ್ನು ವಿದ್ಯೆ ಎಂಬುದಾಗಿ ಕರೆದು, ಅದನ್ನು ಉಳ್ಳವನು ವಿದ್ವಾನ್ ಎಂದು ಕರೆಯುವ ಅಭ್ಯಾಸ ಬಂದಿದೆ. ಆದರೆ ಯಾವುದು ಮುಕ್ತಿಗೆ ಸಾಧನವೋ ಅದನ್ನೇ ವಿದ್ಯೆ ಎಂಬುದಾಗಿ ಕರೆಯಬೇಕು. "ಸಾ ವಿದ್ಯಾ ಯಾ ವಿಮುಕ್ತಯೇ" ಎಂಬುದಾಗಿ ಉಪನಿಷತ್ತು ವಿದ್ಯೆಯ ವಿವರಣೆಯನ್ನು ಕೊಡುತ್ತದೆ. ಹಾಗಾಗಿ ಇಂತಹ ವಿದ್ಯೆ ಉಳ್ಳವನನ್ನು ವಿದ್ವಾನ್ ಎಂದು ಕರೆಯುವುದು ಸಾಧು. ಇಂತಹ ವಿದ್ವಾಂಸನಿಗೆ ಅತ್ಯಂತ ಪ್ರೀತಿಕರವಾದದ್ದು, ಆಕರ್ಷಕವಾಗಿದ್ದು ಯಾವುದು? ಎಂಬುದಕ್ಕೆ ಉತ್ತರವಾಗಿ, ಒಳ್ಳೆಯ ಕವಿತೆ ಅಥವಾ ವಿದ್ಯೆ ಎಂಬ ಸ್ತ್ರೀ ಎಂಬುದಾಗಿ ನೀಡಲಾಗಿದೆ. ವಿದ್ವಾಂಸನೇ ವಿದ್ಯೆಯ ಕಾರಣದಿಂದ ಆದವನು. ಆದ್ದರಿಂದ ಅವನು ವಿದ್ಯೆಯನ್ನು ತಾನೇ ಪ್ರೀತಿಸುತ್ತಾನೆ! ಅವನಿಗೆ ವಿದ್ಯೆ ತಾನೇ ಅತ್ಯಂತ ಆಕರ್ಷಕ ವಾಗುತ್ತದೆ!

ಒಳ್ಳೆಯ ಕವಿತೆ ಎಂದರೆ ತೋಚಿದ್ದನ್ನು, ಗೀಚಿದ್ದನ್ನು ಕವಿತೆ ಎಂದು ಕರೆಯಬಹುದೇ? ಶ್ರೀರಂಗ ಮಹಾಗುರುಗಳು ಹೇಳಿದಂತೆ "ಮಹಾಕವಿ ಎಂದರೆ ಮಹತ್ತಿನಿಂದ ಆರಂಭಿಸಿ ಮಹತ್ತತ್ತ್ವವನ್ನು ದಾಟಿದ ಪರಮಾತ್ಮನಲ್ಲಿ ತೆಗೆದುಕೊಂಡು ಹೋಗಿ ಯಾವನು ನಿಲ್ಲಿಸಿಸುವನೋ ಅವನು" ಎಂದು. 'ನಾನೃಷಿಃ ಕುರುತೇ ಕಾವ್ಯಂ' ಜ್ಞಾನಿಯಲ್ಲದವನು ಕಾವ್ಯವನ್ನು ಬರೆಯಲು ಸಾಧ್ಯವಿಲ್ಲ. ಅಂದರೆ ಮಹಾಕವಿಯಾದವನು ಮಾತ್ರ ಒಳ್ಳೆಯ ಕಾವ್ಯವನ್ನು ಬರೆಯಬಲ್ಲ. ಅಂತಹ ಕಾವ್ಯ ವಿದ್ವಾಂಸನಿಗಲ್ಲದೆ ಇನ್ನಾರಿಗೆ ಇಷ್ಟವಾದೀತು? ಹಾಗಾಗಿ ಅಂತಹ ಕಾವ್ಯವನ್ನು ತಿಳಿಯಲು ವಿದ್ವಾಂಸನು ಮಾತ್ರ ಇಷ್ಟಪಡುತ್ತಾನೆ. ಆದರೆ ಕವಿಯಿಂದ ಬರೆಯಲ್ಪಟ್ಟಿದ್ದಲ್ಲವೂ ಕಾವ್ಯವೇ. ಯಾರು ಮಹಾಕವಿಯಾಗಿ, ಆತ್ಮಜ್ಞಾನಿಯಾಗಿ ಈ ಸೃಷ್ಟಿಯ ಮರ್ಮವನ್ನು ಅರಿತು, ಅದನ್ನು ತನ್ನ ತಪೋಬಲದಿಂದ, ಜ್ಞಾನಬಲದಿಂದ, ಮೇಧಾಬಲದಿಂದ, ಶಬ್ದರೂಪವಾಗಿ ಹಾಗೆ ಹೊರತಂದರೆ ಅದನ್ನೇ ಕಾವ್ಯ ಎಂಬುದಾಗಿ ಕರೆಯಬೇಕು. ಆ ಕಾವ್ಯವು ಈ ಸೃಷ್ಟಿಯ ಮರ್ಮದ ಪುಸ್ತಕವಾಗಿರುತ್ತದೆ. ಅಂತಹ ಕಾವ್ಯವು ವಿದ್ವಾಂಸನಿಗಲ್ಲದೆ ಎಲ್ಲರೂ ಇಷ್ಟಪಡುವ ಸಾಹಿತ್ಯವಾಗುವುದು. ಕವಿಗಳು ಯಾರು ಎಂದು ಕವಿಗಳನ್ನು ಎಣಿಸುವಾಗ ವಾಲ್ಮೀಕಿ, ವ್ಯಾಸ, ಕಾಳಿದಾಸ ಇಂತಹ ಮೂರು ನಾಲ್ಕು ಕವಿಗಳನ್ನು ಮಾತ್ರ ಈ ಗುಂಪಿನಲ್ಲಿ ಹೆಸರಿಸಬಹುದು ಎಂದು ಒಬ್ಬ ಪ್ರಸಿದ್ಧಕವಿಯ ಮಾತು. ಅವರು ಬರೆದ ರಾಮಾಯಣ-ಮಹಾಭಾರತ ಇತ್ಯಾದಿ ಸಾಹಿತ್ಯಗಳು ಕಾವ್ಯ ಎಂಬುದಾಗಿ ಕರೆಯಲ್ಪಡುತ್ತವೆ. ಆದ್ದರಿಂದ ಇಂತಹ ಕಾವ್ಯಗಳು ಎಂದೆಂದೂ ಎಲ್ಲಾ ವಿದ್ವಾಂಸನಿಗೂ ಅತ್ಯಂತ ಆಕರ್ಷಕ. ಇಂತಹ ಕವಿತೆಯನ್ನು ವಿದ್ವಾಂಸನು ಇಷ್ಟಪಡುತ್ತಾನೆ ಎಂಬುದು ಈ ಪ್ರಶ್ನೋತ್ತರದ ತಾತ್ಪರ್ಯವಾಗಿದೆ.



ವ್ಯಾಸ ವೀಕ್ಷಿತ

◆ ಡಾ|| ಕೆ.ಎಸ್.ಕಣ್ಣನ್
ಆಧ್ಯಾತ್ಮ ಚಿಂತಕರು
ಅಷ್ಟಾಂಗಯೋಗ ವಿಜ್ಞಾನಮಂದಿರಂ



ಅಚ್ಚರಿಯ ತೇರಿಗೆ ಮೆರುಗಿತ್ತ ಗರುಡ

ಯಾವ ರಾಜರೂ ಆ ರಥವನ್ನು, ಅದರಲ್ಲಿ ಆಸೀನರಾಗಿರುವವರನ್ನು ಜಯಿಸುವುದು ಸಾಧ್ಯವೇ ಇರಲಿಲ್ಲ. ಹೀಗಿರುವಂತಹುದಾಗಿ ಆ ರಥವು ಕಂಗೊಳಿಸಿತು. ಎಂತಹ ರಥವದು! ಹಿಂದೆ ಆ ರಥದಲ್ಲಿ ಕುಳಿತೇ ಇಂದ್ರನೂ ವಿಷ್ಣುವೂ ಸಂಗ್ರಾಮದಲ್ಲಿ ತಾರಕಾಸುರನನ್ನು ಸಂಹಾರ ಮಾಡಿದುದು. ಅದೇ ರಥದ ಮೇಲೆ ಕುಳಿತೇ ಕೃಷ್ಣನೀಗ ಹೊರಟಿರುವುದು. ಸುವರ್ಣದ ಕಾಂತಿ ಆ ರಥಕ್ಕಿತ್ತು. ಕಿಂಕಿಣಿಗಳ ಜಾಲವನ್ನೇ ಅದು ಹೊಂದಿತ್ತು. ಮೋಡಗಳ ಗುಡುಗಿನ ನಾದವನ್ನೂ ಹೊಂದಿತ್ತು. ಶತ್ರುಘಾತಕವಾಗಿದ್ದ ಅದು ಜಯವನ್ನು ತಂದುಕೊಡುವಂತಹುದೂ ಆಗಿತ್ತು. ತೊಂಭತ್ತೊಂಭತ್ತು ದಾನವರನ್ನು ಇಂದ್ರನು ಸಂಹರಿಸಿದುದು ಆ ರಥದಲ್ಲಿ ಕುಳಿತು ಹೋಗಿದ್ದಾಗಲೇ. ಅಂತಹ ಅದ್ಭುತ ರಥವನ್ನು ಹೊಂದಿದ್ದರಿಂದಾಗಿ ಆ ಮೂವರು ಪುರುಷ ಶ್ರೇಷ್ಠರೂ ಪರಮಹರ್ಷಗೊಂಡರು.

ಮಹಾಬಾಹುವಾದ ಕೃಷ್ಣನು ಸಹೋದರರಿಬ್ಬರೊಡಗೂಡಿ ರಥದಲ್ಲಿ ಬರುತ್ತಿರುವುದನ್ನು ಕಂಡು ಮಗಧದೇಶದ ಪ್ರಜೆಗಳೆಲ್ಲರೂ ವಿಸ್ಮಿತರಾದರು. ದಿವ್ಯವಾದ ಹಯಗಳನ್ನು ಹೊಂದಿದ್ದ ಆ ರಥವು ವಾಯುವೇಗವುಳ್ಳದ್ದು. ಅಂತಹ ರಥವು ಈಗ ಕೃಷ್ಣನಿಂದ ಅಧಿಷ್ಠಿತವಾಗಿದ್ದು ಅಧಿಕವಾಗಿ ಕಂಗೊಳಿಸಿತು. ರಥದ ಮೇಲಿನ ಧ್ವಜವು ದೇವವಿಹಿತವಾಗಿದ್ದು, ಅದು ಒಂದು ಯೋಜನದಷ್ಟು ದೂರಕ್ಕೂ, ಎಂದರೆ ಸುಮಾರು ಎಂಟು ಮೈಲಿ ದೂರಕ್ಕೂ ಕಾಣಿಸುವುದಾಗಿದ್ದರೂ ಅದನ್ನು ರಥಕ್ಕೆ ಎಲ್ಲಿ ಸಿಕ್ಕಿಸಿರುವರೆಂಬುದೇ ಗೋಚರವಾಗುತ್ತಿರಲಿಲ್ಲ! ಅದು ಇಂದ್ರಾಯುಧದಂತೆ ಶೋಭಿಸುತ್ತಿತ್ತು.

ಆ ಸಮಯದಲ್ಲಿ ಕೃಷ್ಣನು ಗರುತ್ಮಂತನನ್ನು, ಎಂದರೆ ಗರುಡನನ್ನು ಸ್ಮರಿಸಿದನು. ಅದೇ ಕ್ಷಣಕ್ಕೇ ಆತನೂ ಅಲ್ಲಿಗೆ ಆಗಮಿಸಿದನು. ಮೇಲೆದ್ದ ಒಂದು ಚೈತ್ಯವೃಕ್ಷದ ಹಾಗೆ ಗರುಡನು ತೋರಿದನು. ಬಾಯ್ದೆರೆದು ಮಹಾನಾದವನ್ನು ಮಾಡುತ್ತಿದ್ದ ಹಾಗೂ ಧ್ವಜವನ್ನು ಆಶ್ರಯಿಸಿದ್ದ ಭೂತಗಳೊಂದಿಗೆ, ಸರ್ಪಭಕ್ಷಕನೆನಿಸಿದ ಗರುಡನು ಆ ಶ್ರೇಷ್ಠರಥದ ಮೇಲೆ ಕುಳಿತುಕೊಂಡನು. ಆಗ ಹೇಗೆ ಕಂಡಿತು ಆ ಧ್ವಜ? ಯಾವುದೇ ಪ್ರಾಣಿಗಳಿಗೆ ದಿಟ್ಟಿಸಿನೋಡಲಾಗದ ಹಾಗೆ ಅಧಿಕವಾದ ತೇಜಸ್ಸಿನಿಂದಾಗಿ ಕೂಡಿದ್ದಾಗಿ ಕಂಡಿತು. ಮಧ್ಯಾಹ್ನದ ಹೊತ್ತಿನಲ್ಲಿ ತನ್ನ ಸಹಸ್ರಕಿರಣಗಳಿಂದಲೂ ಕೂಡಿದ ಆದಿತ್ಯನು ಕಣ್ಣು ಕೋರೈಸುವಂತಿರುವನಲ್ಲವೇ? ಹಾಗೆ.

ಆ ಶ್ರೇಷ್ಠಧ್ವಜದ ಮತ್ತೊಂದು ಆಶ್ಚರ್ಯವೆಂದರೆ ಅದು ಮರಗಳಿಗೆ ಸಿಕ್ಕಿಹಾಕಿಕೊಳ್ಳುತ್ತಿರಲಿಲ್ಲ. ಶಸ್ತ್ರಗಳಿಂದ ಘಾಸಿಕೊಳ್ಳುತ್ತಿರಲಿಲ್ಲ. ಆ ದಿವ್ಯವಾದ ಧ್ವಜವು ಮನುಷ್ಯರಿಗೆ ಗೋಚರವಾಗಿರುತ್ತಿತ್ತು. ಮಳೆಯ ಹಾಗೆ ಶಬ್ದ ಮಾಡುತ್ತಿದ್ದ ಆ ದಿವ್ಯರಥದಲ್ಲಿ ಆಸೀನನಾಗಿ ಭೀಮಾರ್ಜುನರೊಡನೆ ಕೃಷ್ಣನು ಆ ಊರಿನಿಂದ ನಿರ್ಗಮಿಸಿದನು. ಇಂದ್ರನಿಂದ ವಸುವಿಗೂ ಆತನಿಂದ ಬೃಹದ್ರಥನಿಗೂ ಅಲ್ಲಿಂದ ಕ್ರಮಪ್ರಾಪ್ತವಾಗಿ ಜರಾಸಂಧನಿಗೂ ಬಂದ ರಥವದು. ಗಿರಿವ್ರಜದಿಂದ ಹೊರಹೊರಟು ಈಗ ಸಮತಟ್ಟಾದ ಎಡೆಗೆ ಕೃಷ್ಣನು ಬಂದು ಸೇರಿದನು. ಬಂಧನದಿಂದ ಬಿಡುಗಡೆಯನ್ನು ಹೊಂದಿದ ರಾಜರುಗಳು ಕೃಷ್ಣನನ್ನು ಅರ್ಚಿಸಿ ಹೀಗೆ ಸ್ತುತಿಸಿದರು.

ಮಹಾಬಾಹುವಾದ ಕೃಷ್ಣನೇ, ದೇವಕಿಗೆ ಆನಂದ ತಂದವನೇ, ಭೀಮಾರ್ಜುನ ಬಲದೊಂದಿಗೆ ಕೂಡಿರುವ ನೀನು ಧರ್ಮರಕ್ಷಣೆಯನ್ನು ಮಾಡುವೆಯೆಂಬುದರಲ್ಲಿ ಆಶ್ಚರ್ಯವೇ ಇಲ್ಲ. ದುಃಖವೆಂಬ ಕೆಸರಿನ ರಾಶಿಯೇ ಆಗಿದ್ದುದು ಜರಾಸಂಧವೆಂಬ ಮಡು. ಅದರೊಳಗೆ ಸಿಲುಕಿದ್ದೆವು ನಾವು ರಾಜರುಗಳು. ಅಂತಹ ನಮ್ಮಗಳ ಉದ್ಧಾರವನ್ನು ನೀನು ಈಗ ಎಸಗಿರುವೆ. ಬೆಟ್ಟವೆಂಬ ಭಯಂಕರವಾದ ಕೋಟೆಯೊಳಗೆ ಸಿಲುಕಿ ನಲುಗಿಹೋಗಿದ್ದ ನಮಗೆ, ಅದೃಷ್ಟವಶಾತ್ ಮೋಕ್ಷವನ್ನು ದಯಪಾಲಿಸಿರುವೆ, ಓ ವಿಷ್ಣುವೇ.

ನನ್ನ ಮುಂಜಿಯ ನಂತರದ ಪ್ರಕರಣಗಳು

ಪಂಚೆಯು ನನಗೆ ಅನೇಕ ಸಂಕಷ್ಟಗಳನ್ನು ತಂದೊಡ್ಡುತ್ತಿತ್ತು. ಮಾನ ಉಳಿಸಿಕೊಳ್ಳುವ ಸಲುವಾಗಿ ಬೆನ್ನನ್ನು ತಬಲವಾಗಿಸಿಕೊಳ್ಳುವ ಪರಿಸ್ಥಿತಿಗಳೂ ಹೆಚ್ಚುತ್ತಿದ್ದವು.

ವಕ್ರದೃಷ್ಟಿ

◆ ಎನ್. ರಾಮನಾಥ್
anakuramanath@gmail.com



ಕೋಳಿಯನ್ನು ಕೇಳಿ ಮಸಾಲೆ ಅರೆಯದಂತೆಯೇ ನನ್ನನ್ನೂ, ನನ್ನ ತಮ್ಮನನ್ನೂ ಕೇಳದೆಯೇ ನಮಗೆ ಮುಂಜಿ ಮಾಡುವುದೆಂದು ತೀರ್ಮಾನವಾಯಿತು. "ಬೀರುವಿನಲ್ಲಿ ತಾಳಿ ಇದೆ. ನಾಳೆ ಚಿನ್ನಮ್ಮನ ಮಗಳು ಗೌರಿಯ ಕತ್ತಿಗೆ ಅದನ್ನು ಕಟ್ಟು" ಎಂದು ಅಪ್ಪನು ಗದರುಭಾಷೆಯಲ್ಲಿ ನುಡಿದರೆ ಮಗನು 'ಬ್ಯಾಡ' ಎನ್ನಲಾಗದೆ, ಕುರಿಯಂತೆ 'ಬ್ಯಾ' ಎಂದು ಅಪ್ಪನಿಗೆ ಕೇಳಿಸದಂತೆ ಒದರಿ, ಮರುದಿನ ಹೆಣ್ಣಿನ ಕುತ್ತಿಗೆಗೆ ತಾಳಿ ಕಟ್ಟುತ್ತಿದ್ದ ಕಾಲದಲ್ಲಿ ಮುಂಜಿಗೆ ಹುಡುಗನ ಪರ್ಮಿಷನ್ ಕೇಳುವುದು ಊಹೆಗೂ ನಿಲುಕದ ಮಾತಾಗಿತ್ತು.

ಮುಂಜಿಯ ದಿನ ನಮಗೇನೂ ಬೇಜಾರಾಗಲಿಲ್ಲ ಬಿಡಿ. 'ವಟುವಿಗೆ ಎರಡು ಸಾವಿರ ವರಹಗಳು', 'ಐದು ಸಾವಿರ ವರಹಗಳು' ಎಂದೆಲ್ಲ ಪುರೋಹಿತರು ನುಡಿಯುತ್ತಿದ್ದಾಗ ನನಗೂ, ನನ್ನ ತಮ್ಮನಿಗೂ ಸ್ವರ್ಗಕ್ಕೆ ಮೂರೇಕೆ ಒಂದೇ ಗೇಣು! 'ಅಪ್ಪನಿಗೆ ಚಿಲ್ಲರೆ ನೂರೈವತ್ತು ರೂಪಾಯಿ ಸಂಬಳ. ನಮ್ಮ ಮೈಗೆ ದಾರ ಬೀಳುತ್ತಿದ್ದಂತೆಯೇ ಸಾವಿರಾರು ವರಹಗಳು' ಎಂದು ನಾನು ಬೀಗಿದೆ. ಬೀಗುತ್ತಲೇ ಪುರೋಹಿತರ ಪಕ್ಕದಲ್ಲಿ ಗುಡ್ಡೆಯಾಗಿ ಕಾಣಬರಬೇಕಾದ ವರಹಗಳ ಕಡೆಗೆ ಕಣ್ಣು ಹಾಯಿಸಿದೆ.

ಪುರೋಹಿತರ ಪಕ್ಕದಲ್ಲಿ ಯಾವುದೇ ಗುಡ್ಡವು ಕಾಣಲಿಲ್ಲ.

ಮತ್ತೊಬ್ಬ ಹಿರಿಯರು "ದೀನ್ನಿ ಚದುವಿಚ್ಚಂಡ"(ಇದನ್ನು ಓದಿಸಿಬಿಡಿ) ಎನ್ನುತ್ತಾ ಹಣವನ್ನು ಪುರೋಹಿತರಿಗೆ ನೀಡಿದರು. ಪುರೋಹಿತರು ಪಡೆದ ಹಣದತ್ತ ಕಣ್ಣು ಹಾಯಿಸಿ 'ಹತ್ತು ಸಾವಿರ ವರಹಗಳು' ಎಂದು ಘೋಷಿಸಿದರು. ಪುರೋಹಿತರ ಕೈಯಲ್ಲಿದ್ದುದು ಒಂದೇ ನೋಟು. ತಮ್ಮನತ್ತ ನೋಡಿದೆ.

"ಹತ್ತು ಸಾವಿರದ ಒಂದೇ ನೋಟು ಇದೆಯಾ?" ಎಂದು ಕೇಳಿದನವ. ಇರಬಹುದು ಎಂದುಕೊಂಡೆ. ಆ ಸಮಯಕ್ಕೆ ಸರಿಯಾಗಿ ಪುರೋಹಿತರ ಕೈಯಿಂದ ನೋಟು ಜಾರಿ, ಕೊಂಚ ಹಾರಿ, ನನ್ನ ಮುಂದೆಯೇ ಬಿದ್ದಿತು. ನೋಟನ್ನು ಕಾತುರದಿಂದ ಈಕ್ಷಿಸಿದೆ.

ಅದು ಹತ್ತರ ನೋಟಾಗಿತ್ತು.

ಪುರೋಹಿತರ oral scaleನಲ್ಲಿ ಒಂದು ರೂಪಾಯಿ ಒಂದು ಸಾವಿರ ವರಹಕ್ಕೆ ಸಮನಾಗಿತ್ತು!

ಮುಂಜಿ ಮುಗಿಯಿತು. ಆ ಸಮಯದಲ್ಲಿ ನನ್ನ ತಮ್ಮನಿಗೆ ಎಂಟು ವರ್ಷ, ನನಗೆ ಹನ್ನೊಂದು. ಮುಂಜಿ ಮುಗಿದು ಹಿರಿಯರೆಲ್ಲರೂ ಹರಟುತ್ತಾ ಕುಳಿತಿದ್ದಾಗ ಮುಂಜಿಮನೆಯ ಸುತ್ತಮುತ್ತ ಇದ್ದ ಬಂಡೆಗಳನ್ನು ಏರಲೆಂದು ಹೊರಟೆವು.

"ಹಸಿ ಮೈ ಇರುವವರು ಹಾಗೆಲ್ಲ ಎಲ್ಲೆಲ್ಲೋ ಅಲೆಯಬಾರದು" ಎಂಬ ಗುಡುಗುಧ್ವನಿ ಮುಂಜಿಮನೆಯಿಂದ ತೂರಿಬಂತು. ಮೈ ನೋಡಿಕೊಂಡೆ. ಹಿಂದಿನ ದಿನ ಎಷ್ಟು ಒಣಗಿತ್ತೋ ಅಷ್ಟೇ ಒಣಗಿತ್ತು. ಎಲ್ಲಿಯೂ ಹಸಿಹಸಿ ಎನಿಸಲಿಲ್ಲ. ಹಾಗೆಯೇ ನುಡಿದೆ.

"ಇನ್ನು ಹದಿನಾರು ದಿವಸ ನಿಮ್ಮದು ಹಸಿ ಮೈಯೇ" ಎಂದಿತು ಸುಗ್ರೀವಾಜ್ಞೆಯ ಕಂಠ. ಬಂಡೆಯಂತಹ ಕಟ್ಟಪ್ಪಣೆಗೆ 'ಬಂಡೆ ಡೈವಿಂಗ್' ಆಸೆಯು ಕಮರಿತು.

"ನೀನು ನಾಳೆಯಿಂದ ಮನೆಯಲ್ಲಿ ಪಂಚೆ ಉಡಬೇಕು" ಸುಗ್ರೀವಾಜ್ಞೆ ಗುಡುಗಿತು. ಆಜ್ಞೆಯೇನೋ ಸರಿ, ಆದರೆ ಉಡುವ ಪರಿ? ಉಟ್ಟು ಓಡಾಡುವ ಪರಿ? ನುಣುಪಾದ ಗಾಜಿನ ಮೇಲೆ ಸರ್ರನೆ ಸರಿಯುವ ನೀರಿನಂತೆಯೇ ನನ್ನ ಸೊಂಟವನ್ನು ಬಳಸಿದ ಪಂಚೆಯು ಜಾರಿ ಜಾರಿ ಹೋಗುತ್ತಿತ್ತು. "ಜಾರುತನದಲಿ ನೋಡೆ ಪಾಚಿ ಕಟ್ಟಿದ ಬಂಡೆ; ಬಿಗಿಯಾಗಿ ಕಟ್ಟಿದರೆ ಬಾಸುಂಡೆ ಗೆರೆಯು..." ಎಂಬ ಪರಿಸ್ಥಿತಿಯಾಗಿತ್ತು. ಇಂತಿಪ್ಪ ದಿನಗಳೊಳ್ "ಸುತ್ತಮುತ್ತಲ ಅಂಗಡಿಗಳಿಗೆ ಹೋಗಲು ಪಂಚೆಯೇ ಸಾಕು. ಚಡ್ಡಿ, ಪ್ಯಾಂಟುಗಳೆಲ್ಲ ಸಮಾರಂಭಗಳಿಗೆ ಹೋಗಲು ಬೇಕಾಗುತ್ತದೆ" ಎಂಬ ಆಜ್ಞೆ ಹೊರಟಿತು.

ಮರುದಿನ ಮೂರು ಕೆಜಿ ಸಕ್ಕರೆ, ದಂಟಿನ ಸೊಪ್ಪು, ಒಂದು ಲೀಟರ್ ಎಣ್ಣೆ ತರಲೆಂದು ಅಂಗಡಿಗೆ ಹೋದೆ. ಆಗೆಲ್ಲ ಅಂಗಡಿಯವರು ಕೋನಾಕಾರದಲ್ಲಿ ಕಾಗದವನ್ನು ಸುತ್ತಿ ಸಾಮಾನುಗಳನ್ನು ಕೋನದಲ್ಲಿ ತುಂಬಿ, ಕೋನದ ಬಾಯಿ ಮುಚ್ಚಿ, ಸುತ್ತಲೂ 'ದಾರಬಂಧ' ಮಾಡಿ ಕೊಡುತ್ತಿದ್ದರು. ಕೋನಾಕಾರದ ಸಕ್ಕರೆ ಪೊಟ್ಟಣವನ್ನು ಎದೆಗಾನಿಸಿಕೊಂಡು, ಒಂದು ಕೈಯಲ್ಲಿ ದಂಟಿನ ಸೊಪ್ಪನ್ನು ಹಿಡಿದು, ಇನ್ನೊಂದು ಕೈಯಲ್ಲಿ ಹಿಡಿದು, ಸರಿಯಾಗಿ ಒಂದೇ ಲೀಟರ್ ಹಿಡಿಯುವ ಎಣ್ಣೆಯ ಪಾತ್ರೆಯಿಂದ ತೊಟ್ಟು ಎಣ್ಣೆಯೂ ಸೋರದಂತೆ ಎಚ್ಚರ ವಹಿಸುತ್ತಾ, ಹೆಜ್ಜೆಯ ಮೇಲೆ ಹೆಜ್ಜೆ ಇಡುತ್ತಾ ಸಾಗಿದೆ. ಅದೇ ಸಮಯದಲ್ಲಿ ಪಂಚೆಯು ಟೊಂಕಸಂಗವನ್ನು ಒಲ್ಲೆನೆನ್ನುತ್ತಾ ದೂರ ಸರಿಯತೊಡಗಿತು. ದಂಟಿನಸೊಪ್ಪಿನ ಕೈಯಿಂದ ಹಿಡಿದರೆ ಸೊಪ್ಪು ಉಜ್ಜಿದಂತಾಗಿ ಪಂಚೆ ಹಸಿರಾಗುವುದು ನಿಶ್ಚಿತ. ಪಂಚೆ ಹಸಿರಾದರೆ ಅಪ್ಪನ ಕಣ್ಣು ಕೆಂಪಾಗುತ್ತಿದ್ದುದೂ ನಿಶ್ಚಿತ. ಜೊತೆಗೆ ಹಾಗೆ ವಾಲಿದಾಗ ಸಕ್ಕರೆಯ ಪೊಟ್ಟಣವು ಎದೆಯಿಂದ ದೂರವಾಗಿ ರಸ್ತೆಯ ಟಾರಿಗೆ ಹತ್ತಿರವಾಗುವ ಸಾಧ್ಯತೆಯೂ ಇತ್ತು. ಬಲಗೈಯನ್ನು ಬಳಸೋಣವೆಂದರೆ ಸರ್ವಂ ತೈಲಮಯಂ ವಸ್ತ್ರಂ ಆಗುವ ಸಾಧ್ಯತೆಯಿತ್ತು. ಅತ್ತ ಎಣ್ಣೆಕಲೆ, ಇತ್ತ ಸೊಪ್ಪಿನಕಲೆ ಎಂಬ ಪರಿಸ್ಥಿತಿ! ಎರಡೂ ಕೈ ಬಳಸದೆ ನಿಧಾನ ಮಾಡಿದರೆ ಖಂಡಿತವಾಗಿ involuntary ವಸ್ತ್ರಾಪಹರಣ!

ದಾರಿಯ ಪಕ್ಕದಲ್ಲಿ ಒಂದು ಪುಟ್ಟ ಕಟ್ಟೆ ಕಂಡಿತು. ಕಟ್ಟೆಯ ಮೇಲೆ ಎಲ್ಲ ಸಾಮಾನುಗಳನ್ನು ಇರಿಸಿ ಪಂಚೆಯನ್ನು ಭದ್ರಪಡಿಸಿಕೊಂಡು, 'ಬೇಕಾದ್ದಾಗಲಿ, ಒಂದೊಂದನ್ನೇ ಒಯ್ಯುವೆ' ಎಂದು ನಿರ್ಧರಿಸಿ ಮೊದಲಿಗೆ ಎಣ್ಣೆಯನ್ನು ಒಯ್ದು ಮನೆಗೆ ತಲುಪಿಸಿ, ಸಕ್ಕರೆ, ಸೊಪ್ಪುಗಳನ್ನು ತರಲೆಂದು ಹಿಂತಿರುಗಿದೆ.

ಆಗ ಸ್ವಾತಂತ್ರ್ಯ ಬಂದ ಹೊಸತು. ಜನಗಳಿಗೆ ಹೇಗೋ ಏನೋ, ಆದರೆ ಹಸುಗಳಿಗಂತೂ ಪೂರ್ಣ ಸ್ವಾತಂತ್ರ್ಯವಿತ್ತು. ಹಾಗೆ ಇಂಡಿಪೆಂಡೆನ್ಸ್ ಆಚರಿಸುತ್ತಿದ್ದ ಹಸುವೊಂದರ ಕಣ್ಣಿಗೆ ಈ 'ಅನಾಥ ಸೊಪ್ಪು' ಕಣ್ಣಿಗೆ ಬಿದ್ದು, ನಾನು ಕಟ್ಟೆಯನ್ನು ತಲುಪುವ ಹೊತ್ತಿಗೆ ಹಸುವಿನ ಸ್ನ್ಯಾಕ್ಸ್ ಮುಗಿದಿತ್ತು. ಅಷ್ಟೇ ಸ್ವತಂತ್ರವಾಗಿ ಓಡಾಡುತ್ತಿದ್ದ ಕೆಂಪು ಇರುವೆಗಳು ಸಕ್ಕರೆಯ ಪೊಟ್ಟಣವನ್ನು ಮುತ್ತಿ ಹಿಡಿದಿದ್ದವು. ಹಸುವು ತಿನ್ನುವಾಗ ಬಾಯಿಯಿಂದ ಉದುರಿದ್ದ ಕೆಲವು ಎಲೆಗಳನ್ನು ಪುಟ್ಟ ಗೊಂಚಲಾಗಿಸಿ ಇರುವೆಗಳನ್ನು ಪೊಟ್ಟಣದ ಹೊರಮೈಯಿಂದ ಓಡಿಸಿ ಪೊಟ್ಟಣವನ್ನು ಹೊತ್ತು ಮನೆ ಸೇರುವಷ್ಟರಲ್ಲಿ ಪೊಟ್ಟಣಸಾಮ್ರಾಜ್ಯದ ಒಳಗೆ ಸೇರಿದ್ದ ಇರುವೆಗಳು ತಮ್ಮ ಸಂಬಂಧಿಕರನ್ನು ಹೊರಗಟ್ಟಿದ ನನ್ನ ಕೈಯ ಮೇಲೆ ದಾಳಿ ಮಾಡಿ ಅಲ್ಲಲ್ಲಿ ದದ್ದೆ ಎಬ್ಬಿಸಿದ್ದವು. ಸೊಪ್ಪನ್ನು ಗೋಮಾತೆಗೆ ಅರ್ಪಿಸಿದ್ದಕ್ಕೂ, ಬಿಳಿ ಸಕ್ಕರೆಗೆ ಕೆಂಪಿರುವೆಯನ್ನು ಮಿಶ್ರಣಗೊಳಿಸಿ ತಂದುದಕ್ಕೂ ನನಗೆ ಅಷ್ಟೋತ್ತರ ನಾಮಾವಳಿಯೂ, ವಿಶೇಷ ಮಂಗಳಾರತಿಯೂ ದೊರಕಿದ್ದಲ್ಲದೆ ಕೊಂಚ ಸಮಯ ನನ್ನ ಬೆನ್ನು ಅಪ್ಪನ ತಬಲಾ ಆಗಿಯೂ ಪರಿವರ್ತನೆಗೊಂಡಿತ್ತು.

"ಪ್ಯಾಂಟ್ ಹಾಕ್ಕೊಂಡು ಹೋಗಿದ್ದಿದ್ರೆ ಸೊಪ್ಪನ್ನ ಜೇಬಿನಿಂದ ಕ್ಯಾಂಟಿಲಿವರ್ ತರಹ ಹೊರಕ್ಕೆ ಸಿಕ್ಕಿಸಿಕೊಂಡು, ಕೋನಾಕಾರವನ್ನ ಇನ್ನೊಂದು ಜೇಬಿನಿಂದ ಕ್ಯಾಂಟಿಲಿವರ್ ಮಾಡಿಸಿ, ಒಂದು ಕೈಯಲ್ಲಿ ಎಣ್ಣೆಪಾತ್ರೆ ಹಿಡಿದು, ಇನ್ನೊಂದು ಕೈಯಲ್ಲಿ ನಾನು ಗುನುಗುವ ಹಾಡಿಗೆ ತಕ್ಕ ಅಭಿನಯವನ್ನು ಮಾಡುತ್ತಾ ಬರಬಹುದಾಗಿತ್ತು. ಎಲ್ಲಾ ಪಂಚೆಯದೇ ತಪ್ಪು ಅಮ್ಮ" ಎಂದೆ. ಪಾಪ! ಅಪ್ಪನೆಂಬ ಹೈಕಮಾಂಡ್ ಮುಂದೆ ಅಮ್ಮನೆಂಬ ರಾಷ್ಟ್ರಪತಿಯ ಮಾತು ಏನೇನೂ ನಡೆಯುತ್ತಿರಲಿಲ್ಲ.

ಪಂಚೆಯು ನನಗೆ ಇಂತಹ ಅನೇಕ ಸಂಕಷ್ಟಗಳನ್ನು ತಂದೊಡ್ಡುತ್ತಿತ್ತು. ಮಾನ ಉಳಿಸಿಕೊಳ್ಳುವ ಸಲುವಾಗಿ ಬೆನ್ನನ್ನು ತಬಲವಾಗಿಸಿಕೊಳ್ಳುವ ಪರಿಸ್ಥಿತಿಗಳೂ ಹೆಚ್ಚುತ್ತಿದ್ದವು. ಆದರೆ ಇದಕ್ಕಿಂತಲೂ ಕಷ್ಟದ ಪರಿಸ್ಥಿತಿಯೊಂದು ಧುತ್ತನೆ ಎದುರಾಯಿತು.

ಅವರೆಗೆ ಬಳಸುತ್ತಿದ್ದ ಒಳಚಡ್ಡಿಯನ್ನು ಮುಂಜಿಯಾದ ನಂತರ ಬಳಸುವಂತಿಲ್ಲವೆಂದೂ, ಲಂಗೋಟಿಯನ್ನೇ ಬಳಸಬೇಕೆಂದೂ ಸುಗ್ರೀವಾಜ್ಞೆ ಹೊರಟಿತು. ನಾನು 'ರಾಮನನ್ನು ಕಾಡಿಗಟ್ಟಬೇಡವೇ...' ಎಂದು ಕೈಕೇಯಿಯ ಮುಂದೆ ರೋದಿಸಿದ ದಶರಥನ ಹತ್ತು ಪಟ್ಟು ರೋದಿಸುತ್ತಾ 'ಲಂಗೋಟಿ ಕಡ್ಡಾಯ ಎನ್ನಬೇಡಿ' ಎಂದು ಗೋಗರೆದೆ. ದಶರಥನ ಪರಿಸ್ಥಿತಿಯೇ ನನಗೂ ಆಯಿತು. ಅಂತೂ ಅಂದಿನಿಂದ ಅಪ್ಪನ ಹಳೆಯ ಪಂಚೆಗಳು 'ರೀಸೈಕಲ್' ಆಗಿ ಲಂಗೋಟಿಗಳಾಗಿ ಹಿತ್ತಲಿನ ಕಂಬಿಗಳ ಮೇಲೆ ರಾರಾಜಿಸಿದವು.

ಅಂದು ಶಾಲೆಗೆ ಹೋಗುವ ಸಮಯ ಮೀರಿತ್ತು. ದಿನವೂ ಉಡುದಾರಕ್ಕೆ ಸಿಕ್ಕಿಸಿಕೊಂಡ ಲಂಗೋಟಿಯ ಚುಂಗು ಹೊರಕಾಣದಂತೆ ಎಚ್ಚರ ವಹಿಸುತ್ತಿದ್ದ ನಾನು ಗಡಿಬಿಡಿಯಲ್ಲಿ ಬೆನ್ನುಭಾಗದಲ್ಲಿ ಚಡ್ಡಿಯಿಂದ ಲಂಗೋಟಿಯು ಹೊರಗೆ ಇಣುಕುವ ರೀತಿಯಲ್ಲಿ ಧರಿಸಿ ಹೊರಟುಬಿಟ್ಟೆ. ತರಗತಿಯಲ್ಲಿ ಪಾಠ ಶುರುವಾಯಿತು. ಒಂದು ಪೀರಿಯಡ್ ಮುಗಿಯಿತು. ಎರಡನೆಯ ಪೀರಿಯಡ್‌ನ ಮೇಷ್ಟ್ರು ಬರುವಷ್ಟರಲ್ಲಿ ನನ್ನ ಹಿಂದಿನ ಬೆಂಚಿನಲ್ಲಿ ಕುಳಿತಿದ್ದ ಶೇಷಗಿರಿಗೆ ಲಂಗೋಟಿಯು ಕಂಡುಬಿಟ್ಟಿತು. ಛಕ್ಕನೆ ಮುಂಬಾಗಿ ಲಂಗೋಟಿಯನ್ನು ಎಳೆದ. ಅವನ ಕೈಯನ್ನು ಬಿಡಿಸಲೆಂದು ನಾನು ಎದ್ದೆ. ಕೂಡಲೆ ಅವನ ಎಳೆತದ ರಭಸಕ್ಕೆ ಪೂರ್ಣ ಲಂಗೋಟಿ ಅವನ ಕೈ ಸೇರಿತು. ದೊಡ್ಡ ದೊಡ್ಡ ಪಂದ್ಯಗಳನ್ನು ಗೆದ್ದವರು ಟ್ರೋಫಿಯನ್ನು ಹಿಡಿದು ಕುಪ್ಪಳಿಸುತ್ತಾ ಸಾಗುವ ರೀತಿಯಲ್ಲಿಯೇ ಶೇಷಗಿರಿ 'ಲಂಗೋಟಿ!' 'ಲಂಗೋಟಿ!' ಎಂದರಚುತ್ತಾ, ಅದನ್ನು ಸೂರಿಗೆ ಹಾರಿಸಿ ಹಿಡಿಯುತ್ತಾ, ಡೆಸ್ಕಿನಿಂದ ಡೆಸ್ಕಿಗೆ ಹಾರತೊಡಗಿದ. ಮಿಕ್ಕ ಹುಡುಗರೂ ಬೆಲೂನನ್ನು ಹಿಡಿಯಲು ಧಾವಿಸುವ ಮಕ್ಕಳಂತೆ ಲಂಗೋಟಿಯ ಹಿಂದೆ ಬಿದ್ದರು. 'ಕೊಡ್ರೋ... ಲೇ... ಕೊಡ್ರೋ...' ಎಂದು ಅರಚುತ್ತಾ ಲಂಗೋಟಿಯನ್ನು ನನ್ನ ಕೈಗೆ ತೆಗೆದುಕೊಳ್ಳುವಷ್ಟರಲ್ಲಿ ಅದು ಡ್ರೈಕ್ಲೀನ್ ಆಗುವುದಕ್ಕೆ ಲಾಯಕ್ಕಾದಷ್ಟು ಕೊಳೆ, ಕರೆ ಆಗಿತ್ತು.

'ಲಂಗೋಟಿ ಬಹಳ ಒಳ್ಳೆಯದಣ್ಣ' ಎಂದು ದಾಸರೇನೋ ಹೇಳಿರಬಹುದು. ಆದರೆ ಆ ತರಗತಿಯಲ್ಲಿ ನನಗೆ ಅದು ಅಷ್ಟುದ್ದದ ಪಟ್ಟೆಯಾಕಾರದ ವಿಲನ್ ಆಗಿ ಕಂಡುದಂತೂ ಸತ್ಯಸ್ಯ ಸತ್ಯ.

ಉತ್ತರ-ದಕ್ಷಿಣ ವಿಭಜನೆ ಸೃಷ್ಟಿ ಅಪಾಯಕಾರಿ

▶ ರಾಮ್ ಮಾಧವ್





ದಕ್ಷಿಣ ಮತ್ತು ಉತ್ತರ ಭಾರತದ ಮಧ್ಯೆ ರಾಜಕೀಯ ವಿಭಜನೆ ಸೃಷ್ಟಿಸುವ ವಿರೋಧ ಪಕ್ಷಗಳ ಪ್ರಯತ್ನವು ಅತ್ಯಂತ ಅಪಾಯಕಾರಿಯಾಗಿದೆ. ಇದು ದೇಶದ ಏಕತೆಗೇ ಕುತ್ತು ತರಬಲ್ಲುದು.

ಮಹಿಳೆಯರಿಗೆ ಲೋಕಸಭೆಯಲ್ಲಿ ಮತ್ತು ರಾಜ್ಯ ವಿಧಾನಸಭೆಗಳಲ್ಲಿ ಶೇ. 33ರಷ್ಟು ಮೀಸಲಾತಿಗೆ ಅವಕಾಶ ಕಲ್ಪಿಸುವ ಮಸೂದೆಯನ್ನು ಸೋಲಿಸುವ ಮೂಲಕ ವಿರೋಧ ಪಕ್ಷಗಳು ಕೇವಲ ಮಹಿಳೆಯರಿಗಷ್ಟೇ ಅನ್ಯಾಯ ಮಾಡಿರುವುದಲ್ಲ, ಅದರ ಜತೆಗೇ ದಕ್ಷಿಣ ಮತ್ತು ಈಶಾನ್ಯದ ಹಲವಾರು ರಾಜ್ಯಗಳಿಗೂ ಅನ್ಯಾಯವೆಸಗಿವೆ. ಈ ಮಹಿಳಾ ಮೀಸಲಾತಿಗೆ ಅವಕಾಶ ಕಲ್ಪಿಸುವ 131ನೇ ಸಂವಿಧಾನ ತಿದ್ದುಪಡಿ ಮಸೂದೆಯು 2026ರ ಜನಗಣತಿಗಾಗಿ ಕಾಯದೆ, 2011ರ ಜನಗಣತಿಯ ಆಧಾರದಲ್ಲೇ ಕ್ಷೇತ್ರ ಪುನರ್ವಿಂಗಡಣೆ ಮಾಡುವ ಮತ್ತು ಅದಕ್ಕೆ ಪೂರಕವಾಗಿ ಮಹಿಳೆಯರಿಗೆ ಮೀಸಲಾತಿ ಕಲ್ಪಿಸುವ ಉದ್ದೇಶ ಹೊಂದಿತ್ತು.

ಯಾವನೇ ವಿವೇಕಯುತ ರಾಜಕೀಯ ಮುಖಂಡ ಇದನ್ನು ಸ್ವಾಗತಿಸಬೇಕಿತ್ತು. ಇದು ಆಡಳಿತ ಪಕ್ಷದ ದೊಡ್ಡ ಪ್ರಮಾದವೆಂದು ಪರಿಗಣಿಸಿ ಅದರ ಲಾಭ ಪಡೆಯಲು ಪ್ರಯತ್ನಿಸಬೇಕಿತ್ತು. ಏಕೆಂದರೆ ಹೊಸ ಜನಗಣತಿ ಮುಕ್ತಾಯಗೊಂಡ ಬಳಿಕ ದೇಶದ ಜನಸಂಖ್ಯಾ ಸ್ವರೂಪವೇ ಭಾರಿ ಬದಲಾವಣೆ ಕಾಣಲಿದೆ. ಕೆಲವು ರಾಜ್ಯಗಳು ಕಡಿಮೆ ಜನಸಂಖ್ಯೆ ದಾಖಲಿಸಿದರೆ ಇನ್ನು ಕೆಲವು ರಾಜ್ಯಗಳು ಅಧಿಕ ಜನಸಂಖ್ಯೆ ದಾಖಲಿಸಲಿವೆ. ಮುಖ್ಯವಾಗಿ ದಕ್ಷಿಣ ಭಾರತ ಮತ್ತು ಪೂರ್ವ ಭಾರತದ ರಾಜ್ಯಗಳಲ್ಲಿ ಜನಸಂಖ್ಯೆಯು ಕಡಿಮೆಯಾಗುವ ಸಾಧ್ಯತೆಗಳಿವೆ. ಏಕೆಂದರೆ ಈ ರಾಜ್ಯಗಳಲ್ಲಿ ಕುಟುಂಬ ಯೋಜನೆಯನ್ನು ಪರಿಣಾಮಕಾರಿಯಾಗಿ ಅನುಸರಿಸಲಾಗುತ್ತಿದೆ. ಕೇರಳದಲ್ಲಂತೂ ಬಹಳಷ್ಟು ಮಂದಿ ವಿದೇಶಗಳಲ್ಲಿ ನೆಲೆಸಿದ್ದು, ಅದು ಅಲ್ಲಿನ ಜನಸಂಖ್ಯೆಯ ಮೇಲೆ ಪರಿಣಾಮ ಬೀರಲಿದೆ. ಇದೇವೇಳೆ ಹಿಂದಿ ಭಾಷಿಕ ರಾಜ್ಯಗಳಲ್ಲಿ ಜನಸಂಖ್ಯೆ ಏರುಗತಿ ದಾಖಲಿಸಬಹುದು.

ಈಗಿನ ಜನಗಣತಿ ಪ್ರಕಾರವೇ ಕ್ಷೇತ್ರ ಪುನರ್ವಿಂಗಡಣೆ ನಡೆಯುತ್ತಿದ್ದರೆ ದಕ್ಷಿಣ ಮತ್ತು ಪೂರ್ವ ಭಾರತದ ಏಳು ರಾಜ್ಯಗಳು ಒಟ್ಟು 35 ಸ್ಥಾನಗಳನ್ನು ಕಳೆದುಕೊಳ್ಳುವ ಸಾಧ್ಯತೆ ಇತ್ತು. (ಆಂಧ್ರಪ್ರದೇಶ 5, ತೆಲಂಗಾಣ 3, ತಮಿಳ್ನಾಡು 10, ಕರ್ನಾಟಕ 2, ಕೇರಳ 7, ಒಡಿಸ್ಸಾ 4 ಮತ್ತು ಪ.ಬಂಗಾಳ 4 ಸ್ಥಾನಗಳನ್ನು ಕಳಕೊಳ್ಳುತ್ತಿದ್ದವು). ಇದಕ್ಕೆ ವಿರುದ್ಧವಾಗಿ ಬಿಜೆಪಿ ಪ್ರಾಬಲ್ಯವಿರುವ ಹಿಂದಿ ರಾಜ್ಯಗಳಲ್ಲಿ 34 ಸ್ಥಾನಗಳು ಹೆಚ್ಚಾಗುತ್ತಿದ್ದವು. (ಉ.ಪ್ರದೇಶ 12, ಬಿಹಾರ 10, ಮಧ್ಯಪ್ರದೇಶ 5, ರಾಜಸ್ಥಾನ 7).

ಕೇಂದ್ರದ ಆಡಳಿತ ಪಕ್ಷವಾದ ಬಿಜೆಪಿ ತನ್ನ ಚುನಾವಣಾ ಲಾಭವನ್ನೇ ಗಮನದಲ್ಲಿಟ್ಟುಕೊಂಡಿದ್ದರೆ ಅದು ಕ್ಷೇತ್ರ ಪುನರ್ವಿಂಗಡಣೆಗೆ ಈಗಿನ ಜನಗಣತಿ ಮುಗಿಯುವ ತನಕ ಕಾಯುತ್ತಿತ್ತು.ಅದರಿಂದ ಬಿಜೆಪಿಗೆ ಹೆಚ್ಚು ಲಾಭವಾಗುತ್ತಿತ್ತು. ಆದರೆ ಪ್ರಧಾನಿ ನರೇಂದ್ರ ಮೋದಿಯವರು 2011ರ ಜನಗಣತಿಯ ಆಧಾರದಲ್ಲೇ ಕ್ಷೇತ್ರ ಪುನರ್ವಿಂಗಡಣೆ ಮಾಡುವ ಪ್ರಸ್ತಾಪ ಮುಂದಿಟ್ಟರು. ಇದರಿಂದ ಈಗಿರುವ ಕ್ಷೇತ್ರಗಳ ಯಥಾಸ್ಥಿತಿ ಮುಂದುವರಿಯುವ ಸಾಧ್ಯತೆಯೂ ಇತ್ತು. ಯಾವುದೇ ರಾಜ್ಯಕ್ಕೆ ಅನ್ಯಾಯವಾಗದಂತೆ ಅನುಪಾತದ ಆಧಾರದಲ್ಲಿ ಅವುಗಳ ಲೋಕಸಭಾ ಸ್ಥಾನಗಳಲ್ಲಿ ಗಮನಾರ್ಹ ಏರಿಕೆ ಮಾಡುವ ಆಶ್ವಾಸನೆಯನ್ನೂ ಮೋದಿಯವರು ನೀಡಿದ್ದರು. ಅದರರ್ಥವೆಂದರೆ ದಕ್ಷಿಣ ಮತ್ತು ಪೂರ್ವ ಭಾರತದ ರಾಜ್ಯಗಳು ಉತ್ತರದ ರಾಜ್ಯಗಳ ಕ್ಷೇತ್ರಗಳಿಗೆ ಸಮಾನ ಅನುಪಾತದಲ್ಲಿ ಹೆಚ್ಚು ಸ್ಥಾನಗಳನ್ನು ಪಡೆಯುತ್ತಿದ್ದವು.

ಆದರೆ ಈ ತಿದ್ದುಪಡಿ ಮಸೂದೆಯನ್ನು ತಿರಸ್ಕರಿಸುವ ಮೂಲಕ ವಿರೋಧ ಪಕ್ಷಗಳ ನಾಯಕತ್ವವು ತನ್ನ ಅಪ್ರಬುದ್ಧತೆಯನ್ನು ಹಾಗೂ ದೂರದೃಷ್ಟಿರಾಹಿತ್ಯವನ್ನು ಪ್ರದರ್ಶಿಸಿತು.

ನೂತನ ಕ್ಷೇತ್ರ ಪುನರ್ವಿಂಗಡನೆ ಸೂತ್ರವು ದಕ್ಷಿಣ ಭಾರತಕ್ಕೆ ಅನ್ಯಾಯ ಮಾಡುತ್ತದೆ ಎಂದು ಸುಳ್ಳು ಪುಕಾರು ಹಬ್ಬಿಸಲಾಯಿತು. ದಕ್ಷಿಣ ಭಾರತ ಮತ್ತು ಉತ್ತರ ಭಾರತದ ನಡುವಿನ ಲೋಕಸಭಾ ಸ್ಥಾನಗಳ ಸಂಖ್ಯೆಯಲ್ಲಿ ದೊಡ್ಡ ಅಂತರ ಉಂಟಾಗಲಿದೆ ಎಂದು ಅಪಪ್ರಚಾರ ಮಾಡಲಾಯಿತು. ಇದು ನಿಜಕ್ಕೂ ನಿರಾಧಾರಿತ ಹೇಳಿಕೆ. ನಮ್ಮ ದೇಶದಲ್ಲಿ ದಕ್ಷಿಣ ಭಾರತ ಮತ್ತು ಉತ್ತರ ಭಾರತವೆಂಬ ಕಾಲ್ಪನಿಕ ವಿಭಜನೆ ಸೃಷ್ಟಿಸುವುದೇ ತಪ್ಪು. ಉತ್ತರದವರೆಲ್ಲ ಬಿಜೆಪಿ ಬೆಂಬಲಿಗರು ಎಂದು ಬಿಂಬಿಸುವುದೂ ತಪ್ಪು. ದಕ್ಷಿಣ ಭಾರತದಲ್ಲಿ ಕೂಡಾ ಬಿಜೆಪಿ ಬಲಿಷ್ಠ ಅಸ್ತಿತ್ವ ಹೊಂದಿದೆ. ಆಂಧ್ರಪ್ರದೇಶ ಮತ್ತು ಕರ್ನಾಟಕದಲ್ಲಿ ಬಿಜೆಪಿ ಬಲಿಷ್ಠವಾಗಿದೆ. ಇದೇವೇಳೆ ಉತ್ತರ ಭಾರತದಲ್ಲಿ ವಿಪಕ್ಷ ಆಡಳಿತದ ರಾಜ್ಯಗಳೂ ಇವೆ. ಜಮ್ಮು-ಕಾಶ್ಮೀರ, ಪಂಜಾಬ್ ಮತ್ತು ಹಿಮಾಚಲಗಳಲ್ಲಿ ಬಿಜೆಪಿಯೇತರ ಸರಕಾರಗಳಿವೆ.

ದಕ್ಷಿಣ ಮತ್ತು ಉತ್ತರ ಭಾರತದ ಮಧ್ಯೆ ರಾಜಕೀಯ ವಿಭಜನೆ ಸೃಷ್ಟಿಸುವ ವಿರೋಧ ಪಕ್ಷಗಳ ಪ್ರಯತ್ನವು ಅತ್ಯಂತ ಅಪಾಯಕಾರಿಯಾಗಿದೆ. ಇದು ದೇಶದ ಏಕತೆಗೇ ಕುತ್ತು ತರಬಲ್ಲುದು. ಕಾಂಗ್ರೆಸ್, ಡಿಎಂಕೆ ಮತ್ತು ಎಡಪಕ್ಷಗಳು ಇಂತಹ ಅಪಪ್ರಚಾರದಲ್ಲಿ ಹೆಚ್ಚು ನಿರತವಾಗಿವೆ. ಹಾಗೆಂದು ಎಲ್ಲಾ ವಿಪಕ್ಷಗಳು ಇಂತಹ ಭಾವನಾತ್ಮಕ ಅಪಪ್ರಚಾರಕ್ಕೆ ಬಲಿಯಾಗಿಲ್ಲ. ಆಂಧ್ರಪ್ರದೇಶದ ಮೂರು ಪ್ರಮುಖ ಪಕ್ಷಗಳಾದ ತೆಲುಗುದೇಶಂ, ವೈಎಸ್‌ಆರ್ ಕಾಂಗ್ರೆಸ್ ಮತ್ತು ಜನಸೇನಾ ಪಕ್ಷಗಳು ವಿಪಕ್ಷಗಳ ವಾದವನ್ನು ತಿರಸ್ಕರಿಸಿವೆ. ಅವು ತಿದ್ದುಪಡಿಯ ಪರವಾಗಿ ಮತ ಚಲಾಯಿಸಿದ್ದವು.

ಕೇಂದ್ರ ಸರಕಾರವು ಇದೀಗ ಎಚ್ಚರಿಕೆಯಿಂದ ಮುನ್ನಡೆಯಬೇಕು. ದ.ಭಾರತದ ರಾಜ್ಯಗಳಿಗೆ ಕೇಂದ್ರದಿಂದ ಅನ್ಯಾಯವಾಗುತ್ತಿದೆ ಎಂಬ ಕಲ್ಪನೆಯನ್ನು ಬಿತ್ತಲು ವಿರೋಧ ಪಕ್ಷಗಳು ಯತ್ನಿಸುತ್ತಿವೆ. ಇಂತಹ ಪ್ರಯತ್ನವು ಅಪಾಯಕಾರಿ ಆಯಾಮ ಪಡೆಯುವ ಮೊದಲೇ ಅದನ್ನು ಮೊಳಕೆಯಲ್ಲೇ ಚಿವುಟಬೇಕು. ವಿರೋಧ ಪಕ್ಷಗಳು ಮಹಿಳೆಯರಿಗೆ ಮಾಡಿದ ಅನ್ಯಾಯವನ್ನಷ್ಟೇ ಎತ್ತಿ ತೋರಿದರೆ ಸಾಕಾಗದು. ದಕ್ಷಿಣ ಭಾರತಕ್ಕೆ ಪ್ರಸ್ತಾಪಿತ ತಿದ್ದುಪಡಿಯಿಂದ ಯಾವುದೇ ಅನ್ಯಾಯವಾಗುವುದಿಲ್ಲ ಎಂಬುದನ್ನು ಅರ್ಥ ಮಾಡಿಸಬೇಕು.

ಹಿಂದೆಯೂ ಕೆಲವೊಮ್ಮೆ ದಕ್ಷಿಣದ ರಾಜ್ಯಗಳಲ್ಲಿ ಉತ್ತರ ಭಾರತೀಯರ ವಿರುದ್ಧವಾಗಿ ಭಾವನೆಗಳು ಕೆರಳಿದ್ದಿತ್ತು.ತಮಗೆ ಅನ್ಯಾಯ ಮಾಡಲಾಗುತ್ತಿದೆ ಎಂದು ಧ್ವನಿಯೆದ್ದಿತ್ತು. ಸ್ವಾತಂತ್ರ್ಯದ ಬಳಿಕ ತಮಿಳ್ನಾಡಲ್ಲಿ ಹಿಂದಿ ವಿರೋಧಿ ಆಂದೋಲನವು ತೀವ್ರವಾಗಿತ್ತು. ಅಲ್ಲಿ ಉತ್ತರ ಭಾರತ ವಿರೋಧಿ ಭಾವನೆಯೂ ಅಧಿಕವಾಗಿತ್ತು. 1980ರ ದಶಕದಲ್ಲಿ ತೆಲುಗುದೇಶಂನ ಎನ್‌ಟಿ ರಾಮರಾವ್ ತೆಲುಗು ಜನರ ಸ್ವಾಭಿಮಾನವನ್ನು ಕೆರಳಿಸಿ ಅಧಿಕಾರಕ್ಕೆ ಬಂದಿದ್ದರು.ಕೇಂದ್ರ ಸರಕಾರದ ಪರಿಕಲ್ಪನೆಯನ್ನೇ ಖಂಡಿಸಿದ ಅವರು ಕೇಂದ್ರವೆಂಬುದು ಒಂದು ಮಿಥ್ಯೆ ಎಂದು ಸಾರಿದ್ದರು.

ಇತ್ತೀಚಿನ ದಿನಗಳಲ್ಲಿ ಜಿಎಸ್‌ಟಿ ಮತ್ತು ಇತರ ಬಜೆಟ್ ಅನುದಾನಗಳಲ್ಲಿ ದಕ್ಷಿಣ ಭಾರತದ ರಾಜ್ಯಗಳಿಗೆ ಅನ್ಯಾಯವಾಗುತ್ತಿದೆ ಎಂಬ ಆರೋಪ ಹೊರಿಸುವುದೂ ನಡೆಯುತ್ತಿದೆ. ಆ ಮೂಲಕ ದಕ್ಷಿಣದ ರಾಜ್ಯಗಳ ಜನರಲ್ಲಿ ಉತ್ತರದವರು ತಾರತಮ್ಯ ಮಾಡುತ್ತಿದ್ದಾರೆ ಎಂಬ ಭಾವನೆ ಸೃಷ್ಟಿಸುವ ಪ್ರಯತ್ನ ನಡೆಯುತ್ತಿದೆ. ಕೇಂದ್ರ ಸರಕಾರವು ಕರ್ನಾಟಕದ ಕತ್ತು ಹಿಚುಕುತ್ತಿದೆ ಎಂಬುದಾಗಿ ಕರ್ನಾಟಕದ ಮುಖ್ಯಮಂತ್ರಿ ಇತ್ತೀಚೆಗೆ ಆರೋಪಿಸಿದ್ದರು. ಕೇಂದ್ರದ ಧೋರಣೆಯು ಏಕರಾಷ್ಟ್ರ ಕಲ್ಪನೆಯನ್ನು ಪ್ರತಿಪಾದಿಸುತ್ತಿದ್ದು, ಇದು ದಕ್ಷಿಣ ಭಾರತದ ವೈವಿಧ್ಯತೆಯ ಪರಿಕಲ್ಪನೆಗೆ ಅಪಾಯಕಾರಿಯಾಗಿದೆ ಎಂದು ತಮಿಳ್ನಾಡು ಮುಖ್ಯಮಂತ್ರಿ ಸ್ಟಾಲಿನ್ ಆರೋಪಿಸಿದ್ದರು.

ದಕ್ಷಿಣ ಭಾರತದ ರಾಜ್ಯಗಳಿಗೆ ಅನ್ಯಾಯವಾಗುತ್ತಿದೆ ಎಂಬ ಭಾವ ಹುಟ್ಟಿಸುವುದು ಈ ಎಲ್ಲಾ ಪ್ರಯತ್ನಗಳ ಮೂಲ ಉದ್ದೇಶವಾಗಿದೆ. ಆ ಮೂಲಕ ಉತ್ತರ -ದಕ್ಷಿಣ ವಿಭಜನೆ ಭಾವ ಸೃಜಿಸುವ ಯತ್ನ ನಡೆಯುತ್ತಿದೆ. ಇದು ಅಪಾಯಕಾರಿ ಮಟ್ಟ ಇನ್ನೂ ತಲುಪಿಲ್ಲ ನಿಜ. ಅಂತಹ ಹಂತ ತಲುಪಲಾರದು ಕೂಡ. ಹಾಗೆಂದು ಈ ಕುರಿತಂತೆ ನಿರಾಳವಾಗಿರುವಂತಿಲ್ಲ. ಮಹಿಳಾ ಮಸೂದೆ ಜಾರಿಯಾಗದಂತೆ ತಡೆದ ವಿಪಕ್ಷಗಳ ಕ್ರಮವು ಅಪಾಯದ ಮುನ್ಸೂಚನೆ ನೀಡುತ್ತಿವೆ. ಇನ್ನೀಗ ನೂತನ ಜನಗಣತಿ ನಡೆದ ಬಳಿಕ ಕ್ಷೇತ್ರ ಪುನರ್ವಿಂಗಡಣೆ ಡೆಯಬೇಕಾಗಿದ್ದು, ಇದು ಇನ್ನಷ್ಟು ಕಾವು ಸೃಷ್ಟಿಸುವುದು ಖಂಡಿತ.

ದಕ್ಷಿಣವು ಯಾವಾಗಲೂ ಭಾರತದ ಸಮಗ್ರತೆಯನ್ನು ಎತ್ತಿ ಹಿಡಿದಿದೆ. ಈಗ ದಕ್ಷಿಣ ಭಾರತದ ರಾಜಕೀಯ ನಾಯಕತ್ವ ಕೂಡಾ ಕ್ಷೇತ್ರ ಪುನರ್ವಿಂಗಡಣೆ ಕುರಿತಂತೆ ಹೆಚ್ಚು ರಚನಾತ್ಮಕ ಮಾತುಕತೆಗೆ ಮುಂದಾಗಬೇಕಾಗಿದೆ.

ಜನಿವಾರ ವಿವಾದ: ನಿಯಮಗಳ ಹಿಂದೆ ಅಸಮಾನತೆಯ ನೆರಳು?

ಪತ್ರ ಮಿತ್ರ

ಇತ್ತೀಚಿನ ದಿನಗಳಲ್ಲಿ ಪರೀಕ್ಷಾ ಕೇಂದ್ರಗಳಲ್ಲಿ ಕೆಲ ವಿದ್ಯಾರ್ಥಿಗಳಿಂದ ಜನಿವಾರವನ್ನು ತೆಗೆಸಿರುವ ಘಟನೆಗಳು ಸಮಾಜದಲ್ಲಿ ಚರ್ಚೆಗೆ ಗ್ರಾಸವಾಗಿವೆ. ಈ ಕ್ರಮವನ್ನು ಕೇವಲ ಒಂದು ಜಾತಿಯನ್ನು ಅವಹೇಳನ ಮಾಡುವ ಕೃತ್ಯವೆಂದು ಮಾತ್ರ ನೋಡಿದರೆ ಅದು ಅಪೂರ್ಣ ಅರ್ಥೈಸುವಿಕೆಯಾಗಿದೆ. ವಾಸ್ತವವಾಗಿ, ಜನಿವಾರ ಧರಿಸುವವರು ಬ್ರಾಹ್ಮಣರು ಮಾತ್ರವಲ್ಲ; ಭಾರತದಲ್ಲಿ ಅನೇಕ ಜಾತಿಗಳವರು ಇದನ್ನು ಆಚಾರದ ಭಾಗವಾಗಿ ಧರಿಸುತ್ತಾರೆ. ಹೀಗಾಗಿ ಈ ರೀತಿಯ ಕ್ರಮವು ಒಂದು ಸಮುದಾಯವನ್ನಷ್ಟೇ ಅಲ್ಲದೆ, ವಿವಿಧ ಜಾತಿ-ಪಂಥಗಳ ಧಾರ್ಮಿಕ ಸಂಪ್ರದಾಯಗಳ ಮೇಲಿನ ಅವಮಾನವೆಂದು ಪರಿಗಣಿಸಬೇಕಾಗುತ್ತದೆ.

ಕರ್ನಾಟಕದ ಸಾಮಾಜಿಕ, ಸಾಂಸ್ಕೃತಿಕ ವ್ಯವಸ್ಥೆಯಲ್ಲಿ ಜನಿವಾರಕ್ಕೆ ವಿಶಿಷ್ಟ ಸ್ಥಾನವಿದೆ. ಬ್ರಾಹ್ಮಣರು, ವೈಷ್ಣವರು, ಸ್ಮಾರ್ಥರು ಮಾತ್ರವಲ್ಲದೆ, ಕೆಲವು ವೀರಶೈವ ಲಿಂಗಾಯತ ಸಮುದಾಯದವರು, ಕೆಲವು ಶೈವ ಪರಂಪರೆಯ ಅನುಯಾಯಿಗಳು, ಹಾಗೆಯೇ ಉಪನಯನ ಸಂಪ್ರದಾಯ ಅನುಸರಿಸುವ ಇತರೆ ಜಾತಿಗಳವರೂ ಜನಿವಾರವನ್ನು ಧರಿಸುತ್ತಾರೆ. ಇದು ಕೇವಲ ಅಲಂಕಾರವಲ್ಲ; ಅದು ಒಂದು ಧಾರ್ಮಿಕ ಗುರುತು, ಸಂಸ್ಕಾರ ಮತ್ತು ಆಚರಣೆಯ ಸಂಕೇತವಾಗಿದೆ.

ಪರೀಕ್ಷೆಗಳಲ್ಲಿ ನಕಲು ತಡೆಯಲು ಪರೀಕ್ಷಾ ಮಂಡಳಿಗಳು ವಿವಿಧ ನಿಯಮಗಳನ್ನು ಜಾರಿಗೆ ತರುತ್ತಿರುವುದು ಸಮಂಜಸವೇ ಸರಿ. ಆದರೆ ಆ ನಿಯಮಗಳು ಎಲ್ಲರಿಗೂ ಸಮಾನವಾಗಿ ಅನ್ವಯವಾಗಬೇಕು. ಕೇವಲ ಜನಿವಾರ ಧರಿಸಿರುವ ವಿದ್ಯಾರ್ಥಿಗಳನ್ನೇ ಗುರಿಯಾಗಿಸಿಕೊಂಡು ಅದನ್ನು ತೆಗೆಸುವುದು ನ್ಯಾಯೋಚಿತ ಕ್ರಮವಲ್ಲ. ಇದರಿಂದ ವಿದ್ಯಾರ್ಥಿಗಳ ಮನಸ್ಸಿನಲ್ಲಿ ಅಸಮಾಧಾನ ಹಾಗೂ ಭೇದಭಾವ ಮೂಡುವ ಸಾಧ್ಯತೆ ಇದೆ. ನಕಲು ಮಾಡುವ ವಿಧಾನಗಳು ತಂತ್ರಜ್ಞಾನದಿಂದ ಬದಲಾಗುತ್ತಿರುವ ಈ ಕಾಲದಲ್ಲಿ, ಒಂದು ಧಾರ್ಮಿಕ ಚಿಹ್ನೆಯನ್ನು ಮಾತ್ರ ಶಂಕೆಯ ದೃಷ್ಟಿಯಿಂದ ನೋಡುವುದು ಯುಕ್ತಿಯುತವಲ್ಲ.

ಇದೇ ಸಂದರ್ಭದಲ್ಲಿ ಮತ್ತೊಂದು ಪ್ರಶ್ನೆ ಉದ್ಭವಿಸುತ್ತದೆ. ದೇಹವನ್ನು ಸಂಪೂರ್ಣ ಮುಚ್ಚುವ ಉಡುಪಿಗೆ ಕೆಲವು ಸಂದರ್ಭಗಳಲ್ಲಿ ವಿನಾಯಿತಿ ನೀಡಲಾಗುತ್ತದೆ. ಆದರೆ ಅದೇ ಸಂದರ್ಭದಲ್ಲಿ ಜನಿವಾರ, ಮೂಗುತಿ, ಬಳೆ, ಓಲೆ, ತಾಳಿ, ದಾರ ಮುಂತಾದ ಸಣ್ಣ ಧಾರ್ಮಿಕ ಅಲಂಕಾರಗಳನ್ನು ಅನುಮಾನದಿಂದ ನೋಡುವುದಾದರೂ ಏಕೆ? ಈ ರೀತಿಯ ಆಯ್ಕೆ ಮಾಡಿದ ಕಠಿಣತೆ ಸಮಾಜದಲ್ಲಿ ಸಮಾನತೆ ಹಾಗೂ ಧರ್ಮನಿರಪೇಕ್ಷತೆಯ ಮೌಲ್ಯಗಳನ್ನು ದುರ್ಬಲಗೊಳಿಸುತ್ತದೆ.

ಇದುವರೆಗೆ ಜನಿವಾರ ಅಥವಾ ಇಂತಹ ಆಭರಣಗಳನ್ನು ಬಳಸಿಕೊಂಡು ನಕಲು ಮಾಡಿದ ಯಾವುದೇ ಸ್ಪಷ್ಟ ಉದಾಹರಣೆಗಳು ಕಂಡುಬಂದಿಲ್ಲ. ಆದರೆ ಬಟ್ಟೆ, ಎಲೆಕ್ಟ್ರಾನಿಕ್ ಸಾಧನಗಳು ಮುಂತಾದವುಗಳನ್ನು ಬಳಸಿಕೊಂಡು ನಕಲು ಮಾಡಿದ ಹಲವು ಘಟನೆಗಳು ದಾಖಲಾಗಿವೆ. ಹೀಗಾಗಿ ನಿಯಮಗಳನ್ನು ರೂಪಿಸುವಾಗ ವಾಸ್ತವದ ಆಧಾರದ ಮೇಲೆ ನಿರ್ಧಾರ ಕೈಗೊಳ್ಳಬೇಕು, ಊಹೆಗಳ ಆಧಾರದ ಮೇಲೆ ಅಲ್ಲ.

ವಿದ್ಯಾರ್ಥಿಗಳನ್ನು ಕೇವಲ 'ವಿದ್ಯಾರ್ಥಿ' ಎಂಬ ದೃಷ್ಟಿಯಿಂದ ನೋಡುವುದು ಅತ್ಯಂತ ಮುಖ್ಯ. ಅವರ ಜಾತಿ, ಧರ್ಮ ಅಥವಾ ಆಚರಣೆಗಳನ್ನು ಆಧಾರವನ್ನಾಗಿ ಮಾಡಿಕೊಂಡು ವಿಭಿನ್ನ ರೀತಿಯ ನಿಯಮಗಳನ್ನು ಜಾರಿಗೊಳಿಸುವುದು ತಪ್ಪು. ಪರೀಕ್ಷಾ ಕೇಂದ್ರಗಳು ಸಮಾನತೆ ಮತ್ತು ನ್ಯಾಯಬದ್ಧ ಮೌಲ್ಯಗಳನ್ನು ಪ್ರತಿಬಿಂಬಿಸಬೇಕಾದ ಸ್ಥಳವಾಗಿರಬೇಕು. ಅಲ್ಲಿನ ನಿಯಮಗಳು ಎಲ್ಲರಿಗೂ ಸಮಾನವಾಗಿ ಅನ್ವಯಿಸಬೇಕು.

ಸಂತ್ರಸ್ತ ವಿದ್ಯಾರ್ಥಿಗಳಿಗೆ ಮರು ಪರೀಕ್ಷೆ ನಡೆಸುವ ಚಿಂತನೆ ನಡೆಸುವುದಾಗಿ ಉನ್ನತ ಶಿಕ್ಷಣ ಸಚಿವರು ಹೇಳಿದ್ದಾರೆ. ಹೀಗೆ ಮಾಡುವುದರಿಂದ ಸರಕಾರಕ್ಕೆ ಆಗುವ ಹೊರೆಯನ್ನು ತುಂಬಿಸಿ ಕೊಡುವವರ್ಯಾರು? ಜಾತಿ ಧರ್ಮಗಳ ನಡುವೆ ಸಮಾಜದಲ್ಲಿ ಮೂಡುತ್ತಿರುವ ಒಡಕನ್ನು ಹೇಗೆ ಸರಿಪಡಿಸುತ್ತಾರೆ?

ಅಂತಿಮವಾಗಿ, ಈ ವಿವಾದ ನಮಗೆ ಒಂದು ಸ್ಪಷ್ಟ ಸಂದೇಶ ನೀಡುತ್ತದೆ - ನಿಯಮಗಳು ಇರಲಿ, ಆದರೆ ಅವು ನ್ಯಾಯಯುತವಾಗಿರಬೇಕು. ಧಾರ್ಮಿಕ ಭಾವನೆಗಳಿಗೆ ಧಕ್ಕೆ ತರದಂತೆ, ಎಲ್ಲ ಸಮುದಾಯಗಳನ್ನೂ ಗೌರವಿಸುವ ರೀತಿಯಲ್ಲಿ ಪರೀಕ್ಷಾ ನಿಯಮಗಳನ್ನು ರೂಪಿಸಬೇಕಾಗಿದೆ. ಆಗ ಮಾತ್ರ ನಿಜವಾದ ಅರ್ಥದಲ್ಲಿ ನಮ್ಮ ಸಮಾಜ ಜಾತ್ಯತೀತ ಮತ್ತು ಸಮಾನತೆಯ ಮೌಲ್ಯಗಳನ್ನು ಕಾಪಾಡಿಕೊಳ್ಳಲು ಸಾಧ್ಯವಾಗುತ್ತದೆ.

-ಜಿ.ನಾಗೇಂದ್ರ, ಕಾವೂರು, ಸಂಡೂರು

ಎಕ್ಸಿಟ್ ಪೋಲ್ಸ್ ವಿಶ್ವಾಸಾರ್ಹವೆ?

ಇತ್ತೀಚಿನ ವರ್ಷಗಳಲ್ಲಿ ಎಲ್ಲಾ ಟಿವಿ ವಾಹಿನಿಗಳೂ ಚುನಾವಣೋತ್ತರ ಸಮೀಕ್ಷೆ (ಎಕ್ಸಿಟ್ ಪೋಲ್) ನಡೆಸುವುದು ಹೆಚ್ಚುತ್ತಿದೆ. ವಿಪರ್ಯಾಸವೆಂದರೆ ಇಂತಹ ಎಕ್ಸಿಟ್ ಪೋಲ್‌ಗಳು ಎಡವಿ ಬೀಳುವುದೂ ಹೆಚ್ಚುತ್ತಿದೆ. ಇತ್ತೀಚಿನ ವರ್ಷಗಳಲ್ಲಿ ಎಕ್ಸಿಟ್ ಪೋಲ್‌ಗಳು ನುಡಿದ ಭವಿಷ್ಯಗಳು ಸುಳ್ಳಾಗುತ್ತಿರುವ ಪ್ರಸಂಗಗಳೂ ಅಧಿಕವಾಗುತ್ತಿವೆ. ಎಕ್ಸಿಟ್ ಪೋಲ್‌ಗಳೂ ಏಕರೀತಿಯಾಗಿರುವುದಿಲ್ಲ. ಒಂದೇ ರಾಜ್ಯದ ಚುನಾವಣಾ ಫಲಿತಾಂಶದ ಕುರಿತಂತೆ ಕೆಲವು ಎಕ್ಸಿಟ್ ಪೋಲ್‌ಗಳು ವಿಭಿನ್ನ ಫಲಿತಾಂಶದ ಚಿತ್ರಣ ನೀಡುವುದೂ ಇದೆ. ಈ ಬಾರಿ ಪಶ್ಚಿಮ ಬಂಗಾಳವು ಅದಕ್ಕೆ ಉತ್ತಮ ಉದಾಹರಣೆ. ಕೆಲವು ಪೋಲ್‌ಗಳು ಬಿಜೆಪಿಗೆ ಗೆಲುವು ಎಂದಿದ್ದರೆ, ಇನ್ನು ಕೆಲವು ತೃಣಮೂಲ ಕಾಂಗ್ರೆಸಿಗೆ ಗೆಲುವು ಎಂದಿವೆ.

ಪಶ್ಚಿಮ ಬಂಗಾಳದಂತಹ ರಾಜ್ಯದಲ್ಲಿ ಜನರ ಮೂಡ್ ಅರಿಯುವುದು ಅಷ್ಟು ಸುಲಭವಲ್ಲ. ತೃಣಮೂಲ ಕಾಂಗ್ರೆಸಿನ ಗೂಂಡಾಗಿರಿಗೆ ಹೆದರುತ್ತಿರುವ ಜನರು ತಾವು ಯಾರಿಗೆ ಮತ ಹಾಕಿದ್ದೆಂದು ಬಹಿರಂಗವಾಗಿ ಹೇಳಲಾರರು. ಹಾಗಾಗಿ ಜನರ ನೈಜ ನಾಡಿಮಿಡಿತ ಅರಿಯುವುದು ಕಷ್ಟವೆ. ಬೇರೆ ಪಕ್ಷಗಳಿಗೆ ಮತ ಹಾಕಿದರೆ ಮುಂದಕ್ಕೆ ಪರಿಣಾಮ ಎದುರಿಸಬೇಕಾದೀತು ಎಂಬುದಾಗಿ ತೃಣಮೂಲ ಕಾಂಗ್ರೆಸಿನ ಮುಖಂಡರು ಬಹಿರಂಗವಾಗಿಯೇ ಬೆದರಿಕೆ ಹಾಕುತ್ತಿರುವ ವಿಡಿಯೋಗಳೂ ಕಾಣಸಿಗುತ್ತಿವೆ. ಹಾಗಾಗಿ ಎಕ್ಸಿಟ್ ಪೋಲ್‌ಗಳ ಭವಿಷ್ಯವನ್ನು ಪೂರ್ಣವಾಗಿ ನಂಬುವಂತಿಲ್ಲ.

-ಜಿ.ಕೆ. ರಾವ್, ಮೈಸೂರು

ಟೆಹ್ರಾನ್ ಹೊಸ ಪ್ರಸ್ತಾವ ತಿರಸ್ಕರಿಸಿದ ಟ್ರಂಪ್

ಇರಾನ್-ಅಮೆರಿಕ ಯುದ್ಧಕ್ಕೆ ಸನ್ನದ್ಧತೆ

ಟೆಹ್ರಾನ್: ಯುದ್ಧ ಕೊನೆಗೊಳಿಸಲು ಇರಾನ್‌ನ ಹೊಸ ಪ್ರಸ್ತಾವವನ್ನು ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ತಿರಸ್ಕರಿಸಿದ ಹಿನ್ನೆಲೆ ಅಮೆರಿಕ-ಇರಾನ್ ಕದನ ವಿರಾಮ ಬೂದಿ ಮುಚ್ಚಿದ ಕೆಂಡದಂತಾಗಿದ್ದು, ಯುದ್ಧ ಪುನರಾರಂಭ ಆಗುವುದು ಬಹುತೇಕ ಖಚಿತವಾಗಿದೆ. ಅಮೆರಿಕ-ಇರಾನ್ ನಡುವಿನ ಮೂರು ವಾರಗಳ ತಾತ್ಕಾಲಿಕ ಕದನ ವಿರಾಮ ಒಪ್ಪಂದವು ಮುಂದುವರಿಯುವ ಸಾಧ್ಯತೆಯಿಲ್ಲ.

ಪಾಕಿಸ್ತಾನಿ ಮಧ್ಯವರ್ತಿಗಳ ಮುಖೇನ ಯುದ್ಧ ಕೊನೆಗೊಳಿಸಲು ಅಮೆರಿಕ ಅಧ್ಯಕ್ಷರಿಗೆ ಇರಾನ್ ಪ್ರಸ್ತಾವನೆ ಕಳುಹಿಸಿತ್ತು. ಇರಾನ್ ನಮ್ಮೊಂದಿಗೆ ಒಪ್ಪಂದ ಮಾಡಿಕೊಳ್ಳಲು ಬಯಸಿದೆ. ಆದರೆ ಇರಾನ್‌ನವರ ಪ್ರಸ್ತಾವದಲ್ಲಿ ನನಗೆ ಸಮಾಧಾನವಿಲ್ಲ ಎಂದು ಟ್ರಂಪ್ ಹೇಳಿದ್ದಾರೆ. ಇಸ್ರೇಲ್, ಗಲ್ಫ್ ರಾಷ್ಟ್ರಗಳು ಮತ್ತು ಯುರೋಪ್ ಮೇಲೆ ಇರಾನ್ ಪರಮಾಣು ದಾಳಿ ನಡೆಸುವ ಯೋಚನೆಯಲ್ಲಿದೆ. ನಾವದಕ್ಕೆ ಅವಕಾಶ ಮಾಡಿಕೊಡುವುದಿಲ್ಲ ಎಂದು ಆರೋಪ ಮಾಡಿದ್ದಾರೆ.

ಶಸ್ತ್ರಾಸ್ತ್ರ ಮಾರಾಟಕ್ಕೆ ಅನುಮತಿ: ಯುದ್ಧ ಮುಂದುವರಿಯುವ ಸಾಧ್ಯತೆ ಹಿನ್ನೆಲೆಯಿಂದ ಮಿತ್ರರಾಷ್ಟ್ರಗಳಾದ ಇಸ್ರೇಲ್, ಕತಾರ್, ಕುವೈತ್ ಮತ್ತು ಯುಎಇ 8.6 ಶತಕೋಟಿ ಡಾಲರ್ ಮೌಲ್ಯದ ಅತ್ಯಾಧುನಿಕ ಶಸ್ತ್ರಾಸ್ತ್ರಗಳ ಮಾರಾಟಕ್ಕೆ ಅಮೆರಿಕ ಅನುಮೋದನೆ ನೀಡಿದೆ.

ಇಸ್ರೇಲ್ ದಾಳಿಗೆ 12 ಸಾವು: ದಕ್ಷಿಣ ಲೆಬನಾನ್ ಪ್ರದೇಶದ ಮೇಲೆ ಇಸ್ರೇಲ್ ನಡೆಸಿದ ವೈಮಾನಿಕ ದಾಳಿಗೆ ಒಂದು ಶಿಶು, ಇಬ್ಬರು ಮಹಿಳೆಯರ ಸಹಿತ 12 ಮಂದಿ ಮೃತಪಟ್ಟಿದ್ದಾರೆ. ತಾತ್ಕಾಲಿಕ ಕದನ ವಿರಾಮವನ್ನು ಉಲ್ಲಂಘಿಸಿ ಐಡಿಎಫ್ ದಾಳಿ ನಡೆಸಿದೆ ಎಂದು ಲೆಬನಾನ್ ಹೇಳಿದೆ. ಇದೇ ವೇಳೆ ಲೆಬನಾನ್‌ನಿಂದ ಉತ್ತರ ಇಸ್ರೇಲ್‌ನತ್ತ ಹಿಜ್ಬೊಲ್ಲಾ ನಡೆಸಿದ ಡ್ರೋನ್ ದಾಳಿಯನ್ನು ಇಸ್ರೇಲ್ ಸೇನೆ (ಐಡಿಎಫ್) ಯಶಸ್ವಿಯಾಗಿ ತಡೆದಿದೆ

ಜರ್ಮನಿಯಿಂದ 5,000 ಸೇನಾ ತುಕಡಿ ವಾಪಸ್?: ಜರ್ಮನಿ ಚಾನ್ಸೆಲರ್ ಫ್ರೆಡರಿಚ್ ಮರ್ಜ್ ಮತ್ತು ಅಮೆರಿಕ ಅಧ್ಯಕ್ಷ ಟ್ರಂಪ್ ನಡುವಿನ ಸಾರ್ವಜನಿಕ ವಾಗ್ವಾದ ನಂತರ, ಜರ್ಮನಿಯಲ್ಲಿ ನಿಯೋಜನೆ ಮಾಡಿರುವ 5,000 ಸೇನಾ ತುಕಡಿಯನ್ನು 6 ತಿಂಗಳು ಅಥವಾ ವರ್ಷದೊಳಗೆ ಹಿಂಪಡೆಯುವುದಾಗಿ ಅಮೆರಿಕ ಬೆದರಿಸಿದೆ.

14 ಐಆರ್‌ಜಿಸಿ ಸಿಬ್ಬಂದಿ ಸಾವು!: ವಾಯವ್ಯ ಇರಾನ್‌ನ ಜಾಂಜನ್ ಪ್ರದೇಶದಲ್ಲಿ ಸ್ಫೋಟಕಗಳನ್ನು ತೆರವುಗೊಳಿಸುವ ವೇಳೆ ಸಂಭವಿಸಿದ ಸ್ಫೋಟದಿಂದಾಗಿ 14 ಸೇನಾ ಸಿಬ್ಬಂದಿ ಮೃತಪಟ್ಟಿದ್ದಾರೆ ಎಂದು ಐಆರ್‌ಜಿಸಿ ತಿಳಿಸಿದೆ. ಸುಮಾರು 1,200 ಹೆಕ್ಟೇರ್ ಕೃಷಿ ಭೂಮಿಯಲ್ಲಿ ಹುದುಗಿಸಿಟ್ಟ ಸ್ಫೋಟಕಗಳನ್ನು ತೆರವುಗೊಳಿಸುವ ವೇಳೆ ಸ್ಫೋಟ ಸಂಭವಿಸಿದೆ.

ಇರಾನ್‌ಗೆ 4.8 ಶತಕೋಟಿ ಡಾಲರ್ ನಷ್ಟ: ಹಾರ್ಮುಜ್ ಜಲಸಂಧಿ ಮತ್ತು ಪ್ರಮುಖ ಬಂದರುಗಳ ಮೇಲೆ ಅಮೆರಿಕ ನೌಕಾಪಡೆ ಹೇರಿದ ಜಲ ದಿಗ್ಬಂಧನದ ಪರಿಣಾಮ ಇರಾನ್‌ಗೆ 4.8 ಶತಕೋಟಿ ಡಾಲರ್ ನಷ್ಟವಾಗಿದೆ. ಸುಮಾರು 53 ದಶಲಕ್ಷ ಬ್ಯಾರೆಲ್ ತೈಲ ಹೊಂದಿರುವ 31 ಟ್ಯಾಂಕರ್ ಹಡಗುಗಳು ಗಲ್ಫ್‌ನಲ್ಲೇ ಸಂಚರಿಸಲಾಗದೆ ಬಾಕಿಯಾಗಿವೆ.

ನರ್ಗಿಸ್‌ಗೆ ತೀವ್ರ ಅನಾರೋಗ್ಯ: ಕಾರಾಗೃಹ ಶಿಕ್ಷೆಯಲ್ಲಿರುವ ಇರಾನ್ ಇಸ್ಲಾಮಿಕ್ ಆಡಳಿತ ವಿರೋಧಿ ನೊಬೆಲ್ ಶಾಂತಿ ಪ್ರಶಸ್ತಿ ವಿಜೇತೆ ನರ್ಗಿಸ್ ಮೊಹಮ್ಮದಿಗೆ ಕಳೆದ ವಾರ ಹೃದಯಾಘಾತಕ್ಕೆ ಒಳಗಾಗಿದ್ದು, ಅವರ ಆರೋಗ್ಯ ಕ್ಷೀಣಿಸಿದೆ ಎಂದು ತಿಳಿದುಬಂದಿದೆ.

ಇರಾನ್‌ಗೆ ಟೋಲ್ ನೀಡಬೇಡಿ: ಟ್ರಂಪ್

ಹಾರ್ಮುಜ್ ಜಲಸಂಧಿಯನ್ನು ಸುರಕ್ಷಿತವಾಗಿ ದಾಟಲು ಹಡಗುಗಳು, ತೈಲ ಕಂಪನಿ ಪಾವತಿಸುತ್ತಿದ್ದ ಟೋಲ್ ಹಣವನ್ನು ಇರಾನ್‌ಗೆ ಪಾವತಿಸದಂತೆ ಅಮೆರಿಕ ಅಧ್ಯಕ್ಷ ಟ್ರಂಪ್ ಹೇಳಿದ್ದಾರೆ.

ಭಾರತದತ್ತ ಅನಿಲ ಹೊತ್ತ ಹಡಗು

ಹೊಸದಿಲ್ಲಿ: ದೇಶದ ಇಂಧನ ಬಿಕ್ಕಟ್ಟನ್ನು ನೀಗಿಸಲು 45,000 ಟನ್ ದ್ರವೀಕೃತ ಪೆಟ್ರೋಲಿಯಂ ಗ್ಯಾಸ್ (ಎಲ್‌ಪಿಜಿ) ಹೊತ್ತ ಭಾರತದ ಸಂಪರ್ಕವಿರುವ ಸೂಪರ್ ಟ್ಯಾಂಕರ್ ಹಾರ್ಮುಜ್ ಜಲಸಂಧಿ ದಾಟಲು ಪ್ರಯತ್ನಿಸುತ್ತಿದೆ.

ಮಾರ್ಷಲ್ ಐಲೆಂಡ್ಸ್ ಧ್ವಜ ಹೊಂದಿರುವ ಸರ್ವ ಶಕ್ತಿ ನೌಕೆ, ಶನಿವಾರ ಇರಾನ್‌ನ ಲಾರಕ್ ಮತ್ತು ಕೇಶ್ಮ್ ದ್ವೀಪಗಳನ್ನು ಹಾದು ಒಮಾನ್ ಕೊಲ್ಲಿಯತ್ತ ಸಾಗಿದೆ. ಹಡಗು ಟ್ರ್ಯಾಕಿಂಗ್ ದತ್ತಾಂಶದ ಪ್ರಕಾರ, ಸುರಕ್ಷತೆಯ ದೃಷ್ಟಿಯಿಂದ ಈ ನೌಕೆ ಭಾರತಕ್ಕೆ ತೆರಳುತ್ತಿರುವುದಾಗಿ ಮತ್ತು ಭಾರತೀಯ ಸಿಬ್ಬಂದಿಯನ್ನು ಹೊಂದಿರುವುದಾಗಿ ಸಂಕೇತಗಳನ್ನು ರವಾನಿಸಲಾಗುತ್ತಿದೆ. ಇಂಡಿಯನ್ ಆಯಿಲ್ ಕಾರ್ಪೊರೇಷನ್ ಈ ಅನಿಲದ ಖರೀದಿದಾರ ಎಂದು ತಿಳಿದುಬಂದಿದೆ.

ಅಮೆರಿಕದ ದಿಗ್ಬಂಧನದಿಂದಾಗಿ ಹಾರ್ಮುಜ್ ಜಲಸಂಧಿಯಲ್ಲಿ ಸಂಚಾರ ಬಹುತೇಕ ಶೂನ್ಯಕ್ಕೆ ತಲುಪಿರುವ ಸಮಯದಲ್ಲಿ ಈ ನೌಕೆ ಸಂಚರಿಸುತ್ತಿದೆ. ಇರಾನ್ ಜೊತೆಗಿನ ದ್ವಿಪಕ್ಷೀಯ ಮಾತುಕತೆಗಳ ನಂತರ ಭಾರತ ಸಂಘರ್ಷದ ಅವಧಿಯಲ್ಲಿ ಎಂಟು ಅನಿಲ ನೌಕೆಗಳನ್ನು ಈ ಜಲಸಂಧಿಯ ಮೂಲಕ ಯಶಸ್ವಿಯಾಗಿ ಸಾಗಿಸಿದೆ. ಭಾರತ ವಿಶ್ವದ ಎರಡನೇ ಅತಿದೊಡ್ಡ ಆಡುಗೆ ಅನಿಲ ಬಳಕೆಯ ದೇಶ. ಮಧ್ಯಪ್ರಾಚ್ಯದ ಅಡಚಣೆಗಳಿಂದ ಉಂಟಾದ ಕೊರತೆ ನಿಭಾಯಿಸಲು ಸರ್ಕಾರ ದೇಶೀಯ ಉತ್ಪಾದನೆಯನ್ನು ಶೇ.60 ರಷ್ಟು ಹೆಚ್ಚಿಸಿ 54,000 ಟನ್‌ಗಳಿಗೆ ಏರಿಸಿದೆ. ಪ್ರಸ್ತುತ ದೈನಂದಿನ ಬಳಕೆ 80,000 ಟನ್‌ಗಳಿಗೆ ಇಳಿಕೆಯಾಗಿದೆ. ಸ್ಥಳೀಯ ಬಂದರುಗಳಲ್ಲಿ ಈ ಟ್ಯಾಂಕರ್‌ಗಳಿಗೆ ಇಳಿಸಲು ಆದ್ಯತೆ ನೀಡಲಾಗುತ್ತಿದೆ.

ಲಕ್ಷದ್ವೀಪದಲ್ಲಿ ಭಾರತದ ಮೊದಲ ಸೀಪ್ಲೇನ್ ಸೇವೆಗೆ ಚಾಲನೆ

ಅಲೆಗಳ ಮೇಲೆ ವಿಮಾನಯಾನ

ಅತೀ ಕಡಿಮೆ ಪ್ರಯಾಣ ಸಮಯ

ಕೆನಡಾ ಮೂಲದ ಡಿ ಹ್ಯಾವಿಲ್ಯಾಂಡ್ ಡಿಎಚ್‌ಸಿ-6 ಟ್ವಿನ್ ಆಟರ್ ವಿಮಾನಗಳ ಬಳಕೆಯಿಂದ ಪ್ರಯಾಣದ ಸಮಯ ಗಣನೀಯವಾಗಿ ಕಡಿಮೆಯಾಗಲಿದೆ. ಈ ಹಿಂದೆ ಹಡಗಿನಲ್ಲಿ ಅರ್ಧ ದಿನ ತೆಗೆದುಕೊಳ್ಳುತ್ತಿದ್ದ ಪ್ರಯಾಣವನ್ನು ಈಗ ಕೇವಲ 20 ನಿಮಿಷಗಳಲ್ಲಿ ಪೂರೈಸಬಹುದು. ಇದು ಕೇವಲ ಸೌಕರ್ಯದ ವಿಷಯವಲ್ಲ; ತುರ್ತು ವೈದ್ಯಕೀಯ ಸೇವೆಗಳು ಮತ್ತು ದ್ವೀಪದ ಜನರಿಗೆ ಅಗತ್ಯ ವಸ್ತುಗಳ ಶೀಘ್ರ ಪೂರೈಕೆಗೂ ಇದು ಅತ್ಯಗತ್ಯ.



ಸುದ್ದಿ ಸಮಗ್ರ

ಭಾರತೀಯ ವಿಮಾನಯಾನ ರಂಗ ಒಂದು ಐತಿಹಾಸಿಕ ಬದಲಾವಣೆಗೆ ಸಾಕ್ಷಿಯಾಗುತ್ತಿದ್ದು, ಇನ್ನು ಮುಂದೆ ವಿಮಾನಗಳು ಕೇವಲ ರನ್-ವೇಗಳ ಮೇಲೆ ಮಾತ್ರವಲ್ಲದೆ, ನೀಲಿ ಅಲೆಗಳ ಮೇಲೂ ಇಳಿಯಲಿವೆ. ಪ್ರಾದೇಶಿಕ ಸಂಪರ್ಕದ ದೃಷ್ಟಿಯಿಂದ ಈ ಮೈಲಿಗಲ್ಲನ್ನು ಸಾಧಿಸಿರುವುದು ಸ್ಕೈಹಾಪ್ ಏವಿಯೇಷನ್ ಸಂಸ್ಥೆ. ನಾಗರಿಕ ವಿಮಾನಯಾನ ಮಹಾನಿರ್ದೇಶನಾಲಯದಿಂದ (ಡಿಜಿಸಿಎ) ಅಧಿಕೃತವಾಗಿ ಏರ್ ಆಪರೇಟರ್ ಸರ್ಟಿಫಿಕೇಟ್ (ಎಒಸಿ) ಪಡೆದುಕೊಳ್ಳುವ ಮೂಲಕ, ದೇಶದ ಮೊದಲ ಮೀಸಲಾದ ವಾಣಿಜ್ಯ ಸಿಪ್ಲೇನ್ ಸೇವೆಯನ್ನು ಪ್ರಾರಂಭಿಸಲು ಈ ಸಂಸ್ಥೆಗೆ ಹಸಿರು ನಿಶಾನೆ ಸಿಕ್ಕಿದೆ. ಇದು ಭಾರತದ ವಿಶಾಲವಾದ ಕರಾವಳಿ ಮತ್ತು ಒಳನಾಡು ಜಲಮಾರ್ಗಗಳ ಪ್ರವಾಸೋದ್ಯಮ ಹಾಗೂ ಆರ್ಥಿಕ ಸಾಮರ್ಥ್ಯವನ್ನು ಅನಾವರಣಗೊಳಿಸುವ ಭರವಸೆ ಮೂಡಿಸಿದೆ.

ತಾಂತ್ರಿಕ ಪ್ರಗತಿ ಮತ್ತು ಸಿದ್ಧತೆ

ಈ ಪರವಾನಗಿ ಪಡೆಯುವ ಪ್ರಕ್ರಿಯೆ ಸುಲಭದ್ದಾಗಿರಲಿಲ್ಲ. ಇದು ಕಳೆದ ಒಂದು ವರ್ಷದಿಂದ ನಡೆಸಲಾದ ಕಟ್ಟುನಿಟ್ಟಿನ ಸುರಕ್ಷತಾ ಮೌಲ್ಯಮಾಪನ ಮತ್ತು ತಾಂತ್ರಿಕ ಪ್ರಯೋಗಗಳ ನಂತರ ದೊರೆತ ಫಲ. ಸಾಮಾನ್ಯ ವಿಮಾನಗಳಿಗಿಂತ ಭಿನ್ನವಾಗಿ, ಸೀಪ್ಲೇನ್‌ಗಳಿಗೆ ವಿಶೇಷ ಪೈಲಟ್ ತರಬೇತಿ ಮತ್ತು ವಿಶಿಷ್ಟ ನಿರ್ವಹಣಾ ವಿಧಾನಗಳ ಅಗತ್ಯವಿರುತ್ತದೆ. ಉಪ್ಪುನೀರಿನಿಂದ ಉಂಟಾಗುವ ಸವಕಳಿ ಮತ್ತು ನೀರಿನ ಮೇಲೆ ಇಳಿಯುವಾಗ ಎದುರಾಗುವ ಸವಾಲುಗಳನ್ನು ಎದುರಿಸಲು ಇವು ಸಜ್ಜಾಗಿರಬೇಕು. 2026ರ ಆರಂಭದಲ್ಲಿ, ಸ್ಕೈಹಾಪ್ ಸಂಸ್ಥೆ, ಉತ್ತರಾಖಂಡದ ರಿಷಿಕೇಶದ ಗಂಗಾ ಬ್ಯಾರೇಜ್ ಮತ್ತು ತೆಹ್ರಿ ಸರೋವರದಲ್ಲಿ ಯಶಸ್ವಿ ಪರೀಕ್ಷಾರ್ಥ ಹಾರಾಟಗಳನ್ನು ನಡೆಸುವ ಮೂಲಕ ತನ್ನ ಸಾಮರ್ಥ್ಯ ಸಾಬೀತುಪಡಿಸಿದೆ.

ಮುಖ್ಯಾಂಶ

- ಸಂಸ್ಥೆ: ಸ್ಕೈಹಾಪ್ ಏವಿಯೇಷನ್
- ವಿಮಾನ: 19 ಆಸನಗಳ ಡಿಎಚ್‌ಸಿ-6
- ಪ್ರಯೋಗ: ಏಪ್ರಿಲ್‌ನಲ್ಲಿ ಪೂರ್ಣ
- ಮಾರ್ಗ: ಕೊಚ್ಚಿ - ಲಕ್ಷದ್ವೀಪ
- ಪ್ರಯೋಜನ: ಶೀಘ್ರ ದ್ವೀಪ ಪ್ರಯಾಣ

19 ಆಸನಗಳ ಪುಟ್ಟ ವಿಮಾನಗಳು

ಕೇವಲ 19 ಆಸನಗಳ ಪುಟ್ಟ ವಿಮಾನಗಳು ವಿವಿಧ ಜಲಮೂಲಗಳಲ್ಲಿ ಸುರಕ್ಷಿತವಾಗಿ ಕಾರ್ಯಾಚರಣೆ ನಡೆಸಬಲ್ಲವು ಎಂದು ಸಾಬೀತಾಗಿದೆ. ಇದರಿಂದ ವಿಮಾನಯಾನ ಕ್ಷೇತ್ರಕ್ಕೆ ಹೊಸ ಆಯಾಮ ದೊರೆತಿದೆ. ಸಾಂಪ್ರದಾಯಿಕ ವಿಮಾನ ನಿಲ್ದಾಣಗಳ ನಿರ್ಮಾಣಕ್ಕೆ ಭೂಮಿಯ ಕೊರತೆ ಅಥವಾ ಪರಿಸರದ ಮೇಲಾಗುವ ದುಷ್ಪರಿಣಾಮಗಳಿರುವ ಪ್ರದೇಶಗಳಲ್ಲಿ ಈ ರನ್‌ವೇ ಮುಕ್ತ ವಿಧಾನವು ವರದಾನವಾಗಲಿದೆ. ನೀರಿನ ಮೇಲೆ ತೇಲುವ ಡಾಕ್‌ಗಳು ಮತ್ತು ಗೊತ್ತುಪಡಿಸಿದ ಜಲಪ್ರದೇಶಗಳನ್ನು ಬಳಸುವುದರಿಂದ, ಅತ್ಯಂತ ಕಡಿಮೆ ಮೂಲಸೌಕರ್ಯ ವೆಚ್ಚದಲ್ಲಿ ಶೀಘ್ರವಾಗಿ ಸೇವೆ ಆರಂಭಿಸಬಹುದು.

ಪ್ರವಾಸೋದ್ಯಮದ ಭವಿಷ್ಯ

ಸ್ಥಳೀಯ ನಿವಾಸಿಗಳಿಗೆ ಪ್ರಯೋಜನವಾಗುವುದರ ಜೊತೆಗೆ, ಸೀಪ್ಲೇನ್ ಸೇವೆ ಭಾರತದ ಬ್ಲೂ ಎಕಾನಮಿ(ಜಲ ಆರ್ಥಿಕತೆ) ಯೋಜನೆಯ ಪ್ರಮುಖ ಭಾಗ. ದೂರದ ಪ್ರವಾಸಿ ತಾಣಗಳನ್ನು ಸುಲಭವಾಗಿ ತಲುಪುವಂತೆ ಮಾಡುವ ಮೂಲಕ, ಭಾರತವನ್ನು ಪರಿಸರಸ್ನೇಹಿ ಪ್ರವಾಸೋದ್ಯಮದ ಕೇಂದ್ರವನ್ನಾಗಿ ಮಾಡಲು ಸರ್ಕಾರ ಯೋಜಿಸಿದೆ. ಲಕ್ಷದ್ವೀಪದ ನಂತರ, ಅಂಡಮಾನ್ ಮತ್ತು ನಿಕೋಬಾರ್ ದ್ವೀಪಗಳು ಹಾಗೂ ಈಶಾನ್ಯ ಭಾರತದ ನದಿ ಪ್ರದೇಶಗಳಿಗೂ ಈ ಸೇವೆಯನ್ನು ವಿಸ್ತರಿಸುವ ಯೋಜನೆ ಇದೆ. ಸರ್ಕಾರದ ಮಾಡಿಫೈಡ್ ಉಡಾನ್ ಯೋಜನೆಯಲ್ಲಿ ಈ ಮಾರ್ಗಗಳಿಗೆ ಆರ್ಥಿಕ ನೆರವು ದೊರೆಯಲಿದ್ದು, ಇದರಿಂದ ಆರಂಭಿಕ ವರ್ಷಗಳಲ್ಲಿ ವಿಮಾನಯಾನ ಸಂಸ್ಥೆಗಳಿಗೆ ಹೆಚ್ಚಿನ ಹೊರೆಯಾಗುವುದಿಲ್ಲ. ಸ್ಕೈಹಾಪ್ ಸಂಸ್ಥೆಯ ಮೊದಲ ವಾಣಿಜ್ಯ ಹಾರಾಟ ಶೀಘ್ರದಲ್ಲೇ ಆರಂಭವಾಗಲಿದ್ದು, ನೀಲಿ ಸರೋವರದ ಮೇಲೆ ವಿಮಾನವೊಂದು ಇಳಿಯುವ ದೃಶ್ಯ ಇನ್ನು ಮುಂದೆ ಅಪರೂಪದ ಸಂಗತಿಯಾಗಿ ಉಳಿಯುವುದಿಲ್ಲ.

ಲಕ್ಷದ್ವೀಪ; ಮೊದಲ ಆಯಕಟ್ಟಿನ ಕೇಂದ್ರ



ವಾಣಿಜ್ಯ ಕಾರ್ಯಾಚರಣೆಯ ಮೊದಲ ಹಂತ, ಲಕ್ಷದ್ವೀಪ ದ್ವೀಪಸಮೂಹವನ್ನು ಕೇಂದ್ರೀಕರಿಸಲಿದೆ. ಈ ಪ್ರದೇಶದಲ್ಲಿ ಸಾರಿಗೆ ವ್ಯವಸ್ಥೆ ದಶಕಗಳಿಂದ ದೊಡ್ಡ ಸವಾಲಾಗಿ ಉಳಿದಿದೆ. ಪ್ರಸ್ತುತ ಇಲ್ಲಿನ ಜನರು ಮತ್ತು ಬರುವ ಲಕ್ಷಾಂತರ ಪ್ರವಾಸಿಗರು ಹಡಗು ಪ್ರಯಾಣ ಅಥವಾ ಅಗತ್ತಿಯಲ್ಲಿರುವ ಏಕೈಕ ರನ್‌ವೇ ಮೇಲೆ ಅವಲಂಬಿತರಾಗಿದ್ದಾರೆ. ಸ್ಕೈಹಾಪ್ ಸಂಸ್ಥೆ, ಕವರತ್ತಿ, ಮಿನಿಕಾಯ್ ಮತ್ತು ಕಿಲ್ತಾನ್ ಸೇರಿದಂತೆ ಐದು ಪ್ರಮುಖ ದ್ವೀಪಗಳನ್ನು ನೇರವಾಗಿ ಕೊಚ್ಚಿಯ ಮುಖ್ಯ ಭೂಭಾಗಕ್ಕೆ ಸಂಪರ್ಕಿಸುವ ಮೂಲಕ ಕ್ರಾಂತಿ ಮಾಡಲು ಸಿದ್ಧವಾಗಿದೆ.

ಜಾಗತಿಕ ಯಶಸ್ಸು ಮತ್ತು ಸ್ಫೂರ್ತಿ

ಸೀ ಪ್ಲೇನ್ ಪ್ರವಾಸೋದ್ಯಮ, ಜಾಗತಿಕವಾಗಿ ಈಗಾಗಲೇ ದೊಡ್ಡ ಮಟ್ಟದ ಯಶಸ್ಸು ಕಂಡಿದೆ. ಪ್ರಮುಖವಾಗಿ ಮಾಲ್ಡೀವ್ಸ್‌ನಲ್ಲಿ ಇದು ಪ್ರವಾಸೋದ್ಯಮದ ಬೆನ್ನೆಲುಬಾಗಿದೆ; ಅಲ್ಲಿನ ನೂರಾರು ದ್ವೀಪಗಳ ನಡುವೆ ಸಂಪರ್ಕ ಕಲ್ಪಿಸಲು ವಿಶ್ವದ ಅತಿದೊಡ್ಡ ಸೀ ಪ್ಲೇನ್ ಜಾಲವಿದೆ. ಹಾಗೆಯೇ ಕೆನಡಾ, ಅಮೆರಿಕದ ಅಲಾಸ್ಕಾ ಮತ್ತು ಆಸ್ಟ್ರೇಲಿಯಾದ ಗ್ರೇಟ್ ಬ್ಯಾರಿಯರ್ ರೀಫ್ ಪ್ರದೇಶಗಳಲ್ಲಿ ಇವು ಅತ್ಯಂತ ಜನಪ್ರಿಯ ಸಾರಿಗೆ ಮಾದರಿಗಳಾಗಿವೆ. ಕೆನಡಾದ ವ್ಯಾಂಕೋವರ್ ಮತ್ತು ವಿಕ್ಟೋರಿಯಾ ನಡುವಿನ ಸೀ ಪ್ಲೇನ್ ಸೇವೆಗಳು ವಿಶ್ವದ ಅತ್ಯಂತ ಜನನಿಬಿಡ ಮಾರ್ಗಗಳೆಂದು ಹೆಸರಾಗಿವೆ.

100ಕ್ಕೂ ಹೆಚ್ಚು ಸಂಭಾವ್ಯ ಸೀ ಪ್ಲೇನ್ ಮಾರ್ಗ

ಭಾರತದಲ್ಲಿಯೂ ಈ ಯಶಸ್ಸನ್ನು ಸಾಧಿಸಲು ಕೇಂದ್ರ ಸರ್ಕಾರ ಸಾಗರಮಾಲಾ ಯೋಜನೆಯಲ್ಲಿ ಸುಮಾರು



100ಕ್ಕೂ ಹೆಚ್ಚು ಸಂಭಾವ್ಯ ಸೀ ಪ್ಲೇನ್ ಮಾರ್ಗಗಳನ್ನು ಗುರುತಿಸಿದೆ. ಗುಜರಾತಿನ ಸಾಬರಮತಿ ರಿವರ್ ಫ್ರಂಟ್ ಮತ್ತು ಸ್ಟ್ಯಾಚ್ಯೂ ಆಫ್ ಯೂನಿಟಿ ನಡುವಿನ ಪ್ರಾಯೋಗಿಕ ಹಾರಾಟಗಳು ಈ ಹಿಂದೆ ಭರವಸೆ ಮೂಡಿಸಿದ್ದವು. ಈಗ ಸ್ಕೈಹಾಪ್ ಏವಿಯೇಷನ್‌ನ ಪ್ರವೇಶದೊಂದಿಗೆ, ಭಾರತ ಈ ಅಂತರಾಷ್ಟ್ರೀಯ ಗುಣಮಟ್ಟದ ಪ್ರವಾಸೋದ್ಯಮ ಮಾದರಿಯನ್ನು ಅಳವಡಿಸಿಕೊಳ್ಳಲು ಪೂರ್ಣ ಪ್ರಮಾಣದಲ್ಲಿ ಸಜ್ಜಾಗಿದೆ.

ಕಿರುಸುದ್ದಿ


ಬಿಜೆಪಿ ಸೇರಿದ ಪಾಠಕ್ ವಿರುದ್ಧ 2 ಎಫ್‌ಐಆರ್!

ಚಂಡೀಗಢ: ಆಮ್ ಆದ್ಮಿ ಪಕ್ಷದಿಂದ ಬಿಜೆಪಿಗೆ ವಿಲೀನಗೊಂಡಿದ್ದ ರಾಜ್ಯಸಭೆ ಸಂಸದ ಸಂದೀಪ್ ಪಾಠಕ್ ವಿರುದ್ಧ ಪಂಜಾಬ್ ಪೊಲೀಸರು ಶನಿವಾರ 2 ಜಾಮೀನು ರಹಿತ ಎಫ್‌ಐಆರ್ ದಾಖಲಿಸಿದ್ದು, ದಿಲ್ಲಿ ಮಾಜಿ ಮುಖ್ಯಮಂತ್ರಿ ಅರವಿಂದ ಕೇಜ್ರಿವಾಲ್ ರಾಜಕೀಯ ದ್ವೇಷ ಸಾಧಿಸುತ್ತಿದ್ದಾರೆ ಎಂದು ಬಿಜೆಪಿ ಆರೋಪಿಸಿದೆ. ಪಾಠಕ್ ವಿರುದ್ಧ ದಾಖಲಾದ ಎಫ್‌ಐಆರ್ ಕುರಿತು ಹೆಚ್ಚಿನ ಮಾಹಿತಿ ಲಭ್ಯವಾಗಿಲ್ಲ. ಏ.24ರಂದು ಆಪ್ ಪಕ್ಷದ 10ರಲ್ಲಿ 7 ಸಂಸದರು, ಕೇಜ್ರಿವಾಲ್ ನೇತೃತ್ವದಲ್ಲಿ ಪಕ್ಷ ತನ್ನ ಮೂಲ ಸಿದ್ಧಾಂತ ಮತ್ತು ಮೌಲ್ಯಗಳನ್ನು ಕಳೆದುಕೊಂಡು ಭ್ರಷ್ಟಾಚಾರದಲ್ಲಿ ಮುಳುಗಿರುವ ಕಾರಣ ಪಕ್ಷ ತ್ಯಜಿಸಿ ಬಿಜೆಪಿ ಪಕ್ಷದಲ್ಲಿ ವಿಲೀನವಾಗುವುದನ್ನು ಘೋಷಿಸಿದ್ದರು.



ಮತ ಎಣಿಕೆ: ಹೆಚ್ಚುವರಿ ಪೊಲೀಸ್‌ಗೆ ಟಿವಿಕೆ ಮನವಿ

ಚೆನ್ನೈ: ತಮಿಳುನಾಡಿನಾದ್ಯಂತ ಎಲ್ಲಾ ಮತ ಎಣಿಕೆ ಕೇಂದ್ರಗಳಲ್ಲೂ ಹೆಚ್ಚುವರಿ ಪೊಲೀಸ್ ಸಿಬ್ಬಂದಿ ನಿಯೋಜಿಸಬೇಕೆಂದು ದಳಪತಿ ವಿಜಯ್ ನಾಯಕತ್ವದ ತಮಿಳಗ ವೆಟ್ರಿ ಕಳಗಂ (ಟಿವಿಕೆ) ಪಕ್ಷ ಚುನಾವಣಾ ಆಯೋಗಕ್ಕೆ ಮನವಿ ಮಾಡಿಕೊಂಡಿದೆ. ಏ.23ರಂದು ತಮಿಳುನಾಡಿನ 234 ವಿಧಾನಸಭೆ ಕ್ಷೇತ್ರಗಳಿಗಾಗಿ ಮತದಾನ ನಡೆದಿದ್ದು, ಮೇ 4ರಂದು ಮತ ಎಣಿಕೆಯಾಗಿ ಅಂದೇ ಫಲಿತಾಂಶ ಪ್ರಕಟವಾಗಲಿದೆ. ಶ್ರೀರಂಗಂ ಕ್ಷೇತ್ರದಲ್ಲಿ ಟಿವಿಕೆ ಪಕ್ಷದ ಎರಡು ಕಚೇರಿಗಳಿಗೆ ದುಷ್ಕರ್ಮಿಗಳು ಬೆಂಕಿ ಹಚ್ಚಿ ಧ್ವಂಸ ಮಾಡಿದ್ದರು.



ಈ ಹಿನ್ನೆಲೆ ಎಲ್ಲಾ ಮತ ಎಣಿಕೆ ಕೇಂದ್ರಗಳಲ್ಲಿ ಸಮಾಜ ವಿರೋಧಿ ಶಕ್ತಿಗಳು ಟಿವಿಕೆ ಏಜೆಂಟುಗಳ ಮೇಲೆ ಮತ್ತು ಮತ ಎಣಿಕೆ ಪ್ರಕ್ರಿಯೆಗೆ ತೊಂದರೆ ಮಾಡುವ ಸಾಧ್ಯತೆಯಿದ್ದು, ಹೆಚ್ಚುವರಿ ಪೊಲೀಸ್ ನಿಯೋಜಿಸಬೇಕೆಂದು ಟಿವಿಕೆ ಪ್ರಧಾನ ಕಾರ್ಯದರ್ಶಿ ಆಧವ್ ಅರ್ಜುನ, ಮುಖ್ಯ ಚುನಾವಣಾ ಅಧಿಕಾರಿ ಅರ್ಚನಾ ಪಟ್ನಾಯಕ್ ಅವರಿಗೆ ಮನವಿ ಸಲ್ಲಿಸಿದ್ದಾರೆ. ಇದೇ ವೇಳೆ ವೈಯಕ್ತಿಕ ಕಾರಣಗಳಿಂದ ಶನಿವಾರ ವೇಲಂಕಣಿ ಚರ್ಚ್ ಭೇಟಿಯನ್ನು ವಿಜಯ್ ಕೊನೆಯ ಕ್ಷಣದಲ್ಲಿ ರದ್ದುಗೊಳಿಸಿದ್ದು, ಅಭಿಮಾನಿಗಳಿಗೆ ನಿರಾಸೆ ಮೂಡಿಸಿದೆ. ಇತ್ತೀಚೆಗೆ ತಿರುಚೆಂದೂರ್ ಮುರುಗನ್ ಮತ್ತು ಶಿರಡಿ ಸಾಯಿಬಾಬಾ ದೇವಸ್ಥಾನಗಳಿಗೆ ವಿಜಯ್ ಭೇಟಿ ನೀಡಿದ್ದರು.

ಐಇಡಿ ಸ್ಫೋಟಗೊಂಡು ನಾಲ್ಕು ಪೊಲೀಸರ ಸಾವು

ಕಂಕೇರ್: ಛತ್ತೀಸ್‌ಗಢದ ಕಂಕೇರ್ ಜಿಲ್ಲೆಯ ಆದ್ನಾರ್ ಗ್ರಾಮದ ಅರಣ್ಯ ಪ್ರದೇಶದಲ್ಲಿ ಶನಿವಾರ ಮೈನ್‌ಗಳನ್ನು ತೆರವುಗೊಳಿಸುವ ಕಾರ್ಯಾಚರಣೆಯ ವೇಳೆ ಸುಧಾರಿತ ಸ್ಫೋಟಕ ಸಾಧನ(ಐಇಡಿ) ಸ್ಫೋಟಗೊಂಡು ನಾಲ್ವರು ಪೊಲೀಸ್ ಸಿಬ್ಬಂದಿ ಮೃತಪಟ್ಟಿದ್ದಾರೆ.

ನಾರಾಯಣಪುರ ಜಿಲ್ಲೆಯ ಗಡಿಯ ಸಮೀಪವಿರುವ ಆಡ್ನಾರ್ ಅರಣ್ಯದಲ್ಲಿ ಬೆಳಗ್ಗೆ 11:30ರ ಸುಮಾರಿಗೆ ಭದ್ರತಾ ಪಡೆಗಳ ಜಂಟಿ ತಂಡ ಸ್ಫೋಟಕಗಳನ್ನು ನಿಷ್ಕ್ರಿಯಗೊಳಿಸುತ್ತಿದ್ದಾಗ ಈ ಅಪಘಾತ ಸಂಭವಿಸಿದೆ. ಮೃತರನ್ನು ಜಿಲ್ಲಾ ಮೀಸಲು ಪಡೆಯ(ಡಿಆರ್‌ಜಿ) ಇನ್ಸ್‌ಪೆಕ್ಟರ್ ಸುಖರಾಮ್ ವಟ್ಟಿ, ಕಾನ್ಸ್‌ಟೇಬಲ್ ಕೃಷ್ಣ ಕೊಮ್ರಾ ಮತ್ತು ಬಸ್ತಾರ್ ಫೈಟರ್ಸ್‌ನ ಕಾನ್ಸ್‌ಟೇಬಲ್‌ಗಳಾದ ಸಂಜಯ್ ಗಡ್ಪಾಲೆ ಮತ್ತು ಪರಮಾನಂದ ಕೊಮ್ರಾ ಎಂದು ಗುರುತಿಸಲಾಗಿದೆ. ಈ ವರ್ಷ ನಕ್ಸಲ್ ವಿರೋಧಿ ಕಾರ್ಯಾಚರಣೆಯಲ್ಲಿ ಭದ್ರತಾ ಸಿಬ್ಬಂದಿ ಪ್ರಾಣ ಕಳೆದುಕೊಂಡ ಮೊದಲ ಘಟನೆ ಇದಾಗಿದೆ.

ಬಸ್ತಾರ್ ವಲಯದ ಐಜಿ ಸುಂದರರಾಜ್ ಪಟ್ಟಿಲಿಂಗಂ ಪ್ರಕಾರ, ನಕ್ಸಲರ ಅಡಗುತಾಣಗಳ ಬಗ್ಗೆ ಸಿಕ್ಕ ಮಾಹಿತಿಯ ಮೇರೆಗೆ ಈ ಕಾರ್ಯಾಚರಣೆ ಕೈಗೊಳ್ಳಲಾಗಿತ್ತು. ನೆಲದಡಿಯಲ್ಲಿ ಬಚ್ಚಿಟ್ಟಿದ್ದ ಐಇಡಿಯನ್ನು ಹೊರತೆಗೆಯುವಾಗ ಆಕಸ್ಮಿಕವಾಗಿ ಸರ್ಕ್ಯೂಟ್ ಸಂಪರ್ಕ ಉಂಟಾಗಿ ಸ್ಫೋಟ ಸಂಭವಿಸಿದೆ ಎಂದು ಪ್ರಾಥಮಿಕ ತನಿಖೆಯಿಂದ ತಿಳಿದುಬಂದಿದೆ. ಮಾ.31ರಂದು ಛತ್ತೀಸ್‌ಗಢವನ್ನು ಸಶಸ್ತ್ರ ಮಾವೋವಾದ ಮುಕ್ತ ರಾಜ್ಯ ಎಂದು ಘೋಷಿಸಿದ ನಂತರ ನಡೆದ ಮೊದಲ ನಕ್ಸಲ್ ಸಂಬಂಧಿತ ಸ್ಫೋಟ ಇದಾಗಿದೆ. ಸಿಬ್ಬಂದಿ ಪ್ರಮಾಣಿತ ಕಾರ್ಯಾಚರಣಾ ವಿಧಾನಗಳ ಪ್ರಕಾರವೇ ಕೆಲಸ ಮಾಡುತ್ತಿದ್ದರು ಎಂದು ಉಪಮುಖ್ಯಮಂತ್ರಿ ವಿಜಯ ಶರ್ಮಾ ತಿಳಿಸಿದ್ದಾರೆ.

ಉಭಯ ರಂಗದ ಭವಿಷ್ಯ ಬರೆಯಲಿರುವ ಬಿಜೆಪಿ!


ತಿರುವನಂತಪುರಂ: ಕೇರಳ ವಿಧಾನಸಭೆಯ 140ಸ್ಥಾನಗಳಿಗೆ ಏ.9ರಂದು ನಡೆದ ಮತದಾನದ ಫಲಿತಾಂಶ ಬರಲು ಇನ್ನು ಎರಡೇ ದಿನ ಬಾಕಿ ಉಳಿದಿದ್ದು, ಮೇ 4ರ ಮತ ಎಣಿಕೆಯತ್ತ ಈಗ ಎಲ್ಲರ ದೃಷ್ಟಿ ನೆಟ್ಟಿದೆ. ಈ ಬಾರಿ ಆಳುವ ಸಿಪಿಎಂ ನೇತೃತ್ವದ ಎಡರಂಗ ಅಧಿಕಾರ ಕಳೆದುಕೊಳ್ಳುವುದು ಬಹುತೇಕ ನಿಶ್ಚಿತ ಎಂಬ ಮಾತು ಕೇಳಿಬಂದಿದ್ದು, ವಿಪಕ್ಷ ಯುಡಿಎಫ್ ಅಧಿಕಾರಕ್ಕೆ ಬರಲಿದೆ ಎಂದು ಸಮೀಕ್ಷೆಗಳು ತಿಳಿಸುತ್ತಿವೆ. ಈ ನಡುವೆ ಉಭಯ ರಂಗಗಳ ಭವಿಷ್ಯ ಈ ಬಾರಿ ಬಿಜೆಪಿ ಪಡೆಯುವ ಮತ-ಸ್ಥಾನಗಳನ್ನು ಅವಲಂಬಿಸಿದೆ ಎಂಬುದಾಗಿ ವಿಶ್ಲೇಷಿಸಲಾಗುತ್ತಿದೆ.

ನಾಳೆ ಕೇರಳ ವಿಧಾನಸಭಾ ಚುನಾವಣಾ ಫಲಿತಾಂಶ

ಈ ಹಿಂದಿನ ಚುನಾವಣೆಗಳಲ್ಲಿ ಬಿಜೆಪಿ ಅಷ್ಟೇನೂ ಪ್ರಭಾವಿಯಾಗಿರಲಿಲ್ಲ. ಪ್ರಭಾವಿಯಾಗಿದ್ದ ಕೆಲವು ಸ್ಥಾನಗಳಲ್ಲಿ ಯುಡಿಎಫ್ ಮತ್ತು ಎಲ್‌ಡಿಎಫ್‌ಗಳು ಪರಸ್ಪರ ಅಡ್ಡಮತದಾನ ಮಾಡುವ ಮೂಲಕ ಬಿಜೆಪಿ ಗೆಲ್ಲದಂತೆ ನೋಡಿಕೊಳ್ಳುತ್ತಿದ್ದವು. ಆದರೆ, ಈ ಬಾರಿ ಕೆಲವೆಡೆ ಅಂತಹ ತಂತ್ರಗಳನ್ನು ಹೆಣೆಯಲಾಗಿದ್ದರೂ, ಒಟ್ಟಾರೆ ಪರಿಸ್ಥಿತಿ ಭಿನ್ನವಾಗಿದ್ದು ಬಿಜೆಪಿ ಪ್ರಬಲ ಸ್ಪರ್ಧೆ ಒಡ್ಡಿರುವುದು ಮತದಾನೋತ್ತರ ಸಮೀಕ್ಷೆಗಳಿಂದಲೂ ಸ್ಪಷ್ಟವಾಗಿದೆ. ಕೇರಳದ ಮಾಧ್ಯಮ ಸಮೀಕ್ಷೆಗಳು ಸೇರಿದಂತೆ ರಾಷ್ಟ್ರೀಯ ಮಾಧ್ಯಮಗಳು ಈ ಬಾರಿ ಕೇರಳದಲ್ಲಿ ಬಿಜೆಪಿ ಪ್ರಬಲ ಶಕ್ತಿಯಾಗಿರುವುದನ್ನು ಗುರುತಿಸಿವೆ. ಈ ಬಾರಿಯ ಚುನಾವಣೆಯಲ್ಲಿ ಯುಡಿಎಫ್ ಶೇ.37, ಎಲ್‌ಡಿಎಫ್ ಶೇ.36, ಬಿಜೆಪಿ ನೇತೃತ್ವದ ಎನ್‌ಡಿಎ ಶೇ.22 ಮತಗಳನ್ನು ಗಳಿಸಲಿದೆ ಎಂದು ಅಂದಾಜಿಸಿರುವುದು ಗಮನಾರ್ಹವಾಗಿದೆ.

ಲೇಖಕ ಪ್ರಸೂನ್ ಜೋಶಿ ಪ್ರಸಾರ ಭಾರತಿ ಅಧ್ಯಕ್ಷ

ಹೊಸದಿಲ್ಲಿ: ಖ್ಯಾತ ಗೀತರಚನೆಗಾರ, ಲೇಖಕ ಹಾಗೂ ಸಂವಹನ ತಜ್ಞರಾಗಿರುವ ಪ್ರಸೂನ್ ಜೋಶಿ ಅವರನ್ನು ಭಾರತದ ಸಾರ್ವಜನಿಕ ಪ್ರಸಾರ ಸಂಸ್ಥೆಯಾದ ಪ್ರಸಾರ ಭಾರತಿ ಅಧ್ಯಕ್ಷರಾಗಿ ಕೇಂದ್ರ ಸರ್ಕಾರ ನೇಮಕ ಮಾಡಿದೆ.



ಕೇಂದ್ರ ಮಾಹಿತಿ ಮತ್ತು ಪ್ರಸಾರ ಸಚಿವಾಲಯ ಶನಿವಾರ ಈ ಕುರಿತು ಅಧಿಕೃತ ಪ್ರಕಟಣೆ ನೀಡಿದ್ದು, ಸಾಹಿತ್ಯ, ಜಾಹೀರಾತು, ಸಿನೆಮಾ ಮತ್ತು ಸಾರ್ವಜನಿಕ ಸಂವಹನ ಕ್ಷೇತ್ರಗಳಲ್ಲಿ ವಿಶಿಷ್ಟ ಸಾಧನೆ ಮಾಡಿದ ಜೋಶಿ ಅವರ ನೇಮಕ ಮಹತ್ವದ್ದಾಗಿದೆ ಎಂದು ಹೇಳಿದೆ. ವಿವಿಧ ಕ್ಷೇತ್ರಗಳಲ್ಲಿ ಸೃಜನಾತ್ಮಕ ಕೊಡುಗೆ ನೀಡಿರುವ ಜೋಶಿ, ತಮ್ಮ ಗೀತರಚನೆ, ಜಾಹೀರಾತು ಅಭಿಯಾನಗಳು ಹಾಗೂ ಸಾಮಾಜಿಕ ಸಂದೇಶ ಹೊತ್ತ ಕಥನಗಳ ಮೂಲಕ ದೇಶದಾದ್ಯಂತ ಪ್ರಭಾವ ಬೀರುತ್ತಿದ್ದಾರೆ. ಅವರ ಬರಹಗಳಲ್ಲಿ ಭಾರತೀಯ ಸಂಸ್ಕೃತಿ ಮತ್ತು ಮಣ್ಣಿನ ಸುಗಂಧ ಸ್ಪಷ್ಟವಾಗಿ ಕಾಣುತ್ತದೆ ಎಂದು ಸರ್ಕಾರ ಅಭಿಪ್ರಾಯಪಟ್ಟಿದೆ. ಈ ನೇಮಕಾತಿ ಕುರಿತು ಕೇಂದ್ರ ಮಾಹಿತಿ ಮತ್ತು ಪ್ರಸಾರ ಸಚಿವ ಅಶ್ವಿನಿ ವೈಷ್ಣವ್ ಅಭಿನಂದನೆ ಸಲ್ಲಿಸಿದ್ದು, 'ಪ್ರಸೂನ್ ಜೋಶಿ ಅವರಂತಹ ಸೃಜನಾತ್ಮಕ ವ್ಯಕ್ತಿತ್ವವು ಜಾಗತಿಕ ಮಟ್ಟದಲ್ಲಿ ಗುರುತಿಸಿಕೊಂಡಿದ್ದರೂ, ಅವರ ಹೃದಯ ಭಾರತಕ್ಕಾಗಿ ತುಡಿಯುತ್ತಿರುತ್ತದೆ' ಎಂದು ಹೇಳಿದ್ದಾರೆ. ಹಾಗೆಯೇ, 'ಪ್ರಸೂನ್ ಜೋಶಿ ಅವರ ನೇತೃತ್ವದಲ್ಲಿ ಪ್ರಸಾರ ಭಾರತಿ ಹೊಸ ಚೈತನ್ಯ, ಗಾಢ ಉದ್ದೇಶ ಮತ್ತು ಸೃಜನಾತ್ಮಕ ಧ್ವನಿಯನ್ನು ಪಡೆಯಲಿದೆ' ಎಂದು ಅವರು ವಿಶ್ವಾಸ ವ್ಯಕ್ತಪಡಿಸಿದರು.

ನಾಸಿಕ್ ಮತಾಂತರ ಪ್ರಕರಣ: ನಿದಾಗೆ ಇಲ್ಲ ಜಾಮೀನು

ನಾಸಿಕ್: ಟಿಸಿಎಸ್ ನಾಸಿಕ್ ಲೈಂಗಿಕ ಕಿರುಕುಳ ಹಾಗೂ ಬಲವಂತದ ಮತಾಂತರ ಪ್ರಕರಣದ ಪ್ರಮುಖ ಆರೋಪಿ ನಿದಾ ಖಾನ್‌ಗೆ ನಿರೀಕ್ಷಣಾ ಜಾಮೀನು ನೀಡಲು ನಾಸಿಕ್ ನ್ಯಾಯಾಲಯ ನಿರಾಕರಿಸಿದೆ. ಈಕೆಯ ಕಸ್ಟಡಿ ವಿಚಾರಣೆ ಅಗತ್ಯವಿದ್ದು ಜಾಮೀನು ನೀಡಬಾರದು ಎಂದು ಪ್ರಾಸಿಕ್ಯೂಶನ್ ವಕೀಲರು ವಾದಿಸಿದರು. ಹೀಗಾಗಿ ಕೋರ್ಟ್, ನಿರೀಕ್ಷಣಾ ಜಾಮೀನು ಅರ್ಜಿ ತಿರಸ್ಕರಿಸಿ, ಅಂತಿಮ ಆದೇಶ ಶೀಘ್ರ ಪ್ರಕಟಿಸುವುದಾಗಿ ತಿಳಿಸಿದೆ. ಎಫ್‌ಐಆರ್ ಪ್ರಕಾರ, ನಿದಾ ಮಹಿಳಾ ಸಿಬ್ಬಂದಿಗೆ ಇಸ್ಲಾಮಿಕ್ ಉಡುಗೆ ಮತ್ತು ವರ್ತನೆ ಪಾಲಿಸಲು ಸಲಹೆ ನೀಡಿದ್ದಾಳೆಂಬ ಆರೋಪವಿದೆ. ನಿದಾ ಪತ್ತೆಗಾಗಿ ಮಹಾರಾಷ್ಟ್ರದ ವಿವಿಧ ಭಾಗಗಳಲ್ಲಿ ಪೊಲೀಸರು ಶೋಧ ಕಾರ್ಯಾಚರಣೆ ನಡೆಸುತ್ತಿದ್ದಾರೆ. ನಾಸಿಕ್ ಪೊಲೀಸ್ ವಿಶೇಷ ತನಿಖಾ ತಂಡ(ಎಸ್‌ಐಟಿ) ಒಟ್ಟು 9 ಪ್ರಕರಣ ದಾಖಲಿಸಿದ್ದು, ಲೈಂಗಿಕ ಕಿರುಕುಳ ಆರೋಪದಲ್ಲಿ 8 ಜನರನ್ನು ಬಂಧಿಸಿದೆ.

ದೂರಗಾಮಿ ಹಡಗು ನಿರೋಧಕ ಕ್ಷಿಪಣಿ ಪರೀಕ್ಷೆ ಯಶಸ್ವಿ

ಭಾರತದ ಸಮುದ್ರ ದಾಳಿ ಶಕ್ತಿ ವರ್ಧನೆ

ಭುವನೇಶ್ವರ: ಒಡಿಶಾ ಕರಾವಳಿಯಲ್ಲಿ ದೂರಗಾಮಿ ಹೈಪರ್‌ಸಾನಿಕ್ ಹಡಗು ನಿರೋಧಕ ಕ್ಷಿಪಣಿಯನ್ನು ಭಾರತ ಶುಕ್ರವಾರ ಯಶಸ್ವಿಯಾಗಿ ಪರೀಕ್ಷಿಸುವ ಮೂಲಕ ದೇಶದ ಸ್ವದೇಶಿ ರಕ್ಷಣಾ ಸಾಮರ್ಥ್ಯ ಮತ್ತು ಸಮುದ್ರದಲ್ಲಿ ದಾಳಿ ನಡೆಸಬಲ್ಲ ಶಕ್ತಿಯಲ್ಲಿ ಮಹತ್ವದ ಮೈಲಿಗಲ್ಲು ಸಾಧಿಸಿದೆ.

ರಕ್ಷಣಾ ಸಂಶೋಧನೆ ಮತ್ತು ಅಭಿವೃದ್ಧಿ ಸಂಸ್ಥೆ(ಡಿಆರ್‌ಡಿಒ) ಕರಾವಳಿ ರಕ್ಷಣಾ ಸೌಲಭ್ಯ ಬಳಸಿ ಈ ದೂರಗಾಮಿ ಹಡಗು ನಿರೋಧಕ ಕ್ಷಿಪಣಿಯ ಎರಡನೇ ಹಂತದ ಪರೀಕ್ಷೆ ನಡೆಸಿತು. ಈ ಕ್ಷಿಪಣಿ, 1,500 ಕಿಮೀ ದೂರದಲ್ಲಿರುವ ನಿಗದಿತ ಗುರಿಯನ್ನು ನಿಖರವಾಗಿ ತಲುಪಿದೆ. ಇದು ಯೋಜಿತ ಪಥವನ್ನು ಅನುಸರಿಸಿದ್ದು, ಮಧ್ಯಂತರ ಚಲನೆ ಮತ್ತು ನಿಖರ ಮಾರ್ಗದರ್ಶನ ಸೇರಿದಂತೆ ಎಲ್ಲಾ ಮಿಷನ್ ಉದ್ದೇಶಗಳನ್ನು ಪೂರೈಸಿದೆ. ಇದರ ಪ್ರೊಪಲ್ಷನ್ ಸಿಸ್ಟಮ್ ಮತ್ತು ಏರ್‌ಫ್ರೇಮ್ ದೃಢತೆ ಪ್ರದರ್ಶಿಸಿದೆ.

ಅಡ್ವಾನ್ಸ್ಡ್ ಸಿಸ್ಟಮ್ಸ್ ಲ್ಯಾಬೋರೇಟರಿ ನೇತೃತ್ವದ ಈ ಯೋಜನೆ, ಸೂಪರ್‌ಸಾನಿಕ್ ಕ್ರೂಸ್ ಕ್ಷಿಪಣಿಗಳು ಮತ್ತು ದೂರಗಾಮಿ ಬ್ಯಾಲಿಸ್ಟಿಕ್ ಪ್ಲಾಟ್‌ಫಾರ್ಮ್‌ಗಳ ನಡುವಿನ ಕಾರ್ಯತಂತ್ರದ ಅಂತರವನ್ನು ತುಂಬುತ್ತದೆ. ಸುಧಾರಿತ ಹೈಪರ್‌ಸಾನಿಕ್ ದಾಳಿ ವ್ಯವಸ್ಥೆಯನ್ನು ನಿಯೋಜಿಸುವ ಸಾಮರ್ಥ್ಯವಿರುವ ವಿಶ್ವದ ಆಯ್ದ ರಾಷ್ಟ್ರಗಳ ಗುಂಪಿಗೆ ಭಾರತ ಸೇರ್ಪಡೆಯಾಗಿದೆ.



ಶತ್ರು ರಡಾರ್‌ಗೆ ಸಿಗಲ್ಲ ಸುಳಿವು!

ಈ ಸ್ವದೇಶಿ ಶಸ್ತ್ರಾಸ್ತ್ರ ವ್ಯವಸ್ಥೆ, ಎರಡು ಹಂತದ ಘನ-ಇಂಧನ ಚಾಲಿತ ಹೈಪರ್‌ಸಾನಿಕ್ ಗ್ಲೈಡ್ ವಾಹನವಾಗಿ ಕಾರ್ಯನಿರ್ವಹಿಸುತ್ತದೆ. ಇದು ಆರಂಭಿಕ ಹಂತದಲ್ಲಿ ಮ್ಯಾಕ್ 10 ವೇಗವನ್ನು ತಲುಪಿ, ನಂತರ ಸರಾಸರಿ ಮ್ಯಾಕ್ 5 ವೇಗವನ್ನು ಕಾಯ್ದುಕೊಳ್ಳುವಂತೆ ವಿನ್ಯಾಸಗೊಳಿಸಲಾಗಿದೆ. ಈ ಕ್ಷಿಪಣಿ, ಅರೆ-ಬ್ಯಾಲಿಸ್ಟಿಕ್ ಪಥವನ್ನು ಅನುಸರಿಸುವುದರಿಂದ ಮತ್ತು ಕಡಿಮೆ ಎತ್ತರದಲ್ಲಿ ಹಾರುವುದರಿಂದ ರಡಾರ್ ಬಳಸಿ ಪತ್ತೆ ಮತ್ತು ತಡೆಯುವುದು ಕಷ್ಟ. ಇದು ಸ್ಥಿರ ಮತ್ತು ಚಲಿಸುವ ಸಮುದ್ರ ಗುರಿಗಳ ಮೇಲೆ ದಾಳಿ ಮಾಡಬಲ್ಲದು.

ಉ.ಪ್ರದೇಶದಲ್ಲಿ ಬುರ್ಖಾಧಾರಿ ಮಹಿಳೆಗೆ ದೌರ್ಜನ್ಯ

ದುಷ್ಕರ್ಮಿಗೆ ಗುಂಡಿಕ್ಕಿ ಬಂಧನ

ಮೊರದಾಬಾದ್: ಉತ್ತರಪ್ರದೇಶದ ಮೊರಾದಾಬಾದ್‌ನ ನಿರ್ಜನ ಬೀದಿಯಲ್ಲಿ ಒಂಟಿಯಾಗಿ ಸಾಗುತ್ತಿದ್ದ ಬುರ್ಖಾಧಾರಿ ಮಹಿಳೆಯ ಮೇಲೆ ಲೈಂಗಿಕ ದೌರ್ಜನ್ಯ ಎಸಗಿ ಬಂಧನಕ್ಕೆ ಮುಂದಾದ ಪೊಲೀಸರ ಮೇಲೆಯೇ ಗುಂಡಿನ ದಾಳಿ ನಡೆಸಿದ್ದ ದುಷ್ಕರ್ಮಿಯೊಬ್ಬನ ಕಾಲಿಗೆ ಗುಂಡಿಕ್ಕಿ ಪೊಲೀಸರು ಬಂಧಿಸಿದ್ದಾರೆ. ಗುರುವಾರ ರಾತ್ರಿ 11 ಗಂಟೆ ಸುಮಾರಿಗೆ ಇಲ್ಲಿನ ಜಾಮಾ ಮಸೀದಿ ಬಳಿ ಪೊಲೀಸರು ಈ ಕಾರ್ಯಾಚರಣೆ ನಡೆಸಿದ್ದಾರೆ.

ಘಟನೆಯ ಎರಡು ದಿನಗಳ ನಂತರ ಸಿಸಿಟಿವಿ ದೃಶ್ಯಗಳನ್ನು ಆಧರಿಸಿ ಪೊಲೀಸರು ಆರೋಪಿಯ ಬಂಧನಕ್ಕೆ ಬಲೆ ಬೀಸಿದ್ದರು, ಆತನನ್ನು ಬಂಧಿಸಲು ಐದು ತಂಡಗಳು ನಿರಂತರ ಹುಡುಕಾಟ ನಡೆಸಿದ್ದವು. ಆರೋಪಿಯು ಮೊಘಲ್‌ಪುರ ಪೊಲೀಸ್ ಠಾಣೆ ಪ್ರದೇಶದ ರಾಮಗಂಗಾ ನದಿಯ ದಡದಲ್ಲಿಅಡಗಿದ ಮಾಹಿತಿ ಪಡೆದ ಪೊಲೀಸರು ಆ ಪ್ರದೇಶವನ್ನು ಸುತ್ತುವರಿದು ಆತನನ್ನು ಶರಣಾಗುವಂತೆ ಸೂಚಿಸಿದ್ದಾರೆ. ಆದರೆ ಆತ ಪೊಲೀಸರತ್ತಲೇ ಗುಂಡು ಹಾರಿಸಿದ್ದಾನೆ. ಆತ್ಮರಕ್ಷಣೆಗಾಗಿ ಪೊಲೀಸರು ಆತನ ಕಾಲಿಗೆ ಪ್ರತಿ ಗುಂಡು ಹಾರಿಸಿ ಬಂಧಿಸಿದ್ದಾರೆ. ಆರೋಪಿಯು ಈ ಹಿಂದೆಯೂ ಹಲವಾರು ಮಹಿಳೆಯರಿಗೆ ಕಿರುಕುಳ ನೀಡಿದ್ದನೆಂದು ತನಿಖೆಯಲ್ಲಿ ತಿಳಿದುಬಂದಿದೆ. ಆದರೆ ಯಾರೂ ಆತನ ವಿರುದ್ಧ ಔಪಚಾರಿಕ ದೂರು ದಾಖಲಿಸಿರಲಿಲ್ಲ. ಈ ಬಾರಿ ಸಿಸಿಟಿವಿ ಪುರಾವೆಗಳು ಹೊರಬಂದ ನಂತರ ಪೊಲೀಸರು ತ್ವರಿತ ಕ್ರಮ ಕೈಗೊಂಡಿದ್ದಾರೆ. ಆರೋಪಿಯಿಂದ ಪೊಲೀಸರು ಒಂದು ಪಿಸ್ತೂಲ್ ಮತ್ತು ಮೂರು ಜೀವಂತ ಕಾರ್ಟ್ರಿಡ್ಜ್‌ಗಳನ್ನು ವಶಪಡಿಸಿಕೊಂಡಿದ್ದಾರೆ. ಆರೋಪಿಯ ಅಪರಾಧ ಇತಿಹಾಸವನ್ನು ಸಹ ತನಿಖೆ ಮಾಡಲಾಗುತ್ತಿದೆ ಎಂದು ಅಧಿಕಾರಿಗಳು ಹೇಳಿದ್ದಾರೆ. ಪೊಲೀಸರು ಸಂತ್ರಸ್ತೆಯನ್ನು ಸಹ ಪತ್ತೆಹಚ್ಚಿದ್ದು ಆಕೆ ದೂರಿನ ಆಧಾರದ ಮೇಲೆ ಆರೋಪಿ ವಿರುದ್ಧ ಪ್ರಕರಣ ದಾಖಲಿಸಲಾಗಿದೆ. ಸಿಸಿಟಿವಿ ದೃಶ್ಯಗಳಲ್ಲಿ ಬುರ್ಖಾ ಧರಿಸಿದ ಮಹಿಳೆ ರಸ್ತೆಯಲ್ಲಿ ನಡೆದುಕೊಂಡು ಹೋಗುತ್ತಿರುವಾಗ, ಆರೋಪಿ ಇದ್ದಕ್ಕಿದ್ದಂತೆ ಹಿಂದಿನಿಂದ ಬಂದು ಆಕೆಗೆ ಲೈಂಗಿಕ ಕಿರುಕುಳ ನೀಡಿದ್ದನು. ಮಹಿಳೆ ಕಿರುಚಿದಾಗ ಆರೋಪಿ ಅಲ್ಲಿಂದ ಓಡಿಹೋಗಿದ್ದನು. ಇಡೀ ಘಟನೆ ಕ್ಯಾಮೆರಾದಲ್ಲಿ ದಾಖಲಾಗಿದ್ದು, ಆರೋಪಿಗಳನ್ನು ಪತ್ತೆಹಚ್ಚುವಲ್ಲಿ ಪೊಲೀಸರಿಗೆ ಸಹಾಯ ಮಾಡುವಲ್ಲಿ ಇದು ಪ್ರಮುಖ ಪಾತ್ರ ವಹಿಸಿದೆ.

ಪುರಸಭೆ ಕಾರ್ಯಾಲಯ, ಕಾಪು

ಕೊಟೇಶನ್ ಪ್ರಕಟಣೆ

ಕ್ರ.ಸಂ:ಪುಸಕಾ/ತಾಂತ್ರಿಕ/ಸಿ.ಆರ್/02/2026–27 ದಿನಾಂಕ : 02–05–2026

ಕಾಪು ಪುರಸಭಾ ಕಛೇರಿಯ ಲಿಫ್ಟ್‌ನ್ನು ನೆಲ ಅಂತಸ್ತಿನಿಂದ 1ನೇ ಅಂತಸ್ತಿಗೆ ಉಪಯೋಗವಾಗುವಂತೆ 1 ವರ್ಷಕ್ಕೆ ನಿರ್ವಹಣೆ ಮಾಡುವ ಕಾರ್ಯಕ್ಕೆ ದುರಸ್ತಿ ಪಡಿಸಿ ದರ ಸೂಚಿಸಿದ ಕೊಟೇಶನ್ ಆಹ್ವಾನಿಸಲಾಗಿದೆ. ಆಸಕ್ತಿಯುಳ್ಳವರು **ದಿನಾಂಕ:18–05–2026 ರಂದು ಸಂಜೆ 4:00 ಗಂಟೆಯೊಳಗೆ** ಅರ್ಜಿಯೊಂದಿಗೆ ಮೊಹರು ಮಾಡಲ್ಪಟ್ಟ ಕೊಟೇಶನನ್ನು ಕಛೇರಿಗೆ ಸಲ್ಲಿಸತಕ್ಕದ್ದು. ನಂತರ ಬಂದಿರುವ ಕೊಟೇಶನ್‌ಗಳನ್ನು ಸ್ವೀಕರಿಸಲಾಗುವುದಿಲ್ಲ. ಬಂದಿರುವ ಕೊಟೇಶನ್‌ಗಳನ್ನು ಅದೇ ದಿನ **ಸಂಜೆ 5:15ಕ್ಕೆ** ಹಾಜರಿರುವ ಕೊಟೇಶನ್‌ದಾರರ ಸಮಕ್ಷಮದಲ್ಲಿ ತೆರೆಯಲಾಗುವುದು. ನಿರ್ವಹಣೆ ಕಾರ್ಯ ತೃಪ್ತಿಕರವಾಗಿದ್ದಲ್ಲಿ ಮುಂದಿನ 2 ವರ್ಷಗಳಿಗೆ ನಿರ್ವಹಣೆ ಅವಧಿಯನ್ನು ವಿಸ್ತರಿಸಲಾಗುವುದು. ಕೊಟೇಶನ್ ಷರತ್ತುಗಳು ಹಾಗೂ ಇನ್ನಿತರೇ ಹೆಚ್ಚಿನ ಮಾಹಿತಿಗಳನ್ನು **www.kauptown.mrc.gov.in** ವೆಬ್‌ಸೈಟ್‌ನಲ್ಲಿ ಅಥವಾ ರಜಾದಿನಗಳನ್ನು ಹೊರತುಪಡಿಸಿ ಕಛೇರಿ ವೇಳೆಯಲ್ಲಿ ತಾಂತ್ರಿಕ ಶಾಖೆಯಿಂದ ಪಡೆಯಬಹುದಾಗಿದೆ.

ಮುಖ್ಯಾಧಿಕಾರಿ, ಪುರಸಭೆ, ಕಾಪು, ಉಡುಪಿ ಜಿಲ್ಲೆ

ಕರ್ನಾಟಕ ಸರ್ಕಾರ

ಕಾರ್ಯನಿರ್ವಾಹಕ ಇಂಜನೀಯರರು, ಲೋಕೋಪಯೋಗಿ ಇಲಾಖೆ, ವಿಭಾಗ ಕಾರವಾರ

ಸಂ: ಕಾ.ನಿ.ಇಂ./ಲೋ.ಇ.ವಿ,ಕಾ/ಪಿ.ಬಿ–1/ಟೆಂಡರ–01/2026–27/392 ದಿನಾಂಕ : 29–04–2026

ಗುತ್ತಿಗೆ ಆಹ್ವಾನ ಪ್ರಕಟಣೆ (ಇ–ಪ್ರಕ್ಯೂರಮೆಂಟ್)

ಅರ್ಹ ಗುತ್ತಿಗೆದಾರರಿಂದ ಈ ಕೆಳಗಿನ ಕೋಷ್ಟಕದಲ್ಲಿ ವಿವರಿಸಿರುವ ಕಾಮಗಾರಿಗಳಿಗಾಗಿ ಕಾರ್ಯನಿರ್ವಾಹಕ ಇಂಜನೀಯರರು, ಲೋಕೋಪಯೋಗಿ ಇಲಾಖೆ ವಿಭಾಗ, ಕಾರವಾರ ಇವರಿಂದ ಗುತ್ತಿಗೆ ಆಹ್ವಾನಿಸಲಾಗಿದೆ. ಗುತ್ತಿಗೆದಾರರು ಕೋಷ್ಟಕದಲ್ಲಿ ಕೊಟ್ಟಿರುವ ಕಾಮಗಾರಿಯ ಗುತ್ತಿಗೆಯನ್ನು ಇ–ಪ್ರೊಕ್ಯೂರಮೆಂಟ್ ಮುಖಾಂತರ ಮಾತ್ರ ಸಲ್ಲಿಸುವದು. ಗುತ್ತಿಗೆಯನ್ನು ವಹಿಸಲು ಅರ್ಹರಾಗಬೇಕಾದಲ್ಲಿ ಗುತ್ತಿಗೆದಾರರು (ಕೆಡಬ್ಲೂ–4) ರಲ್ಲಿ ನಿಗದಿಪಡಿಸಿರುವ ಷರತ್ತುಗಳನ್ನು ಗಮನಿಸುವದು.

(1) ಗುತ್ತಿಗೆಗೆ ಸಂಬಂಧಿಸಿದ ವಿಚಾರಣೆಗೆ ಕೊನೆಯ ದಿ: 13–05–2026 16.30 ಗಂಟೆವರೆಗೆ (2) ಟೆಂಡರನ್ನು ಸ್ವೀಕರಿಸುವ ಕೊನೆಯ ದಿ: 14–05–2026 16.30 ಗಂಟೆವರೆಗೆ (3) ಟೆಂಡರನ ತಾಂತ್ರಿಕ ಬಿಡ್ ತೆರೆಯುವ ದಿ: 15–05–2026 17.00 ಗಂಟೆವರೆಗೆ (4) ಟೆಂಡರನ ಆರ್ಥಿಕ ಬಿಡ್ ತೆರೆಯುವ ದಿ: 18–05–2026 17.00 ಗಂಟೆವರೆಗೆ

ಕಾಮಗಾರಿಯ ಹೆಸರು: ಲೆಕ್ಕಶೀಷಿಕೆ: Mitigation- 8443-Deposite Contribution During 2025-26 ವರ್ಕ ಇನಡೆಂಟ್ (1) PWD/2025-26/FP/WORK_INDENT 33701 (2) PWD/2025-26/FP/WORK_INDENT34502

(ಕೆಡಬ್ಲೂ–4) ರಲ್ಲಿನ ನಿಭಂದನೆಗಳನ್ನು ಮುಂದಿನ ದಿನಗಳಲ್ಲಿ e-proc ನಲ್ಲಿ ಸೂಚಿಸಲಾದ ನಿಭಂದನೆಗಳನ್ನು ಇಲಾಖಾ ವೆಬ್‌ಸೈಟ್‌ನಲ್ಲಿ ಅಂದರೆ "https://kppp.karnataka.gov.in" ನೋಡಬಹುದು. ಹೆಚ್ಚಿನ ಮಾಹಿತಿಗಾಗಿ help desk Bangalore (Phone No. 918025501216 & 918025501227) ಇವರನ್ನು ಸಂಪರ್ಕಿಸಬಹುದು.

ಸಹಿ/– ಕಾರ್ಯನಿರ್ವಾಹಕ ಅಭಿಯಂತರರು, ಲೋಕೋಪಯೋಗಿ ಇಲಾಖೆ, ವಿಭಾಗ, ಕಾರವಾರ

DIPR/KWR/KSMCA/97/26-27 dt. 30.04.2026

ಕರ್ನಾಟಕ ನೀರಾವರಿ ನಿಗಮ ನಿಯಮಿತ

(ಕರ್ನಾಟಕ ಸರ್ಕಾರದ ಉದ್ಯಮ)

ಕಾರ್ಯಪಾಲಕ ಅಭಿಯಂತರವರ ಕಚೇರಿ ನಂ.2

ಕಾಲುವೆ ವಿಭಾಗ ವಡ್ಡರಹಟ್ಟಿ ಕ್ಯಾಂಪ್. ತಾ॥ ಗಂಗಾವತಿ, ಜಿ॥ ಕೊಪ್ಪಳ.

ಸಂ:ಕಾಅ.2/ಕನೀನಿನಿ/ತಾಂಶಾ/ಸಇ–3/ಟೆಂಡರ್/2026–27/112, ದಿ:29–04–2026

ಟೆಂಡರ್ ಪ್ರಕಟಣೆ (Call-2)

ಮಾನ್ಯ ವ್ಯವಸ್ಥಾಪಕ ನಿರ್ದೇಶಕರು ಕನೀನಿನಿ ಬೆಂಗಳೂರು ಇವರ ಪರವಾಗಿ ಕಾರ್ಯಪಾಲಕ ಅಭಿಯಂತರರು ನಂ.2 ಕಾಲುವೆ ವಿಭಾಗ ವಡ್ಡರಹಟ್ಟಿ ಕ್ಯಾಂಪ್ ಕಚೇರಿಯಿಂದ ಕರ್ನಾಟಕ ಲೋಕೋಪಯೋಗಿ ಇಲಾಖೆಯಲ್ಲಿ ನೋಂದಾಯಿಸಿದ ಅರ್ಹ ಗುತ್ತಿಗೆದಾರರಿಂದ ಇ–ಪೋರ್ಟಲ್ https://kppp.karnataka.gov.in ಮುಖಾಂತರ ಈ ವಿಭಾಗದಡಿ ಕೆಳಕಂಡ ಕಾಮಗಾರಿಗಳ ಶೇಕಡವಾರು ಟೆಂಡರ್‌ನ್ನು ಎರಡು ಲಕೋಟೆಯಲ್ಲಿ ಆಹ್ವಾನಿಸಲಾಗಿದೆ.

ಕಾಮಗಾರಿಯ ಸಂಖ್ಯೆ	Indent No: KNNL/2025-26/ OW/WORK_ INDENT	ಟೆಂಡರ್‌ಗಿಟ್ಟ ಮೊತ್ತ (ಜಿಎಸ್‌ಟಿ ಒಳಗೊಂಡು) (ರೂ. ಗಳಲ್ಲಿ)	ಇ ಎಮ್ ಡಿ ಮೊತ್ತ (ರೂ. ಗಳಲ್ಲಿ)	ವರ್ಗ
1	3456CALL-2	4,63,95,279=00	5,89,800=00	ಸಾಮಾನ್ಯ
2	3458CALL-2	4,87,95,375=00	6,20,300=00	ಸಾಮಾನ್ಯ
3	3459CALL-2	3,19,94,704=00	4,06,750=00	ಸಾಮಾನ್ಯ
4	3137CALL-2	63,98,064=00	54,500=00	ಪ.ಜಾ
5	3139CALL-2	47,98,000=00	40,700=00	ಪ.ಪಂ.

ಕಾಮಗಾರಿಗಳ ಇನ್ನು ಇತರೆ ಹೆಚ್ಚಿನ ವಿವರಗಳನ್ನು https://kppp.karnataka.gov.in ಜಾಲದಿಂದ ಪಡೆಯಬಹುದು. ಪೂರ್ವ ಬಿಡ್ ಸಭೆಯನ್ನು ಕಾರ್ಯಪಾಲಕ ಅಭಿಯಂತರರು ಕನೀನಿನಿ ನಂ.2 ಕಾಲುವೆ ವಿಭಾಗ ವಡ್ಡರಹಟ್ಟಿ ಕ್ಯಾಂಪ್ ಕಚೇರಿಯಲ್ಲಿ **ದಿನಾಂಕ: 07–05–2026** ರಂದು ಬೆಳಿಗ್ಗೆ **11:30 ಗಂಟೆಗೆ** ನಿರ್ವಹಿಸಲಾಗುತ್ತದೆ. ಟೆಂಡರ್ ಸಲ್ಲಿಸಲು ಕೊನೆಯ **ದಿನಾಂಕ: 31–05–2026** ರ ಮದ್ಯಾಹ್ನ **4:30** ಗಂಟೆಯವರೆಗೆ ಮತ್ತು ಟೆಂಡರ್‌ನ ತಾಂತ್ರಿಕ ಬಿಡ್ ಅನ್ನು ತೆರೆಯುವ **ದಿನಾಂಕ: 01–06–2026** ರಂದು ಮದ್ಯಾಹ್ನ **4:30** ಗಂಟೆಗೆ ಮತ್ತು ಆರ್ಥಿಕ ಬಿಡ್ ಅನ್ನು ತೆರೆಯುವ **ದಿನಾಂಕ: 02–06–2026** ರಂದು **ಮದ್ಯಾಹ್ನ 4:31 ಗಂಟೆಗೆ** ಅಥವಾ ತಾಂತ್ರಿಕ ಬಿಡ್ ಅನುಮೋದನೆಗೊಂಡ ನಂತರ ತೆರೆಯಲಾಗುವುದೆಂದು ನಿಗದಿಪಡಿಸಲಾಗಿರುತ್ತದೆ. ಟೆಂಡರ್‌ನ್ನು ಯಾವುದೆ ಸಂದರ್ಭದಲ್ಲಿ ಯಾವುದೇ ಕಾರಣಗಳನ್ನು ನೀಡದೆ ಮುಂದೂಡುವ ಅಥವಾ ರದ್ದುಗೊಳಿಸುವ ಅಧಿಕಾರವಿರುತ್ತದೆ. ಇತರೆ ಮಾಹಿತಿಗಳನ್ನು ಸದರಿ ಕಚೇರಿಯಿಂದ ಅಥವಾ ಮೇಲ್ಕಂಡ ವೆಬ್‌ಸೈಟ್ ಮೂಲಕ ಪಡೆಯಬಹುದು.

ಸಹಿ/–ಕಾರ್ಯಪಾಲಕ ಅಭಿಯಂತರರು, ಕನೀನಿನಿ ನಂ.2 ಕಾಲುವೆ ವಿಭಾಗ ವಡ್ಡರಹಟ್ಟಿ ಕ್ಯಾಂಪ್. ತಾ॥ಗಂಗಾವತಿ, ಜಿ॥ಕೊಪ್ಪಳ.

ವಾ.ಸಾ.ಸಂ.ಇ/ಕೊಪ್ಪಳ/59/ದೇಶಪಾಂಡೆಪಬ್ಲಿಸಿಟಿ/2026–27

ಕರ್ನಾಟಕ ಸರ್ಕಾರ

ಕಾರ್ಯನಿರ್ವಾಹಕ ಇಂಜನೀಯರರು, ಲೋಕೋಪಯೋಗಿ ಇಲಾಖೆ, ವಿಭಾಗ ಕಾರವಾರ

ಸಂ: ಕಾ.ನಿ.ಇಂ./ಲೋ.ಇ.ವಿ,ಕಾ/ಪಿ.ಬಿ–1/ ಮ.ಟೆಂಡರ.ಪ್ರ–35/2025–26/391 ದಿನಾಂಕ: 29–04–2026

ಮರು ಟೆಂಡರ್ (Call-2) ಪ್ರಕಟಣೆ

(ಇ–ಪ್ರಕ್ಯೂರಮೆಂಟ್ ಪದ್ಧತಿಯಲ್ಲಿ ಮಾತ್ರ)

ಸಂ: ಕಾ.ನಿ.ಇಂ./ಲೋ.ಇ.ವಿ,ಕಾ/ಪಿ.ಬಿ–1/ಟೆಂಡರ–35/2025–26/5604 ದಿನಾಂಕ: 04–03–2026

ಉಲ್ಲೇಖದ ಈ ಕಚೇರಿಯ ಪತ್ರದಲ್ಲಿ ಕರೆಯಲಾಗಿದ್ದ 2025–26ನೇ ಸಾಲಿನ 4059-80-051-0-60-132-CMIDP ಯೋಜನೆ ಅಡಿಯಲ್ಲಿ ಕರೆಯಲಾಗಿದ್ದ Construction of Cement Concrete Road from Karnakod Road to Sonagarjaddi, NH-66 to Kabbinhakkala Road, Mogehalla Road to Basakuli Road, Krishnakere to Heggar, Jaddi to Kasabail, NH-66 to Bommanakodlu and Constuction of Retaining Wall near Kranshakere Kenel in Nagarbastikere Gram Panchayat in Honavar Taluk U K Dist Under CMIDP During 2025-26 PWD/2025-26/RD/WORK_INDENT 32931/CALL-2 ರೂ. 100.88 ಲಕ್ಷದ ಕಾಮಗಾರಿಗಳಿಗೆ ಮರು ಟೆಂಡರನ (Call-2) ದಿನಾಂಕದ ವಿವರ ಈ ಕೆಳಗಿನಂತಿದೆ.

(1) ಗುತ್ತಿಗೆಗೆ ಸಂಬಂಧಿಸಿದ ವಿಚಾರಣೆಗೆ ಕೊನೆಯ ದಿ: 08–05–2026 16.30 ಗಂಟೆವರೆಗೆ (2) ಟೆಂಡರನ್ನು ಸ್ವೀಕರಿಸುವ ಕೊನೆಯ ದಿ: 11–05–2026 16.30 ಗಂಟೆವರೆಗೆ (3) ಟೆಂಡರನ ತಾಂತ್ರಿಕ ಬಿಡ್ ತೆರೆಯುವ ದಿ: 12–05–2026 17.00 ಗಂಟೆವರೆಗೆ (4) ಟೆಂಡರನ ಆರ್ಥಿಕ ಬಿಡ್ ತೆರೆಯುವ ದಿ: 14–05–2026 17.00 ಗಂಟೆವರೆಗೆ

ಹೆಚ್ಚಿನ ವಿವರಗಳನ್ನು ಹೆಚ್ಚಿನ ವಿವರಗಳಿಗಾಗಿ ಕಾರ್ಯನಿರ್ವಾಹಕ ಇಂಜನೀಯರರು ಲೋಕೋಪಯೋಗಿ ಇಲಾಖೆ ವಿಭಾಗ ಕಾರವಾರ ಇವರ ಕಛೇರಿಗೆ ಕೆಲಸದ ವೇಳೆಯಲ್ಲಿ ಪಡೆಯಬಹುದು.

ಸಹಿ/– ಕಾರ್ಯನಿರ್ವಾಹಕ ಅಭಿಯಂತರರು, ಲೋಕೋಪಯೋಗಿ ಇಲಾಖೆ, ವಿಭಾಗ, ಕಾರವಾರ

DIPR/KWR/KSMCA/96/26-27 dt. 30.04.2026

ಕರ್ನಾಟಕ ನೀರಾವರಿ ನಿಗಮ ನಿಯಮಿತ

(ಕರ್ನಾಟಕ ಸರ್ಕಾರದ ಉದ್ಯಮ)

ಕಾರ್ಯಪಾಲಕ ಇಂಜಿನಿಯರ್‌ರವರ ಕಛೇರಿ, ಕನೀನಿನಿ, ನಂ.4, ಬಿ.ಆರ್.ಎಲ್.ಬಿ.ಸಿ ವಿಭಾಗ, ಭದ್ರಾವತಿ.

ಸಂಕಾ.ಇಂ/ಕನೀನಿನಿ/ಬಿಡಿಯನ್–4/ತಾ.ಸಂ/ಪಿ.ಬಿ 1/4701 ಭದ್ರಾ/ 2ನೇ ಟೆಂಡರ್ ಪ್ರಕಟಣೆ ಸಂಖ್ಯೆ: 01/2026–27/ ದಿ: 29.04.2026

ಅಲ್ಪಾವಧಿ ಟೆಂಡರ್ ಪಕಟಣೆ – 2ನೇ ಕರೆ

ಉಲ್ಲೇಖ: ಸಂ:ಕಾ.ಇಂ/ಕನೀನಿನಿ/ಬಿಡಿಯನ್–4/ತಾ.ಸಂ/ಪಿ.ಬಿ 1/4701 ಭದ್ರಾ/ ಟೆಂಡರ್ ಪ್ರಕಟಣೆ ಸಂಖ್ಯೆ: 01/2026–27/ ದಿ: 04.04.2026

ಕೆ.ಟಿ.ಪಿ.ಪಿ ವೇದಿಕೆಯಡಿಯಲ್ಲಿ 4701 ಭದ್ರಾ ಲೆಕ್ಕ ಶೀರ್ಷಿಕೆಯಡಿಯಲ್ಲಿ 01 ಸಂಖ್ಯೆ ಕಾಮಗಾರಿಗೆ ವ್ಯವಸ್ಥಾಪಕ ನಿರ್ದೇಶಕರು, ಕನೀನಿನಿ., ಬೆಂಗಳೂರು ಇವರ ಪರವಾಗಿ ನೊಂದಾಯಿಸಲ್ಪಟ್ಟಿರುವ ಗುತ್ತಿಗೆದಾರರಿಂದ ಟೆಂಡರ್‌ನ್ನು ಕಾರ್ಯಪಾಲಕ ಇಂಜಿನಿಯರ್, ಕನೀನಿನಿ, ನಂ.4 ಬಿ.ಆರ್.ಎಲ್.ಬಿ.ಸಿ ವಿಭಾಗ, ಭದ್ರಾವತಿ ಇವರಿಂದ ಆಹ್ವಾನಿಸಲಾಗಿದೆ.

1. ಟೆಂಡರ್ ಫಾರಂಗಳನ್ನು ಕೋರಿ ಹಾಗೂ ಅರ್ಜಿಯನ್ನು ಸಲ್ಲಿಸುವ ಕೊನೆಯ ದಿನಾಂಕಗಳು: 30.04.2026 ರಿಂದ 11.05.2026 ರವರೆಗೆ 17.30 ಗಂಟೆಗೆ 2. Pre-Bid Meeting ದಿ : 05.05.2026 ರಂದು 11.00 ಗಂಟೆಗೆ ಕಾರ್ಯಪಾಲಕ ಇಂಜಿನಿಯರ್, ಕನೀನಿನಿ, ನಂ.4 ಬಿಆರ್‌ಎಲ್‌ಬಿಸಿ ವಿಭಾಗ, ಭದ್ರಾವತಿ 3. ತಾಂತ್ರಿಕ ಬಿಡ್ ತೆರೆಯುವ ದಿನಾಂಕ: 12.05.2026 ರಂದು 17.30 ಗಂಟೆಗೆ 4. ಆರ್ಥಿಕ ಬಿಡ್ ತರೆಯುವ ದಿನಾಂಕ : After obtaining approval of technical bid from competent authority 5. ಕಾಲಾವಧಿ 08 ತಿಂಗಳು (ಮಳೆಗಾಲ ಸಹಿತ) 6. ಟೆಂಡರಿಗಿಟ್ಟ ಮೊತ್ತ ರೂ.97.40 ಲಕ್ಷಗಳು 7. ಇ.ಎಂ.ಡಿ ಮೊತ್ತ ರೂ.1,95,000/–

ಸೂಚನೆಗಳು ಹಾಗೂ ಹೆಚ್ಚಿನ ವಿವರಗಳಿಗಾಗಿ ಈ ಕಛೇರಿ ವೇಳೆಯಲ್ಲಿ ಸಂಪರ್ಕಿಸಬಹುದಾಗಿದೆ. ಫೋನ್– 8660573513

ಸಹಿ/– ಕಾರ್ಯಪಾಲಕ ಇಂಜಿನಿಯರ್, ಕನೀನಿನಿ., ನಂ.4 ಬಿ.ಆರ್.ಎಲ್.ಬಿ.ಸಿ ವಿಭಾಗ, ಭದ್ರಾವತಿ.

ವಾ.ಸಾ.ಸಂ.ಇ/ಕೆಎಸ್‌ಎಂಸಿಎ/ಶಿ/26–27/138/04/167

ಮಾನ್ಯ ಪ್ರಧಾನ ಮತ್ತು ಪ್ರಥಮ ದರ್ಜೆ ದಂಡಾಧಿಕಾರಿಯವರ ನ್ಯಾಯಾಲಯ, ಬೆಳ್ತಂಗಡಿ

ಕ್ರಿಮಿನಲ್ ಎಮ್.ಸಿ. ನಂಬ್ರ: 83/2026

ಮುಂದಿನ ದಿನಾಂಕ : 18–05–2026

ಇವರೊಳಗೆ:

ಪುಷ್ಪಾ ಮತ್ತು ಇತರರು ...ಅರ್ಜಿದಾರರು

ಜನನ ಮತ್ತು ಮರಣಗಳ ರಿಜಿಸ್ಟ್ರಾರು, ತಾಲೂಕು ತಹಸೀಲ್ದಾರರು, ಬೆಳ್ತಂಗಡಿ, ದ.ಕ ಮತ್ತು ...ಎದುರುದಾರರು

ನೋಟೀಸು

ಈ ಮೇಲೆ ಕಾಣಿಸಿದ ಹೆಸರು, ವಿಳಾಸ ಅರ್ಜಿದಾರರ ತಾಯಿಯಾದ ಕಮಲ ಕೋಂ: ಮಂಜಪ್ಪ ಪೂಜಾರಿ ಇವರು ದಿನಾಂಕ: 31–08–2013 ರಂದು ವಿಳಾಸ: ಮಚ್ಚಿನ ಗ್ರಾಮ, ಬೆಳ್ತಂಗಡಿ ತಾಲೂಕು, ದ.ಕ ಇಲ್ಲಿ ಮೃತಪಟ್ಟ ಬಗ್ಗೆ ಮರಣ ರಿಜಿಸ್ಟರ್‌ನಲ್ಲಿ ನೊಂದಾವಣೆಗೊಳಿಸುವಂತೆ ಎದುರಿದಾರರ ವಿರುದ್ಧ ಅರ್ಜಿದಾರರು ಈ ಮೇಲ್ಕಾಣಿಸಿದ ನ್ಯಾಯಾಲಯದಲ್ಲಿ ಕೇಸು ದಾಖಲಿಸಿದ್ದು ಸದ್ರಿ ಕೇಸಿನಲ್ಲಿ ಆಸಕ್ತಿಯುಳ್ಳ ವ್ಯಕ್ತಿಗಳು ಖುದ್ದಾಗಿ **ದಿನಾಂಕ:21–05–2026ರಂದು ಬೆಳಿಗ್ಗೆ 11.00 ಗಂಟೆಗೆ** ನ್ಯಾಯಾಲಯದಲ್ಲಿ ಕೇಸನ್ನುಕರೆಯಲಾಗುವುದು. ಒಂದುವೇಳೆ ಆಸಕ್ತಿಯುಳ್ಳ ವ್ಯಕ್ತಿಗಳು ಹಾಜರಾಗದೇ ಇದ್ದ ಪಕ್ಷದಲ್ಲಿ ತಮ್ಮ ಅನುಪಸ್ಥಿತಿಯಲ್ಲಿ ಕಾನೂನು ಪ್ರಕಾರ ಮುಂದಿನ ಕ್ರಮವನ್ನು ಕೈಗೊಳ್ಳಲಾಗುವುದು.

2026ನೇ ಇಸ್ವಿಯ ಮೇ 02ನೇ ದಿನಾಂಕದಂದು ನ್ಯಾಯಾಲಯದ ಮೊಹರು ಮತ್ತು ಸಹಿಯೊಂದಿಗೆ ಕೊಡಲಾಗಿದೆ.

(ನ್ಯಾಯಾಲಯದ ಆದೇಶದ ಮೇರೆಗೆ)

ಸಹಿ/– (ಶಿರಸ್ತೇದಾರರು)

ಮಾನ್ಯ ಪ್ರಧಾನ ಮತ್ತು ಪ್ರಥಮ ದರ್ಜೆ ದಂಡಾಧಿಕಾರಿಯವರ ನ್ಯಾಯಾಲಯ ಬೆಳ್ತಂಗಡಿ, ದ.ಕ.

ಸಹಿ/– (ಶ್ರೀ ಶ್ರೀನಿವಾಸ ಗೌಡ ವಕೀಲರು) ಅರ್ಜಿದಾರರ ಪರ ವಕೀಲರು

ಉಡುಪಿ ನಗರಸಭೆ

ಕೆ.ಎಂ.ಮಾರ್ಗ, ಉಡುಪಿ -576 101. ದೂ : 0820-2520306 E-MAIL: ka.udupi.cmc@gmail.com Website: www.udupicity.mrc.gov.in

ದಿನಾಂಕ 29.04.2026

ಟೆಂಡರ್ ಪ್ರಕಟಣೆ

ಕೆ.ಟಿ.ಟಿ.ಪಿ.ಕಾಯ್ದೆ 1999 ಮತ್ತು ನಿಯಮಗಳು 2000ರನ್ವಯ ಸ್ಟ್ಯಾಂಡರ್ಡ್ ಟೆಂಡರ್ ಡಾಕ್ಯುಮೆಂಟ್ ನಿಯಮದನ್ವಯ ಉಡುಪಿ ನಗರಸಭೆಯ ಈ ಕೆಳಗಿನ ವಾಹನಗಳ ದುರಸ್ಥಿ ಕಾರ್ಯಗಳನ್ನು ಮಾಡುವ ಕುರಿತು ಕರ್ನಾಟಕ ಪಬ್ಲಿಕ್ ಪ್ರೊಕ್ಯರ್‌ಮೆಂಟ್ ಪೋರ್ಟಲ್‌ನಲ್ಲಿ ಟೆಂಡನ್ನು ಆಹ್ವಾನಿಸಲಾಗಿದೆ. ಟೆಂಡರ್ ಸಲ್ಲಿಸಲು ಕೊನೆಯ **ದಿನಾಂಕ 14/05/2026 ಸಮಯ ಅಪರಾಹ್ನ 5.20** ಗಂಟೆವರೆಗೆ, ಅರ್ಹ ಗುತ್ತಿಗೆದಾರರು/ಏಜನ್ಸಿಯವರು ಹೆಚ್ಚಿನ ವಿವರಗಳಿಗೆ ಕರ್ನಾಟಕ ಪಬ್ಲಿಕ್ ಪ್ರೊಕ್ಯೂರ್‌ಮೆಂಟ್ ಪೋರ್ಟಲ್‌ನಲ್ಲಿ **(https://kppp.karnataka.gov.in)** ಅಪ್‌ಲೋಡ್ ಮಾಡಿರುವ ಟೆಂಡರ್ ಡಾಕ್ಯುಮೆಂಟ್‌ನಲ್ಲಿ ಪಡೆಯಬಹುದು.

S. N.	Details of Work	Vehicle Number	Vehicle Type	Tender Number	Amount put to tender	E.M.D.
1	Repair of Udupi CMC Vehicles	KA20 D3761	14.0 Cum Refuse Compactor	DMA/2026-27/SE7740	19,86,426.96	49650/-
2		KA20 AA9963	7.0 Cum Refuse Compactor			
3		KA20 AA9933	5.0 Cum Tipper			
4		KA20 AB5092	3.0 Cum Tipper			
5		KA20 AB5093	3.0 Cum Tipper			
6		KA20 AA8817	Tractor			
7		KA20 AA1845	1.8 Cum Tata Ace			
8		KA20 AA9924	1.8 Cum Tata Ace			

ಸಹಿ/– ಪೌರಾಯುಕ್ತರು, ಉಡುಪಿ ನಗರಸಭೆ

ಕಾರ್ಯಪಾಲಕ ಅಭಿಯಂತರವರ ಕಛೇರಿ, ಲೋ.ಇ ವಿಶೇಷ ವಿಭಾಗ, ಶಿವಮೊಗ್ಗ

ಫೋನ್ ನಂ.: 08182 – 222942, ಇ–ಮೇಲ್ :spdivision@gmail.com

ಐ.ಎಫ್.ಟಿ ಸಂಖ್ಯೆ: 11/2026–27 ದಿನಾಂಕ: 30–04–2026

ಅಲ್ಪಾವಧಿ ಟೆಂಡರ್ ಪ್ರಕಟಣೆ (ದ್ವಿ–ಲಕೋಟೆ ಪದ್ಧತಿ) (ಕೆ.ಪಿ.ಪಿ. ಪೋರ್ಟಲ್ ಮೂಲಕ)

ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ ಆದ್ಯಾದೇಶ 1999–2000ರ ಪ್ರಕಾರ ಆಕ್ಟ್ 20000 ನಿಯಮದಂತೆ ಸ್ಟಾಂಡರ್ಡ್ ಟೆಂಡರ್ ಡಾಕ್ಯುಮೆಂಟ್ ಕೆಡಬ್ಲ್ಯೂ–4 ನಿಯುಮದನ್ವಯ ಲೋಕೋಪಯೋಗಿ ಇಲಾಖೆಯಲ್ಲಿ ನೋಂದಾಯಿತರಾದ 3ನೇ ದರ್ಜೆ ಹಾಗೂ ಮೇಲ್ಪಟ್ಟ ಗುತ್ತಿಗೆದಾರರಿಗೆ ಶಿವಮೊಗ್ಗ ತಾಲ್ಲೂಕಿನಲ್ಲಿ 5054–04–337–0–01–154–ಜಿಲ್ಲಾ ರಸ್ತೆಗಳು ಸುಧಾರಣೆಗಳು ಲೆಕ್ಕಶೀರ್ಷಿಕೆಯಡಿಯಲ್ಲಿ ಅನುಮೋದನೆಗೊಂಡಿರುವ ಶಿವಮೊಗ್ಗ ತಾಲ್ಲೂಕಿನಲ್ಲಿ 01 ಕಾಮಗಾರಿ ಶಿವಮೊಗ್ಗ ತಾಲ್ಲೂಕಿನ ಬೆಳಲಕಟ್ಟೆ ಗ್ರಾಮಕ್ಕೆ ಅಬ್ಬಲಗೆರೆ ಗ್ರಾಮದ ಮುಖ್ಯ ರಸ್ತೆಯಿಂದ ಅಬ್ಬಲಗೆರೆ ಗ್ರಾಮದ ಮುಖಾಂತರ ಬೆಳಲಕಟ್ಟೆ ಗ್ರಾಮಕ್ಕೆ ಸೇರುವ ಚಾನಲ್ ವರೆಗಿನ ರಸ್ತೆಯನ್ನು ಒಂದು ಬಾರಿ ಅಭಿವೃದ್ಧಿ ಪಡಿಸುವ ಕಾಮಗಾರಿ(ಇಂಡೆಂಟ್ ನಂ–35899) ಕಾಮಗಾರಿಗೆ ಟೆಂಡರ್‌ನ್ನು ದ್ವಿ–ಲಕೋಟೆ ಪದ್ಧತಿಯಲ್ಲಿ ಈ ಕೆಳಸಹಿ ಮಾಡಿರುವವರು ಆಹ್ವಾನಿಸಿರುತ್ತಾರೆ. ಸದರಿ ಕಾಮಗಾರಿಯ ಟೆಂಡರ್ ಗಿಟ್ಟ ಮೊತ್ತ ರೂ.142.86 ಲಕ್ಷ ಮತ್ತು ಇಂ.ಎಂ.ಡಿ ಮೊತ್ತ ರೂ.2.145 ಲಕ್ಷ, ಕಾಲಾವಧಿ 09 ತಿಂಗಳು ಮಳೆಗಾಲ ಸೇರಿ ಕೆ.ಪಿ.ಪಿ. ಪೋರ್ಟಲ್‌ನಲ್ಲಿ ನಮೂದಿಸಿದಂತೆ.

ಅರ್ಹ ಗುತ್ತಿಗೆದಾರರು ಕೆ.ಪಿ.ಪಿ.ಪಿಪೋರ್ಟಲ್‌ನಲ್ಲಿ ಪೋರ್ಟಲ್ http://KPPP.karnataka.gov.in ಮುಖಾಂತರ ಟೆಂಡರ್ ದಸ್ತಾವೇಜಿನ ಸೆಕ್ಷನ್–2 ರ (ಟೆಂಡರ್‌ದಾರರಿಗೆ ತಿಳುವಳಿಕೆ) ಕ್ಲಾಸ್–4ರನ್ವಯ ಅರ್ಹತೆ ವಿವರಗಳನ್ನು ಗಮನಿಸತಕ್ಕದ್ದು. ವಿದ್ಯುನ್ಮಾನ ಜಾಲದಲ್ಲಿ ದಿನಾಂಕ: 30–04–2026 ರಿಂದ 08–05–2026 ರ 17.00 ಗಂಟೆವರೆಗೆ ಡೌನ್‌ಲೋಡ್ ಮಾಡಿಕೊಳ್ಳಬಹುದಾಗಿದೆ. ಟೆಂಡರ್‌ನ್ನು ದಿನಾಂಕ:08–05–2026ರ ಸಂಜೆ 5:00 ಗಂಟೆಯೊಳಗೆ ಕೆ.ಪಿ.ಪಿ.ಪಿ ಪೋರ್ಟಲ್‌ನಲ್ಲಿ ಭರಿಸತಕ್ಕದ್ದು. ಕಾಮಗಾರಿಯ ತಾಂತ್ರಿಕ ಬಿಡ್‌ನ್ನು ಕೆ.ಪಿ.ಪಿ.ಪಿ ಪೋರ್ಟಲ್‌ನಲ್ಲಿ ದಿನಾಂಕ:09–05–2026 ರಂದು ಸಂಜೆ 5.30 ಕ್ಕೆ ತೆರೆಯಲಾಗುವುದು ಹಾಗೂ ಆರ್ಥಿಕ ಬಿಡ್‌ನ್ನು ದಿನಾಂಕ:10–05–2026 ರ ನಂತರ ತೆರೆಯಲಾಗುವುದು. ಪ್ರಕಟಿತ ಟೆಂಡರ್‌ನಲ್ಲಿ ಯಾವುದೇ ತಿದ್ದುಪಡಿ ಇದ್ದಲ್ಲಿ ಇ–ಪ್ರೊಕ್ಯೂರ್‌ಮೆಂಟ್‌ನಲ್ಲಿಯೇ ಪ್ರಕಟಿಸಲಾಗುವುದು. ಹೆಚ್ಚಿನ ವಿವರಗಳು ಬೇಕಾದಲ್ಲಿ ಈ ಕಛೇರಿಯನ್ನು ಕಛೇರಿ ಕೆಲಸದ ವೇಳೆಯಲ್ಲಿ ಸಂಪರ್ಕಿಸಿ ಪಡೆಯಬಹುದಾಗಿದೆ. ವೆಬ್‌ಸೈಟ್‌ನಲ್ಲಿರುವ ಟೆಂಡರ್ ವಿವರಗಳೇ ಅಂತಿಮವಾಗಿರುತ್ತವೆ.

ಸಹಿ/– ಕಾರ್ಯಪಾಲಕ ಅಭಿಯಂತರರು, ಲೋಕೋಪಯೋಗಿ ಇಲಾಖೆ, ವಿಶೇಷ ವಿಭಾಗ, ಶಿವಮೊಗ್ಗ

ವಾ.ಸಾ.ಸಂ.ಇ/ಕೆಎಸ್‌ಎಂಸಿಎ/ಶಿ/26–27/159/04/157

ಕರ್ನಾಟಕ ಸರ್ಕಾರ

ಕಾರ್ಯನಿರ್ವಾಹಕ ಇಂಜಿನಿಯರ್‌ರವರ ಕಛೇರಿ, ಗ್ರಾಮೀಣ ಕುಡಿಯುವ ನೀರು & ನೈರ್ಮಲ್ಯ ವಿಭಾಗ ಚಿಕ್ಕೋಡಿ

Tel. No.:08338-275101 E-Mail:ee.rdws.ckd@gmail.com

ಸಂಖ್ಯೆ:ಕಾಇಂ/ಗ್ರಾಕುನೀ&ನೈ/ವಿಚಿ/ತಾಂಶಾ:ಕೆಡಬ್ಲ್ಯೂ4:ಟೆಂಡರ್–3:2026–27/99 ದಿನಾಂಕ:27–04–2026

ಅಲ್ಪಾವಧಿ ಟೆಂಡರ್ ಪ್ರಕಟಣೆ

ಕರ್ನಾಟಕ ರಾಜ್ಯದ ರಾಜ್ಯಪಾಲರ ಪರವಾಗಿ KW-3&4 (ಸ್ಟ್ಯಾಂಡರ್ಡ ಟೆಂಡರ್ ಡಾಕ್ಯುಮೆಂಟ್) ನಿಯಮಾನುಸಾರ ಹಾಗೂ ಕರ್ನಾಟಕ ಸಾರ್ವಜನಿಕ ಸಂಗಹಣೆ ಕಾಯ್ದೆಗಳಲ್ಲಿಯ ನಿಯಮಗಳು ಹಾಗೂ ಸರಕಾರದ ಇತ್ತೀಚಿನ ತಿದ್ದುಪಡಿ ನಿಬಂಧನೆಗೊಳಪಟ್ಟಂತೆ ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ ವಿಭಾಗ ಚಿಕ್ಕೋಡಿ ವ್ಯಾಪ್ತಿಯಲ್ಲಿ ಈ ಕೆಳಗೆ ನಮೂದಿಸಿರುವ ಸರಬರಾಜು ಯೋಜನೆ ಕಾಮಗಾರಿಗಳಿಗೆ ಕರ್ನಾಟಕ ಸಾರ್ವಜನಿಕ ಸಂಗ್ರಹಣೆ ಪೋರ್ಟಲ್ ಮುಖಾಂತರ ಆಹ್ವಾನಿಸಲಾಗಿದೆ.

Work Indent No:- 9662/Call-3

ಕಾಮಗಾರಿಗಳಿಗೆ ಸಂಬಂಧಿಸಿದಂತೆ ಹೆಚ್ಚಿನ ವಿವರಗಳಿಗೆ ಹಾಗೂ ಸದರಿ ಟೆಂಡರ್ ಅಧಿಸೂಚನೆಯ ವಿವರಗಳನ್ನು ಪಡೆಯಲು ಕರ್ನಾಟಕ ಸಾರ್ವಜನಿಕ ಸಂಗ್ರಹಣೆ ಪೋರ್ಟಲ್ (http://kppp.karnataka.Gov.in) ನಲ್ಲಿ ಸಂಪರ್ಕಿಸಬಹುದಾಗಿದೆ. ಹಾಗೂ ಈ ಕಛೇರಿಯ ಕೆಲಸದ ವೇಳೆಯಲ್ಲಿ ಹೆಚ್ಚಿನ ವಿವರಗಳನ್ನು ಪಡೆಯಲು ಸಹಾ ಕೋರಲಾಗಿದೆ.

01)ಟೆಂಡರ ಪೂರ್ವಬಾವಿ ಸಭೆ:02–05–2026 ರ ಬೆಳಿಗ್ಗೆ 11–00 ಗಂಟೆಗೆ, ಕಾರ್ಯನಿರ್ವಾಹಕ ಅಭಿಯಂತರರು ಗ್ರಾ ಕು ನೀ & ನೈ ವಿಭಾಗ ಚಿಕ್ಕೋಡಿ ಕಚೇರಿಯಲ್ಲಿ. 02)ಇ–ಪೊಕ್ಯೂರಮೆಂಟ್ ಟೆಂಡರಿಂಗ್ ಮೂಲಕ ಭರ್ತಿ ಮಾಡಿದ ಫಾರಂಗಳನ್ನು ಸಲ್ಲಿಸುವ ಕೊನೆಯ ದಿನಾಂಕ ಮತ್ತು ಸಮಯ:05–05–2026 ಸಾಯಂಕಾಲ 17.00 ಘಂಟೆವರೆಗೆ. 03)ಇ–ಪೊಕ್ಯೂರಮೆಂಟ್ ತಾಂತಿಕ ಬಿಡ್ಡನ್ನು ತೆರೆಯುವ ದಿನಾಂಕ:06–05–2026 ಸಂಯಕಾಲ 5.30 ಘಂಟೆ ನಂತರ.

ಸಹಿ/–ಕಾರ್ಯನಿರ್ವಾಹಕ ಅಭಿಯಂತರು, ಗ್ರಾ. ಕು. ನೀ. & ನೈ. ವಿಭಾಗ, ಚಿಕ್ಕೋಡಿ.

DIPR/BGM/RO-NO-182/KSMCA/2026-27

ಕರ್ನಾಟಕ ಸರ್ಕಾರ

ಪಂಚಾಯತ ರಾಜ್ ಇಂಜನೀಯರಿಂಗ್ ವಿಭಾಗ, ಕಾರವಾರ, ಉತ್ತರ ಕನ್ನಡ

ದೂರವಾಣಿ: 08382–220556 ಇ–ಮೇಲ್: predkarwar@gmail.com

ಕ್ರ.ಸಂ:ಪಂರಾ.ಇಂ/ಕಾ/ಪಿಬಿ–1/2026–27/05 ದಿ: 28.04.2026

ಟೆಂಡರ್ ಪ್ರಕಟಣೆ–05/2026–27 (ಕೆ.ಪಿ.ಪಿ.ಪಿ ಮೂಲಕ)

ಕರ್ನಾಟಕ ರಾಜ್ಯಪಾಲರ ಪರವಾಗಿ ಕಾರ್ಯನಿರ್ವಾಹಕ ಅಭಿಯಂತರರು, ಪಂಚಾಯತ್ ರಾಜ್ ಇಂಜನೀಯರಿಂಗ್ ವಿಭಾಗ ಕಾರವಾರ ಇವರಿಂದ ಲೋಕೋಪಯೋಗಿ ಇಲಾಖೆಯಲ್ಲಿ ನೋಂದಾಯಿಸಿದ ಅರ್ಹ ಹಾಗೂ ಕೆ.ಪಿ.ಪಿ.ಪಿ. ಸಂಸ್ಥೆಯಿಂದ ನೋಂದಾಯಿಸಲ್ಪಟ್ಟ ಗುತ್ತಿಗೆದಾರರಿಂದ ವಿವಿಧ ಲೆಕ್ಕಶೀರ್ಷಿಕೆಯಡಿಯ ಕಾಮಗಾರಿಗಳಿಗೆ ಕರ್ನಾಟಕ ಸರ್ಕಾರದ ಸಾರ್ವಜನಿಕ ಖರೀದಿ ಪಾರದರ್ಶಕತೆ ಕಾನೂನು ಹಾಗೂ ನಿಯಮಾವಳಿ 2000 ಹಾಗೂ Standard Tender Document ನ K.W-1, 2 ರ ತತ್ಸಂಬಂಧ ಕಾಲಕಾಲಕ್ಕೆ ಹೊರಡಿಸಲಾದ ತಿದ್ದುಪಡಿ ಆದೇಶಗಳನ್ವಯ ನಿಬಂಧನೆಗೆ ಒಳಪಟ್ಟು ಈ ಕೆಳಗಿನಂತೆ ಐಟಂವಾರು ಟೆಂಡರ ಕರೆಯಲಾಗಿದೆ. ಅರ್ಹ ಗುತ್ತಿಗೆದಾರರು ಇ–ಆಡಳಿತ ಕೇಂದ್ರ ಅಥವಾ ವೆಬ್‌ಸೈಟ್ https://kppp.karnataka.gov.in ನಲ್ಲಿ ಪ್ರಕಟಿಸಿದಂತೆ ದಿನಾಂಕ ಹಾಗೂ ಇನ್ನುಳಿದ ವಿವರಗಳನ್ನು ಖಚಿತಪಡಿಸಿಕೊಂಡು ಟೆಂಡರಿಗಾಗಿ ಭಾಗವಹಿಸಬಹುದು. ಹೆಚ್ಚಿನ ವಿವರಗಳಿಗೆ ಈ ಕಛೇರಿಯಿಂದ ಕಛೇರಿ ವೇಳೆಯಲ್ಲಿ ಮಾಹಿತಿ ಪಡೆಯಬಹುದು ಟೆಂಡರ್ ವಿವರಗಳು ಈ ಕೆಳಗಿನಂತಿವೆ.

ಕಾಮಗಾರಿಯ ಹೆಸರು: (ಮೀಸಲಾತಿ: ಸಾಮಾನ್ಯ) (1) 2025–26ನೇ ಸಾಲಿನ ಮಾನ್ಯ ಮುಖ್ಯಮಂತ್ರಿಗಳ ಮೂಲಸೌಕರ್ಯ ಅನುದಾನದಡಿ ಕುಮಟಾ ತಾಲ್ಲೂಕಿನ ಶಿರಗುಂಜಿ ಮುಖ್ಯ ರಸ್ತೆಯಿಂದ ತುಳುಸು ಮುಕ್ರಿ ಮನೆವರೆಗೆ ರಸ್ತೆ ನಿರ್ಮಾಣ. ಅಂದಾಜು ಮೊತ್ತ: ರೂ. 25.00 ಲಕ್ಷ, ಮುಂಗಡ ಠೇವಣಿ: ರೂ. 50,000.00, ಕಾಲಮಿತಿ (ಮಳೆಗಾಲ ಸಹಿತ): 02 ತಿಂಗಳು

(2) ––ಸದರ–– ಕುಮಟಾ ತಾಲ್ಲೂಕಿನ ಕಲಭಾಗ ಪಂ. ಕಲಭಾಗ ಸಾರಂಗಮುತ್ರಿ ಮನೆಯಿಂದ ದೇವಗುಂಡಿಗೆ ರಸ್ತೆ ನಿರ್ಮಾಣ. ಅಂದಾಜು ಮೊತ್ತ: ರೂ. 20.00 ಲಕ್ಷ, ಮುಂಗಡ ಠೇವಣಿ: ರೂ. 50,000.00, ಕಾಲಮಿತಿ (ಮಳೆಗಾಲ ಸಹಿತ): 02 ತಿಂಗಳು

(ಮೀಸಲಾತಿ: ಪ್ರವರ್ಗ 2-A) (3) ––ಸದರ–– ಕುಮಟಾ ತಾಲ್ಲೂಕಿನ ಕೂಜಳ್ಳಿ ಎಸ್.ಸಿ. ಕೇರಿ ಹತ್ತಿರ ರಸ್ತೆ ಹಾಗೂ ಗಟಾರ ನಿರ್ಮಾಣ. ಅಂದಾಜು ಮೊತ್ತ: ರೂ. 25.00 ಲಕ್ಷ, ಮುಂಗಡ ಠೇವಣಿ: ರೂ. 50,000.00, ಕಾಲಮಿತಿ (ಮಳೆಗಾಲ ಸಹಿತ): 02 ತಿಂಗಳು

(4) ––ಸದರ–– ಕುಮಟಾ ತಾಲ್ಲೂಕಿನ ಮಿರ್ಜಾನ ಗ್ರಾಮ ಪಂ. ಬಿ.ಜಿ.ಎಸ್. ಕೆಳಭಾಗದಲ್ಲಿ ಎಸ್.ಸಿ. ಕೇರಿ ರಸ್ತೆ ನಿರ್ಮಾಣ. ಅಂದಾಜು ಮೊತ್ತ: ರೂ. 25.00 ಲಕ್ಷ, ಮುಂಗಡ ಠೇವಣಿ: ರೂ. 50,000.00, ಕಾಲಮಿತಿ (ಮಳೆಗಾಲ ಸಹಿತ): 02 ತಿಂಗಳು

(1) ಕಾಮಗಾರಿಯ ಟೆಂಡರ್ ಶೆಡ್ಯೂಲ್–ಬಿಗಳನ್ನು ಮತ್ತು Technical Bid ನ್ನು ವೆಬ್‌ಸೈಟ್‌ನಲ್ಲಿ ತುಂಬಿ ಮರಳಿ ಸಲ್ಲಿಸುವ ಕೊನೆಯ ದಿನಾಂಕ: 14.05.2026 ರ ಮದ್ಯಾಹ್ನ 16.30 ಘಂಟೆವರೆಗೆ. (2) ಕಾಮಗಾರಿಯ Technical Bid ನ್ನು ತೆರೆಯುವ ದಿನಾಂಕ: 15.05.2026 ಮದ್ಯಾಹ್ನ 16.31 ಘಂಟೆಗೆ. (3) ಆರ್ಥಿಕ ಬಿಡ್ ತೆರೆಯುವ ದಿನಾಂಕವನ್ನು ತಾಂತ್ರೀಕ ಬಿಡ್‌ನಲ್ಲಿ ಯಶಸ್ವಿಯಾದ ಅರ್ಹ ಗುತ್ತಿಗೆದಾರರಿಗೆ ನಂತರದಲ್ಲಿ ತಿಳಿಸಲಾಗುವುದು.

ಸಹಿ/– ಕಾರ್ಯನಿರ್ವಾಹಕ ಇಂಜನೀಯರು, ಪಂಚಾಯತ ರಾಜ್ ಇಂಜನೀಯರಿಂಗ್ ವಿಭಾಗ, ಕಾರವಾರ

DIPR/KWR/KSMCA/99/26-27 dt. 30.04.2026

ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿ, ಶಿವಮೊಗ್ಗ

ಕ್ರ.ಸಂ.: ಕೃಉಮಾಸ/ಶಿ/ಭಸಿಸೇ/137/2026–27 ದಿನಾಂಕ: 29.04.2026

ಭದ್ರತಾ ಸಿಬ್ಬಂದಿಗಳಿಗಾಗಿ ಸಂಕ್ಷಿಪ್ತ ಇ–ಟೆಂಡರ್ ಪ್ರಕಟಣೆ (ಇ–ಪ್ರೋಕ್ಯೂರ್‌ಮೆಂಟ್ ಮೂಲಕ)

ಶಿವಮೊಗ್ಗ ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿಯ ಮುಖ್ಯ ಮಾರುಕಟ್ಟೆ ಪ್ರಾಂಗಣ, ಹಣ್ಣು ಮತ್ತು ತರಕಾರಿ ಮಾರುಕಟ್ಟೆ ಪ್ರಾಂಗಣದ ಸ್ಥಿರ ಮತ್ತು ಚರಾಸ್ಥಿಗಳನ್ನು ಸಂರಕ್ಷಿಸುವ ಕೆಲಸ ಕಾರ್ಯಗಳನ್ನು ನಿರ್ವಹಿಸಲು ಒಟ್ಟು 29 ಜನ ಭದ್ರತಾ ಸಿಬ್ಬಂದಿಗಳು, ಸಮಿತಿಯ ಆಡಳಿತ ಕಛೇರಿ ಮತ್ತು ಇ–ಟೆಂಡರ್ ನಿರ್ವಹಣೆಯ ಕೆಲಸ–ಕಾರ್ಯಗಳನ್ನು ಸುಲಲಿತವಾಗಿ ನಡೆಸಿಕೊಂಡು ಹೋಗಲು ಒಟ್ಟು 13 ಜನ ಭದ್ರತಾ ಸಿಬ್ಬಂದಿಗಳು (ವಲಯ–2 ರಂತೆ) ಹಾಗೂ ಸಮಿತಿಯ ಹೊಳಲೂರು, ಮಲ್ಲಾಪುರ ಉಪಮಾರುಕಟ್ಟೆ ಪ್ರಾಂಗಣಗಳಲ್ಲಿನ ಸಮಿತಿಯ ಒಡೆತನದಲ್ಲಿರುವ ಆಸ್ತಿಗಳನ್ನು ಸಂರಕ್ಷಿಸಲು (ವಲಯ–4 ರಂತೆ) ಒಟ್ಟು 02 ಜನ ಭದ್ರತಾ ಸಿಬ್ಬಂದಿಗಳು ಹೀಗೆ ಒಟ್ಟು ವಿವಿಧ ಪ್ರವರ್ಗಗಳ 44 ಜನ ಭದ್ರತಾ ಸಿಬ್ಬಂದಿಗಳ ಸೇವೆಯನ್ನು (ಕಾಲಕಾಲಕ್ಕೆ ಬದಲಾವಣೆಗೆ ಒಳಪಟ್ಟಿರುತ್ತದೆ) 2026–2027 ನೇ ಸಾಲಿಗೆ ಅಂದರೆ ಕೆಲಸದ ಆದೇಶ ನೀಡಿದ ದಿನಾಂಕದಿಂದ 11 ತಿಂಗಳ ಅವಧಿಗೆ ಒದಗಿಸಲು ಅರ್ಹ ಅನುಭವ ಹೊಂದಿದ ಮತ್ತು ಕಾರ್ಮಿಕ ಇಲಾಖೆಯಲ್ಲಿ ಸೂಕ್ತ ಪ್ರವರ್ಗಕ್ಕೆ ಅನುಗುಣವಾಗಿ ನೋಂದಾಯಿಸಲ್ಪಟ್ಟ ಭದ್ರತಾ ಏಜೆನ್ಸಿಗಳಿಂದ, ಸರ್ವಿಸ್ ಚಾರ್ಜ್ (ಸೇವಾ ಶುಲ್ಕ) ನಮೂದಿಸಲು ಇ–ಪ್ರೋಕ್ಯೂರ್‌ಮೆಂಟ್ ಪೋರ್ಟಲ್ ಮುಖಾಂತರ ದರಪಟ್ಟಿಗಳನ್ನು ಆಹ್ವಾನಿಸಲಾಗಿದೆ. ಗುತ್ತಿಗೆದಾರರು ಏಕವ್ಯಕ್ತಿಯಾಗಿದ್ದಲ್ಲಿ ಶೇಕಡಾ 1 ರಷ್ಟು ಆದಾಯ ತೆರಿಗೆ ಮತ್ತು ಪಾಲುದಾರರಾಗಿದ್ದಲ್ಲಿ ಶೇಕಡಾ 2 ರಷ್ಟು ಆದಾಯ ತೆರಿಗೆ ಕಡಿತಗೊಳಿಸಬೇಕಾಗಿರುವುದರಿಂದ ಏಜೆನ್ಸಿದಾರರು ಸದರಿ ಮಾಹಿತಿಯನ್ನು ಗಮನದಲ್ಲಿಟ್ಟುಕೊಂಡು ಕನಿಷ್ಠ ಶೇ. 1 ಸೇವಾ ಶುಲ್ಕ ನಮೂದಿಸತಕ್ಕದ್ದು. ಅರ್ಹ ಟೆಂಡರ್‌ದಾರರು ಇ–ಪ್ರೋಕ್ಯೂರ್‌ಮೆಂಟ್ ಪೋರ್ಟಲ್ (https://kppp.karnataka.gov.in.) ಮುಖಾಂತರ ಟೆಂಡರ್‌ನಲ್ಲಿ ಭಾಗವಹಿಸಬಹುದು.

ಕ್ರ ಸಂ.	ಕೆಲಸದ ಹೆಸರು	ಪೂರೈಸಬೇಕಾದ ಸಿಬ್ಬಂದಿ ಸಂಖ್ಯೆ	ಖಾಲಿ ಟೆಂಡರ್ ಫಾರಂ ಬೆಲೆ	ಇ.ಎಂ.ಡಿ ಮೊತ್ತ
1	ಭದ್ರತಾ ಸಿಬ್ಬಂದಿಗಳು	29 ಸಂಖ್ಯೆ (ವಲಯ–2 ರಂತೆ)	ಇ–ಪೋರ್ಟಲ್ ನಿಯಮಗಳಂತೆ	ರೂ. 1,80,000–00
2	ಭದ್ರತಾ ಸಿಬ್ಬಂದಿಗಳು	02 ಸಂಖ್ಯೆ (ವಲಯ–4 ರಂತೆ)		
3	ಕಂಪ್ಯೂಟರ್‌ಆಪರೇಟರ್	04 ಸಂಖ್ಯೆ		
4	ಡಾಟಾಎಂಟ್ರಿಆಪರೇಟರ್ಸ್	05 ಸಂಖ್ಯೆ		
5	ವಾಹನ ಚಾಲಕರು	03 ಸಂಖ್ಯೆ		
6	ನೀರುಗಂಟಿ(ಪ್ಲಂಬರ್)	01 ಸಂಖ್ಯೆ		
	ಒಟ್ಟು	44 ಸಂಖ್ಯೆ		

1. ಮೇಲ್ಕಂಡ ಟೆಂಡರ್ ಡಾಕ್ಯುಮೆಂಟ್‌ಗಳನ್ನು ಇ–ಪೋರ್ಟ್‌ಲ್‌ನಲ್ಲಿ ದಿನಾಂಕ: 20–05–2026 ರ ಅಪರಾಹ್ನ 3.00 ರವರೆಗೆ ಡೌನ್‌ಲೋಡ್ ಮಾಡಿಕೊಳ್ಳಬಹುದು. 2. ಟೆಂಡರ್ ಬಿಡ್‌ಗಳನ್ನು ಈ ಪೋರ್ಟಲ್‌ನಲ್ಲಿ ಸಲ್ಲಿಸುವ ಕೊನೆಯ ದಿನಾಂಕ: 20–05–2026 ರ ಅಪರಾಹ್ನ 4.00 ಗಂಟೆಗೆ. 3. ಅರ್ಜಿದಾರರು ಟೆಂಡರ್ ತೆರೆಯುವ ಮುನ್ನ ಮೂಲ ದಾಖಲಾತಿಗಳನ್ನು ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿ, ಶಿವಮೊಗ್ಗ ಇವರಿಗೆ ಸಲ್ಲಿಸತಕ್ಕದ್ದು. 4. ತಾಂತ್ರಿಕ ಬಿಡ್ ತೆರೆಯುವ ದಿನಾಂಕ: 22–05–2026 ಸಂಜೆ 5.00 ಗಂಟೆಗೆ. 5. ತಾಂತ್ರಿಕ ಬಿಡ್ ನಲ್ಲಿ ಅರ್ಹತೆ ಹೊಂದಿದ ಅರ್ಹ ಗುತ್ತಿಗೆದಾರರ ಆರ್ಥಿಕ (Financial bid) ಬಿಡ್‌ನ್ನು ತೆರೆಯುವ ದಿನಾಂಕ: 25–05–2026 ರ ಸಂಜೆ 5.00 ಗಂಟೆಗೆ. 6. ಹೆಚ್ಚಿನ ವಿವರಗಳು ಮತ್ತು ಇತರೆ ಷರತ್ತು–ವಾ–ನಿಬಂಧನೆಗಳನ್ನು ಸಮಿತಿಯ ಕಛೇರಿಯ ವೇಳೆಯಲ್ಲಿ "ಕಾರ್ಯದರ್ಶಿ, ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿ, ಶಿವಮೊಗ್ಗ" ಫೋನ್ ನಂ–08182–250338 ಇವರಿಂದ ಅಥವಾ ಕರ್ನಾಟಕ ಸರ್ಕಾರದ ವೆಬ್‌ಸೈಟ್ (https://kppp.karnataka.gov.in.) ಇಂದ ಪಡೆಯ ಬಹುದು. 7. ಆಸಕ್ತಿಯುಳ್ಳ ಗುತ್ತಿಗೆದಾರರು ಆನ್‌ಲೈನ್‌ನಲ್ಲಿ ಭಾಗವಹಿಸಿ ಅರ್ಜಿ ಪಡೆದುಕೊಳ್ಳಲು ಮತ್ತು ಇ.ಎಂ.ಡಿ. ಮೊತ್ತ ಪಾವತಿಸಲು ಇ–ಪ್ರೋಕ್ಯೂರ್‌ಮೆಂಟ್ ಸಹಾಯವಾಣಿ ದೂರವಾಣಿ ಸಂಖ್ಯೆ: 080–25501216 ನ್ನು ಸಂಪರ್ಕಿಸಬಹುದು

ಸಹಿ/– ಹೆಚ್.ವೈ.ಸತೀಶ., ಕೆ.ಎಂ.ಎಸ್ ಕಾರ್ಯದರ್ಶಿ(ದರ್ಜೆ–1) ಕೃ.ಉ.ಮಾ.ಸ.,ಶಿವಮೊಗ್ಗ.

ಸಹಿ/– ಅಭಿಷೇಕ್ ವಿ., ಕ.ಆ.ಸೇ ಆಡಳಿತಾಧಿಕಾರಿಗಳು ಕೃ.ಉ.ಮಾ.ಸ.,ಶಿವಮೊಗ್ಗ ಹಾಗೂ ಅಪರ ಜಿಲ್ಲಾಧಿಕಾರಿಗಳು, ಶಿವಮೊಗ್ಗ ಜಿಲ್ಲೆ, ಶಿವಮೊಗ್ಗ

ವಾ.ಸಾ.ಸಂ.ಇ/ಕೆಎಸ್‌ಎಂಸಿಎ/ಶಿ/26–27/148/04/159

ಕೇರಳ ರಾಜ್ಯ ಲಾಟರಿ ಫಲಿತಾಂಶ ವಿವರ ಪ್ರಕಟ

ತಿರುವನಂತಪುರಂ: ಕೇರಳ ರಾಜ್ಯ ಲಾಟರಿಯ ಕಾರುಣ್ಯ (ನಂ.KR-752) ಡ್ರಾ ಮೇ 02ರಂದು ತಿರುವನಂತಪುರಂನ ಬೇಕರಿ ಜಂಕ್ಷನ್ ಬಳಿಯ ಗೋರ್ಕಿ ಭವನದಲ್ಲಿ ನಡೆದಿದ್ದು, ಫಲಿತಾಂಶ ವಿವರ ಇಂತಿದೆ.

1st Prize Rs.1,00,00,000/- [1 Crore]

KH 710104 (MOOVATTUPUZHA)

Consolation Prize Rs.5,000/-

KA 710104 KB 710104 KC 710104 KD 710104 KE 710104 KF 710104 KG 710104 KJ 710104 KK 710104 KL 710104 KM 710104

2nd Prize Rs.25,00,000/- [25 Lakhs]

KM 163302 (KOTTAYAM)

3rd Prize Rs.10,00,000/- [10 Lakhs]

KG 561521 (IDUKKI)

FOR THE TICKETS ENDING WITH THE FOLLOWING NUMBERS

4th Prize Rs.5,000/-

0317 0661 1301 1317 1786 2037 2390 2470 2558 2592 2594 4126 4665 5191 5548 5675 5812 7529 7644

5th Prize Rs.2,000/-

1506 1812 4201 6405 7849 8656

6th Prize Rs.1,000/-

1438 2339 2545 2814 3320 3700 3713 3729 3845 4012 4656 4759 5529 5844 6404 6520 6894 7191 7722 7842 8815 9012 9096 9250 9972

7th Prize Rs.500/-

0030 0104 0512 0754 1099 1251 1303 1546 1639 1682 1684 1713 1858 1910 1936 2009 2108 2214 2410 2553 2660 2705 2839 2880 2914 3135 3156 3498 3601 3681 4155 4549 4717 4756 4770 4865 4992 5160 5702 5740 5937 6056 6117 6200 6430 6431 6510 6646 6679 6812 7030 7314 7341 7417 7467 7656 7694 7703 7868 7913 7962 8045 8394 8421 8559 8896 8903 9024 9141 9224 9326 9415 9465 9485 9847 9876

8th Prize Rs.200/-

0076 0098 0237 0286 0455 0465 0796 0901 0912 0936 0943 1044 1133 1330 1346 1347 1494 1521 1554 2224 2311 2327 2364 2424 2560 2593 2887 3017 3051 3269 3279 3380 3527 3623 3792 3809 3912 3979 4128 4260 4266 4371 4437 4490 4634 4643 4766 5013 5253 5353 5455 5549 5614 5660 6119 6126 6399 6458 6486 6554 6664 6729 6805 7024 7102 7258 7386 7446 7620 7689 7831 7902 7957 8014 8021 8027 8138 8158 8251 8459 8616 8642 8774 8782 9139 9142 9159 9167 9237 9402 9659 9867

9th Prize Rs.100/-

0136 0227 0330 0337 0363 0389 0469 0503 0523 0594 0596 0723 0918 0924 0949 0961 1049 1050 1272 1350 1365 1423 1487 1559 1567 1792 1837 1915 1917 1926 2021 2060 2181 2187 2286 2318 2380 2432 2510 2568 2589 2714 2833 2875 2877 2915 3095 3105 3260 3265 3546 3599 3667 3734 3815 3880 3908 4018 4093 4199 4246 4264 4273 4348 4369 4466 4718 4720 4743 4830 4860 4968 4995 5055 5203 5290 5851 6011 6074 6080 6138 6195 6280 6300 6319 6326 6463 6492 6575 6647 6649 6657 6670 6680 6709 6927 6939 6984 7034 7171 7202 7229 7263 7296 7389 7431 7434 7516 7545 7603 7633 7666 7671 7743 7871 7904 7959 8016 8042 8164 8184 8226 8317 8330 8341 8510 8754 8759 8951 8957 8997 9065 9229 9438 9441 9520 9538 9651 9684 9719 9725 9730 9810 9863

ಕರ್ನಾಟಕ ಸರ್ಕಾರ

ಕಾರ್ಯಪಾಲಕ ಇಂಜಿನಿಯರವರ ಕಛೇರಿ ಲೋಕೋಪಯೋಗಿ ಇಲಾಖೆ ವಿಭಾಗ, ಮಂಗಳೂರು

ಸಂಖ್ಯೆ:ಕಾಇಂ:ಲೋವಿ:ಮಂ.ವಿ:ಟಿಎನ್‌ಡಿ(06ಇ)ಜೆಇ–1:ಟೆಂಡರ್–:2026–27 ದಿನಾಂಕ: 02.05.2026

ಅಲ್ಪಾವಧಿ ಇ–ಟೆಂಡರ್ ಪ್ರಕಟಣೆ

ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ ಅದ್ಯಾದೇಶ 2000 ಹಾಗೂ ಆಕ್ಟ್ 2000 ರ ಪ್ರಕಾರ ಸ್ಟ್ಯಾಂಡರ್ಡ್ ಟೆಂಡರ್ ಡಾಕ್ಯುಮೆಂಟ್ (ಕೆ.ಸಿ – 4) ನಿಯಮಗಳನ್ವಯ ಕರ್ನಾಟಕ ರಾಜ್ಯ ಸರ್ಕಾರದ ರಾಜ್ಯಪಾಲರ ಪರವಾಗಿ ಕಾರ್ಯಪಾಲಕ ಇಂಜಿನಿಯರು, ಲೋಕೋಪಯೋಗಿ ಇಲಾಖೆ ವಿಭಾಗ, ಮಂಗಳೂರು ಇವರಿಂದ **ಲೆಕ್ಕಶೀರ್ಷಿಕೆ: 5054–80–190–0–01–132 ಕರ್ನಾಟಕ ರಸ್ತೆ ಅಭಿವೃದ್ಧಿ ನಿಗಮ ನಿಯಮಿತ – ಬಂಡವಾಳ ವೆಚ್ಚ** ಅಡಿಯಲ್ಲಿ ಅನುಮೋದನೆಯಾದ ಕಾಮಗಾರಿಗಳಿಗೆ **ವಿಸ್ತೃತ ಯೋಜನಾ ವರದಿ** ತಯಾರಿಸಲು ನೊಂದಾಯಿತರಾದ ಯೋಜನಾ ಸಮಾಲೋಚಕರುಗಳನ್ನು ನೇಮಿಸಲು ಇ–ಪ್ರೊಕ್ಯೂರಮೆಂಟ್ ಪೋರ್ಟಲ್ ಮುಖಾಂತರ ಈ ಕೆಳಕಂಡ ಕಾಮಗಾರಿಗೆ **ದ್ವಿ ಲಕೋಟೆ ಪದ್ಧತಿಯಲ್ಲಿ** ಟೆಂಡರ್‌ನ್ನು ಆಹ್ವಾನಿಸಲಾಗಿದೆ.

ಅರ್ಹ ಗುತ್ತಿಗೆದಾರರು ವೆಬ್‌ಸೈಟ್ **www.kppp.karnataka.gov.in** ನಲ್ಲಿ ಟೆಂಡರ್‌ಗಾಗಿ ವಿವರಗಳನ್ನು ಪಡೆದು ಭಾಗವಹಿಸಬಹುದು.

ಕ್ರ. ಸಂ.	ಕಾಮಗಾರಿಗಳ ವಿವರ	ಇ.ಎಂ.ಡಿ.
1	ಮಂಗಳೂರು ತಾಲೂಕು ಮುಲ್ಕಿ ಮೂಡಬಿದ್ರೆ ವಿಧಾನಸಭಾ ಕ್ಷೇತ್ರ ವ್ಯಾಪ್ತಿಯಲ್ಲಿ ಮಂಗಳೂರು– ಅತ್ರಾಡಿ ರಾಜ್ಯ ಹೆದ್ದಾರಿ ಕಿ.ಮೀ 14.42 ರಲ್ಲಿ ಕಟೀಲು ಎಂಬಲ್ಲಿ 16 ಮೀಟರ್ ಅಗಲದ ಸೇತುವೆ ಮರು ನಿರ್ಮಾಣ	ಕಾಮಗಾರಿಗಾರಿವಾರು ಇ.ಎಂ.ಡಿ. ವಿವರಗಳನ್ನು ಇ–ಪ್ರೋಕೂರ್‌ಮೆಂಟ್ ಮುಖಾಂತರ ಪಡೆಯುವುದು
2	ಮುಲ್ಕಿ ಮೂಡಬಿದ್ರೆ ವಿಧಾನಸಭಾ ಕ್ಷೇತ್ರ ವ್ಯಾಪ್ತಿಯಲ್ಲಿ ಮಂಗಳೂರು– ಅತ್ರಾಡಿ ರಾಜ್ಯ ಹೆದ್ದಾರಿ–67ರ ಕಿ.ಮೀ 0.16 ರಲ್ಲಿ ಮವೂರು ಸೇತುವೆ ಮರು ನಿರ್ಮಾಣ	

ಟೆಂಡರ್ ವಿವರಗಳು ಈ ಕೆಳಕಂಡಂತಿವೆ: (1) ಟೆಂಡರ್ ದಾಖಲೆಗಳನ್ನು ಇ–ಪ್ರೋಕೂರ್‌ಮೆಂಟ್ ಪೋರ್ಟಲ್ ಮುಖಾಂತರ ದಿನಾಂಕ: **02.05.2026 ರಿಂದ 11.05.2026 ರ 17.00 ಗಂಟೆವರೆಗೆ** ಡೌನ್‌ಲೋಡ್ ಮಾಡಿಕೊಳ್ಳಬಹುದು. (2) ಫ್ರೀ ಬಿಡ್ ಮೀಟಿಂಗ್‌ನ್ನು ದಿನಾಂಕ: **06.05.2026 ರ ಪೂರ್ವಾಹ್ನ 11.30 ಗಂಟೆಗೆ** ಲೋಕೋಪಯೋಗಿ ಇಲಾಖೆ, ಮಂಗಳೂರು ವಿಭಾಗ ಕಛೇರಿಯಲ್ಲಿ ನಡೆಸಲಾಗುವುದು. (3) ಸಮಾಲೋಚನಾ ಸಭೆಗೆ ಕಡ್ಡಾಯವಾಗಿ ಹಾಜರಾಗತಕ್ಕದ್ದು. ವಿಡಿಯೋ ಸಂವಾದ ಮೂಲಕ ಪಾಲ್ಗೊಳ್ಳಲು ಅವಕಾಶವಿರುವುದಿಲ್ಲ. (4) ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕ: **11.05.2026 ರ ಅಪರಾಹ್ನ 17.00 ಗಂಟೆಯವರೆಗೆ** (5) ಟೆಂಡರ್ ತಾಂತ್ರಿಕ ಬಿಡ್ ತೆರೆಯುವ ದಿನಾಂಕ: **12.05.2026 ರ ಪೂರ್ವಾಹ್ನ 17.15 ಗಂಟೆಯವರೆಗೆ** (6) ಟೆಂಡರ್ ಆರ್ಥಿಕ ಬಿಡ್ ತೆರೆಯುವ ದಿನಾಂಕ ಮತ್ತು ಸಮಯವನ್ನು ಪ್ರತ್ಯೇಕವಾಗಿ ತಾಂತ್ರಿಕ ಬಿಡ್ ಅನುಮೋದನೆಯಾದ ಯೋಜನಾ ಸಮಾಲೋಚಕರಿಗೆ ತಿಳಿಸಲಾಗುವುದು. (7) ಟೆಂಡರ್ ತಿದ್ದುಪಡಿ / ವಿಸ್ತರಣೆ / ಮಾರ್ಪಾಡುಗಳು ಇದ್ದರೆ ಇ–ಪ್ರೋಕ್ಯೂರ್‌ಮೆಂಟ್ ಪೋರ್ಟಲ್‌ನಲ್ಲಿ ಪ್ರಕಟಿಸಲಾಗುವುದು. (8) ಸ್ಟ್ರಕ್ಚರಲ್ ವಿನ್ಯಾಸ ನಕ್ಷೆಯನ್ನು ತಯಾರಿಸಲು ಸಮಾಲೋಚಕರು ಕಡ್ಡಾಯವಾಗಿ ಲೋಕೋಪಯೋಗಿ ಇಲಾಖೆ, ಕೇಂದ್ರ ವಲಯ, ಶಿವಮೊಗ್ಗದ ಅಡಿಯಲ್ಲಿ **(Cat – I)** ನೋಂದಣಿ ಆಗಿರತಕ್ಕದ್ದು.

ಉಲ್ಲೇಖ ನಿಯಮಗಳನ್ನು ಕರ್ನಾಟಕ ಸರ್ಕಾರ **KPPP** ಪೋರ್ಟಲ್‌ನಲ್ಲಿ **(https://kppp.karnataka.gov.in)** 02.05.2026 ರಿಂದ ಡೌನ್ಲೋಡ್ ಮಾಡಬಹುದು.

ಹೆಚ್ಚಿನ ವಿವರಗಳಿಗೆ ಸದರಿ ಕಛೇರಿಯಿಂದ (ದೂರವಾಣಿ ಸಂಖ್ಯೆ 0824 2423169 ಹಾಗೂ ಕೆಪಿಪಿಪಿ ಪೋರ್ಟಲ್ ಸಹಾಯವಾಣಿ ದೂರವಾಣಿ ಸಂಖ್ಯೆ +919240214000 ಮತ್ತು +919240214001 ರಿಂದ ಮಾಹಿತಿ ಪಡೆಯಬಹುದು.

ಸಹಿ/–, ಕಾರ್ಯಪಾಲಕ ಅಭಿಯಂತರರು

DIPR/DK/KSMCA/164/26-27 dt. 02.05.2026

BEFORE THE NOMINEE OF DUPUTY REGISTRAR OF CHITS, MANGALORE SUB DIVISION, MANGALORE

Dispute No: DRP/CFS/59/2025-2026

Between:

M/S SHREE KURAL CHITS PVT LTD ...Petitioner

And

Mr. Chethan Kumar And Others ...Respondent

1. **Mr. Chethan Kumar** S/o. Lokanath Poojary D.No.#1-396, Sudharshan Nagar, Bengodi Padavu, Pajeer, Bantwal, D.K.-574199.
2. **Mrs. Ashwini** D/o. Lokanath Poojary 1-396, E Bengodi Padavu House, Phajeer, D.K.-574199.
3. **Mr. Vinod Kumar** S/o. Sanjeeva Poojary 1-430 Jogi Bettu House, Phajeer, Bantwal, D.K.-574199.
4. **Mr. Latheesh** S/o. Narasimha Poojary D.No. #1-310(14), Navagraha Site Shree Devi Nagara, Kamblapadavu House, Kurnadu, Bantwal, Phajeer-574199.

NOTICE

Please take notice that the above Petition has been filed against you for recovery of the amount due to the Petitioner. Now the case stands posted to **21.05.2026** for your appearance at **12.30 P.M.** In.No. 3w-29-2360/9, 2nd floor Adarsh Castle Building, Kadri Road, Mallikatte, Kadri, Mangalore-575003. You may appear on that day before the undersigned either in person or through your Advocate. Otherwise the matter will be decided in your absence.

Given under my hand and seal of the Court on this 30th day of April 2026 at Mangalore.

(By order of the Court)

Sd/- Annapoorna Devi

Chit Registrar`s Nominee

ಕಿರುಸುದ್ದಿ

ಶಾರದಾ ಆಯುರ್ವೇದ ಕಾಲೇಜಿನಲ್ಲಿ ಚಿಕಿತ್ಸಾ ಶಿಬಿರ

ಮಂಗಳೂರು: ತಲಪಾಡಿ ದೇವಿನಗರದ ಶಾರದಾ ಆಯುರ್ವೇದ ವೈದ್ಯಕೀಯ ಕಾಲೇಜಿನ ಪಂಚಕರ್ಮ ಹಾಗೂ ಫಿಸಿಯೋಥೆರಪಿ ವಿಭಾಗದ ವತಿಯಿಂದ ಉಚಿತ ಸಂಧಿವಾತ ಚಿಕಿತ್ಸಾ ಶಿಬಿರ ಮೇ 4ರಿಂದ 11 ವರೆಗೆ ಹಮ್ಮಿಕೊಳ್ಳಲಾಗಿದೆ. ಶಿಬಿರದಲ್ಲಿ ಗಂಟುನೋವು, ಊತ, ಬಿಗಿತ, ಇತ್ಯಾದಿಗಳಿಂದ ಬಳಲುತ್ತಿರುವವರಿಗೆ ಆಯ್ದ ಪಂಚಕರ್ಮ ಚಿಕಿತ್ಸೆ ಹಾಗೂ ಅವಸ್ಥಾನುಸಾರ ಫಿಸಿಯೋಥೆರಪಿ ಚಿಕಿತ್ಸೆ ಉಚಿತವಾಗಿ ನೀಡಲಾಗುವುದು. ಸಮಯ ಬೆಳ್ಳಿಗೆ 9ರಿಂದ ಸಂಜೆ 4ರ ತನಕ. ಸಾರ್ವಜನಿಕರು ಇದರ ಪ್ರಯೋಜನವನ್ನು ಪಡೆಯಬೇಕಾಗಿ ವಿನಂತಿ. ನೋಂದಾವಣೆಗಾಗಿ 8971153232 ಸಂಪರ್ಕಿಸಬಹುದು.

ಮೇ 17ರಂದು ಉಜಿರೆಯಲ್ಲಿ ವಿಷುಕಣಿ

ಬೆಳ್ತಂಗಡಿ : ವಿಷುಕಣಿ ಆಚರಣಾ ಸಮಿತಿ ಬೆಳ್ತಂಗಡಿ ತಾಲೂಕು ಇದರ ಆಶ್ರಯದಲ್ಲಿ ನಡೆಯುತ್ತಿರುವ 5ನೇ ವರ್ಷದ ವಿಷುಕಣಿ 5.0 ಕಾರ್ಯಕ್ರಮವು ಮೇ 17ರಂದು ಉಜಿರೆಯ ಕೃಷ್ಣಾನುಗ್ರಹ ಸಭಾಭವನದಲ್ಲಿ ನಡೆಯಲಿದೆ. ಈ ಸಮಾರಂಭದ ಪೂರ್ವಭಾವಿ ಸಭೆಯು ಕಾರ್ಯಕ್ರಮದ ರೂವಾರಿ ಶಾಸಕರಾದ ಹರೀಶ್ ಪೂಂಜ ಇವರ ನೇತೃತ್ವದಲ್ಲಿ ಹವ್ಯಕ ಸಭಾಭವನ ಗುರುವಾಯನಕೆರೆಯಲ್ಲಿ ನಡೆಯಿತು. ಈ ಸಂದರ್ಭದಲ್ಲಿ ಪ್ರಸಾದ್ ಬಿ. ಎಸ್, ಅನಿಲ್ ಅಕ್ಷರ, ಬಾಲಕೃಷ್ಣ ನೈಮಿಷ, ವಿನೇಶ್ ಚಾರ್ಮಾಡಿ, ಹಾಗೂ ಅನೇಕ ಪ್ರಮುಖರು ಉಪಸ್ಥಿತರಿದ್ದರು.

ಮೇ 6ರವರೆಗೆ ಹಿರಿಯಡಕ ಕ್ಷೇತ್ರದಲ್ಲಿ ಮಹಾರಥೋತ್ಸವ

ಹಿರಿಯಡಕ: ಉಡುಪಿ ಜಿಲ್ಲೆಯ ಪ್ರಸಿದ್ಧ ಧಾರ್ಮಿಕ ಕ್ಷೇತ್ರಗಳಲ್ಲೊಂದಾದ ಹಿರಿಯಡಕ ಶ್ರೀ ಮಹತೋಭಾರ ಶ್ರೀ ವೀರಭದ್ರ ಸ್ವಾಮಿ ದೇವಸ್ಥಾನದ ಧ್ವಜಾರೋಹಣಾದಿ ಮಹೋತ್ಸವಗಳು ಮೇ 1ರಿಂದ ಆರಂಭಗೊಂಡಿದ್ದು, ಮೇ 6ರವರೆಗೆ ನಡೆಯಲಿವೆ. ಮೇ 3ರಂದು (ಇಂದು) ರಾತ್ರಿ 7ರಿಂದ ಆರಾಧನಾ ಪೂಜೆ, ನಿತ್ಯ ಬಲಿ, ಸವಾರಿ ಬಲಿ, ಮಹಾರಂಗಪೂಜೆ, ಭೂತಬಲಿ ನಡೆಯಲಿದೆ. ಮೇ 4ರಂದು ಪೂರ್ವಾಹ್ನ ಗಂಟೆ 10.30ಕ್ಕೆ ರಥಾರೋಹಣ, ಸಂಜೆ 6ರಿಂದ ಶ್ರೀಮನ್ಮಹಾರಥೋತ್ಸವ, ಭೂತಬಲಿ, ಕವಾಟಪೂರಣ, ಮೇ5ರಂದು ಗಣಯಾಗ , 8ರಿಂದ ಕವಾಟೋದ್ಘಾಟನೆ, ತುಲಾಭಾರ ಸೇವೆ, ಮಹಾಪೂಜೆ , ರಾತ್ರಿ 7ರಿಂದ ಆರಾಧನಾ ಪೂಜೆ, ಓಕುಳಿ, ಅವಭೃತ ಸ್ನಾನ, ಧ್ವಜಾವರೋಹಣ ನಡೆಯಲಿದೆ.ಮೇ 6ರಂದು ಬೆಳಿಗ್ಗೆ 8ರಿಂದ ಮಹಾಸಂಪ್ರೋಕ್ಷಣೆ, ಚಂಡಿಕಾಯಾಗ, ಮಾರಿ ಪೂಜೆ, ಅನ್ನಸಂತರ್ಪಣೆ, ಸಮಾರಾಧನೆ, ಮಂತ್ರಾಕ್ಷತೆ, ಪ್ರಸಾದ ವಿತರಣೆ, ರಾತ್ರಿ 8ರಿಂದ ರಾತ್ರಿ ಪೂಜೆ, ಮಾರಿ ಪೂಜೆ, ಮಾರಿ ಬಲಿ ನಡೆಯಲಿದೆ ಎಂದು ಕ್ಷೇತ್ರದ ಆಡಳಿತಾಧಿಕಾರಿಗಳಾಗಿರುವ ಪಿ.ಆರ್.ಗುರುರಾಜ್ ಅವರ ಪ್ರಕಟನೆ ತಿಳಿಸಿದೆ.

ವಿದ್ಯಾರ್ಥಿನಿ ಮುಂದೆ ಅಶ್ಲೀಲ ವರ್ತನೆ : ಕಾಲೇಜು ನೌಕರನ ವಿರುದ್ಧ ಕೇಸು

ಕಾಸರಗೋಡು: ವಿದ್ಯಾರ್ಥಿನಿಯ ಮುಂದೆ ನಗ್ನತೆ ಪ್ರದರ್ಶಿಸಿದ ಆರೋಪದಂತೆ ಬೇಕಲ ಪೊಲೀಸರು ಕೇಸು ದಾಖಲಿಸಿಕೊಂಡಿದ್ದಾರೆ. ಪೆರಿಯದಲ್ಲಿರುವ ಕ್ವಾರ್ಟರ್ಸ್‌ನಲ್ಲಿ ವಾಸಿಸುವ ವಿದ್ಯಾರ್ಥಿನಿ ನೀಡಿದ ದೂರಿನಂತೆ ಕುಣಿಯ ಖಾಸಗಿ ಕಾಲೇಜು ನೌಕರನಾದ ಆಂಧ್ರಪ್ರದೇಶ ನಿವಾಸಿ ಹೆರಾಲ್ಡ್ ಎಂಬಾತನ ವಿರುದ್ಧ ಕೇಸು ದಾಖಲಾಗಿದೆ.

ನಿಧನ ಸುದ್ದಿ

ಗಂಗಾದೇವಿ



ಬದಿಯಡ್ಕ: ಕೊಲ್ಲಂಗಾನ ಸಮೀಪದ ಪಜ್ಜ ದಿ.ಶ್ಯಾಮ ಭಟ್ ಅವರ ಪತ್ನಿ ಗಂಗಾದೇವಿ (75) ಅಲ್ಪಕಾಲದ ಅಸೌಖ್ಯದಿಂದ ಶುಕ್ರವಾರ ರಾತ್ರಿ ಕಾಸರಗೋಡಿನ ಖಾಸಗಿ ಆಸ್ಪತ್ರೆಯಲ್ಲಿ ನಿಧನರಾದರು. ಅವರು ಕೃಷಿಕರಾಗಿದ್ದರು. ಮಕ್ಕಳಿಲ್ಲದ ಅವರು ಅಪಾರ ಬಂಧು ಬಳಗವನ್ನು ಅಗಲಿದ್ದಾರೆ.

ಚಂದ್ರಕಾಂತ ನಾಯಕ್



ಕಟೀಲು : ಚಂದ್ರಕಾಂತ ನಾಯಕ್ (73) ಶನಿವಾರ ಅಲ್ಪಕಾಲದ ಅಸೌಖ್ಯದಿಂದ ನಿಧನರಾದರು. ಆರ್‌ಎಸ್‌ಎಸ್ ಕಾರ್ಯಕರ್ತರಾಗಿದ್ದ ಅವರು ಕಟೀಲು ದೇಗುಲದ ಭಜನಾ ಮಂಡಳಿಯಲ್ಲಿ ತೊಡಗಿಸಿಕೊಂಡಿದ್ದರು. ಚಂದ್ರಕಾಂತ ಸೇವಾಶ್ರಮದ ಮೂಲಕ ಸಭಾಭವನ ನಿರ್ಮಿಸಿದ್ದರು. ವರ್ಷಂಪ್ರತಿ ಕೃಷಿಕರನ್ನು ಸಂಮಾನಿಸುತ್ತಿದ್ದರು. ಸಾಮಾಜಿಕ, ಧಾರ್ಮಿಕ ಚಟುವಟಿಕೆಗಳಲ್ಲಿ ಕ್ರಿಯಾಶೀಲರಾಗಿದ್ದರು. ಮೃತರು ಪತ್ನಿ, ಈರ್ವರು ಗಂಡು ಮಕ್ಕಳನ್ನು ಅಗಲಿದ್ದಾರೆ.

ಶಾಂಭವಿ ಪ್ರಭು



ಬೆಳ್ತಂಗಡಿ: ಶಾಂಭವಿ ಪ್ರಭು ಪೆರ್ಮರೊಡಿ, ಪುಂಜಾಲಕಟ್ಟೆ, (92) ಶನಿವಾರ ನಿಧನರಾದರು. ದಿ. ವಾಸುದೇವ ಪ್ರಭು ಪೆರ್ಮರೋಡಿಯವರ ಧರ್ಮಪತ್ನಿಯಾಗಿರುವ ಇವರು, ಮಕ್ಕಳಾದ ನಿವೃತ್ತ ಅಂಚೆ ಪಾಲಕ ಮೋಹನ್ ಪ್ರಭು ಪೆರ್ಮರೋಡಿ, ಪುಂಜಾಲಕಟ್ಟೆ ಕರ್ನಾಟಕ ಪಬ್ಲಿಕ್ ಸ್ಕೂಲ್ ನ ಶಿಕ್ಷಕ ರಕ್ಷಕ ಸಂಘದ ಮಾಜಿ ಅಧ್ಯಕ್ಷ ರಾದ ಸುಧಾಕರ ಪ್ರಭು ಹಾಗೂ ಇಬ್ಬರು ಪುತ್ರಿಯರು ಮತ್ತು ಬಂಧು ಬಳಗದವರನ್ನು ಅಗಲಿದ್ದಾರೆ.

ಎ.ಕೃಷ್ಣ

ಕಾಸರಗೋಡು: ಕಡಪ್ಪುರ ಶ್ರೀ ಚೀರುಂಬಾ ಭಗವತೀ ಕ್ಷೇತ್ರ ಭಜನಾ ಮಂದಿರ ರಸ್ತೆಯ ಕಣಿಪುರೇಶ್ ಹೌಸ್‌ನ ಎ.ಕೃಷ್ಣ(81) ನಿಧನ ಹೊಂದಿದರು. ಇವರು ಡೆಪ್ಯೂಟಿ ತಹಶೀಲ್ದಾರ್ ಆಗಿ ಸೇವೆ ಸಲ್ಲಿಸಿ ನಿವೃತ್ತರಾಗಿದ್ದರು. ಮೃತರು ಪತ್ನಿ ಎಂ.ಅಂಬುಜಾಕ್ಷಿ, ಮಕ್ಕಳಾದ ಪ್ರವೀಣ್‌ಕುಮಾರ್, ಪ್ರಮೋದ್, ಪ್ರಶಾಂತ್ ಅವರನ್ನು ಅಗಲಿದ್ದಾರೆ.

ನಾರಾಯಣ

ಬದಿಯಡ್ಕ: ಮಾವಿನಕಟ್ಟೆ ಸಮೀಪದ ಎರಡನೇ ಮೈಲ್ ಕೋಲಾರಿ ನಿವಾಸಿ ನಾರಾಯಣ (65) ನಿಧನ ಹೊಂದಿದರು. ಕಳೆದ ಕೆಲವು ದಿನಗಳಿಂದ ಅಸೌಖ್ಯ ಬಾಧಿಸಿ ಚಿಕಿತ್ಸೆಯಲ್ಲಿದ್ದರು. ಮೃತರು ಪತ್ನಿ ನಿರ್ಮಲಾ, ಮಕ್ಕಳಾದ ಅನಿಲ್‌ಕುಮಾರ್, ಸುಜೇಶ್‌ಕುಮಾರ್, ಸುಚಿತ್ರಾ ಅವರನ್ನು ಅಗಲಿದ್ದಾರೆ.

ವಿಧಾನಸಭಾ ಚುನಾವಣೆ ಕಾಸರಗೋಡು ಜಿಲ್ಲೆಯಲ್ಲಿ ಮತ ಎಣಿಕೆಗೆ ಸಿದ್ಧತೆಗಳು ಪೂರ್ಣ

ಮೇ 4: ಬೆಳಗ್ಗೆ 8 ಗಂಟೆಗೆ ಮತ ಎಣಿಕೆ

ಕಾಸರಗೋಡು: ವಿಧಾನಸಭಾ ಚುನಾವಣೆಯ ಅಂಗವಾಗಿ ಮತ ಎಣಿಕೆ ಕಾರ್ಯವು ಮೇ 4 ರಂದು ನಡೆಯಲಿದ್ದು, ಜಿಲ್ಲಾ ಚುನಾವಣಾ ಅಧಿಕಾರಿಯಾಗಿರುವ ಜಿಲ್ಲಾಧಿಕಾರಿ ಅರ್ಜುನ್ ಪಾಂಡ್ಯನ್ ಅವರು ಕಾಸರಗೋಡು ಜಿಲ್ಲೆಯಲ್ಲಿ ಮತ ಎಣಿಕೆ ಸಿದ್ಧತೆಗಳು ಪೂರ್ಣಗೊಂಡಿವೆ ಎಂದು ಶನಿವಾರ ಘೋಷಿಸಿದ್ದಾರೆ.

ಮೇ 4 ರಂದು ಬೆಳಗ್ಗೆ 8 ಗಂಟೆಗೆ ಮತ ಎಣಿಕೆ ಆರಂಭವಾಗಲಿದೆ. ಮಂಜೇಶ್ವರ, ಕಾಸರಗೋಡು ಮತ್ತು ಉದುಮ ಕ್ಷೇತ್ರಗಳ ಮತ ಎಣಿಕೆ ಕಾರ್ಯವು ಕಾಸರಗೋಡು ಸರಕಾರಿ ಕಾಲೇಜಿನ ಕೇಂದ್ರಗಳಲ್ಲಿ ಹಾಗೂ ಕಾಞಂಗಾಡು ಮತ್ತು ತೃಕ್ಕರೀಪ್ಪುರ ಕ್ಷೇತ್ರಗಳ ಮತ ಎಣಿಕೆ ಕಾರ್ಯವು ಕಾಞಂಗಾಡು ದುರ್ಗಾ ಹೈಯರ್ ಸೆಕೆಂಡರಿ ಶಾಲೆಯ ಕೇಂದ್ರಗಳಲ್ಲಿ ಜರಗಲಿದೆ.

ಮತ ಎಣಿಕೆ ವ್ಯವಸ್ಥೆಗಳು: ಸಿಬ್ಬಂದಿಗಳ ನಿಯೋಜನೆ

ಮತ ಎಣಿಕೆ ಪ್ರಕ್ರಿಯೆಗಾಗಿ ಜಿಲ್ಲೆಯಲ್ಲಿ 540 ಮಂದಿ ಸಿಬ್ಬಂದಿಗಳನ್ನು ನಿಯೋಜಿಸಲಾಗಿದೆ. ಇದರಲ್ಲಿ ಆರ್ ಒಗಳು, ಹೆಚ್ಚುವರಿ ಎಆರ್‌ಒಗಳು, ಮೈಕ್ರೋ ವೀಕ್ಷಕರು, ಮತ ಎಣಿಕೆ ಮೇಲ್ವಿಚಾರಕರು ಮತ್ತು ಮತ ಎಣಿಕೆ ಸಹಾಯಕರು ಸೇರಿದ್ದಾರೆ.

ಇವಿಎಂಗಳಲ್ಲಿನ ಮತಗಳನ್ನು ಎಣಿಸಲು ಎಣಿಕೆ ಕೇಂದ್ರಗಳಲ್ಲಿ ಗರಿಷ್ಠ 14 ಎಣಿಕೆ ಟೇಬಲ್‌ಗಳನ್ನು ಸ್ಥಾಪಿಸಲಾಗುವುದು. ಒಂದು ಸುತ್ತಿನಲ್ಲಿ ಗರಿಷ್ಠ 14 ಬೂತ್‌ಗಳಲ್ಲಿ ಮತಗಳನ್ನು ಎಣಿಸಲಾಗುತ್ತದೆ. ಗರಿಷ್ಠ 17 ಸುತ್ತುಗಳಲ್ಲಿ ಮತಗಳನ್ನು ಪೂರ್ಣಗೊಳಿಸಲಾಗುತ್ತದೆ.

ಅಂಚೆ ಮತಪತ್ರಗಳನ್ನು ಮೊದಲು ಎಣಿಕೆ ಮಾಡಲಾಗುತ್ತದೆ. ಈ ಉದ್ದೇಶಕ್ಕಾಗಿ ಪ್ರತ್ಯೇಕ ಎಣಿಕೆ ಕೋಷ್ಟಕಗಳು ಮತ್ತು ಎಆರ್‌ಒಗಳನ್ನು ನಿಯೋಜಿಸಲಾಗಿದ್ದು, 500 ಕ್ಕಿಂತ ಕಡಿಮೆ ಇರುವ ಪ್ರತಿ ಮತಪತ್ರಕ್ಕೂ ಒಂದು ಟೇಬಲ್ ಇರುತ್ತದೆ. ನಿಖರತೆಯನ್ನು ಖಚಿತಪಡಿಸಿಕೊಳ್ಳಲು ಪ್ರತಿ ಕ್ಷೇತ್ರದ 5 ಮತಗಟ್ಟೆಗಳಿಂದ ವಿವಿ ಪಾಟ್ ಸ್ಲಿಪ್‌ಗಳನ್ನು ಕಡ್ಡಾಯವಾಗಿ ಎಣಿಸಲಾಗುತ್ತದೆ.

ಸ್ಟ್ರಾಂಗ್ ರೂಮ್‌ಗಳ ಉದ್ಘಾಟನೆ

ಮತಗಟ್ಟೆ ಸಾಮಗ್ರಿಗಳನ್ನು ಇರಿಸಲಾಗಿರುವ ಸ್ಟ್ರಾಂಗ್ ರೂಮ್‌ಗಳನ್ನು ಅಭ್ಯರ್ಥಿಗಳು ಅಥವಾ ಅವರ ಅಧಿಕೃತ ಪ್ರತಿನಿಧಿಗಳ ಸಮ್ಮುಖದಲ್ಲಿ ಇಸಿಐ ವೀಕ್ಷಕರು ಮತ್ತು ಸಂಬಂಧಪಟ್ಟ ಅಧಿಕಾರಿಗಳ ಉಪಸ್ಥಿತಿಯಲ್ಲಿ ವಿಡಿಯೋ ರೆಕಾರ್ಡಿಂಗ್‌ನೊಂದಿಗೆ ತೆರೆಯಲಾಗುತ್ತದೆ. ಎಣಿಕೆಯ ಸಮಯದಲ್ಲಿ ನಿಯಂತ್ರಣ ಘಟಕದ ಜೊತೆಗೆ ಫಾರ್ಮ್ 17ಸಿ ಅನ್ನು ಮೇಜಿನ ಮೇಲೆ ಇರಿಸಲಾಗುತ್ತದೆ.

ರಾಜಕೀಯ ಪಕ್ಷಗಳು ಮತ್ತು ಏಜೆಂಟರಿಗೆ ಸೂಚನೆಗಳು

ರಾಜಕೀಯ ಪಕ್ಷಗಳು ಮತ್ತು ಏಜೆಂಟರುಗಳು ನೇಮಕಾತಿ ಆದೇಶದ (ನಮೂನೆ 18) ಪ್ರತಿಯನ್ನು ಮತ ಎಣಿಕೆಗೆ ನಿಗದಿಪಡಿಸಿದ ಸಮಯಕ್ಕಿಂತ ಕನಿಷ್ಠ ಒಂದು ಗಂಟೆ ಮೊದಲು ಚುನಾವಣಾಕಾರಿ (ಆರ್‌ಒ)ಗೆ ಸಲ್ಲಿಸಬೇಕು. ಏಜೆಂಟರು ಮತ್ತು ಅಭ್ಯರ್ಥಿಗಳು ತಮ್ಮ ಅಧಿಕೃತ ಗುರುತಿನ ಚೀಟಿಗಳನ್ನು ಎಣಿಕೆ ಸಭಾಂಗಣದಲ್ಲಿ ಸ್ಪಷ್ಟವಾಗಿ ಪ್ರದರ್ಶಿಸಬೇಕು. ಇವಿಎಂಗಳು ಅಥವಾ ಇತರ ಚುನಾವಣಾ ದಾಖಲೆಗಳನ್ನು ನಿರ್ವಹಿಸಲು ಏಜೆಂಟರಿಗೆ ಅವಕಾಶವಿಲ್ಲ. ಮತ ಎಣಿಕೆ ಸಭಾಂಗಣದ ಒಳಗೆ ಮೊಬೈಲ್ ಫೋನ್‌ಗಳನ್ನು ಬಳಸಿಕೊಂಡು ಒಟಿಪಿ ಸ್ವೀಕರಿಸಲು ಚುನಾವಣಾ ಆಯೋಗದ ವೀಕ್ಷಕರು ಮತ್ತು ಚುನಾವಣಾ ಅಧಿಕಾರಿಗಳು ಮಾತ್ರ ಅವಕಾಶ ಹೊಂದಿರುತ್ತಾರೆ. ಇತರರು ತಮ್ಮ ಫೋನ್‌ಗಳನ್ನು ಎಣಿಕೆ ಕೇಂದ್ರದ ಹೊರಗಿನ ಘಟಕಗಳಲ್ಲಿ ಇಡಬೇಕಾಗುತ್ತದೆ. ಚುನಾವಣೆಗೆ ಸಂಬಂಧಿಸಿದ ಸಮಗ್ರ ಮಾಹಿತಿಗಳನ್ನು ಒಳಗೊಂಡ ಸೂಚ್ಯಂಕ ಕಾರ್ಡ್‌ಗಳನ್ನು 48 ಗಂಟೆಗಳ ಒಳಗೆ ಕೇಂದ್ರ ಚುನಾವಣಾ ಆಯೋಗಕ್ಕೆ ಹಸ್ತಾಂತರಿಸಲಾಗುವುದು ಎಂದು ಜಿಲ್ಲಾ ಚುನಾವಣಾ ಅಧಿಕಾರಿಯಾದ ಜಿಲ್ಲಾಧಿಕಾರಿ ತಿಳಿಸಿದ್ದಾರೆ.

ಉದ್ಯಮ – ತಂತ್ರಜ್ಞಾನ ಬೆಳವಣಿಗೆಯ ಕೇಂದ್ರವಾಗಿ ಮಂಗಳೂರು

ವರ್ಟೆಕ್ಸ್ ಸಿಎಕ್ಸ್‌ಒ ಕಾನ್‌ಕ್ಲೇವ್‌ನಲ್ಲಿ ಚರ್ಚೆ



ಮಂಗಳೂರು: ಉದ್ಯಮ ಮತ್ತು ತಂತ್ರಜ್ಞಾನ ಆಧರಿತ ಬೆಳವಣಿಗೆಯ ಪ್ರಮುಖ ಕೇಂದ್ರವಾಗಿ ಮಂಗಳೂರು ಹೊರಹೊಮ್ಮುತ್ತಿದೆ ಎಂದು 'ವರ್ಟೆಕ್ಸ್ ಸಿಎಕ್ಸ್‌ಒ ಕಾನ್‌ಕ್ಲೇವ್ 2026' ಸಮಾವೇಶದಲ್ಲಿ ಅಭಿಪ್ರಾಯ ವ್ಯಕ್ತವಾಯಿತು.

ಡಾ. ಟಿಎಂಎ ಪೈ ಇಂಟರ್‌ನ್ಯಾಷನಲ್ ಕನ್ವೆನ್ಷನ್ ಸೆಂಟರ್‌ನಲ್ಲಿ ವರ್ಟೆಕ್ಸ್ ವರ್ಕ್ ಸ್ಪೇಸ್ ಆಯೋಜಿಸಿದ್ದ ಸಮಾವೇಶದಲ್ಲಿ ಉದ್ಯಮ ವಲಯದ ನಾಯಕರು, ಜನಪ್ರತಿನಿಧಿಗಳು, ಹಿರಿಯ ಅಧಿಕಾರಿಗಳು ಮತ್ತು ಸಂಸ್ಥೆಯ ಉನ್ನತ ಮಟ್ಟದ ನಿರ್ವಹಣಾಧಿಕಾರಿಗಳು ಭಾಗವಹಿಸಿ, ಬೆಂಗಳೂರಿನ ಹೊರಗಿನ ಪ್ರದೇಶಗಳಲ್ಲಿ ವ್ಯವಹಾರ ವಿಸ್ತರಣೆಯ ಅವಕಾಶಗಳ ಕುರಿತು ಚರ್ಚಿಸಿದರು.

ಮಂಗಳೂರನ್ನು ಕೈಗಾರಿಕೆ ಮತ್ತು ತಂತ್ರಜ್ಞಾನ ಕ್ಷೇತ್ರಗಳಲ್ಲಿ ಬೆಳೆಯುವ ಕೇಂದ್ರವನ್ನಾಗಿ ರೂಪಿಸುವ ಕುರಿತು ಚಿಂತನೆ ನಡೆಯಿತು. ಕರ್ನಾಟಕ ಡಿಜಿಟಲ್ ಎಕಾನಮಿ ಮಿಷನ್ ಹಾಗೂ ಕರ್ನಾಟಕ ಇನ್ನೋವೇಶನ್ ಅಂಡ್ ಟೆಕ್ನಾಲಜಿ ಸೊಸೈಟಿ ಸಂಸ್ಥೆಗಳ ಹಿರಿಯ ಅಧಿಕಾರಿಗಳು ಹೊರಗಿನ ಪ್ರದೇಶಗಳಲ್ಲಿ ಹೂಡಿಕೆ ಹೆಚ್ಚಿಸಲು ರೂಪಿಸಿದ ನೀತಿಗಳನ್ನು ವಿವರಿಸಿದರು. ಕಿಟ್ಸ್‌ನ ವ್ಯವಸ್ಥಾಪಕ ನಿರ್ದೇಶಕ ರಾಹುಲ್ ಶರಣಪ್ಪ ಸಂಕನೂರ್, ಐಎಎಸ್, ಕೆಡಿಇಎಂನ ಸಮೀರ್ ವೇಣುಗೋಪಾಲ್, ಭರತ್ ಚಂದ್ರ ಬಿ.ಕೆ. ಮತ್ತು ವೈಶಾಕ್ ಪೈ ಅವರು, ಕಂಪನಿಗಳು ದೊಡ್ಡ ನಗರಗಳ ಹೊರಗೂ ವಿಸ್ತರಿಸಲು ಮೂಲಸೌಕರ್ಯ, ಪ್ರತಿಭೆ ಮತ್ತು ನಿಯಮಾತ್ಮಕ ಸೌಲಭ್ಯಗಳಿಗೆ ನೀಡುವ ಪ್ರೋತ್ಸಾಹಗಳ ವಿವರಿಸಿದರು.

ವರ್ಟೆಕ್ಸ್ ವರ್ಕ್‌ಸ್ಪೇಸ್‌ನ ಮುಖ್ಯ ಮಾರ್ಕೆಟಿಂಗ್ ಅಧಿಕಾರಿ ವಿನಾಯಕ್ ಪಲನಕರ್ ಮಾತನಾಡಿ, ಸಂಸ್ಥೆ ಕೇವಲ ಕಾರ್ಯಸ್ಥಳ ಒದಗಿಸುವುದಲ್ಲ, ವ್ಯವಹಾರ ಬೆಳವಣಿಗೆಗೆ ಸಹಾಯ ಮಾಡುವತ್ತ ಕೆಲಸ ಮಾಡುತ್ತಿದೆ ಎಂದರು. ಕಂಪನಿಗಳಿಗೆ ನೇಮಕಾತಿ ಮತ್ತು ಸರ್ಕಾರಿ ಸೌಲಭ್ಯಗಳನ್ನು ಪಡೆಯಲು ಸಹಾಯ ಮಾಡುವುದು ಗುರಿಯಾಗಿದೆ ಎಂದರು.

ಸಮಾವೇಶದಲ್ಲಿ ಸಂಪನ್ಮೂಲ ವ್ಯಕ್ತಿಗಳು ಮಂಗಳೂರಿನ ಶೈಕ್ಷಣಿಕ ಹಿನ್ನೆಲೆ, ಸುಧಾರಿಸುತ್ತಿರುವ ಮೂಲಸೌಕರ್ಯ ಮತ್ತು ಐಟಿ ಸಂಸ್ಥೆಗಳ ವಿಸ್ತರಣೆಯನ್ನು ಉಲ್ಲೇಖಿಸಿದರು. ಜೊತೆಗೆ, ಪ್ರತಿಭೆ ಉಳಿಸಿಕೊಳ್ಳುವುದು ಹಾಗೂ ಉದ್ಯಮ ಸಹಯೋಗವನ್ನು ಇನ್ನಷ್ಟು ಬಲಪಡಿಸುವ ಅಗತ್ಯವಿದೆ ಎಂದು ಉಲ್ಲೇಖಿಸಿದರು.

ಎಕ್ಸ್‌ಫೆನೊದ ಸಹ-ಸಂಸ್ಥಾಪಕ ಕಮಲ್ ಕಾರಂತ್ ಮಾತನಾಡಿ, ಮಂಗಳೂರು–ಉಡುಪಿ ಪ್ರದೇಶದಲ್ಲಿ ಹೊಸ ಮತ್ತು ಅನುಭವಿ ಉದ್ಯೋಗಿಗಳು ಸಾಕಷ್ಟಿದ್ದರೂ, ಹಿರಿಯ ವೃತ್ತಿಪರರ ಕೊರತೆ ಇದೆ ಎಂದು ಹೇಳಿದರು. ಉದ್ಯೋಗಿಗಳು ದೊಡ್ಡ ನಗರಗಳಿಗೆ ಹೋಗುವುದನ್ನು ತಡೆಯಲು ಉತ್ತಮ ನೇಮಕಾತಿ ವ್ಯವಸ್ಥೆ ಮತ್ತು ಸ್ಥಳೀಯ ಸೌಲಭ್ಯಗಳನ್ನು ಬಲಪಡಿಸುವ ಅಗತ್ಯವಿದೆ ಎಂದು ಅಭಿಪ್ರಾಯಪಟ್ಟರು.

ಸರ್ಕಾರದ ಸೌಲಭ್ಯಗಳ ಬಗ್ಗೆ ಅರಿವು ಇದ್ದರೂ, ಅವನ್ನು ಪಡೆಯುವ ಪ್ರಕ್ರಿಯೆ ಸ್ಪಷ್ಟವಾಗಿಲ್ಲ. ಕಂಪನಿಗಳಿಗೆ ಈ ಸೌಲಭ್ಯಗಳು ಮತ್ತು ಉದ್ಯೋಗಿಗಳ ಸಂಪರ್ಕದಲ್ಲಿ ಸಹಾಯ ಮಾಡುವುದಾಗಿ ವರ್ಟೆಕ್ಸ್ ವರ್ಕ್‌ಸ್ಪೇಸ್ ತಿಳಿಸಿದೆ. ಈ ಸಂದರ್ಭದಲ್ಲಿ ಸಹಕಾರವನ್ನು ಹೆಚ್ಚಿಸಲು ಸಂಸ್ಥೆಗಳ ನಡುವೆ ಒಪ್ಪಂದಕ್ಕೆ ಸಹಿ ಹಾಕಲಾಯಿತು.

ಸಮಾರೋಪದಲ್ಲಿ ವರ್ಟೆಕ್ಸ್ ವರ್ಕ್ ಸ್ಪೇಸ್‌ನ ವ್ಯವಸ್ಥಾಪಕ ಪಾಲುದಾರ ಗುರುದತ್ತ ಶೆಣೈ ಮಾತನಾಡಿ, ಈ ಕಾರ್ಯಕ್ರಮ ಸಮಾವೇಶಕ್ಕೆ ಮಾತ್ರ ಸೀಮಿತವಾಗದೆ ಮುಂದುವರಿಯಲಿದೆ ಎಂದು ಹೇಳಿದರು. ಮುಂದಿನ ದಿನಗಳಲ್ಲಿ ನಾಯಕತ್ವ ಕಾರ್ಯಕ್ರಮಗಳು, ಉದ್ಯೋಗ ಮೇಳಗಳು ಹಾಗೂ ಉದ್ಯಮಗಳಿಗೆ ಬೆಂಬಲ ನೀಡುವ ಯೋಜನೆಗಳನ್ನು ಕೈಗೊಳ್ಳಲಾಗುತ್ತದೆ ಎಂದು ತಿಳಿಸಿದ್ದಾರೆ.

ಉದ್ಯಮ ಹಾಗೂ ಜಾಗತಿಕ ಸಾಮರ್ಥ್ಯ ಕೇಂದ್ರಗಳ ಕಾರ್ಯಾಚರಣೆಗೆ ಬೆಂಬಲ ನೀಡುವ ಉದ್ದೇಶದಿಂದ ರೂಪಿಸಲಾದ 'ವರ್ಟೆಕ್ಸ್ ಅಶೋಕ' ಎಂಬ ಮೂಲಸೌಕರ್ಯ ಯೋಜನೆ ಪರಿಚಯಿಸಲಾಯಿತು. ಇದು ಮಂಗಳೂರಿನ ಬೆಳೆಯುತ್ತಿರುವ ವ್ಯಾಪಾರ ಕೇಂದ್ರದ ಸ್ಥಾನ ಮತ್ತಷ್ಟು ಬಲಪಡಿಸುವ ಹೆಜ್ಜೆಯಾಗಿದೆ.

ಮಂಗಳೂರಿನಲ್ಲಿ ಹೈಕೋರ್ಟ್ ಸಂಚಾರಿ ಪೀಠ ಸ್ಥಾಪನೆ

ಹೈಕೋರ್ಟ್ ಮುಖ್ಯ ನ್ಯಾಯಾಧೀಶರಿಂದ ಶೀಘ್ರ ಸ್ಥಳ ಪರಿಶೀಲನೆ: ಐವನ್ ಡಿಸೋಜಾ

ಮಂಗಳೂರು: ಮಂಗಳೂರಿನಲ್ಲಿ ಹೈಕೋರ್ಟ್ ಸಂಚಾರಿ ಹಾಗೂ ಖಾಯಂ ಪೀಠ ಸ್ಥಾಪಿಸಬೇಕೆಂಬ ಹಲವು ವರ್ಷಗಳ ಬೇಡಿಕೆ ಹೈಕೋರ್ಟ್‌ನ ಮುಖ್ಯ ನ್ಯಾಯಾಧೀಶರಿಗೆ ಮನವರಿಕೆಯಾಗಿದ್ದು, ಅವರು ಸ್ಥಳಪರಿಶೀಲನೆಗೆ ಒಪ್ಪಿಕೊಂಡಿದ್ದಾರೆ. ಶೀಘ್ರ ಅವರು ಮಂಗಳೂರಿಗೆ ಭೇಟಿ ನೀಡಲಿದ್ದಾರೆ ಎಂದು ವಿಧಾನ ಪರಿಷತ್ ಸದಸ್ಯ ಐವನ್ ಡಿಸೋಜಾ ಹೇಳಿದ್ದಾರೆ.

ಮಂಗಳೂರಿನಲ್ಲಿಂದು ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ದಕ್ಷಿಣ ಕನ್ನಡ, ಉಡುಪಿ, ಉತ್ತರ ಕನ್ನಡ, ಚಿಕ್ಕಮಗಳೂರು ಹಾಗೂ ಕೊಡಗು ಜಿಲ್ಲೆಗಳನ್ನು ಒಳಗೊಂಡು ಹೈಕೋರ್ಟ್ ಸಂಚಾರಿ ಪೀಠ ಸ್ಥಾಪನೆಯಾಗಬೇಕೆಂದು ಸತತವಾಗಿ ಹೋರಾಟ ಮಾಡುತ್ತಿದ್ದು, ಇದೀಗ ಬೇಡಿಕೆ ಈಡೇರುವ ಹಂತಕ್ಕೆ ತಲುಪಿದೆ ಎಂದರು.

ಮಂಗಳೂರಿನ ಹಳೆಯ ಜಿಲ್ಲಾಧಿಕಾರಿ ಕಚೇರಿಯಲ್ಲಿ ಹೈಕೋರ್ಟ್ ಸಂಚಾರಿ ಪೀಠ ಸ್ಥಾಪಿಸಲು ಅಗತ್ಯವಿರುವ ಮೂಲ ಸೌಕರ್ಯಗಳನ್ನು ಹೈಕೋರ್ಟ್‌ನ ಮುಖ್ಯ ನ್ಯಾಯಾಧೀಶರು ಪರಿಶೀಲಿಸಲಿದ್ದಾರೆ. ಹೈಕೋರ್ಟ್ ಪೀಠಕ್ಕೆ ಅಗತ್ಯವಾಗಿ ಕೋರ್ಟ್ ಹಾಲ್, ದಾಖಲೆ ಪತ್ರ ಸಂಗ್ರಹಿಸಲು ಜಾಗದ ಅಗತ್ಯವಿದೆ. ಅದಕ್ಕಾಗಿ ಸದ್ಯ 5.5 ಎಕರೆ ಜಾಗದಲ್ಲಿರುವ ಹಳೆ ಜಿಲ್ಲಾಧಿಕಾರಿ ಕಚೇರಿಯ ನಾಲ್ಕು ಅಂತಸ್ತಿನ ಕಟ್ಟಡವನ್ನು ಜಿಲ್ಲಾ ಉಸ್ತುವಾರಿ ಸಚಿವರು ಮೀಸಲಿಡುವಂತೆ ಸರಕಾರಕ್ಕೆ ಪತ್ರ ಬರೆದಿದ್ದಾರೆ ಎಂದವರು ಹೇಳಿದರು. ಸ್ಥಳ ಪರಿಶೀಲನೆ ನಡೆಸಲಿರುವ ಹೈಕೋರ್ಟ್‌ನ ಮುಖ್ಯ ನ್ಯಾಯಾಧೀಶರು ಮುಂದಿನ ನಿರ್ಧಾರ ಕೈಗೊಳ್ಳಲಿದ್ದಾರೆ. ಒಟ್ಟಿನಲ್ಲಿ ಈ ಪ್ರಕ್ರಿಯೆ ಹೈಕೋರ್ಟ್ ಪೀಠಕ್ಕಾಗಿ ಜನಸಾಮಾನ್ಯರು ಸೇರಿದಂತೆ ವಕೀಲರಸಂಘ, ಕಾನೂನು ವಿದ್ಯಾರ್ಥಿಗಳು, ಕಾರ್ಮಿಕ ವರ್ಗ ಹಾಗೂ ಜನಪ್ರತಿನಿಧಿಗಳನ್ನು ಒಳಗೊಂಡ ತಂಡದ ಹೋರಾಟದ ಫಲವಾಗಿದೆ ಎಂದು ಅವರು ಹೇಳಿದರು.ದ.ಕ. ಜಿಲ್ಲಾ ಬಾರ್ ಅಸೋಸಿಯೇಶನ್ ಅಧ್ಯಕ್ಷ ರಾಘವೇಂದ್ರ ರಾವ್, ಕಾರ್ಯದರ್ಶಿ ಶ್ರೀಧರ್, ಸರಕಾರಿ ವಕೀಲ ಎಂ.ಪಿ. ನೊರೊನ್ಹಾ, ಭಾಸ್ಕರ್ ಸುದ್ದಿಗೋಷ್ಠಿಯಲ್ಲಿದ್ದರು.

ಅಪ್ರಾಪ್ತ ವಯಸ್ಕ ಬಾಲಕಿಗೆ ಫಿನಾಯಿಲ್ ಕುಡಿಸಿ ತಾನೂ ಆತ್ಮಹತ್ಯೆ ಯತ್ನ: ಆರೋಪಿ ಸೆರೆ

ಬದಿಯಡ್ಕ: ಹತ್ತರ ಹರೆಯದ ಬಾಲಕಿಗೆ ಫಿನಾಯಿಲ್ ಕುಡಿಸಿ ಬಳಿಕ ತಾನೂ ಕುಡಿದು ಆತ್ಮಹತ್ಯೆಗೆ ಯತ್ನಿಸಿದ 28ರ ಹರೆಯದ ಯುವಕನನ್ನು ಬದಿಯಡ್ಕ ಪೊಲೀಸರು ಬಂಧಿಸಿ ನ್ಯಾಯಾಲಯದಲ್ಲಿ ಹಾಜರುಪಡಿಸಲಾಗಿದ್ದು, ನ್ಯಾಯಾಲಯವು ಆರೋಪಿಗೆ ಎರಡು ವಾರಗಳ ನ್ಯಾಯಾಂಗ ಬಂಧನ ವಿಧಿಸಿದೆ. ಯುವಕನು ಬಾಲಕಿಯ ತಂದೆಯ ಸ್ನೇಹಿತನಾಗಿದ್ದು, ಬಾಲಕಿಯ ಮನೆಗೆ ಬರುತ್ತಿದ್ದನೆನ್ನಲಾಗಿದೆ. ಈ ವೇಳೆ ಆತ ಕೆಟ್ಟ ರೀತಿಯಲ್ಲಿ ವರ್ತಿಸಿದ್ದು, ಅದನ್ನು ಬಾಲಕಿಯ ತಂದೆ ಪ್ರಶ್ನಿಸಿದ್ದರು. ಇದರಿಂದ ಆತ ಬಾಲಕಿಗೆ ಫಿನಾಯಿಲ್ ಕುಡಿಸಿದ ಬಳಿಕ ತಾನೂ ಕುಡಿದು ಆತ್ಮಹತ್ಯೆಗೆ ಯತ್ನಿಸಿದ್ದಾನೆ. ಆದರೆ ಜೀವಾಪಾಯ ಉಂಟಾಗಲಿಲ್ಲ. ಯುವಕ ಆಸ್ಪತ್ರೆಯಿಂದ ಬಿಡುಗಡೆಗೊಂಡ ಬಳಿಕ ಆತನನ್ನು ಬದಿಯಡ್ಕ ಪೊಲೀಸ್ ಇನ್ಸ್‌ಪೆಕ್ಟರ್ ಪಿ.ಅನೂಪ್‌ಕೃಷ್ಣ ಬಂಧಿಸಿದ್ದಾರೆ.

ಕುದ್ರೋಳಿ ದೇವಸ್ಥಾನದ ಆಡಳಿತ ಸಮಿತಿ ವಿಷಯದಲ್ಲಿ ನ್ಯಾಯಾಲಯ ಯಾವುದೇ ಆದೇಶ ನೀಡಿಲ್ಲ



ಮಂಗಳೂರು: ಕುದ್ರೋಳಿ ಶ್ರೀ ಗೋಕರ್ಣನಾಥ ದೇವಸ್ಥಾನದ ಆಡಳಿತ ಸಮಿತಿ ವಿಷಯದಲ್ಲಿ ನ್ಯಾಯಾಲಯ ಯಾವುದೇ ಆದೇಶ ನೀಡಿಲ್ಲ. ಈ ಬಗ್ಗೆ ಕೆಲವರು ತಪ್ಪು ಮಾಹಿತಿ ನೀಡಿದ್ದಾರೆ ಎಂದು ಕುದ್ರೋಳಿ ದೇವಸ್ಥಾನದ ಕೋಶಾಧಿಕಾರಿ ಪದ್ಮರಾಜ್ ಆರ್. ಹೇಳಿದರು.

ಕುದ್ರೋಳಿ ದೇವಸ್ಥಾನ ಸಮುದಾಯದ ಆಸ್ತಿಯಾಗಿದೆ. ಸಾಹುಕಾರ್ ಕೊರಗಪ್ಪ ಪೂಜಾರಿ ಅವರು ಸಮುದಾಯದ ಸಂಘಟನೆಯಾದ ಬಿಲ್ಲವರ ಯೂನಿಯನ್ ಸುಪರ್ದಿಗೆ ನೀಡಿದ್ದರು. ಒಂದು ಹಂತದಲ್ಲಿ ಈ ದೇವಸ್ಥಾನವನ್ನು ಶ್ರೀ ನಾರಾಯಣಗುರು ಎಜುಕೇಶನ್ ಟ್ರಸ್ಟ್‌ಗೆ ಬದಲಾಯಿಸುವ ಹುನ್ನಾರ ನಡೆದಾಗ ಸಮುದಾಯ ಅದಕ್ಕೆ ಪ್ರಬಲ ವಿರೋಧವನ್ನು ವ್ಯಕ್ತಪಡಿಸಿತು. ಈ ದೇವಸ್ಥಾನವನ್ನು ಮುಂದಿನ ದಿನಗಳಲ್ಲಿ ಅ.ಭಾ. ಬಿಲ್ಲವರ ಯೂನಿಯನ್‌ನಿಂದ ಸಮಾಜದ ದೇವಸ್ಥಾನವನ್ನಾಗಿಸುವ ನಿಟ್ಟಿನಲ್ಲಿ ಪ್ರಸ್ತುತ ಆಡಳಿತ ನಡೆಸುತ್ತಿರುವ ಸಮಿತಿ ಪ್ರಾಮಾಣಿಕ ಪ್ರಯತ್ನ ಮಾಡಲಿದೆ ಎಂದು ಶನಿವಾರ ಸುದ್ದಿಗೋಷ್ಠಿಯಲ್ಲಿ ಅವರು ಹೇಳಿದರು. ದೇವಸ್ಥಾನಕ್ಕೆ ಆಡಳಿತ ಸಮಿತಿ ನೇಮಿಸುವ ಹಕ್ಕು ಬಿಲ್ಲವರ ಯೂನಿಯನ್‌ಗೆ ಇದೆ ಎಂಬುದು ನಿಜ ವಿಚಾರ. ಆದರೆ, ಬಿಲ್ಲವರ ಯೂನಿಯನ್ ಬೈಲಾ ಪ್ರಕಾರ ಕಾರ್ಯ ನಿರ್ವಹಿಸುತ್ತಿಲ್ಲ. ಬಿಲ್ಲವರ ಯೂನಿಯನ್ ದೇವಸ್ಥಾನದ ಆಡಳಿತ ಮಂಡಳಿ, ಉತ್ಸವ, ಧಾರ್ಮಿಕ ಕಾರ್ಯಕ್ರಮದಲ್ಲಿ ಜವಾಬ್ದಾರಿ ತೆಗೆದುಕೊಂಡಿಲ್ಲ. ಪ್ರಸ್ತುತ ಆಡಳಿತ ನಡೆಸುತ್ತಿರುವ ಆಡಳಿತ ಮಂಡಳಿ ದೇವಸ್ಥಾನದಲ್ಲಿ ನಡೆಯುತ್ತಿರುವ ಉತ್ಸವ ಹಾಗೂ ಇತರ ಜವಾಬ್ದಾರಿಗಳನ್ನು ನಿರ್ವಹಿಸಿಕೊಂಡು ಬರುತ್ತಿದೆ. ವಿನಾಕಾರಣ ತಪ್ಪು ಮಾಹಿತಿ ನೀಡಿ ಜನರಲ್ಲಿ ಗೊಂದ ಮೂಡಿಸುವುದು ಸರಿಯಲ್ಲ ಎಂದರು.

ವಕೀಲ ಚಿದಾನಂದ ಕೆದಿಲಾಯ ಮಾತನಾಡಿ, 2025ರ ಜೂ.20ರಂದು ಕ್ಷೇತ್ರದ ಅಭಿವೃದ್ಧಿಯ ರೂವಾರಿ ಬಿ. ಜನಾರ್ದನ ಪೂಜಾರಿ ನೇತೃತ್ವದಲ್ಲಿ ಜೈರಾಜ್ ಸೋಮಸುಂದರ್ ಅಧ್ಯಕ್ಷತೆಯ ಹೊಸ ಸಮಿತಿ ನೇಮಕವಾಗಿದೆ. ಇದನ್ನು ಪ್ರಶ್ನಿಸಿ ಜು.18ರಂದು ಸಾಯಿರಾಮ್ ನೇತೃತ್ವದ ತಂಡ ಕೋರ್ಟ್‌ನಲ್ಲಿ ಮೇಲ್ಮನವಿ ಸಲ್ಲಿಸಿದೆ. ದೇವಸ್ಥಾನದ ಪ್ರಕರಣ ಸಿವಿಲ್ ನ್ಯಾಯಾಲಯಕ್ಕೆ ಬರುವಂತದ್ದಲ್ಲ, ಜಿಲ್ಲಾ ಕೋರ್ಟ್‌ನಲ್ಲಿ ಇತ್ಯರ್ಥವಾಗುವಂತಹುದು. ಪ್ರಸ್ತುತ ಈ ವಿಚಾರದಲ್ಲಿ ನ್ಯಾಯಾಲಯದಲ್ಲಿ ವಿಚಾರಣೆ ನಡೆಸುತ್ತಿದ್ದು, ಇನ್ನೂ ಯಾವುದೇ ಆದೇಶ, ತೀರ್ಪು ನೀಡಿಲ್ಲ ಎಂದರು.

ಕ್ಷೇತ್ರದ ಅಭಿವೃದ್ಧಿಯ ರೂವಾರಿ ಬಿ. ಜನಾರ್ದನ ಪೂಜಾರಿ, ದೇವಸ್ಥಾನದ ಅಧ್ಯಕ್ಷ ಜೈರಾಜ್ ಎಚ್. ಸೋಮಸುಂದರ್, ಟ್ರಸ್ಟಿಗಳಾದ ಕೃತಿನ್ ಡಿ. ಅಮೀನ್, ಕಿಶೋರ್ ಕುಮಾರ್, ದೇವಳ ಅಭಿವೃದ್ಧಿ ಸಮಿತಿ ಅಧ್ಯಕ್ಷ ದೇವೇಂದ್ರ ಪೂಜಾರಿ, ಸದಸ್ಯರಾದ ರಾಧಾಕೃಷ್ಣ, ಗೌರವಿ ರಾಜಶೇಖರ್, ಲೀಲಾಕ್ಷ ಕರ್ಕೇರಾ, ಚಂದನ್‌ದಾಸ್, ಲತೀಶ್ ಸುವರ್ಣ ಉಪಸ್ಥಿತರಿದ್ದರು.

ಪುತ್ತೂರು ಮಾರುಕಟ್ಟೆ ಧಾರಣೆ

02-04-2026
ಅಡಿಕೆ ಧಾರಣೆ ಕೆ.ಜಿ.ಗೆ

ಹೊಸ ಅಡಿಕೆ	: 445 - 475
ಚೋಲ್ ಅಡಿಕೆ	: 525 - 550
ಡಬಲ್ ಚೋಲ್	: 525 - 550
ಹೊಸ ಪಟೋರ	: 355 - 405
ಹಳೆ ಪಟೋರ	: 375 - 405
ಹೊಸ ಉಳ್ಳಿ	: 120 - 290
ಹಳೆ ಉಳ್ಳಿ	: 110 - 290
ಹೊಸ ಕೋಕಾ	: 325 - 345
ಹಳೆ ಕೋಕಾ	: 325 - 345
ಹೊಸ ಕರಿಗೋಟು	: 245 - 275
ಹಳೆ ಕರಿಗೋಟು	: 245 - 275
ಹಸಿ ಕೊಕ್ಕೋ	: 70 - 100
ಒಣ ಕೊಕ್ಕೋ	: 270 - 315

ಕಾಳುಮೆಣಸು ಧಾರಣೆ

ಕಾಳುಮೆಣಸು	: 450 - 680

ರಬ್ಬರ್ ಧಾರಣೆ : ಗ್ರೇಡ್

ಆರ್‌ಎಸ್‌ಎಸ್ 1	- 246.00
ಆರ್‌ಎಸ್‌ಎಸ್ 2	- 210.00
ಸ್ಕ್ರಾಪ್ 1	- 149.00
ಸ್ಕ್ರಾಪ್ 2	- 140.00

ಕಿರುಸುದ್ದಿ

ಸಂರಕ್ಷಣಾ ಸಮಿತಿಯಿಂದ ದೇವಾಲಯ ಆಡಳಿತಕ್ಕೆ ಮನವಿ

ಪುತ್ತೂರು: ಶ್ರೀ ಮಹಾಲಿಂಗೇಶ್ವರ ದೇವಾಲಯ ಸಂರಕ್ಷಣಾ ಸಮಿತಿಯ 12ನೇ ಮಾಸಿಕ ಸಭೆ ನಡೆಯಿತು. ಸಭೆಯಲ್ಲಿ ದೇವಾಲಯಕ್ಕೆ ಸಂಬಂಧಿಸಿದಂತೆ ಹಲವು ವಿಚಾರಗಳ ಕುರಿತು ಚರ್ಚೆ ನಡೆಯಿತು. ದೇವಾಲಯದ ಪರಿಧಿಯಲ್ಲಿ ಇಬ್ಬರು ಪುರೋಹಿತರ ನಡುವೆ ನಡೆದ ಜಗಳದ ವಿಚಾರದ ಬಗ್ಗೆ ದೇವಾಲಯದ ವ್ಯವಸ್ಥಾಪನ ಸಮಿತಿಯ ಅಧ್ಯಕ್ಷರಿಗೆ ಹಾಗೂ ಕಾರ್ಯನಿರ್ವಹಣಾಧಿಕಾರಿಯವರಿಗೆ ದೇವಾಲಯದ ಮ್ಯಾನೇಜರ್ ಹರೀಶ್ ಶೆಟ್ಟಿ ಅವರ ಮೂಲಕ ಮನವಿಯನ್ನು ನೀಡಲಾಯಿತು. ದೇವಾಲಯದ ಖಾಯಂ ಹಾಗೂ ದಿನಗೂಲಿ ನೌಕರರ ನಡುವೆ ನಡೆದ ಹಲ್ಲೆ ವಿಚಾರಗಳು, ಗದ್ದೆಯಲ್ಲಿ ವೃದ್ಧ ಮಹಿಳೆಗೆ ಹಲ್ಲೆ ಮಾಡಿದ ವಿಚಾರ ಮೊದಲಾದ ವಿಚಾರಗಳನ್ನು ಉಲ್ಲೇಖಿಸಿ ಅಂತಹ ಘಟನೆಗಳಿಂದ ದೇವಾಲಯದ ಭಕ್ತರಿಗೆ ಕೆಟ್ಟ ಭಾವನೆ ಬರುವುದರಿಂದ ಅಂತವರನ್ನು ದೇವಾಲಯದ ಚಟುವಟಿಕೆಗಳಿಂದ ಮುಕ್ತ ಮಾಡುವಂತೆ ಮನವಿಯಲ್ಲಿ ವಿನಂತಿಸಲಾಗಿದೆ.

ಇಂದಿನಿಂದ ಶ್ರೀ ಕಂಚಿ ಕಾಮಾಕ್ಷಿಯಮ್ಮ ದೇವಾಲಯದಲ್ಲಿ ಶ್ರೀ ಮಾರಿಯಮ್ಮ ಕರಗೋತ್ಸವ

ಮಡಿಕೇರಿ: ನಗರದ ಗೌಳಿಬೀದಿಯ ಶ್ರೀ ಕಂಚಿ ಕಾಮಾಕ್ಷಿಯಮ್ಮ, ಶ್ರೀ ಮುತ್ತು ಮಾರಿಯಮ್ಮ ದೇವಾಲಯದಲ್ಲಿ ಮೇ 3 ರಿಂದ ಮೇ 6ರವರೆಗೆ ಶ್ರೀ ಮಾರಿಯಮ್ಮ ಕರಗೋತ್ಸವ ನಡೆಯಲಿದೆ.

ಮಡಿಕೇರಿಯ ಶ್ರೀ ಕಂಚಿ ಕಾಮಾಕ್ಷಿಯಮ್ಮ ದೇವಾಲಯದಲ್ಲಿ ಹಿಂದಿನ ಕಾಲದಿಂದಲೂ ಆಚರಿಸಿಕೊಂಡು ಬರುತ್ತಿದ್ದ ಶ್ರೀ ಮಾರಿಯಮ್ಮ ಬೇವಿನ ಸೊಪ್ಪಿನ ಕರಗೋತ್ಸವ ಮೇ 3 ರಿಂದ ಮೇ 6 ರವರೆಗೆ ದೇವಾಲಯದಲ್ಲಿ ನೆರವೇರಲಿದೆ. ನಾಡಿನಲ್ಲಿ ಭೀಕರ ಸಾಂಕ್ರಾಮಿಕ ರೋಗಗಳನ್ನು ತಡೆಕಟ್ಟಲು ಈ ಸಾಂಪ್ರದಾಯಿಕ ಬೇವಿನ ಸೊಪ್ಪಿನ ಕರಗಗಳ ಆರಾಧನೆ ಹಿಂದಿನ ಕಾಲದಿಂದಲೂ ಆಚರಣೆಯಲ್ಲಿದೆ.

ಮೇ 3 ರಂದು ಪಂಪಿನ ಕೆರೆಯಿಂದ ಶ್ರೀ ಕಂಚಿ ಕಾಮಾಕ್ಷಿಯಮ್ಮ, ಶ್ರೀ ಮುತ್ತು ಮಾರಿಯಮ್ಮ ಬೇವಿನ ಸೊಪ್ಪಿನ ಕರಗಗಳು ಶೃಂಗಾರಗೊಂಡು ಸಂಜೆ ಅಲ್ಲಿಂದ ವಿಶೇಷ ಪೂಜೆಯ ನಂತರ ಮೆರವಣಿಗೆ ಮೂಲಕ ಹೊರಟು ಮುಖ್ಯಬೀದಿಗಾಗಿ ದೇವಾಲಯ ಸೇರಲಿದೆ.

ಮೇ 4 ಮತ್ತು 5 ರಂದು ದೇವಾಲಯದಲ್ಲಿ ಶ್ರೀ ಮಾರಿಯಮ್ಮ ಕರಗಗಳಿಗೆ ವಿಶೇಷ ಪೂಜೆ ನಡೆಯಲಿದ್ದು, ಮೇ 6 ರಂದು ಬುಧವಾರ ಕರಗಗಳ ವಿಸರ್ಜನೋತ್ಸವ ನಡೆಯಲಿದೆ ಎಂದು ಶ್ರೀಕಂಚಿ ಕಾಮಾಕ್ಷಿಯಮ್ಮ ದೇವಾಲಯದ ಆಡಳಿತ ಮಂಡಳಿ ಕೋರಿದೆ.

ಇಂದು ಯಕ್ಷಗಾನ

ಶ್ರೀ ಕಟೀಲು ಯಕ್ಷಗಾನ ಮೇಳ

1. ಸಂದೀಪ್ ರೈ, ಬಜಪೆ ಬಾಳಿಕೆಮನೆ (ಬರ್ಕೆ), ಪೇಜಾವರ, ಪೊರ್ಕೋಡಿ.
2. ಸುಕೇಶ್ ಶೆಟ್ಟಿ, ರೂಪಾ ಶೆಟ್ಟಿ, 'ಶ್ರೀ ಸುಧಾಲಕ್ಷ್ಮಿ', ಕುರ್ಕಿಲ್‌ಬೆಟ್ಟು, ಬಾಳಿಕೆ, ಇನ್ನಾ.
3. ಬಾಲಕೃಷ್ಣ ಶೆಟ್ಟಿ, ಬಾಲಾಜಿ ಹೌಸ್, ಕಲ್ಕುಡಮಾರ್ ಮೇಲ್ಮನೆ, ಅಜೆಕಾರು, ಕಾರ್ಕಳ (ತಾ).
4. ಧನಪಾಲ ಬಿ. ಶೆಟ್ಟಿ ಮತ್ತು ಕುಟುಂಬಿಕರು, ತಾಳಿಪಾಡಿಗುತ್ತು ವಯಾ ಕಿನ್ನಿಗೋಳಿ.
5. ರತಿ, 'ಮನಸ್ವಿನೀ ನಿಲಯ', ಕಲ್ಬಾವಿ, ಕೋಡಿಕಲ್ ಕಟ್ಟೆ, ಮಂಗಳೂರು.
6. ನೀತಾ, ಸುನೀಲ್ ಸಾಲ್ಯಾನ್, ವಿಲೇಪಾರ್ಲೆ (ವೆಸ್ಟ್) ಮುಂಬೈ – ಶ್ರೀ ಕಟೀಲು ಕ್ಷೇತ್ರ ಮಹಾಲಕ್ಷ್ಮೀ ಸದನ.
7. ನೀರುಮಾರ್ಗ ಕೀಲೆಮನೆ ದಿ| ಜಯ ಶೆಟ್ರ ಸ್ಮರಣಾರ್ಥ ಪತ್ನಿ, ಮಕ್ಕಳು – ಶ್ರೀ ಕಟೀಲು ಕ್ಷೇತ್ರ ಸರಸ್ವತೀ ಸದನ.

ಶ್ರೀ ಧರ್ಮಸ್ಥಳ ಮೇಳ
ವಂಡ್ಸೆ-ತಂಗೊಜ್ಜಿಯಲ್ಲಿ
ತಂಗೊಜ್ಜಿ ಐದು ಮನೆ ಕುಟುಂಬಸ್ಥರು

ಶ್ರೀ ಸಾಲಿಗ್ರಾಮ ಮೇಳ
ಬಾರ್ಕೂರು ಬೆಣ್ಣೆಕುದ್ರುವಿನಲ್ಲಿ-**ರಂಗನಾಯಕಿ**

ಶ್ರೀ ಪೆರ್ಡೂರು ಮೇಳ
ಬೂದಾಡಿ ಸಳ್ಳೆಗದ್ದೆಯಲ್ಲಿ-**ನಾಗವಲ್ಲಿ**

ಶ್ರೀ ಹನುಮಗಿರಿ ಮೇಳ
ಕೆರ್ಗಾಲ್ ಬೈಂದೂರಿನಲ್ಲಿ

ಶ್ರೀ ಪಾವಂಜೆ ಮೇಳ
ಬಂಟರ ಭವನ ಸುರತ್ಕಲ್‌ನಲ್ಲಿ
ಅಂಬಾ ಶಪಥ – ಗದಾಯುದ್ಧ



ರಾಷ್ಟ್ರೀಯ ಹೆದ್ದಾರಿಯಲ್ಲಿನ ಮುಂಡಾಜೆಯ ಬಳಿ ಹರಿಯುವ ಮೃತ್ಯುಂಜಯ ನದಿಗೆ ಅಡ್ಡಲಾಗಿ ಸೇತುವೆಯೊಂದು ನಿರ್ಮಾಣವಾಗುತ್ತಿದೆ. ನಿರ್ಮಾಣ ಕಾರ್ಯಕ್ಕೆ ಸೇತುವೆ ಬದಿಗಳಲ್ಲಿ ಹಾಕಿರುವ ಮಣ್ಣು ಗುರುವಾರ ಸುರಿದ ಮಳೆಗೆ ಕೆಳಗೆ ಇರುವ ಹಳೇ ರಸ್ತೆಗೆ ಬಿದ್ದಿದೆ. ಇದರಿಂದಾಗಿ ವಾಹನ ಸಂಚಾರಕ್ಕೆ ಅಡಚಣೆಯಾಯಿತು.

ಡಿಸಿ ಪ್ರಯತ್ನದಿಂದ ಬೆಳೆ ವಿಮೆ ಬಿಡುಗಡೆಗೆ ರೈತ ಸಂಘದ ಕೃತಜ್ಞತೆ

ಸುಳ್ಯ: ಸುಳ್ಯ ತಾಲೂಕಿನ ರೈತರಿಗೆ ಬೆಳೆ ವಿಮೆ ಪರಿಹಾರದಲ್ಲಿ ಕೆಲ ಗ್ರಾಮಗಳ ರೈತರಿಗೆ ವಿಮೆ ಪಾವತಿಯಾಗದೇ ಕಂಗೆಟ್ಟಿದ್ದು ಈ ಹಿನ್ನಲೆಯಲ್ಲಿ ದ.ಕ. ಜಿಲ್ಲಾಧಿಕಾರಿಗಳನ್ನು ಭೇಟಿ ಮಾಡಿದ ಕೆಲವೇ ದಿನಗಳಲ್ಲಿ ಪರಿಹಾರ ಒದಗಿಸಿದ್ದು ಜಿಲ್ಲಾಧಿಕಾರಿ ದರ್ಶನ್ ಕೆ.ವಿ ಅವರಿಗೆ ಧನ್ಯವಾದಗಳನ್ನು ರೈತ ಸಂಘ ಅರ್ಪಿಸಿದೆ.

ಶನಿವಾರ ಸುಳ್ಯದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ರೈತ ಮುಖಂಡ ಲೋಲಜಾಕ್ಷ ಭೂತಕಲ್ಲು ಅವರು, ನಾವು ರೈತರಿಗೆ ಆಗಿರುವ ಅನ್ಯಾಯದ ಬಗ್ಗೆ ಜಿಲ್ಲಾಧಿಕಾರಿಗಳ ಬಳಿಗೆ ನಿಯೋಗ ತೆರಳಿ ಸಮಸ್ಯೆಗಳ ಬಗ್ಗೆ ಮನವರಿಕೆ ಮಾಡಿದಾಗ ಪೂರಕವಾಗಿ ಸ್ಪಂದಿಸಿ ವಿಮೆ ಪರಿಹಾರ ನೇರವಾಗಿ ಸರಿ ಸುಮಾರು ಶೇ.95ರಷ್ಟು ರೈತರಿಗೆ ವಿಮೆ ಪಾವತಿಯಾದರೆ, ಕೆಲ ರೈತರು ನ್ಯಾಯಲಯದ ಮೊರೆ ಹೋಗಿದ್ದಾರೆ. ಈ ಪೈಕಿ 49 ರೈತರಿಗೆ ಶೇ. 15ರಷ್ಟು ಬಡ್ಡಿ ಸಹಿತ ಪರಿಹಾರ ನೀಡಲು ಆದೇಶ ಆಗಿದ್ದು ಅವರಿಗೂ ಪರಿಹಾರ ದೊರಕಲಿದೆ ಎಂದು ಹೇಳಿದರು.

ರೈತ ಮುಖಂಡ ಪ್ರಭಾಕರ ರೈ ಪೆರಾಜೆ ಮಾತನಾಡಿ, ರೈತ ಸಂಘದ ನಿಯೋಗ ಜಿಲ್ಲಾಧಿಕಾರಿ ಕಚೇರಿಗೆ ತೆರಳಿದಾಗ ಅವರು ರೈತರಿಗೆ ನೀಡಿದ ಗೌರವ ಕಂಡಾಗಲೇ ಜಿಲ್ಲಾಧಿಕಾರಿಗಳಿಗೆ ರೈತರ ಮೇಲಿನ ಕಾಳಜಿ ವ್ಯಕ್ತವಾಗಿತ್ತು. ರೈತರಿಗೆ ಜಿಲ್ಲಾಧಿಕಾರಿಗಳ ಮೇಲೆ ಭರವಸೆಯಿದ್ದು ರೈತರಿಗೆ ಆಗುತ್ತಿರುವ ಅನ್ಯಾಯಗಳಿಗೆ ಶಾಶ್ವತ ಪರಿಹಾರಗಳು ಮುಂದೆ ಸಿಗಲಿದೆ. ಮುಂದೆ ರೈತರು ಸಂಘಟಿತರಾಗಿ ಹೋರಾಟ ನಡೆಸಿದಲ್ಲಿ ಎಲ್ಲಾ ಸಮಸ್ಯೆಗಳು ಪರಿಹಾರ ಆಗುವ ಆಶಭಾವನೆ ಮೂಡುತ್ತಿದೆ ಎಂದು ಹೇಳಿದರು.

ರೈತರ ಭೇಟಿ ವೇಳೆಯಲ್ಲಿ ಸುಳ್ಯ ತಾಲೂಕಿನಲ್ಲಿ ಪದೇ ಪದೇ ತೋಟಗಳಿಗೆ ಆನೆ ದಾಳಿಯಾಗುತ್ತಿದ್ದು, ಈ ಪೈಕಿ ಪರಿಹಾರ ಸಿಗದೇ ಇರುವ ರೈತರು ಮತ್ತು ಮಳೆ ಮಾಪನದಲ್ಲಿ ಆಗುತ್ತಿರುವ ವ್ಯತ್ಯಾಸಗಳ ಬಗ್ಗೆ ಸಂಪೂರ್ಣ ಮಾಹಿತಿ ಒದಗಿಸುವಂತೆ ತಿಳಿಸಿದ್ದಾರೆ ಎಂದರು.

ಸುದ್ದಿಗೋಷ್ಠಿಯಲ್ಲಿ ರೈತ ಸಂಘದ ಉಪಾಧ್ಯಕ್ಷ ಮಾಧವ ಗೌಡ ಸುಳ್ಯ ಕೋಡಿ, ಮಂಜುನಾಥ ಮಡ್ತಿಲ, ದಿನೇಶ್ ಕೋಲ್ಚಾರ್ ಉಪಸ್ಥಿತರಿದ್ದರು.

ಇತಿಹಾಸ ಪ್ರಸಿದ್ಧ ಪುತ್ತೂರು ಮಹತೋಭಾರ ಶ್ರೀ ಮಹಾಲಿಂಗೇಶ್ವರ ದೇವರಿಗೆ ಸ್ವರ್ಣ ಕವಚ, ಪುಷ್ಪಕನ್ನಡಿ

ಇನ್ನೂ ಬೇಕಿದೆ 10 ಕೆ.ಜಿ.ಯಷ್ಟು ಬಂಗಾರ

ಪುತ್ತೂರು: ಇತಿಹಾಸ ಪ್ರಸಿದ್ಧ ಪುತ್ತೂರು ಮಹತೋಭಾರ ಶ್ರೀ ಮಹಾಲಿಂಗೇಶ್ವರ ದೇವರಿಗೆ ಸ್ವರ್ಣ ಕವಚ ಮಾಡಿಸುವ ನಿಟ್ಟಿನಲ್ಲಿ ದೇವಳದಲ್ಲಿ ಇದ್ದ ಅನುಪಯುಕ್ತ ಚಿನ್ನಗಳ ಪರಿಶೀಲನೆ ವೇಳೆ, ದೇವರ ನಿತ್ಯ ಸೇವೆಗೆ ಬಳಸುವ ಸ್ವರ್ಣಗಳನ್ನು ಹೊರತುಪಡಿಸಿ ಸುಮಾರು 6 ಕೆ.ಜಿ. ಯಷ್ಟು ಚಿನ್ನ ದೇವಳದ ಭದ್ರತೆಯಲ್ಲಿರುವುದು ಕಂಡು ಬಂದಿದೆ.

ಶ್ರೀ ಮಹಾಲಿಂಗೇಶ್ವರ ದೇವರಿಗೆ ಸ್ವರ್ಣ ಕವಚ ನಿರ್ಮಾಣ ಮಾಡುವ ನಿಟ್ಟಿನಲ್ಲಿ ಮೇ 1ರಂದು ಸಂಜೆ ಸಾರ್ವಜನಿಕ ಭಕ್ತರ ಸಮ್ಮುಖದಲ್ಲಿ, ದೇವಳದ ಭದ್ರತಾ ಕೊಠಡಿಯಲ್ಲಿ ಅನುಪಯುಕ್ತ ಚಿನ್ನಗಳನ್ನು ಪರಿಶೀಲನೆ ಮಾಡಿದ ಬಳಿಕ ಮಾಧ್ಯಮದ ಜೊತೆ ಮಾತನಾಡಿದ ಶಾಸಕ ಅಶೋಕ್ ರೈ, ಸುಮಾರು 24 ವರ್ಷಗಳಿಂದ ದೇವರಿಗೆ ಕಾಣಿಕೆಯಾಗಿ ಬಂದ ಬಂಗಾರ ಲಾಕರ್‌ನಲ್ಲಿದ್ದು ಅದನ್ನು ತೆಗೆದು ಪರಿಶೀಲನೆ ಮಾಡಿದ್ದೇವೆ. ದೇವರಿಗೆ ಭಕ್ತರು ಅರ್ಪಿಸಿದ ಬಂಗಾರ ಇದೆ. ಅದನ್ನು ಮಹಾಲಿಂಗೇಶ್ವರ ದೇವರಿಗೆ ಕವಚ ರೂಪದಲ್ಲಿ ಸಮರ್ಪಣೆ ಮಾಡಬೇಕೆಂಬ ಕಲ್ಪನೆಯಂತೆ ಸಾರ್ವಜನಿಕ ನೋಟಿಸ್ ನೀಡಿ ಅಧಿಕಾರಿಗಳ, ಭಕ್ತರ ಸಮ್ಮುಖದಲ್ಲಿ ವೀಡಿಯೋ ಚಿತ್ರೀಕರಣದೊಂದಿಗೆ ಬಂಗಾರ ಪರಿಶೀಲನೆ ಮಾಡಿದ್ದೇವೆ. ದೇವರ ನಿತ್ಯ ಸೇವೆಗೆ ಇಟ್ಟಂತಹ ಚಿನ್ನ ಹೊರತುಪಡಿಸಿ ಸುಮಾರು 6 ಕೆ.ಜಿ.ಯಷ್ಟು ಬಳಕೆಯಲ್ಲಿ ಇಲ್ಲದ ಬಂಗಾರ ಇದೆ. ಅದರಲ್ಲೂ ಪುಷ್ಪಕನ್ನಡಿಯಲ್ಲಿ ಹಳೆಯ ಬಂಗಾರವಿದ್ದು, ಅವುಗಳನ್ನು ಆಗಾಗ ದುರಸ್ತಿ ಮಾಡುವ ಕೆಲಸ ನಡೆಯುತ್ತಿದೆ. ಅದರಲ್ಲಿರುವ ಕೆಲವು ಚಿನ್ನದ ಹೂವುಗಳನ್ನು ವರ್ಷಂಪ್ರತಿ ದುರಸ್ತಿ ಮಾಡಲಾಗುತ್ತಿದೆ. ಹಾಗಾಗಿ ಅದನ್ನೂ ತೆಗೆದು ಹೊಸದಾಗಿ ಬಂಗಾರದ ಪುಷ್ಪ ಮಾಡಬೇಕಾಗಿದೆ ಎಂದರು. ಸ್ವರ್ಣ ಕವಚಕ್ಕಾಗಿ ಈಗ ಇರುವ ಬಂಗಾರ ಬಿಟ್ಟು ಇನ್ನೂ ಸುಮಾರು 10 ಕೆ.ಜಿ.ಯಷ್ಟು ಬಂಗಾರ ಬೇಕಾಗಿದೆ. ಹಾಗಾಗಿ ಈಗಿರುವ ಬಂಗಾರದ ಲೆಕ್ಕವನ್ನು ಸರಕಾರಕ್ಕೆ ನೀಡಿ, ಅದನ್ನು ಕರಗಿಸಲು ಅನುಮತಿಗೆ ಬರೆಯುತ್ತೇವೆ ಎಂದು ಶಾಸಕರು ತಿಳಿಸಿದರು.



» **ಸುಮಾರು 24 ವರ್ಷಗಳಿಂದ ದೇವರಿಗೆ ಕಾಣಿಕೆಯಾಗಿ ಬಂದ ಬಂಗಾರ ಲಾಕರ್‌ನಲ್ಲಿದ್ದು ಅದನ್ನು ತೆಗೆದು ಪರಿಶೀಲನೆ ಮಾಡಿದ್ದೇವೆ.**

ಚಿನ್ನದ ಕಸೂತಿ ಕೆಲಸಗಾರ ಜಗದೀಶ್ ಆಚಾರ್ಯ ಅವರು ಚಿನ್ನದ ಅಳತೆ ಮಾಪನ ಕೆಲಸ ನಿರ್ವಹಿಸಿದರು. ದೇವಳದ ವ್ಯವಸ್ಥಾಪನಾ ಸಮಿತಿ ಅಧ್ಯಕ್ಷ ಈಶ್ವರ ಭಟ್ ಪಂಜಿಗುಡ್ಡೆ, ಸದಸ್ಯರಾದ ಮಹಾಬಲ ರೈ ವಳತ್ತಡ್ಕ, ದಿನೇಶ್ ಪಿ.ವಿ., ನಳಿನಿ ಪಿ. ಶೆಟ್ಟಿ, ಸುಭಾಶ್ ರೈ ಬೆಳ್ಳಿಪ್ಪಾಡಿ, ಕಾರ್ಯನಿರ್ವಹಣಾಧಿಕಾರಿ ಕೆ.ವಿ. ಶ್ರೀನಿವಾಸ್, ಸಿಬ್ಬಂದಿ ರವೀಂದ್ರ, ಪದ್ಮನಾಭ, ದೇವಳದ ಬ್ರಹ್ಮವಾಹಕ ಹರೀಶ್ ಭಟ್, ಪ್ರಧಾನ ಅರ್ಚಕ ವೇ.ಮೂ.ವಸಂತ ಕೆದಿಲಾಯ, ಪಿ.ಜಿ.ಜಗನ್ನಿವಾಸ ರಾವ್, ಕಿಟ್ಟಣ್ಣ ಗೌಡ ಬಪ್ಪಳಿಗೆ, ಸುದರ್ಶನ್, ಶ್ರೀ ಮಹಾಲಿಂಗೇಶ್ವರ ಸಂರಕ್ಷಣಾ ವೇದಿಕೆಯ ಸದಸ್ಯರ ಸಹಿತ ಹಲವಾರು ಮಂದಿ ಈ ಸಂದರ್ಭ ಉಪಸ್ಥಿತರಿದ್ದರು.

ಭಕ್ತರ ಸಹಕಾರ ಅಗತ್ಯ

ಶಾಸಕರ ಮಾರ್ಗದರ್ಶನದಂತೆ ಶ್ರೀ ಮಹಾಲಿಂಗೇಶ್ವರ ದೇವರಿಗೆ ಸ್ವರ್ಣ ಕವಚ ಮಾಡಿಸುವ ಸಂಕಲ್ಪ ಮಾಡಲಾಗಿದೆ. ಭಗವಂತ ನಮ್ಮಿಂದ ಭಕ್ತರ ಮೂಲಕ ಸೇವೆ ಪಡೆಯುತ್ತಿರುವುದು ನಮಗೆ ಲಭಿಸಿದ ಭಾಗ್ಯ. ಮಹಾಲಿಂಗೇಶ್ವರನ ಸ್ವರ್ಣ ಕವಚ ನಿರ್ಮಾಣಕ್ಕೆ ಭಕ್ತರಿಗೆ ಸುವರ್ಣಾವಕಾಶ ಲಭಿಸಿದ್ದು, ಭಕ್ತರು ಪೂರ್ಣ ಸಹಕಾರ ನೀಡುವಂತೆ ವಿನಂತಿ.

■ **ಈಶ್ವರ ಭಟ್ ಪಂಜಿಗುಡ್ಡೆ, ಅಧ್ಯಕ್ಷರು, ದೇವಳದ ವ್ಯವಸ್ಥಾಪನಾ ಸಮಿತಿ**

ಬಂಗಾರದ ಕಾಣಿಕೆಗಾಗಿ ಭಕ್ತರಲ್ಲಿ ಮನವಿ

ಶ್ರೀ ಮಹಾಲಿಂಗೇಶ್ವರ ದೇವರಿಗೆ ಸ್ವರ್ಣ ಕವಚ ಮತ್ತು ಪುಷ್ಪಕನ್ನಡಿಗೆ ಬಂಗಾರ ಮಾಡಿಸಲು ಒಟ್ಟು 15 ಕೆ.ಜಿಯಷ್ಟು ಬಂಗಾರದ ಅವಶ್ಯಕತೆಯಿದೆ. ಈಗಾಗಲೇ 6 ಕೆ.ಜಿ. ಚಿನ್ನ ದೇವಳದ ಭದ್ರತೆಯಲ್ಲಿದೆ. ಇನ್ನೂ 10 ಕೆ.ಜಿ.ಯಷ್ಟು ಬಂಗಾರದ ಅವಶ್ಯಕತೆ ಇದೆ. ಬಂಗಾರ ಸಮರ್ಪಣೆ ಮಾಡುವ ದಾನಿಗಳು ದೇವಳದ ಹುಂಡಿಗೆ ಅಥವಾ 'ಬಂಗಾರದ ಕಾಣಿಕೆ' ಎಂದು ಸಮರ್ಪಣೆ ಮಾಡಿ ದೇವಳದಿಂದ ರಶೀದಿ ಪಡೆಯಬಹುದು. ಈಗಾಗಲೇ ಸುಮಾರು ರೂ.5 ಲಕ್ಷವನ್ನು ದಾನಿಗಳು ನೀಡಲು ಮುಂದೆ ಬಂದಿದ್ದಾರೆ. ದುಬೈಯಿಂದ ಬಂದವರೊಬ್ಬರು ರೂ.1 ಲಕ್ಷ ನೀಡಿದ್ದಾರೆ. ಭಕ್ತರಿಂದ ಬಂಗಾರದ ಸಮರ್ಪಣೆ ನಿರೀಕ್ಷೆಯಿದೆ. ಮಹಾಲಿಂಗೇಶ್ವರ ದೇವರ ಬ್ರಹ್ಮಕಲಶದ ವೇಳೆ ದೇವರಿಗೆ ಬಂಗಾರದ ಕವಚ ಮತ್ತು ಪುಷ್ಪಕನ್ನಡಿಗೆ ಸುಂದರ ವಿನ್ಯಾಸದ ಬಂಗಾರದ ಅಲಂಕಾರ ಆಗಬೇಕಾಗಿದೆ ಎಂದು ಅಶೋಕ್ ರೈ ತಿಳಿಸಿದರು.

ನಿಡ್ವಾಳ ಶ್ರೀ ಮಹಾವಿಷ್ಣು ದೇವಳದ ಬ್ರಹ್ಮಕಲಶೋತ್ಸವದ ಧಾರ್ಮಿಕ ಸಭೆ

ಆಡಂಬರಕ್ಕೆ ದೇವರು ಒಲಿಯುವುದಿಲ್ಲ

ಸುಬ್ರಹ್ಮಣ್ಯ: ದೇವರ ಮೇಲೆ ವಿಶ್ವಾಸ, ನಂಬಿಕೆ ಇಟ್ಟಾಗ ದೇವರು ಒಲಿಯುತ್ತಾನೆ ಆಡಂಬರಕ್ಕೆ ದೇವರು ಒಲಿಯುವುದಿಲ್ಲ. ಆಡಂಬರ ಬದುಕಿಗೆ ಮತ್ತು ಚಿಂತನೆಗೆ ದೇವರು ಒಲಿಯುವುದಿಲ್ಲ. ದೇವರ ಹತ್ತಿರ ಮನಸ್ಸು ಪರಿಶುದ್ಧವಾಗಿರಬೇಕು. ಬ್ರಹ್ಮಕಲಶಗಳಿಂದ ಮಾನಸಿಕ, ಶಾರೀರಿಕ, ಭೌತಿಕ ಗುಣಮಟ್ಟ ಪರಿವರ್ತನೆಯಾಗಬೇಕು. ಆಗ ಮಾತ್ರ ಇಂತಹ ಬ್ರಹ್ಮಕಲಶ ಮಾಡಲು ಸಾಧ್ಯ ಎಂದು ಕಾವೂರು ಶ್ರೀಕ್ಷೇತ್ರ ಆದಿಚುಂಚನಗಿರಿ ಮಹಾಸಂಸ್ಥಾನ ಮಠದ ಶ್ರೀ ಡಾ. ಧರ್ಮಪಾಲನಾಥ ಸ್ವಾಮೀಜಿ ಹೇಳಿದರು.

ನಿಡ್ವಾಳ ಶ್ರೀ ಮಹಾವಿಷ್ಣು ದೇವಳದ ಪುನ:ಪ್ರತಿಷ್ಠಾಷ್ಟಬಂಧ ಬ್ರಹ್ಮಕಲಶೋತ್ಸವದ ಧಾರ್ಮಿಕ ಸಭೆಯಲ್ಲಿ ಶ್ರೀಗಳು ಆಶೀರ್ವಚನ ನೀಡಿದರು.

ದೇವಳದ ಆಡಳಿತ ಟ್ರಸ್ಟ್ ಅಧ್ಯಕ್ಷ ಚಂದ್ರಪ್ರಕಾಶ್ ಕಂಬಳ, ಕಾರ್ಯದರ್ಶಿ ಗುರುಪ್ರಸಾದ್ ತೋಟ, ಬ್ರಹ್ಮಕಲಶೋತ್ಸವ ಸಮಿತಿ ಅಧ್ಯಕ್ಷ ನೇಮಿರಾಜ ಪಲ್ಲೋಡಿ, ಪ್ರಧಾನ ಕಾರ್ಯದರ್ಶಿ ಕುಸುಮಾಧರ ಕರಿಮಜಲು, ಕಾರ್ಯದರ್ಶಿ ಅಶೋಕ್ ಮೇಲ್ಪಾಡಿ, ಪ್ರಧಾನ ಸಂಚಾಲಕ ರಾಮಕೃಷ್ಣ ಪುರಿಯಮನೆ ವೇದಿಕೆಯಲ್ಲಿದ್ದರು.

ಬೆಳಗ್ಗೆ ಮಹಾಗಣಪತಿ ಹೋಮ, ಕವಾಟೋದ್ಘಾಟನೆ, ಮಂಗಳ ದರ್ಶನ, ತೈಲಾಭಿಷೇಕ, ಪಂಚಾಮೃತಾಭಿಷೇಕ, ಪ್ರಾಯಶ್ಚಿತ್ತ ಶಾಂತಿ, ತತ್ತ್ವಕಲಶಾಭಿಷೇಕ ನಡೆಯಿತು. ಬಳಿಕ ಶ್ರೀ ಮಹಾವಿಷ್ಣು ದೇವರಿಗೆ ಆರಂಭದಲ್ಲಿ ಕಲಶಾಭಿಷೇಕ ನಡೆಯಿತು. ಅಂತಿಮವಾಗಿ ಬ್ರಹ್ಮಕಲಶಾಭಿಷೇಕ ನೆರವೇರಿತು. ನಂತರ ಮಹಾಪೂಜೆ, ಅವಸ್ರವ ಪ್ರೋಕ್ಷಣೆ, ವೈದಿಕ ಮಂತ್ರಾಕ್ಷತೆ, ಪ್ರಸಾದ ವಿತರಣೆ, ಅನ್ನ ಸಂತರ್ಪಣೆ ನಡೆಯಿತು.

ಈ ಸಂದರ್ಭ ದೇವಳದ ಆಡಳಿತ ಟ್ರಸ್ಟ್ ಅಧ್ಯಕ್ಷ ಚಂದ್ರಪ್ರಕಾಶ್ ಕಂಬಳ, ಕೋಶಾಧಿಕಾರಿ ಗುರುಪ್ರಸಾದ್ ತೋಟ, ಬ್ರಹ್ಮಕಲಶೋತ್ಸವ ಸಮಿತಿ ಅಧ್ಯಕ್ಷ ನೇಮಿರಾಜ ಪಲ್ಲೋಡಿ, ಪ್ರಧಾನ ಕಾರ್ಯದರ್ಶಿ ಕುಸುಮಾಧರ ಕರಿಮಜಲು, ಕಾರ್ಯದರ್ಶಿ ಅಶೋಕ್ ಮೇಲ್ಪಾಡಿ, ಪ್ರಧಾನ ಸಂಚಾಲಕ ರಾಮಕೃಷ್ಣ ಪುರಿಯಮನ, ಕೋಶಾಧಿಕಾರಿ ಕುಶಾಲಪ್ಪ ಮೇಲ್ಪಾಡಿ, ಪ್ರಧಾನ ಅರ್ಚಕ ಅಕ್ಷಯ್ ಭಟ್ ಮತ್ತಿತರರು ಉಪಸ್ಥಿತರಿದ್ದರು.



ಬ್ರಹ್ಮಕಲಶಾಭಿಷೇಕ ಸಂಪನ್ನ

ಸುಬ್ರಹ್ಮಣ್ಯ: ನಿಡ್ವಾಳ ಶ್ರೀ ಮಹಾವಿಷ್ಣು ದೇವಳದಲ್ಲಿ ಶನಿವಾರ ಶ್ರೀ ದೇವರಿಗೆ ಬ್ರಹ್ಮಕಲಶಾಭಿಷೇಕ ನೆರವೇರಿತು. ಕ್ಷೇತ್ರದ ತಂತ್ರಿಗಳಾದ ಬ್ರಹ್ಮಶ್ರೀ ಕೆಮ್ಮಿಂಜೆ ನಾಗೇಶ ತಂತ್ರಿಗಳು ವೈದಿಕ ವಿಧಿ ವಿಧಾನ ನೆರವೇರಿಸಿದರು.

ಪ್ರಜಾಸೌಧದ ನೂತನ ಸೇವಕ ಕಚೇರಿಯಲ್ಲಿ ಶಾಸಕ ಕೋಟ್ಯಾನ್ ಅವರಿಂದ ಅಹವಾಲು ಸ್ವೀಕಾರ



ಮುಲ್ಕಿ : ಶಾಸಕ ಉಮಾನಾಥ್ ಎ. ಕೋಟ್ಯಾನ್‌ರವರು ಶನಿವಾರ ಬೆಳಿಗ್ಗೆ 10 ಗಂಟೆಯಿಂದ 11 ಗಂಟೆ ವರೆಗೆ ಮುಲ್ಕಿ ಪ್ರಜಾ ಸೌಧದ ನೂತನ ಸೇವಕ ಕಚೇರಿಯಲ್ಲಿ ಜನರ ಸಮಸ್ಯೆಗಳ ಬಗೆಹರಿಸುವ ನಿಟ್ಟಿನಲ್ಲಿ ಮಾತುಕತೆ ನಡೆಸಿ , ಸ್ಥಳದಲ್ಲಿಯೇ ಅಧಿಕಾರಿಗಳನ್ನು ಕರೆಸಿ ಜನರ ಸಮಸ್ಯೆಗಳಿಗೆ ಪರಿಹಾರ ನೀಡಲು ಪ್ರಯತ್ನಿಸಿದರು. ಈ ಸಂದರ್ಭ ಜಿಲ್ಲಾ ಬಿಜೆಪಿ ಉಪಾಧ್ಯಕ್ಷ ಸುನಿಲ್ ಆಳ್ವ,ಮುಲ್ಕಿ ನ.ಪಂ. ಮಾಜಿ ಅಧ್ಯಕ್ಷ ಸತೀಶ್ ಅಂಚನ್ ,ಮಾಜೀ ಸದಸ್ಯರಾದ ಉಮೇಶ್ ಮಾನಂಪಾಡಿ ಶೈಲೇಶ್ ಕುಮಾರ್, ಬಿಜೆಪಿ ನಾಯಕರಾದ ರಂಗನಾಥ ಶೆಟ್ಟಿ, ನವೀನ್ ರಾಜ್, ಜಯಾನಂದ ಮುಲ್ಕಿ, ಅಶೋಕ್ ಜನನಿ ಲಕ್ಷ್ಮಣ್ ಸಾಲ್ಯಾನ್ ಪುನರೂರು ಮತ್ತಿತರರು ಉಪಸ್ಥಿತರಿದ್ದರು.

ಬೇತ್ರಿ ಮುಕ್ಕಾಟಿರ ಕಪ್ ಕ್ರಿಕೆಟ್ ನಮ್ಮೆ : ಮಹಿಳೆಯರಲ್ಲಿ ಮುಕ್ಕಾಟಿರ (ಹರಿಹರ), ಪುರುಷರಲ್ಲಿ ಚೆಕ್ಕೇರ ಚಾಂಪಿಯನ್





ಮಡಿಕೇರಿ : ಕೊಡವ ಕ್ರಿಕೆಟ್ ಅಕಾಡೆಮಿ ಸಹಯೋಗದಲ್ಲಿ ಕೊಡವ ಕುಟುಂಬಗಳ ನಡುವೆ ಮೂರ್ನಾಡಿನ ಬಾಚೆಟ್ಟಿರ ಲಾಲು ಮುದ್ದಯ್ಯ ಕ್ರೀಡಾಂಗಣದಲ್ಲಿ ಆಯೋಜಿತ 24ನೇ ವರ್ಷದ ಮುಕ್ಕಾಟಿರ ಕಪ್ ಕ್ರಿಕೆಟ್ ನಮ್ಮೆ'ಯ ಫೈನಲ್ಸ್ ಪಂದ್ಯದಲ್ಲಿ ಚೆಕ್ಕೇರ ತಂಡ ಸತತ 9ನೇ ಬಾರಿಗೆ ಚಾಂಪಿಯನ್ ಪಟ್ಟ ಅಲಂಕರಿಸಿದೆ. ಮಹಿಳಾ ಕ್ರಿಕೆಟ್‌ನಲ್ಲಿ ಹರಿಹರ ಮುಕ್ಕಾಟಿರ ತಂಡ ಚಾಂಪಿಯನ್ ಆಗಿ ಹೊರ ಹೊಮ್ಮಿದೆ. ಇದೇ ಮೊದಲ ಬಾರಿಗೆ ಫೈನಲ್ ಹಂತ ಪ್ರವೇಶಿಸಿದ ಕೆದಮಳ್ಳೂರು ಮಾಳೇಟಿರ ಕುಟುಂಬದ ಪುರುಷರ ತಂಡ ಹಾಗೂ ಮಣವಟ್ಟಿರ ಕುಟುಂಬದ ಮಹಿಳಾ ತಂಡ ರನ್ನರ್ಸ್ ಸ್ಥಾನವನ್ನು ತಮ್ಮದಾಗಿಸಿಕೊಂಡವು.

ರೋಚಕ ಪಂದ್ಯಾಟ

ಬೆಳಿಗ್ಗೆ ನಡೆದ ಮಹಿಳಾ ತಂಡದ ಫೈನಲ್ ಪಂದ್ಯದಲ್ಲಿ ಮೊದಲಿಗೆ ಟಾಸ್ ಗೆದ್ದ ಮಣವಟ್ಟಿರ ತಂಡ ಬ್ಯಾಟಿಂಗ್ ಆಯ್ದುಕೊಂಡಿತು. ಆರಂಭದಲ್ಲೇ ಅತ್ಯುತ್ತಮ ಹೋರಾಟಕ್ಕೆ ಇಳಿದ ಮಣವಟ್ಟಿರ ಮಹಿಳಾ ಆಟಗಾರರು ನಿಗದಿತ 6 ಓವರ್ ಮುಕ್ತಾಯಕ್ಕೆ 1 ವಿಕೆಟ್ ಕಳೆದುಕೊಂಡು 41 ರನ್ ಗಳಿಸಿ, ಎದುರಾಳಿ ಹರಿಹರ ಮುಕ್ಕಾಟಿರ ತಂಡಕ್ಕೆ 42 ರನ್‌ಗಳ ಅಂತಿಮ ಗುರಿ ನೀಡಿದರು. ರನ್ ಗುರಿಯ ಬೆನ್ನು ಹತ್ತಿದ ಹರಿಹರ ಮುಕ್ಕಾಟಿರ ತಂಡ ಆರಂಭದಲ್ಲಿ ನಿಧಾನ ಆಟದ ತಂತ್ರಗಾರಿಕೆ ನಡೆಸಿತು. 3ನೇ ಓವರ್‌ನಲ್ಲಿ 1 ವಿಕೆಟ್ ಪತನವಾದ ಬಳಿಕ ಹರಿಹರ ಮುಕ್ಕಾಟಿರ ತಂಡ ಅತ್ಯಂತ ಬಿರುಸಿನ ದಾಳಿ ನಡೆಸಲು ಮುಂದಾಯಿತು. 'ಮಾಡು ಇಲ್ಲವೇ ಮಡಿ' ಎಂಬಂತಿದ್ದ ಪಂದ್ಯದ ಕೊನೆ ಓವರ್ ನೆರೆದಿದ್ದ ಪ್ರೇಕ್ಷಕರನ್ನು ತುದಿಗಾಲಿನಲ್ಲಿ ನಿಲ್ಲಿಸಿತು. 'ಬಾಲ್ ಟು ಬಾಲ್' ರನ್ ಅಗತ್ಯ ಎದುರಾದರೂ ಎದೆಗುಂದದ ಹರಿಹರ ಮುಕ್ಕಾಟಿರ ತಂಡ ರಣ ರೋಚಕ ಬ್ಯಾಟಿಂಗ್ ದಾಳಿ ನಡೆಸುವ ಮೂಲಕ 5.3 ಓವರ್‌ನಲ್ಲಿಯೇ 42 ರನ್ ಬಾರಿಸಿತು. ಆ ಮೂಲಕ ಚಾಂಪಿಯನ್ ಪಟ್ಟ ಅಲಂಕರಿಸುವ ಕನಸು ಕಂಡಿದ್ದ ಮಣವಟ್ಟಿರ ತಂಡಕ್ಕೆ ಸೋಲಿನ ರುಚಿ ತೋರಿಸಿತು. ಹರಿಹರ ಮುಕ್ಕಾಟಿರ ತಂಡದ ಭಾರತಿ ಶುಭ 'ವುಮೆನ್ ಆಫ್ ದ ಮ್ಯಾಚ್' ಪ್ರಶಸ್ತಿ ತಮ್ಮದಾಗಿಸಿಕೊಂಡರೆ, ಸೋತ ತಂಡದ ಪರವಾಗಿ ಉತ್ತಮ ಪ್ರದರ್ಶನಕ್ಕೆ ಮಣವಟ್ಟಿರ ಸಂಗೀತ 'ವುಮೆನ್ ಮ್ಯಾಚ್ ಆಫ್' ಸ್ಥಾನಕ್ಕೆ ಪಾತ್ರರಾದರು.

ಚಾಂಪಿಯನ್ ಪಟ್ಟ ಅಬಾಧಿತ

ಕೊಡವ ಕ್ರಿಕೆಟ್ ನಮ್ಮೆಯಲ್ಲಿಯೇ ಅತೀ ಹೆಚ್ಚು 8 ಬಾರಿ ಚಾಂಪಿಯನ್ ಪಟ್ಟ ಅಲಂಕರಿಸಿದ್ದ ಬಲಿಷ್ಠ ಚೆಕ್ಕೇರ ತಂಡ ಮತ್ತು ಕೆದಮಳ್ಳೂರು ಮಾಳೇಟಿರ ತಂಡಗಳು ಫೈನಲ್ ಪಂದ್ಯದಲ್ಲಿ ಚಾಂಪಿಯನ್ ಪಟ್ಟಕ್ಕಾಗಿ ಹೋರಾಟಕ್ಕಿಳಿದವು. ಮಾಳೇಟಿರ ತಂಡ ಟಾಸ್ ಗೆದ್ದು ಮೊದಲು ಬ್ಯಾಟಿಂಗ್ ಆಯ್ದುಕೊಂಡು ಬೃಹತ್ ಮೊತ್ತದ ರನ್ ಪೇರಿಸಲು ಮುಂದಾಯಿತು. ಪಂದ್ಯದ ಆರಂಭದಲ್ಲೇ ಬ್ಯಾಟ್ಸ್‌ಮೆನ್‌ಗಳು ಚೆಂಡನ್ನು ಬೌಂಡರಿಗೆ ಅಟ್ಟುವ ಮೂಲಕ ಪ್ರೇಕ್ಷಕರಿಗೆ ರಸದೌತಣ ನೀಡಿದರು. ಚಾಂಪಿಯನ್ ಚೆಕ್ಕೇರ ತಂಡದ ಬೌಲರ್‌ಗಳು ಮಾಳೇಟಿರ ತಂಡದ ಬ್ಯಾಟ್ಸ್ ಮೆನ್‌ಗಳನ್ನು ಕಠಿಣ ಬಾಲಿಂಗ್ ಮೂಲಕ ಕಟ್ಟಿಹಾಕುವ ಎಲ್ಲಾ ಪ್ರಯತ್ನ ನಡೆಸಿದರು. ಅಂತಿಮವಾಗಿ 10 ಓವರ್‌ಗಳಲ್ಲಿ 9 ವಿಕೆಟ್‌ಗಳನ್ನು ಕಳೆದುಕೊಂಡು 101 ರನ್ ಗಳಿಸಿದ ಮಾಳೇಟಿರ ತಂಡ ಎದುರಾಳಿ ತಂಡಕ್ಕೆ 102 ರನ್‌ಗಳ ಗುರಿ ನೀಡಿತು. ಸಮಬಲದ ಹೋರಾಟಕ್ಕೆ ಮುಂದಾದ ಚೆಕ್ಕೇರ ತಂಡದ ಬ್ಯಾಟ್ಸ್‌ಮೆನ್‌ಗಳು ಕೇವಲ 8 ಓವರ್‌ನಲ್ಲಿ 4 ವಿಕೆಟ್ ಕಳೆದುಕೊಂಡು ಒಟ್ಟು 106 ರನ್ ಗಳಿಸಿ ಮಾಳೇಟಿರ ತಂಡವನ್ನು ಪರಾಭವಗೊಳಿಸುವ ಮೂಲಕ 9ನೇ ಬಾರಿಗೆ ಚಾಂಪಿಯನ್ ತಂಡದ ಪಟ್ಟವನ್ನು ಮುಡಿಗೇರಿಸಿಕೊಂಡಿತು.

ಚೆಕ್ಕೇರ ಕಾರ್ಯಪ್ಪ ಮ್ಯಾನ್ ಆಫ್ ದ ಮ್ಯಾಚ್ ಸ್ಥಾನ ಅಲಂಕರಿಸಿದರೆ, ಸೋತ ತಂಡದ ಪರವಾಗಿ ಉತ್ತಮ ಪ್ರದರ್ಶನಕ್ಕಾಗಿ ಮಾಳೇಟಿರ ರಾನೆ ಕರುಂಬಯ್ಯ ಮ್ಯಾನ್ ಆಫ್ ಮ್ಯಾಚ್ ಸ್ಥಾನ ಪಡೆದರು.

ಕ್ರೀಡಾ ಪರಂಪರೆ ಮುಂದುವರೆಯಲಿ

ಫೈನಲ್ ಪಂದ್ಯಕ್ಕೆ ಮುಖ್ಯ ಅತಿಥಿಗಳಾಗಿ ಆಗಮಿಸಿದ್ದ ಕೊಡಗು ಜಿಲ್ಲಾ ಮಾಜಿ ಉಸ್ತುವಾರಿ ಸಚಿವ ಸಾ.ರಾ. ಮಹೇಶ್, ಕೊಡಗು ಜಿಲ್ಲೆ ಹಾಕಿ ಕ್ರೀಡಾ ಪರಂಪರೆಗೆ ಹೆಸರುವಾಸಿಯಾಗಿದೆ. ಇದರ ನಡುವೆಯೇ ಕುಟುಂಬಗಳ ನಡುವೆ ಕ್ರಿಕೆಟ್ ಆಯೋಜನೆ ಮಾಡುತ್ತಿರುವುದು ಮತ್ತೊಂದು ಹೆಮ್ಮೆಯ ಸಂಗತಿ. ನೂರಾರು ಕುಟುಂಬಗಳು ಹಾಕಿ ಮತ್ತು ಕ್ರಿಕೆಟ್ ಕ್ರೀಡೆಯಲ್ಲಿ ಪಾಲ್ಗೊಂಡಿವೆ. ಜಿಲ್ಲೆಯಲ್ಲಿರುವ ಎಲ್ಲಾ ಕುಟುಂಬಗಳು ಕೂಡ ಕ್ರೀಡಾ ಕೂಟಗಳನ್ನು ಅದ್ದೂರಿಯಿಂದ ಆಯೋಜಿಸುವಂತಾಗಲಿ. ಜಿಲ್ಲೆಯ ಈ ಕ್ರೀಡಾ ಪರಂಪರೆ ಹೀಗೆ ಮುಂದುವರೆಯಲಿ ಎಂದು ಆಶಿಸಿದರು.


ಕೊಟ್ಟಂಗಡ ಆತಿಥ್ಯ

2027ರಲ್ಲಿ ನಡೆಯಲಿರುವ ಕೊಡವ ಕುಟುಂಬಗಳ ನಡುವಿನ 25ನೇ ವರ್ಷದ ಕ್ರಿಕೆಟ್ ಪಂದ್ಯಾಟದ ಆತಿಥ್ಯವನ್ನು ಕೊಟ್ಟಂಗಡ ಕುಟುಂಬ ವಹಿಸಿಕೊಂಡಿದೆ. ಈ ಹಿನ್ನೆಲೆಯಲ್ಲಿ ಮೂರ್ನಾಡು ಪಟ್ಟಣದಲ್ಲಿ ಕೊಟ್ಟಂಗಡ ಕುಟುಂಬದ ಬ್ಯಾನರ್ ಹಿಡಿದು ಸಾಂಪ್ರದಾಯಿಕ ಉಡುಗೆಯಲ್ಲಿ ಮೆರವಣಿಗೆ ನಡೆಸಿದರು. ಬಾಚೆಟ್ಟಿರ ಲಾಲು ಮುದ್ದಯ್ಯ ಕ್ರೀಡಾಂಗಣಕ್ಕೆ ಆಗಮಿಸಿದ ಮೆರವಣಿಗೆಯನ್ನು ಬೇತ್ರಿ ಮುಕ್ಕಾಟಿರ ಕುಟುಂಬಸ್ಥರು ಆತ್ಮೀಯವಾಗಿ ಸ್ವಾಗತಿಸಿದರು. ಮೈದಾನದಲ್ಲಿ ಒಂದು ಸುತ್ತು ಸಾಗಿದ ಕೊಟ್ಟಂಗಡ ಕುಟುಂಬಸ್ಥರು ಮುಂದಿನ ವರ್ಷ ಬಾಳಲೆಯಲ್ಲಿ ನಡೆಯುವ ಕೊಟ್ಟಂಗಡ ಕ್ರಿಕೆಟ್ ನಮ್ಮೆಗೆ ಎಲ್ಲರೂ ಬೆಂಬಲ ನೀಡಬೇಕೆಂದು ಕೋರಿದರು. ಫೈನಲ್ ಪಂದಾಟದ ಸಭಾ ಕಾರ್ಯಕ್ರಮದಲ್ಲಿ ಕೊಡವ ಕ್ರಿಕೆಟ್ ಅಕಾಡೆಮಿ ಧ್ವಜ ಹಸ್ತಾಂತರ ಮಾಡುವ ಮೂಲಕ 2027ರ ಅಧಿಕೃತ ಆತಿಥ್ಯ ಹಸ್ತಾಂತರಿಸಿತು.

ಕೊಡಗಿನ ಕೊಡುಗೆ ಅಪಾರ

ಒಲಂಪಿಕ್ಸ್ ಸೇರಿದಂತೆ ರಾಷ್ಟ್ರ ಮತ್ತು ರಾಜ್ಯ ಮಟ್ಟದ ಕ್ರೀಡಾ ಕೂಟಗಳಲ್ಲಿ ಕೊಡಗಿನ ಕ್ರೀಡಾಪಟುಗಳು ಪಾಲ್ಗೊಂಡು ಜಿಲ್ಲೆಗೆ ಕೀರ್ತಿ ತಂದಿದ್ದಾರೆ. ಕೊಡವ ಸಮುದಾಯ ಚಿಕ್ಕದಾದರೂ ಕೂಡ ಕ್ರೀಡಾ ಕ್ಷೇತ್ರಕ್ಕೆ ಬಹುದೊಡ್ಡ ಕೊಡುಗೆ ನೀಡಿದೆ ಎಂದು ಮುಖ್ಯಮಂತ್ರಿಗಳ ಕಾನೂನು ಸಲಹೆಗಾರು ಹಾಗೂ ವಿರಾಜಪೇಟೆ ಕ್ಷೇತ್ರ ಶಾಸಕ ಅಜ್ಜಿಕುಟ್ಟಿರ ಎಸ್.ಪೊನ್ನಣ್ಣ ಮೆಚ್ಚುಗೆ ವ್ಯಕ್ತಪಡಿಸಿದರು. ಇಡೀ ದೇಶದಲ್ಲಿಯೇ ಕೊಡಗು ಮಾತ್ರವೇ ಕ್ರೀಡೆಗೆ ಇಷ್ಟು ದೊಡ್ಡ ಪ್ರಮಾಣದಲ್ಲಿ ಕ್ರೀಡಾಪಟುಗಳನ್ನು ನೀಡಿದೆ ಎಂದು ಅವರು ಹೇಳಿದರು. ನಮ್ಮಲ್ಲಿ ಪ್ರತಿಭೆಗಳಿಗೆ ಕೊರತೆ ಇಲ್ಲ. ಈ ಪ್ರತಿಭೆಗಳಿಗೆ ವೇದಿಕೆ ಒದಗಿಸಲು ಇಂತಹ ಕ್ರೀಡಾಕೂಟಗಳು ಅವಶ್ಯವಾಗಿವೆ. ಬಾಳುಗೋಡು ಬಳಿ ಕ್ರೀಡಾ ಸಮುಚ್ಚಯ ನಿರ್ಮಾಣದ ಕಾಮಗಾರಿ ಆರಂಭವಾಗಿದೆ. ಮುಂದಿನ 3 ವರ್ಷಗಳಲ್ಲಿ ಇದು ಪೂರ್ಣಗೊಳ್ಳಲಿದ್ದು, ಜಿಲ್ಲೆಗೆ ಕೀರ್ತಿ ತಂದ ಎಲ್ಲಾ ಕ್ರೀಡಾಪಟುಗಳ ಹೆಸರಿಗೆ ಅರ್ಪಿಸಲಾಗುತ್ತದೆ ಎಂದು ಹೇಳಿದರು.

ಬೇತ್ರಿ ಮುಕ್ಕಾಟಿರ ಕ್ರಿಕೆಟ್ ನಮ್ಮೆಯ ಅಧ್ಯಕ್ಷ ಸುರೇಶ್ ಪೆಮ್ಮಯ್ಯ ಅವರ ಅಧ್ಯಕ್ಷತೆಯಲ್ಲಿ ನಡೆದ ಸಮಾರಂಭದಲ್ಲಿ ಮುಕ್ಕಾಟಿರ ರವಿ ಚೀಯಣ್ಣ ಸ್ವಾಗತಿಸಿದರು. ಉದ್ಯಮಿಗಳಾದ ಮಾಚೆಟ್ಟಿರ ಜೆನಿತ್ ಅಯ್ಯಪ್ಪ, ಮಣವಟ್ಟಿರ ಮಧು ಬೋಪಣ್ಣ, ಎಸ್.ಬಾಲಚಂದ್ರ, ಕೊಡವ ಕ್ರಿಕೆಟ್ ಅಕಾಡೆಮಿ ಉಪಾಧ್ಯಕ್ಷ ಚೇರಂಡ ಕಿಶನ್, ಹಿರಿಯ ಆರ್‌ಟಿಓ ಅಧಿಕಾರಿ ನಂದೇಟಿರ ಸುಬ್ಬಯ್ಯ, ಕ್ರಿಕೆಟ್ ಅಕಾಡೆಮಿ ಕಾರ್ಯದರ್ಶಿ ಬೋಪಣ್ಣ ಮತ್ತಿತರ ಗಣ್ಯರು ಉಪಸ್ಥಿತರಿದ್ದರು.



ಐಪಿಎಲ್-2026 ಅಂಕಪಟ್ಟಿ

ತಂಡ	ಪಂದ್ಯ	ಗೆಲುವು	ಸೋಲು	ರದ್ದು	ಅಂಕ	ರನ್‌ರೇಟ್
ಪಂಜಾಬ್	8	6	1	1	13	+1.043
ಆರ್‌ಸಿಬಿ	9	6	3	0	12	+1.420
ಹೈದರಾಬಾದ್	9	6	3	0	12	+0.832
ರಾಜಸ್ಥಾನ	10	6	4	0	12	+0.510
ಗುಜರಾತ್	9	5	4	0	10	-0.192
ಡೆಲ್ಲಿ	9	4	5	0	8	-0.895
ಚೆನ್ನೈ	8	3	5	0	6	-0.121
ಕೆಕೆಆರ್	8	2	5	1	5	-0.751
ಮುಂಬೈ	8	2	6	0	4	-0.784
ಲಖನೌ	8	2	6	0	4	-1.106

ಕುಸಿದ ಮುಂಬೈಗೆ ನಮನ್ ಆಸರೆ | ಹಾರ್ದಿಕ್ ತಿಣುಕಾಟ | ನೂರ್ ಮಿಂಚಿನಾಟ | ಓವರ್‌ಟನ್ ಕಡಿವಾಣ

ಕಂಬೋಜ್ ಅಬ್ಬರ: ಮುಂಬೈ 159/7

ಚೆನ್ನೈ: ಅನ್ಶುಲ್ ಕಂಬೋಜ್ ಅವರ ಕರಾರುವಾಕ್ ಬೌಲಿಂಗ್ ದಾಳಿಗೆ ಕುಸಿದ ಮುಂಬೈ ಇಂಡಿಯನ್ಸ್ ಚೆನ್ನೈ ಸೂಪರ್ ಕಿಂಗ್ಸ್‌ಗೆ ಸ್ಪರ್ಧಾತ್ಮಕ ಗುರಿ ಮಾತ್ರ ಕೊಟ್ಟಿತು.

ರಯಾನ್ ರಿಕೆಲ್ಟನ್ ಅವರ ಬಿರುಸಿನ ಬ್ಯಾಟಿಂಗ್‌ನೊಂದಿಗೆ ಉತ್ತಮ ಆರಂಭ ಪಡೆದ ಮುಂಬೈ ಮಧ್ಯಮ ಓವರ್‌ಗಳಲ್ಲಿ ನೂರ್, ಓವರ್‌ಟನ್ ಮತ್ತು ಅನ್ಶುಲ್ ದಾಳಿಗೆ ತತ್ತರಿಸಿತು. ಪರಿಣಾಮ 20 ಓವರ್‌ಗಳಲ್ಲಿ 7 ವಿಕೆಟ್ ನಷ್ಟಕ್ಕೆ 159 ರನ್ ಮಾತ್ರ ಗಳಿಸಿದೆ. ನಮನ್ ಧಿರ್ (57; 37ಎ, 4ಬೌ, 3ಸಿ) ಮಾತ್ರ ಅರ್ಧಶತಕ ಬಾರಿಸಿದರು. ರಯಾನ್ (37; 24ಎ, 5ಸಿ) ಆರಂಭದಲ್ಲಿ ಮಿಂಚಿದರು. ಹಾರ್ದಿಕ್ ಪಾಂಡ್ಯ ನಿಧಾನಗತಿ ಬ್ಯಾಟಿಂಗ್ ಮಾಡಿದರು. ಚೆನ್ನೈ ಪರ ಅನ್ಶುಲ್, ಓವರ್‌ಟನ್, ನೂರ್ ಅಹ್ಮದ್ ಗಮನ ಸೆಳೆದರು.

ರಯಾನ್ ಪವರ್ ಆಟ: ಟಾಸ್ ಗೆದ್ದ ಮುಂಬೈ ಬ್ಯಾಟಿಂಗ್ ಆಯ್ದುಕೊಂಡಿತು. ರೋಹಿತ್ ಇಲ್ಲದ ಹೊತ್ತಲ್ಲಿ ಮತ್ತೊಮ್ಮೆ ಜ್ಯಾಕ್ಸ್ ಕಣಕ್ಕಿಳಿದರು. ರಯಾನ್ ರಿಕೆಲ್ಟನ್ ದಂಡಿಸುವ ಮನಸ್ಥಿತಿಯೊಂದಿಗೆ ಬ್ಯಾಟಿಂಗ್‌ಗಿಳಿದರು. ವಿಲ್ ಜ್ಯಾಕ್ಸ್ ಕೂಡ ಅದನ್ನೇ ಮಾಡಲು ಮುಂದಾದರು. ಮೊದಲ ಓವರ್‌ನಲ್ಲಿ ಐದು ಡಾಟ್ ಬಾಲ್ ಆಡಿದ್ದ ಜ್ಯಾಕ್ಸ್ ಹೊಡೆಯಲೆತ್ನಿಸಿದರು.

ಅನ್ಶುಲ್ ಎಸೆದ ಎಸೆತ ಬ್ಯಾಟಿನ ತುದಿಗೆ ತಾಗುತ್ತಿದ್ದಂತೆ ಥರ್ಡ್‌ಮ್ಯಾನ್‌ನತ್ತ ಹಾರಿತು. ಅಲ್ಲಿದ್ದ ರಾಮಕೃಷ್ಣ ಘೋಷ್ 18 ಮೀ. ದೂರ ಕ್ರಮಿಸಿ ಕ್ಯಾಚ್ ಹಿಡಿದರು. ಐಪಿಎಲ್‌ನ ಮೊದಲ ಪಂದ್ಯದಲ್ಲಿ ಘೋಷ್ ತಮ್ಮನ್ನು ತಾವೇ ಪರಿಚಯಿಸಿದರು. ಮೂರನೇ ಕ್ರಮಾಂಕದಲ್ಲಿ ಬಂದ ನಮನ್ ಸ್ಟ್ರೈಕ್ ರೊಟೇಟ್ ಮೇಲೆ ಗಮನ ಹರಿಸಿದರು. ಇತ್ತ ರಯಾನ್ ಬ್ಯಾಟ್‌ನಿಂದ ಬಾನೆತ್ತರದ ಸಿಕ್ಸರ್‌ಗಳು ಬಂದವು. ಅಚ್ಚರಿಯ ಆಯ್ಕೆಯಲ್ಲಿ ನಾಲ್ಕನೇ ಓವರ್



ಮಾಡಲು ಪ್ರಶಾಂತ್ ವೀರ್ ಬಂದರು. ಮೂರು ಸಿಕ್ಸರ್ ತಿಂದು ಹೋದರು. ಸೆಟ್ ಆಗಿದ್ದ ರಯಾನ್ ಸ್ಫೋಟಕ ಬ್ಯಾಟಿಂಗ್‌ಗೆ ಅಣಿಯಾಗಿದ್ದರು. ಪವರ್‌ಪ್ಲೇ ಮುಗಿತು, ಮುಂಬೈ 57/1.

ಚೆನ್ನೈ ಕಡಿವಾಣ: ಮಧ್ಯಮ ಓವರ್‌ಗಳಲ್ಲಿ ಹೆಚ್ಚು ಡಾಟ್ ಬಾಲ್‌ಗಳು ಕಂಡವು. ರಯಾನ್ ಏಳನೇ ಓವರ್‌ನಲ್ಲಿ ನೂರ್‌ಗೆ ಕ್ಯಾಚಿತ್ತರು. ಸೂರ್ಯಕುಮಾರ್ ಯಾದವ್ ಮತ್ತು ನಮನ್ ಧಿರ್ ಸಿಂಗಲ್‌ಗಳ ಮೂಲಕ ಇನ್ನಿಂಗ್ಸ್ ಕಟ್ಟಲಾರಂಭಿಸಿದರು. ಸೂರ್ಯನಿಂದ ಒಂದೆರಡು ಬೌಂಡರಿ ಕೂಡ ಬಂದವು. ಪಂದ್ಯದ ದಿಕ್ಕು ಬದಲಾಗುತ್ತಿದ್ದಂತೆ ಸೂರ್ಯಗೆ ಖೆಡ್ಡಾ ತೋಡಿಬಿಟ್ಟರು ರಾಮಕೃಷ್ಣ ಘೋಷ್. ಪಂದ್ಯದ ಗತಿ ಬದಲಾಯಿತು. ರನ್ ವೇಗ ಇಳಿಯಿತು. ತಿಲಕ್ 5 ರನ್ ಗಳಿಸುಷ್ಟರಲ್ಲಿ ಸುಸ್ತಾದರು. ನೂರ್‌ಗೆ ಎರಡನೇ ವಿಕೆಟ್. ಬಳಿಕ ಬಂದ ಪಾಂಡ್ಯ, ನಮನ್ ನಿಧಾನ ಬ್ಯಾಟಿಂಗ್ ಮಾಡಿ ಮಧ್ಯಮ ಓವರ್ ಮುಗಿಸಿದರು. ಮಧ್ಯಮ ಓವರ್‌ಗಳಲ್ಲಿ ಮುಂಬೈ ಗಳಿಸಿದ್ದು ಕೇವಲ 67 ರನ್ ಮಾತ್ರ.

ಡೆತ್ ಓವರ್: ಪವರ್‌ಪ್ಲೇನಲ್ಲೇ ಬ್ಯಾಟಿಂಗ್‌ಗೆ ಬಂದ ನಮನ್ 34 ಬಾಲ್‌ಗಳಲ್ಲಿ ಅರ್ಧಶತಕ ಬಾರಿಸಿದರು. ಆದರೆ ಡೆತ್ ಓವರ್ ಶುರುವಿನಲ್ಲೇ ವಿಕೆಟ್ ಕೊಟ್ಟರು. ಬಳಿಕ ಬಂದ ರಾಬಿನ್ ಮಿಂಜ್ ಬೋಲ್ಡ್ ಆದರು. ಓವರ್‌ಟನ್ ಕೊಟ್ಟ ಕಾಟಕ್ಕೆ ಡೆತ್‌ನಲ್ಲಿ ಹಾರ್ದಿಕ್ ಸುಸ್ತಾದರು. 140 ವೇಗದಲ್ಲಿ ಬೌಲಿಂಗ್ ಮಾಡಿದ ಓವರ್‌ಟನ್ ಹಾರ್ದಿಕ್ ಪಾಂಡ್ಯಗೆ ಬೆವರಿಳಿಸಿದರು. ಡೆತ್ ಓವರ್‌ನಲ್ಲಿ ರನ್ ಹರಿಯಲೇ ಇಲ್ಲ. ಮುಂಬೈ ರನ್ ಮಟ್ಟ ಕುಗ್ಗಿತು. ಪಾಂಡ್ಯ 23 ಬಾಲ್‌ಗಳಲ್ಲಿ 18 ರನ್ ಗಳಿಸಿ ಕ್ಯಾಚಿತ್ತರು. ಬೋಲ್ಟ್ ಕೊನೆಯ ಓವರ್‌ನಲ್ಲಿ ಒಂದು ಸಿಕ್ಸರ್ ಬಾರಿಸಿದರು. ಡೆತ್ ಓವರ್‌ನಲ್ಲಿ ಮುಂಬೈ 3 ವಿಕೆಟ್‌ಗೆ 35 ರನ್ ಗಳಿಸಿತು. ಒಟ್ಟು 159. ಚೆನ್ನೈ ಪರ ಅನ್ಶುಲ್ 3, ನೂರ್ 2, ಘೋಷ್-ಓವರ್‌ಟನ್ ತಲಾ ಒಂದು ವಿಕೆಟ್ ಪಡೆದರು.

ಬಾರದ ಧೋನಿ, ಇಳಿಯದ ರೋಹಿತ್

ಮಹೇಂದ್ರ ಸಿಂಗ್ ಧೋನಿ ಆಟವನ್ನು ನೋಡುವ ಅಭಿಮಾನಿಗಳ ಆಸೆ ಇನ್ನೂ ಹಾಗೇ ಉಳಿದಿದೆ. ಇತ್ತ ರೋಹಿತ್ ಶರ್ಮಾ ಬ್ಯಾಟಿಂಗ್ ನೋಡುವ ತವಕ ಮುಂಬೈ ಅಭಿಮಾನಿಗಳಲ್ಲಿ ಹಾಗೇ ಉಳಿದಿದೆ. ಚೆನ್ನೈನಲ್ಲಿ ನಡೆದ ಪಂದ್ಯದಲ್ಲಿ ಧೋನಿ ಮತ್ತು ರೋಹಿತ್ ಕಣಕ್ಕಿಳಿಯಲಿಲ್ಲ. ಮೈಕ್ ಹಸ್ಸಿ ಧೋನಿ ಆಗಮನದ ಬಗ್ಗೆ ಮಾತನಾಡಿದ್ದರು. ಆದರೆ ಮೈದಾನಕ್ಕೆ ಅವರು ಬರಲೇ ಇಲ್ಲ. ಅಭ್ಯಾಸಕ್ಕಿಳಿಯುವ ಧೋನಿ ಪಂದ್ಯದಲ್ಲಿ ಕಾಣಿಸುತ್ತಿಲ್ಲ. ವಾಸ್ತವವಾಗಿ ಧೋನಿ ಗಾಯದಿಂದ ಮೂರು ಪಂದ್ಯಕ್ಕೆ ಮಾತ್ರ ಲಭ್ಯರಿಲ್ಲ ಎಂದು ಹೇಳಲಾಗಿತ್ತು. ಆದರೆ, ಅರ್ಧಕ್ಕಿಂತ ಹೆಚ್ಚು ಐಪಿಎಲ್ ಮುಗಿದರೂ ಧೋನಿ ಇದುವರೆಗೂ ಪಂದ್ಯವಾಡಿಲ್ಲ. ಇತ್ತ ರೋಹಿತ್ ಶರ್ಮಾ ಕೂಡ ಪಂದ್ಯದಲ್ಲಿ ಕಣಕ್ಕಿಳಿಯುವ ಸಾಧ್ಯತೆ ಇತ್ತು. ಆದರೆ ಅವರೂ ಹೊರಗುಳಿದರು.

ಕಿರುಸುದ್ದಿ

ಮ್ಯಾಗ್ನಸ್ ವಿರುದ್ಧ ಡ್ರಾ ಮಾಡಿಕೊಂಡ ಅರ್ಜುನ್

ಮಾಲ್ಮೋ: ಭಾರತದ ಗ್ರ್ಯಾಂಡ್‌ಮಾಸ್ಟರ್ ಅರ್ಜುನ್ ಎರಿಗೈಸಿ ಅವರು 31ನೇ ಟೆಪೆ ಸಿಗೇಮನ್ ಅಂಡ್ ಕಂಪನಿ ಚೆಸ್ ಟೂರ್ನಿಯಲ್ಲಿ ಉತ್ತಮ ಆರಂಭ ಮಾಡಿ, ವಿಶ್ವ ಕ್ರಮಾಂಕ 1ರ ಮ್ಯಾಗ್ನಸ್ ಕಾರ್ಲ್ಸನ್ ವಿರುದ್ಧ ಮೊದಲ ಸುತ್ತಿನಲ್ಲಿ ಡ್ರಾ ಸಾಧಿಸಿದ್ದಾರೆ. ಪಂದ್ಯದಲ್ಲಿ ಕಾರ್ಲ್ಸನ್ ಕ್ವೀನ್‌ಸೈಡ್ ಭಾಗದಲ್ಲಿ ಒತ್ತಡ ಹೆಚ್ಚಿಸಲು ಪ್ರಯತ್ನಿಸಿದರೂ, ಅರ್ಜುನ್ ನಿಖರ ರಕ್ಷಣಾತ್ಮಕ ಆಟ ಪ್ರದರ್ಶಿಸಿ 24ಬಿ6 ಎಂಬ ಪ್ರಮುಖ ನಡೆ ಮೂಲಕ ಎದುರಾಳಿಯ ಪಾಸ್ಡ್ ಪಾನ್ ಬೆದರಿಕೆಯನ್ನು ತಡೆದರು. ನಂತರ ಕುದುರೆಯನ್ನು ಸಕ್ರಿಯಗೊಳಿಸಿ ಆಟವನ್ನು ಸರಳೀಕರಣದತ್ತ ಕೊಂಡೊಯ್ದರು. ರೂಕ್‌ಗಳ ವಿನಿಮಯವಾದ ಬಳಿಕ ಕಾರ್ಲ್ಸನ್‌ಗೆ ಸ್ಪಷ್ಟ ಮುನ್ನಡೆಯ ಅವಕಾಶ ಸಿಗದೆ, ಪಂದ್ಯ ಅಂತಿಮವಾಗಿ ಡ್ರಾದಲ್ಲಿ ಅಂತ್ಯವಾಯಿತು. 2026ರಲ್ಲಿ ಅರ್ಜುನ್ ನಿಧಾನ ಆರಂಭ ಕಂಡಿದ್ದರು. ಅವರು ಟಾಟಾ ಸ್ಟೀಲ್ ಮಾಸ್ಟರ್ಸ್‌ನಲ್ಲಿ 13ನೇ ಸ್ಥಾನ ಪಡೆದುಕೊಂಡರೆ, ಫ್ರೀಸ್ಟೈಲ್ ಚೆಸ್ ವಿಶ್ವ ಚಾಂಪಿಯನ್‌ಶಿಪ್‌ನಲ್ಲಿ ಆರನೇ ಸ್ಥಾನ ಗಳಿಸಿದ್ದರು. ಆ ಟೂರ್ನಿಯನ್ನು ಕಾರ್ಲ್ಸನ್ ಜಯಿಸಿದ್ದರು. ಈ ಟೂರ್ನಿಯಲ್ಲಿ ಉಜ್ಬೇಕಿಸ್ತಾನದ ನೋಡಿರ್ಬೇಕ್ ಅಬ್ದುಸತ್ತೊರೋ (2024ರ ವಿಜೇತ), ಜಾರ್ಡನ್ ವ್ಯಾನ್ ಫಾರೆಸ್ಟ್ (2021ರ ಚಾಂಪಿಯನ್) ಹಾಗೂ ಸ್ವೀಡನ್‌ನ ಅಗ್ರ ಆಟಗಾರ ನೀಲ್ಸ್ ಗ್ರ್ಯಾಂಡೆಲ್ಯೂಸ್ ಸೇರಿದಂತೆ ಹಲವಾರು ಶಕ್ತಿಶಾಲಿ ಆಟಗಾರರು ಭಾಗವಹಿಸಿದ್ದಾರೆ.

ಪೋಲ್ ವಾಲ್ಟ್: ಕುಲ್ದೀಪ್ ಕುಮಾರ್ ದಾಖಲೆ

ಭುವನೇಶ್ವರ: ಶನಿವಾರ ಭುವನೇಶ್ವರದಲ್ಲಿ ನಡೆದ ಮೊದಲ ಭಾರತೀಯ ಒಳಾಂಗಣ ಮುಕ್ತ ಕಂಬೈನ್ಡ್ ಇವೆಂಟ್ಸ್ ಮತ್ತು ಪೋಲ್ ವಾಲ್ಟ್ ಸ್ಪರ್ಧೆಗಳಲ್ಲಿ ಕುಲ್ದೀಪ್ ಕುಮಾರ್ ಪೋಲ್ ವಾಲ್ಟ್‌ನಲ್ಲಿ 5.41 ಮೀ ದೂರ ಗುರಿಯನ್ನು ಸಾಧಿಸುವ ಮೂಲಕ ಹೊಸ ರಾಷ್ಟ್ರೀಯ ದಾಖಲೆಯನ್ನು ಸ್ಥಾಪಿಸಿದರು. ಮಧ್ಯಪ್ರದೇಶದ 21 ವರ್ಷದ ಕುಲ್ದೀಪ್, ಮೂರನೇ ಸ್ಥಾನ ಪಡೆದ ರಾಜ್ಯದ ದೇವ್ ಮೀನಾ ಅವರ ಹಿಂದಿನ 5.40 ಮೀ ರಾಷ್ಟ್ರೀಯ ದಾಖಲೆಯನ್ನು ಮೀರಿಸಿದರು. ಅವರು 5.46 ಮೀ. ನಲ್ಲಿ ಮೂರು ವಿಫಲ ಪ್ರಯತ್ನಗಳನ್ನು ಮಾಡಿದ್ದರು. 21 ವರ್ಷದ ಅವರು ಅದ್ಭುತ ಫಾರ್ಮ್‌ನಲ್ಲಿದ್ದಾರೆ. ಏಪ್ರಿಲ್‌ನ ಆರಂಭದಲ್ಲಿ, ಅವರು ಜೈಪುರದಲ್ಲಿ 5.25 ಮೀ. ಎತ್ತರ ಗುರಿಯನ್ನು ಸಾಧಿಸುವ ಮೂಲಕ ಚಿನ್ನವನ್ನು ಗೆದ್ದರು, 2026 ರ ಕಾಮನ್‌ವೆಲ್ತ್ ಕ್ರೀಡಾಕೂಟಕ್ಕೆ ಅರ್ಹತಾ ಅಂಕವನ್ನು ಸಾಧಿಸಿದರು.

ಫಲಿತಾಂಶಗಳು:

ಚಿನ್ನ – ಕುಲದೀಪ್ ಕುಮಾರ್ (ಮಧ್ಯಪ್ರದೇಶ) – 5.41 ಮೀ
ಬೆಳ್ಳಿ – ಜಿ ರೀಗನ್ (ತಮಿಳುನಾಡು) – 5.25 ಮೀ.
ಕಂಚು – ದೇವ್ ಮೀನಾ (ಮಧ್ಯಪ್ರದೇಶ) – 5.20 ಮೀ.

ಅಂಡರ್-17 ಫುಟ್ಬಾಲ್: ಭಾರತಕ್ಕೆ ಸೋಲು

ಮುಂಬೈ: ಎಎಫ್‌ಸಿ ಏಷ್ಯನ್ ಕಪ್ ಪಂದ್ಯಾವಳಿಯಲ್ಲಿ ಭಾರತ ಅಂಡರ್-17 ಮಹಿಳಾ ತಂಡ ಸೋಲಿನಾರಂಭ ಮಾಡಿತು. ಶನಿವಾರ ಶುರುವಾದ ಪಂದ್ಯಾವಳಿಯ ಮೊದಲ ಪಂದ್ಯವಾಡಿದ ಭಾರತ ಮಹಿಳಾ ತಂಡವು ಆಸ್ಟ್ರೇಲಿಯಾ ತಂಡವನ್ನು ಎದುರಿಸಿತ್ತು. ಚೀನಾದ ಸುಝೌನಲ್ಲಿ ನಡೆದ ಪಂದ್ಯದಲ್ಲಿ ಆಸ್ಟ್ರೇಲಿಯಾ 2-0ರಿಂದ ಗೆಲುವು ಸಾಧಿಸಿದೆ. ಆರಂಭಿಕ ಹಂತದಲ್ಲಿ ಎರಡೂ ತಂಡಗಳು ಬಿಗಿ ಪ್ರದರ್ಶನ ನೀಡಿದವು. ಮೊದಲಿನ 25 ನಿಮಿಷಗಳಲ್ಲಿ ಗೋಲಾಗಿರಲಿಲ್ಲ. ಆದರೆ ಮೌತಿಯಾಸ್ ಮಿಕಾಲಾಡ್ 25ನೇ ನಿಮಿಷ ಮುಗಿಯುವಷ್ಟರಲ್ಲಿ ಗೋಲು ಬಾರಿಸಿದರು. ಇತ್ತ ಭಾರತ ತಂಡ ಹಲವಾರು ಪ್ರಯತ್ನಗಳನ್ನು ಮಾಡಿದರೂ ಗೋಲು ಬರಲಿಲ್ಲ. ಮುಂದಿನ ಸುಮಾರು 30ನಿಮಿಷಗಳ ಕಾಲ ಗೋಲಿಗಾಗಿ ಉಭಯ ತಂಡಗಳು ಪ್ರಯತ್ನ ಪಟ್ಟವು. 59ನೇ ನಿಮಿಷದಲ್ಲಿ ಅಭಿಸ್ತಾ ಬೆನೆಟ್ ತಮ್ಮ ತಂಡಕ್ಕೆ ಎರಡನೇ ಗೋಲು ತಂದುಕೊಟ್ಟರು. ಅಲ್ಲಿಂದ ಆಸ್ಟ್ರೇಲಿಯಾ ಗೆಲುವಿನ ಕಹಳೆ ಮೊಳಗಿಸಿತು. ಭಾರತದ ಎಲ್ಲಾ ಪ್ರಯತ್ನಗಳಿಗೂ ಆಸ್ಟ್ರೇಲಿಯಾ ಡಿಫೆನ್ಸ್ ತಡೆಯೊಡ್ಡಿತು. ಅಂತಿಮವಾಗಿ ಆಸ್ಟ್ರೇಲಿಯಾ 2-0ರಿಂದ ಗೆಲುವು ಸಾಧಿಸಿದೆ.

ಮಹಿಳಾ ವಿಶ್ವಕಪ್‌ಗೆ ಭಾರತ ತಂಡ ಪ್ರಕಟ | ರಾಧಾ ಯಾದವ್‌ಗೆ ಅವಕಾಶ | ತಂಡಕ್ಕೆ ಮರಳಿದ ಕನ್ನಡತಿ ಶ್ರೇಯಾಂಕಾ ಪಾಟೀಲ್

ಭಾಟಿಯಾ, ನಂದಿನಿ ಶರ್ಮ ಆಯ್ಕೆ!

ಮುಂಬೈ: ಭಾರತದ ಯುವ ಪ್ರತಿಭೆಗಳಾದ ಯಸ್ತಿಕಾ ಭಾಟಿಯಾ, ನಂದಿನಿ ಶರ್ಮ ಮತ್ತು ರಾಧಾ ಯಾದವ್ ಐತಿಹಾಸಿಕ ಟಿ20 ವಿಶ್ವಕಪ್ ಪಂದ್ಯಾವಳಿ ಆಡುವುದಕ್ಕೆ ಸಜ್ಜಾಗಿದ್ದಾರೆ. ಮಹಿಳೆಯರ ವಿಶ್ವಕಪ್ ಪಂದ್ಯಾವಳಿಗೆ ವೇದಿಕೆ ಸಿದ್ಧವಾಗುತ್ತಿದ್ದು, ಭಾರತ ಶನಿವಾರದಂದು ತಂಡ ಪ್ರಕಟಿಸಿತು.

ಇಂಗ್ಲೆಂಡಿನಲ್ಲಿ ನಡೆಯಲಿರುವ ಪಂದ್ಯಾವಳಿಗಾಗಿ ಭಾರೀ ಸಿದ್ಧತೆಗಳು ನಡೆಯುತ್ತಿವೆ. ಹೀಗಿರುವಾಗ ಭಾರತ ಬಲಿಷ್ಠ ತಂಡವನ್ನು ಪ್ರಕಟಿಸಿದೆ. ಹರ್ಮನ್‌ಪ್ರೀತ್ ಕೌರ್ ತಂಡದ ನಾಯಕತ್ವ ವಹಿಸಿದ್ದು, ಸ್ಮೃತಿ ಮಂಧಾನಗೆ ಉಪನಾಯಕತ್ವದ ಜವಾಬ್ದಾರಿ ಸಿಕ್ಕಿದೆ. ಉಳಿದಂತೆ ಈ ತಂಡದಲ್ಲಿ ನಿರೀಕ್ಷಿತ ಹೆಸರುಗಳೇ ಸೇರಿವೆ. ಮಹಿಳಾ ಪ್ರೀಮಿಯರ್ ಲೀಗ್ ಪಂದ್ಯಾವಳಿಯಲ್ಲಿ ಸಂಚಲನ ಮೂಡಿಸಿದ್ದ ಯಸ್ತಿಕಾ ಭಟಿಯಾಗೆ ಅವಕಾಶ ನೀಡ ಲಾಗಿದೆ. ಇದು ಅವರ ಮೊದಲನೇ ವಿಶ್ವಕಪ್. ವೇಗಿ ರಾಧಾ ಯಾದವ್ ಅವರಿಗೂ ಅವಕಾಶ ನೀಡಲಾಗಿದೆ. ಮಹಿಳಾ ಪ್ರೀಮಿಯರ್ ಲೀಗ್ ಸೇರಿದಂತೆ ವಿವಿಧ ಪಂದ್ಯಗಳಲ್ಲಿ ಅವರು ಮಿಂಚಿದ್ದರು. ಇನ್ನು ಈ ಬಾರಿಯ ಡಬ್ಲ್ಯುಪಿಎಲ್‌ನಲ್ಲಿ ಸಂಚಲನ ಮೂಡಿಸಿರುವ ನಂದಿನಿ ಶರ್ಮ ಅವರಿಗೂ ಅವಕಾಶ ನೀಡಲಾಗಿದೆ.

ಜೂನ್ 12ಕ್ಕೆ ಶುರು: 2026 ರ ಮಹಿಳಾ ಟಿ20 ವಿಶ್ವಕಪ್‌ಗೆ ಇಂಗ್ಲೆಂಡ್ ಆತಿಥ್ಯವಹಿಸುತ್ತಿದ್ದು, ಈ ಪಂದ್ಯಾವಳಿ ಜೂನ್ 12 ರಂದು ಪ್ರಾರಂಭವಾಗಲಿದ್ದು, ಜುಲೈ 5 ರಂದು ನಡೆಯಲಿರುವ ಫೈನಲ್ ಪಂದ್ಯದೊಂದಿಗೆ ಅಂತ್ಯವಾಗಲಿದೆ. ಈ ಮಹಿಳಾ ವಿಶ್ವಕಪ್‌ನಲ್ಲಿ ಒಟ್ಟು 12 ತಂಡಗಳು ಭಾಗವಹಿಸಲಿದ್ದು, ತಲಾ 6 ತಂಡಗಳನ್ನು ಎರಡು ಗುಂಪುಗಳಾಗಿ ವಿಂಗಡಿಸಲಾಗಿದೆ. ಈ ಪಂದ್ಯಾವಳಿಯಲ್ಲಿ ಒಟ್ಟು 33 ಪಂದ್ಯಗಳು ನಡೆಯಲಿವೆ.



ಭಾರತ ಟಿ20 ವಿಶ್ವಕಪ್ ತಂಡ

ಹರ್ಮನ್‌ಪ್ರೀತ್ ಕೌರ್, ಸ್ಮೃತಿ ಮಂಧಾನ, ಜೆಮಿಮಾ ರಾಡ್ರಿಗ್ಸ್, ಶಫಾಲಿ ವರ್ಮಾ, ಭಾರತಿ ಫುಲ್ಮಾಲಿ, ದೀಪ್ತಿ ಶರ್ಮ, ರಿಚಾ ಘೋಷ್, ಶ್ರೀ ಚರಣಿ, ಯಸ್ತಿಕಾ ಭಾಟಿಯಾ, ನಂದಿನಿ ಶರ್ಮ, ಅರುಂಧತಿ ರೆಡ್ಡಿ, ರೇಣುಕಾ ಸಿಂಗ್ ಠಾಕೂರ್, ಕ್ರಾಂತಿ ಕೌಡ್, ಶ್ರೇಯಾಂಕ ಪಾಟೀಲ್, ರಾಧಾ ಯಾದವ್.

ಭಾರತದ ಪಂದ್ಯಗಳು

ಪಂದ್ಯಾವಳಿಯಲ್ಲಿ ಭಾರತ ಎ ಗುಂಪಿನಲ್ಲಿ ಸ್ಥಾನ ಪಡೆದಿದೆ. ಈ ಗುಂಪಿನಲ್ಲಿ ಭಾರತವನ್ನು ಹೊರತುಪಡಿಸಿ ದಕ್ಷಿಣ ಆಫ್ರಿಕಾ, ಪಾಕಿಸ್ತಾನ, ಬಾಂಗ್ಲಾದೇಶ, ನೆದರ್ಲೆಂಡ್ಸ್ ಮತ್ತು ಆಸ್ಟ್ರೇಲಿಯಾ ತಂಡಗಳು ಸೇರಿವೆ. ಭಾರತೀಯ ಮಹಿಳಾ ತಂಡ ಜೂನ್ 14 ರಂದು ಪಾಕಿಸ್ತಾನವನ್ನು ಎದುರಿಸುವ ಮೂಲಕ ತನ್ನ ಅಭಿಯಾನವನ್ನು ಪ್ರಾರಂಭಿಸಲಿದೆ. ನಂತರ ಜೂನ್ 17 ರಂದು ನೆದರ್ಲೆಂಡ್ಸ್, ಜೂನ್ 21 ರಂದು ದಕ್ಷಿಣ ಆಫ್ರಿಕಾ, ಜೂನ್ 25 ರಂದು ಬಾಂಗ್ಲಾದೇಶ ಹಾಗೂ ಜೂನ್ 28 ರಂದು ಆಸ್ಟ್ರೇಲಿಯಾ ತಂಡವನ್ನು ಎದುರಿಸಲಿದೆ.

ಕೇಂದ್ರ ಸಚಿವ ಡಾ.ಮನ್ಸುಖ್ ಮಾಂಡವಿಯ ಭರವಸೆ

ಒಲಿಂಪಿಕ್ಸ್ ಆಯೋಜನೆಗೆ ಸನ್ನದ್ಧ

ವೀರಾಜಪೇಟೆ: 2032ರ ಒಲಿಂಪಿಕ್ಸ್ ಆಯೋಜಿಸಲು ಭಾರತ ಸನ್ನದ್ಧವಾಗಿದೆ. ಈ ಮಹತ್ವದ ಯೋಜನೆಗೆ ನಮ್ಮ ಸರ್ಕಾರ ಯೋಜನೆ ಹಾಕಿಕೊಳ್ಳುತ್ತಿದೆ ಎಂದು ಕೇಂದ್ರ ಸಚಿವ ಡಾ. ಮನ್ಸುಖ್ ಮಾಂಡವಿಯ ತಿಳಿಸಿದರು. ಕೊಡಗು ಜಿಲ್ಲೆಯ ನಾಪೋಕ್ಲುವಿನಲ್ಲಿ ಆಯೋಜಿತ 26ನೇ ವರ್ಷದ ಕೊಡವ ಕೌಟುಂಬಿಕ ಹಾಕಿ ಪಂದ್ಯಾವಳಿಯ ಫೈನಲ್ ಪಂದ್ಯಾಟದ ಸಭಾ ಕಾರ್ಯಕ್ರಮದಲ್ಲಿ ಶನಿವಾರ ಅವರು ಮಾತನಾಡಿದರು.

ಕ್ರೀಡಾ ಅಕಾಡೆಮಿಗೆ ನೆರವು: ಕೊಡಗಿನಲ್ಲಿ ಕ್ರೀಡಾ ಬೆಳವಣಿಗೆಗೆ ಕೇಂದ್ರ ಕ್ರೀಡಾ ಇಲಾಖೆ ಎಲ್ಲಾ ರೀತಿಯ ಸಹಕಾರ ನೀಡಲಿದೆ. ಜಿಲ್ಲೆಯಲ್ಲಿ ಹಾಕಿ ಅಕಾಡೆಮಿ ಸ್ಥಾಪಿಸಿದರೆ ಕೇಂದ್ರ ಸರ್ಕಾರ ಎಲ್ಲಾ ಸೌಲಭ್ಯ ನೀಡಲು ಬದ್ಧವಾಗಿದೆ ಎಂದರು.

> **ಕೊಡವ ಕೌಟುಂಬಿಕ ಹಾಕಿ ಮೂಲಕ ಕೊಡವ ಸಮುದಾಯದ ಸೌಹಾರ್ದತೆ ಹೆಚ್ಚಾಗಿದೆ. ದೇಶದಲ್ಲಿಯೇ ಈ ಪಂದ್ಯಾಟ ಗಮನ ಸೆಳೆದಿದೆ.**
> ■ ಯದುವೀರ್ ಒಡೆಯರ್, ಸಂಸದ



ಕ್ರೀಡಾ ಕೌಶಲದ ಮೇಲೆ ಗಮನವಿಡಿ

ಕ್ರೀಡೆಯನ್ನು ಕ್ರೀಡಾಪಟುಗಳ ಉತ್ತೇಜನಕ್ಕೆ ಬಳಸಬೇಕೇ ವಿನಹ ರಾಜಕೀಯಕ್ಕೆ ಬಳಸಬಾರದು ಎಂದು ಅಭಿಪ್ರಾಯಪಟ್ಟ ಅವರು, ಗ್ರಾಮೀಣ ಪ್ರದೇಶ ಸೇರಿದಂತೆ ಭಾರತದ ಕ್ರೀಡಾ ಪ್ರತಿಭೆಗಳನ್ನು ಬೆಳಕಿಗೆ ತರುವಲ್ಲಿ ಎಲ್ಲರೂ ಒಗ್ಗೂಡಬೇಕು. ಪ್ರತಿಭೆ ಎಂಬುದನ್ನು ಗೋಲುಗಳ ಆಧಾರದಲ್ಲಿ ಪರಿಗಣಿಸದೆ, ಕ್ರೀಡಾ ಕೌಶಲ್ಯದ ಆಧಾರದಲ್ಲಿ ಗಮನಿಸಬೇಕೆಂದು ಕಿವಿಮಾತು ಹೇಳಿದರು.

ಇಂದು 2 ಪಂದ್ಯ | ಪಂಜಾಬ್–ಗುಜರಾತ್ ಸೆಣಸಾಟ

ಕೆಕೆಆರ್ vs ಹೈದರಾಬಾದ್

ಹೈದರಾಬಾದ್: ಸತತ ಸೋಲುಗಳಿಂದ ಹೊರಬಂದಿರುವ ಕೆಕೆಆರ್ ಹಾಗೂ ಗೆಲುವಿನ ಗೂಡು ಕಟ್ಟಿರುವ ಸನ್‌ರೈಸರ್ಸ್ ಹೈದರಾಬಾದ್ ತಂಡಗಳು ವೀಕೆಂಡ್ ಸೂಪರ್ ಕದನದ ಮೊದಲ ಪಂದ್ಯದಲ್ಲಿ ಮುಖಾಮುಖಿಯಾಗಲಿದ್ದರೆ, ಗೆಲುವಿನ ನಾಗಾಲೋಟ ನಡೆಸಿರುವ ಪಂಜಾಬ್ ಕಿಂಗ್ಸ್ ಹಾಗೂ ಗುಜರಾತ್ ಟೈಟಾನ್ಸ್ ತಂಡಗಳು ಎರಡನೇ ಪಂದ್ಯದಲ್ಲಿ ಸೆಣಸಲಿವೆ.

ಐಪಿಎಲ್ ರೋಚಕ ಹಂತಕ್ಕೆ ತಲುಪಿದೆ. ಟೇಬಲ್‌ನ ಅಗ್ರ ನಾಲ್ಕು ಸ್ಥಾನಗಳಿಗಾಗಿ ಹೊಡೆದಾಟ ಜೋರಾಗಿದೆ. ಮೊದಲಾರ್ಧದ ಪಂದ್ಯಾವಳಿಯಲ್ಲಿ ಮೂರನಾಲ್ಕು ತಂಡಗಳು ಗೆಲ್ಲುತ್ತಾ ಬಂದರೆ ಕೆಳಗಿನ ಐದಾರು ತಂಡಗಳು ಸೋಲುತ್ತಾ ಹೋಗಿದ್ದವು. ಆದರೆ ಎರಡನೇ ಹಂತದ ಪಂದ್ಯಗಳಲ್ಲಿ ಹೈದರಾಬಾದ್, ಗುಜರಾತ್ ಅಂಥ ತಂಡಗಳು ಭರ್ಜರಿ ಪ್ರದರ್ಶನ ನೀಡುತ್ತಿವೆ. ಅಳಿವು ಮತ್ತು ಉಳಿವು ಹೋರಾಟದಲ್ಲಿರುವ ಕೆಕೆಆರ್‌ಗೆ ಎಲ್ಲಾ ಪಂದ್ಯವೂ ಕೊನೆಯ ಅವಕಾಶ. ಅಪ್ಪಿತಪ್ಪಿ ಒಂದು ಪಂದ್ಯದಲ್ಲಿ ಸೋತರೆ ಟ್ರೋಫಿ ಆಸೆ ಬದಿಗಿಡಬೇಕು. ಇತ್ತ ಹೈದರಾಬಾದ್ ಮೂರನೇ ಸ್ಥಾನದಲ್ಲಿ ಸ್ವಸ್ಥವಾಗಿದೆ. ರಾಜಸ್ಥಾನ ಕಳೆದ ಪಂದ್ಯದಲ್ಲಿ ಸೋತಿರುವುದು ಮೇಲಿನ ಇನ್ನೊಂದು ಸ್ಥಾನದ ಮೇಲೆ ವಿವಿಧ ತಂಡಗಳ ಕಣ್ಣು ಬಿದ್ದಿದೆ. ಹೀಗಿರುವಾಗ ಭಾನುವಾರದ ಪಂದ್ಯಗಳು ಪ್ರಮುಖ ಪಾತ್ರ ವಹಿಸಲಿವೆ.

ಕೆಕೆಆರ್-ಹೈದರಾಬಾದ್: ಮೊದಲಾರ್ಧದ ಎಲ್ಲಾ ಪಂದ್ಯಗಳನ್ನು ಸೋತಿದ್ದ ಕೋಲ್ಕತ್ತಾ ನೈಟ್ ರೈಡರ್ಸ್ ತಂಡವು ಹಿಂದಿನ ಎರಡೂ ಪಂದ್ಯಗಳಲ್ಲಿ ಗೆದ್ದಿದೆ. ಇತ್ತ ಹೈದರಾಬಾದ್ ತನ್ನ ಹಳಿ ಹಿಡಿದಿರುವುದು ರೋಮಾಂಚನಕಾರಿ. ಕಳೆದ 3 ಪಂದ್ಯಗಳಲ್ಲಿ ಹೈದರಾಬಾದ್‌ಗೆ ಸೋಲೇ ಇಲ್ಲ. ಅಭಿಷೇಕ್ ಶರ್ಮ, ಟ್ರಾವಿಸ್ ಹೆಡ್, ಹೆನ್ರಿಕ್ ಕ್ಲಾಸೆನ್ ಲಯಕ್ಕೆ ಮರಳಿದ್ದಾರೆ. ಬ್ಯಾಟಿಂಗ್ ವಿಭಾಗವನ್ನು ಇಶಾನ್ ಕಿಶನ್, ನಿತೀಶ್ ಕುಮಾರ್ ರೆಡ್ಡಿ ಅಂಥವರು ಬಲಿಷ್ಠಗೊಳಿಸಿದ್ದಾರೆ. ಇತ್ತ ಕೆಕೆಆರ್ ಪರ ರಿಂಕು ಸಿಂಗ್ ಮಾತ್ರವೇ ಲಯದಲ್ಲಿದ್ದಾರೆ. ಆರಂಭಿಕರಾದ ಸೈಫರ್ಟ್, ಫಿನ್ ಹಾಗೂ ಅಜಿಂಕ್ಯಾ ಕಳಪೆ ಪ್ರದರ್ಶನ ನೀಡಿರುವುದು ಹಿನ್ನಡೆ ತಂದಿದೆ. ಗ್ರೀನ್, ರಮಣದೀಪ್ ಕೂಡ ಲಯದ ಹುಡುಕಾಟದಲ್ಲಿದ್ದಾರೆ. ಹೈದರಾಬಾದ್ ಬೌಲಿಂಗ್ ಪಡೆಯತ್ತ ಕಣ್ಣಿಟ್ಟರೆ, ನಾಯಕ ಪ್ಯಾಟ್ ಕಮ್ಮಿನ್ಸ್ ಬಲ ತಂದಿದ್ದಾರೆ. ಪ್ರಫುಲ್ ಹಿಂಗೆ, ಹುಸೈನ್, ಶಿವಾಂಗ್ ಕುಮಾರ್ ಕೂಡ ಉತ್ತಮ ಪ್ರದರ್ಶನ ನೀಡಿದ್ದಾರೆ. ಕೆಕೆಆರ್ ಪರ ವೈಭವ್ ಆರೋರಾ ದುಬಾರಿಯಾದರೆ, ಸುನಿಲ್ ನರೈನ್, ಕಾರ್ತಿಕ್ ತ್ಯಾಗಿ ಮಿಂಚಿದ್ದಾರೆ.

ಪಿಚ್ ರಿಪೋರ್ಟ್

ಹೈದರಾಬಾದ್‌ನ ರಾಜೀವ್ ಗಾಂಧಿ ಕ್ರೀಡಾಂಗಣದಲ್ಲಿ ಪಂದ್ಯ ನಡೆಯಲಿದೆ. ಬ್ಯಾಟಿಂಗ್‌ಗೆ ಬಲ ನೀಡುವ ಪಿಚ್ ಇದಾಗಿದ್ದು, ಹೆಚ್ಚಿನ ಬೌನ್ಸ್ ಸ್ಫೋಟಕ ಬ್ಯಾಟರ್‌ಗಳಿಗೆ ಅನುವು ಮಾಡಿಕೊಡಲಿದೆ. ಹಿಂದಿನ ಪಂದ್ಯಗಳಲ್ಲಿ 200ಕ್ಕೂ ಹೆಚ್ಚು ರನ್ ಬಂದಿದ್ದವು. ಆದಾಗ್ಯೂ ಪಿಚ್‌ನಲ್ಲಿ ಹೆಚ್ಚಿನ ಸ್ವಿಂಗ್ ಇರುವುದು ವೇಗಿಗಳಿಗೆ ಲಾಭ ತರಲಿದೆ.



ಪಂಜಾಬ್-ಗುಜರಾತ್

ಎರಡನೇ ಪಂದ್ಯ ಕುತೂಹಲ ಮೂಡಿಸಿದೆ. ಎರಡು ಲಯದಲ್ಲಿರುವ ತಂಡಗಳು ಎದುರಾಗುತ್ತಿವೆ. ಪಂಜಾಬ್ ತಂಡದಲ್ಲಿ ಪ್ರಿಯಾಂಶ್ ಆರ್ಯ, ಪ್ರಭಸಿಮ್ರನ್ ಸಿಂಗ್, ಶ್ರೇಯಸ್ ಅಯ್ಯರ್ ಮತ್ತು ಸ್ಟೊಯಿನಿಸ್ ಅಂಥ ಬ್ಯಾಟರ್‌ಗಳಿದ್ದಾರೆ. ಎಲ್ಲರೂ ಲಯದಲ್ಲಿರುವುದು ತಂಡದ ಶಕ್ತಿ. ಇತ್ತ ಗುಜರಾತ್‌ನಲ್ಲಿ ಶುಭಮನ್ ಗಿಲ್ ತಮ್ಮ ಅಬ್ಬರದ ಬ್ಯಾಟಿಂಗ್‌ನೊಂದಿಗೆ ಮಿಂಚಿದ್ದಾರೆ. ಸಾಯಿ ಸುದರ್ಶನ್, ಜಾಸ್ ಬಟ್ಲರ್ ಅಬ್ಬರಿಸಿದ್ದಾರೆ. ಮಧ್ಯಮ ಕ್ರಮಾಂಕದಲ್ಲಿ ರಾಹುಲ್ ಟೇವಾಟಿಯ ಉತ್ತಮ ಬ್ಯಾಟಿಂಗ್ ಮಾಡಿರುವುದು ವಿಶ್ವಾಸ ಹೆಚ್ಚಿಸಿದೆ. ಬೌಲಿಂಗ್ ವಿಚಾರಕ್ಕೆ ಬಂದರೆ ಪಂಜಾಬ್ ತಂಡದ ಪ್ರಮುಖ ವೇಗಿ ಅರ್ಷದೀಪ್ ಸಿಂಗ್ ದುಬಾರಿಯಾಗಿದ್ದರೆ, ಬಾರ್ಟ್‌ಲೆಟ್, ಯಾನ್ಸನ್ ಕೂಡ ಅಷ್ಟೊಂದು ಪರಿಣಾಮಕಾರಿ ಪ್ರದರ್ಶನ ನೀಡಿಲ್ಲ. ಈ ನಡುವೆ ಸ್ಪಿನ್ನರ್ ಯಜುವೇಂದ್ರ ಚಹಲ್ ಕೂಡ ಅಲ್ಪ ದುಬಾರಿಯಾದರೂ ವಿಕೆಟ್ ಪಡೆದಿದ್ದಾರೆ. ಇತ್ತ ಗುಜರಾತ್ ಪರ ಅರ್ಷದ್ ಖಾನ್, ರಬಾಡ ಲಯದಲ್ಲಿದ್ದಾರೆ. ಸಿರಾಜ್ ಕೂಡ ಕರಾರುವಾಕ್ ದಾಳಿ ನಡೆಸಿರುವುದು ತಂಡಕ್ಕೆ ಬಲ. ಸ್ಪಿನ್ ವಿಭಾಗದಲ್ಲಿ ಮಾನವ್ ಸುಥರ್, ರಶೀದ್ ಖಾನ್ ಮಿಂಚಲು ಸಜ್ಜಾಗಿದ್ದಾರೆ.

ಪಿಚ್:

ಅಹಮದಾಬಾದ್‌ನ ನರೇಂದ್ರ ಮೋದಿ ಕ್ರೀಡಾಂಗಣ ಈ ಬಾರಿ ಬೌಲರ್‌ಗಳಿಗೆ ಸಹಾಯ ಮಾಡುತ್ತಿದೆ. ಕಳೆದ ಪಂದ್ಯಗಳಲ್ಲಿ ಕಡಿಮೆ ಸ್ಕೋರ್‌ಗಳಾಗಿದ್ದವು. ಸ್ಪಿನ್ನರ್‌ಗಳಿಗೆ ಅನುವು ಮಾಡಿಕೊಟ್ಟಿದೆ. ಬಿರುಸಿನ ಬ್ಯಾಟಿಂಗ್ ಮಾಡಲಾಗುವುದಿಲ್ಲ. ಹೆಚ್ಚಿನ ಬೌನ್ಸ್, ಎರಡನೇ ಇನ್ನಿಂಗ್ಸ್‌ನಲ್ಲಿ ಇಬ್ಬನಿ ಕಾಟ ಇರಲಿದೆ.

ಪಂದ್ಯಗಳ ವಿವರ

ಹೈದರಾಬಾದ್-ಕೆಕೆಆರ್
ಯಾವಾಗ: ಭಾನುವಾರ, ಎಲ್ಲಿ: ಹೈದರಾಬಾದ್, ಸಮಯ: ಮಧ್ಯಾಹ್ನ 3:30

ಪಂಜಾಬ್-ಗುಜರಾತ್
ಯಾವಾಗ: ಭಾನುವಾರ, ಎಲ್ಲಿ: ಅಹಮದಾಬಾದ್, ಸಮಯ: ಸಂಜೆ 7:30, ಪ್ರಸಾರ: ಸ್ಟಾರ್ ಸ್ಪೋರ್ಟ್ಸ್, ಜಿಯೋ ಹಾಟ್‌ಸ್ಟಾರ್

226 ರನ್ ಪೇರಿಸಿದ ಕ್ಯಾಪಿಟಲ್ಸ್ | ಮತ್ತೆ ರಾಹುಲ್ ಅಬ್ಬರ | ಮಿಂಚಿದ ನಿಸ್ಸಂಕಾ

ಜೈಪುರದಲ್ಲಿ ದಿಲ್ಲಿ ಕ್ಯಾಪಿಟಲ್ಸ್ ದರ್ಬಾರ್

ಜೈಪುರ: ಕೆ.ಎಲ್. ರಾಹುಲ್ ಹಾಗೂ ನಿಸ್ಸಂಕಾ ಅವರ ಸ್ಫೋಟಕ ಬ್ಯಾಟಿಂಗ್ ನೆರವಿನೊಂದಿಗೆ 226 ರನ್ ಗುರಿ ಮುಟ್ಟಿರುವ ದಿಲ್ಲಿ ಕ್ಯಾಪಿಟಲ್ಸ್ ಸೋಲಿನ ಸರಪಳಿಯಿಂದ ಹೊರಬಂದಿತು.

ರಿಯಾನ್ ಪರಾಗ್ ಹಾಗೂ ಫೇರೆರಾ ಅವರ ಬ್ಯಾಟಿಂಗ್‌ನೊಂದಿಗೆ ದೊಡ್ಡ ಸ್ಕೋರ್ ನಿರ್ಮಿಸಿದ್ದ ರಾಜಸ್ಥಾನ ಸೋಲನುಭವಿಸಿದೆ. ಐಪಿಎಲ್ ಇತಿಹಾಸದಲ್ಲಿ ದಿಲ್ಲಿ ಪೇರಿಸಿದ ಅತಿ ಹೆಚ್ಚು ಮೊತ್ತ ಇದಾಗಿದೆ. ಟಾಸ್ ಗೆದ್ದ ರಾಜಸ್ಥಾನ ಬ್ಯಾಟಿಂಗ್ ಗಿಳಿಯಿತು. ರಿಯಾನ್ ಪರಾಗ್(90; 50ಎ, 8ಬೌ, 5ಸಿ), ಫರೇರಾ(47; 14ಎ, 2 ಬೌ, 6ಸಿ) ಅವರ ಆಸರೆ ಪಡೆದು 20 ಓವರ್‌ಗಳಲ್ಲಿ 6 ವಿಕೆಟ್ ನಷ್ಟಕ್ಕೆ 225 ರನ್ ಗಳಿಸಿತು. ದಿಲ್ಲಿ ಪರ ಮಿಚೆಲ್ ಸ್ಟಾರ್ಕ್ (4-0-40-3) ಮಿಂಚಿದರು. ಗುರಿ ಬೆನ್ನತ್ತಿದ ಕ್ಯಾಪಿಟಲ್ಸ್ ಕೆ.ಎಲ್. ರಾಹುಲ್(75; 40ಎ, 6ಬೌ, 5ಸಿ), ಪಾಥುಮ್ ನಿಸ್ಸಂಕಾ (62; 33ಎ, 6ಬೌ, 3ಸಿ) ಅವರ ಅಬ್ಬರದ ಬ್ಯಾಟಿಂಗ್‌ನೊಂದಿಗೆ 19.1 ಓವರ್‌ಗಳಲ್ಲಿ ಗುರಿ ಮುಟ್ಟಿತು. ನಿತೀಶ್ ರಾಣಾ ಕೂಡ ಮಿಂಚಿದರು.

ಕ್ಯಾಪಿಟಲ್ಸ್ ಕಂಬ್ಯಾಕ್: ದಿಲ್ಲಿ ಕ್ಯಾಪಿಟಲ್ಸ್ ದೊಡ್ಡ ಸ್ಕೋರ್ ನಿರ್ಮಿಸಿದ್ದರೂ ಪಂಜಾಬ್ ವಿರುದ್ಧ ಸೋತಿತ್ತು. ಮುಂದಿನ ಪಂದ್ಯದಲ್ಲಿ ಭಾರೀ ಬ್ಯಾಟಿಂಗ್ ವೈಫಲ್ಯದಿಂದಾಗಿ 75 ರನ್ ಮಾತ್ರಕ್ಕೆ ಪತಕಗೊಂಡಿತ್ತು. ರಾಜಸ್ಥಾನ ವಿರುದ್ಧ ಮತ್ತೆ ಪುಟಿದೆದ್ದಿದೆ. ಗುರಿ ಬೆನ್ನತ್ತುವಾಗ ಕೆ.ಎಲ್. ರಾಹುಲ್ ಅಬ್ಬರ ಶುರುವಾಯಿತು. ಅವರಿಗೆ ಪಾಥುಮ್ ನಿಸ್ಸಂಕಾ ಸಾಥ್ ಕೊಟ್ಟರು. ನಿಸ್ಸಂಕಾ ವಿಕೆಟ್ ಬಿದ್ದಾಗ ರಾಹುಲ್ ಜೊತೆಗೆ ನಿತೀಶ್ ನಿಂತರು. ಒಟ್ಟಿನಲ್ಲಿ ರಾಹುಲ್ ಪಂದ್ಯದ ಹೀರೋ. ನಿಸ್ಸಂಕಾ ಗೆಲುವಿನಲ್ಲಿ ಮಿಂಚಿದರು. ಇತ್ತ ಮೊದಲ ಇನ್ನಿಂಗ್ಸ್‌ನಲ್ಲಿ ರಿಯಾನ್ ಪರಾಗ್ ಉತ್ತಮ ಬ್ಯಾಟಿಂಗ್ ಮಾಡಿದರು. ಕುಸಿದ ಆರ್‌ಆರ್‌ಗೆ ಆಸರೆಯಾದ ಅವರು, 90 ರನ್ ಗಳಿಸಿ ಹೋರಾಡಿದರು. ಮೂರನೇ ಕ್ರಮಾಂಕದಲ್ಲಿ ಬಂದಿದ್ದ ಧ್ರುವ್ ಜುರೇಲ್ 42 ರನ್ ಗಳಿಸಿದರು. ಕೊನೆಯಲ್ಲಿ ಫರೇರಾ ಅಬ್ಬರದೊಂದಿಗೆ ದಿಲ್ಲಿ ದೊಡ್ಡ ಸ್ಕೋರ್ ನಿರ್ಮಿಸಿತು.


ದಿಲ್ಲಿ ಮೇಲುಗೈ: ರಾಜಸ್ಥಾನ ಪವರ್‌ಪ್ಲೇನಲ್ಲಿ 56/2 ಗಳಿಸಿದರೆ, ದಿಲ್ಲಿ 70 ರನ್ ಗಳಿಸಿತ್ತು. ಮಧ್ಯಮ ಓವರ್‌ಗಳಲ್ಲಿ ರಿಯಾನ್ ಆಸರೆ ಪಡೆದ ರಾಜಸ್ಥಾನ 106 ರನ್ ಗಳಿಸಿತ್ತು. ಇತ್ತ ದಿಲ್ಲಿ ಒತ್ತಡ ರಹಿತ ಬ್ಯಾಟಿಂಗ್ ಮತ್ತು ರಾಹುಲ್ ಅವರ ವಿಸ್ಮಯದೊಂದಿಗೆ 114/3 ಗಳಿಸಿತು. ಡೆತ್ ಓವರ್‌ನಲ್ಲಿ ಫರೇರಾ ಆರ್ಭಟದೊಂದಿಗೆ ರಾಜಸ್ಥಾನ 63 ರನ್ ಗಳಿಸಿತು. ದಿಲ್ಲಿ 42 ರನ್ ಮಾತ್ರವೇ ಗಳಿಸಬೇಕಿತ್ತು. ರಾಹುಲ್ ಆಟದ ನಂತರ ಸ್ಟಬ್ಸ್, ಅಷುತೋಷ್ ಮತ್ತು ನಿತೀಶ್ ಮಿಂಚಿದ ನಂತರ ದಿಲ್ಲಿ ಡೆತ್ ಓವರ್ ಮುಕ್ತಾಯಕ್ಕೂ ಮುನ್ನವೇ ಪಂದ್ಯ ಗೆದ್ದಿತು. ಮುಂದಿನ ಪಂದ್ಯದಲ್ಲಿ ದಿಲ್ಲಿ, ಚೆನ್ನೈ ತಂಡವನ್ನು, ರಾಜಸ್ಥಾನ ಲಖನೌ ತಂಡವನ್ನು ಎದುರಿಸಲಿದೆ.

ಸಂಕ್ಷಿಪ್ತ ಸ್ಕೋರ್

ರಾಜಸ್ಥಾನ 20 ಓವರ್‌ಗಳಲ್ಲಿ 225/6: ರಿಯಾನ್ 90, ಫರೇರಾ 42★; ಸ್ಟಾರ್ಕ್ 40/3
ದಿಲ್ಲಿ 19.1 ಓವರ್‌ಗಳಲ್ಲಿ 226/3: ರಾಹುಲ್ 75, ನಿಸ್ಸಂಕಾ 62; ಜಡೇಜಾ 33/1

ಪದಬಂಧ 5972

» ರಾಜಾ ಸಂಗಮೇಶ ಹಿರೇಮಠ



ಎಡದಿಂದ ಬಲಕ್ಕೆ
1.ಹೊಳೆ ಮತ್ತು ಸಮುದ್ರ ಸೇರಿ (5)
3.ಮಾರನಲ್ಲಿ ತಿರುಗಿ ಕುಳಿತಿದ್ದಾನೆ (3)
4.ವಿಶಾಲತೆ ಸೂಚಿಸುವ ಸಮುದ್ರ (3)
6.ಮನುಷ್ಯರನ್ನು ತಿನ್ನುವ ಪ್ರಾಣಿ (5)
7.ಕಳೆದುಹೋದ ಸಮಯವಿದು (4)
10.ಸುತನ ನಡುವೆ ಚೆನ್ನಾಗಿ ತಯಾರಾದದ್ದಿದೆ (4)
12.ಭಾರ-ಗಾಂಭೀರ್ಯದ ಸಮಾನಪದ (3)
13.ಕನಿಕರವಿಲ್ಲಿ ತಿರುಗಿ ಮೂಡಿದೆ (3)
15.ತಪನವಲ್ಲ-ಕೀಳುಮಟ್ಟಕ್ಕಿಳಿಯುವುದು (3)
16.ಕಣ್ಣನ್ನೆ ಕಿವಿಯಾಗುಳ್ಳ ಹಾವು (5)

ಮೇಲಿನಿಂದ ಕೆಳಕ್ಕೆ
1.ಗೌರವಪೂರ್ವಕವಾಗಿ ಬಾಗು (3)
2.ಬಟ್ಟೆ ಸ್ವಚ್ಛಗೊಳಿಸುವವನು (3)
3.ಹೊಸತು-ಬಣ್ಣ ಸೇರಿ ಸಭಾಮಂಟಪವಾಯ್ತು (4)
5.ಅಪಮಾನಿಸು-ತಿರಸ್ಕರಿಸು (4)
8.ಅಲ್ಲಿಯೇ ಜಾಗ ಭದ್ರಪಡಿಸಿಕೊ (4)
9.ಪೇಲವವಾಗಿಲ್ಲದ ರಾಮಸುತ (2)
10.ಮಾತನ್ನು ಆಡುತ್ತಿರುವುದು ಈ ದೇಹದಿಂದ (2)
11.ಹನುಮಂತನು ಸಹನೆಯಿಂದ ನೀಡಿದ ಒಪ್ಪಿಗೆ (4)
14.ಅಂತರಂಗ-ಚಿತ್ತವಿದು (2)
15.ಸಂಸ್ಥೆ ತದಲ್ಲಿ ಎಲೆ (2)

5971 ಉತ್ತರ

ಎಡದಿಂದ ಬಲಕ್ಕೆ:
2.ಕವನ 5.ರಕ್ಕಸ 6.ವರದ 7.ಅಂಕ 8.ಗುಣ 10.ಸೆಳೆತ 11.ತಾತ್ವಿಕ 13.ತಕರಾರು 15.ಲಾಭಹಾನಿ 17.ರುಧಿರ

ಮೇಲಿನಿಂದ ಕೆಳಕ್ಕೆ:
1.ಚರಕ 2.ಕನಕನ 3.ನವನೀತ 4.ಅಂದಣ 7.ಅಂಕಗಣಿತ 9.ಗುಲಾಬದಾನಿ 11.ತಾರುಮಾರು 12.ಕಲಾಕಾರ 14.ಕಲಿಕೆ 16.ಹಾಲಕ್ಕಿ

ಗ್ಯಾಸ್ ಸಿಲಿಂಡರ್ ದರ ಏರಿಕೆ | ಹೊಟೆಲ್‌ಗಳಲ್ಲಿ ಬೇಕಾಬಿಟ್ಟಿ ದರ ಏರಿಕೆ

ಸಾಮಾನ್ಯ ಗ್ರಾಹಕನಿಗೆ ಮತ್ತೆ ಏಟು!



ಮಂಗಳೂರು: ವಾಣಿಜ್ಯ ಬಳಕೆಯ ಎಲ್‌ಪಿಜಿ ಸಿಲಿಂಡರ್ ದರ ಮತ್ತೆ ಏರಿಕೆಯಾಗಿದೆ. ಬರೋಬ್ಬರಿ 993 ರೂ.ಗೆ ಹೆಚ್ಚಳವಾಗಿದ್ದು, ಇದರ ನೇರ ಹೊಡೆತ ದುಡಿದು ತಿನ್ನುವ ವರ್ಗದ ಮೇಲಾಗಿದೆ. ಸಣ್ಣಪುಟ್ಟ ಕ್ಯಾಂಟೀನ್, ಹೊಟೇಲ್‌ಗಳನ್ನೇ ನೆಚ್ಚಿಕೊಂಡಿದ್ದ ಕಾರ್ಮಿಕರು ತಿಂಡಿ ತಿನಿಸುಗಳ ಮೇಲಿನ ದರ ದುಪ್ಪಟ್ಟಾಗಿರುವುದರಿಂದ ಬೆಚ್ಚಿಬಿದ್ದಿದ್ದಾರೆ.

60-70ರ ಆಸುಪಾಸಿನಲ್ಲಿದ್ದ ಸಾಮಾನ್ಯ ಹೊಟೇಲೊಂದರ ಊಟದ ದರವೂ ಈಗ ನೂರರ ಹತ್ತಿರ ಬಂದಿದೆ. ಆದರಲ್ಲೂ ಬಹುತೇಕ ಐಟಂಗಳು ಮಾಯವಾಗಿವೆ. ದೊಡ್ಡ ಹೊಟೇಲ್‌ಗಳ ಕಥೆಯನ್ನಂತೂ ಕೇಳುವುದೇ ಬೇಡ. ಅವು, ಬೇಕು ಬೇಕಾದಂತೆ ದರ ಏರಿಸಿಕೊಂಡರೂ ಅಲ್ಲಿ ಯಾರೂ ಪ್ರಶ್ನಿಸುವವರಿಲ್ಲ; ಬರುವ ಹೈ ಫೈ ಗಿರಾಕಿಗಳು ಬಿಲ್ ಬಗ್ಗೆ ಕ್ಯಾರೇ ಅನ್ನುವುದಿಲ್ಲ!. ಆದರೆ ಕಾರ್ಮಿಕರು, ಜನಸಾಮಾನ್ಯರಿಗೆ ಹತ್ತಿರವಾಗಿದ್ದ ಕ್ಯಾಂಟೀನ್, ಸಣ್ಣ ಹೋಟೆಲ್‌ಗಳಲ್ಲೂ ಈಗ ತಿಂಡಿ ತಿನಿಸುಗಳ ದರ ಏರಿಕೆ ಕಂಡಿರುವುದು ಕಾರ್ಮಿಕರಿಗೆ ನುಂಗಲಾರದ ತುತ್ತಾಗಿದೆ.

ದಿನಗೂಲಿ, ವೇತನ ಏರಿಕೆಯಾಗಿಲ್ಲ ಸ್ವಾಮಿ!

ಮಂಗಳೂರಿನಲ್ಲಿ ಕೂಲಿ ಕೆಲಸಕ್ಕೆಂದು ಬಂದಿದ್ದೇವೆ. ಹೆಚ್ಚಾಗಿ ಕ್ಯಾಂಟೀನ್, ತಳ್ಳುಗಾಡಿಗಳಲ್ಲಿನ ಊಟ, ತಿಂಡಿ ತಿನಿಸುಗಳನ್ನೇ ನಂಬಿ ದಿನದೂಡುತ್ತಿದ್ದೆವು. ಇದೀಗ ಎಲ್ಲಾ ತಿಂಡಿ ತಿನಿಸುಗಳ ದರ ಏರಿಕೆಯಾಗಿದೆ. ಆದರೆ ನಮ್ಮ ದಿನಗೂಲಿ ಮಾತ್ರ ಏರಿಕೆಯಾಗಿಲ್ಲ ಸ್ವಾಮಿ'. ಹೀಗೆ ಆದರೆ ಕಷ್ಟ, ನಾವು ಮತ್ತೆ ನಮ್ಮೂರಿಗೆ ಹೊರಡುವ ಸಿದ್ಧತೆಯಲ್ಲಿದ್ದೇವೆ ಎನ್ನುತ್ತಾರೆ ಬಾಗಲಕೋಟೆಯ ಕಾರ್ಮಿಕರೊಬ್ಬರು.

ಜನಸಾಮಾನ್ಯನಿಗೆ ನೇರ ಹೊಡೆತ

ದರ ಏರಿಕೆ ಭಾರೀ ಹೊಡೆತ ನೀಡುತ್ತಿರುವುದು ಜನಸಾಮಾನ್ಯನಿಗೆ. ಈ ಬಾರಿ ಎಲ್ಲಾ ಕಡೆಯಿಂದಲೂ ದರ ಏರಿಕೆಯ ಬಿಸಿಮುಟ್ಟಿದೆ. ಒಂದೆಡೆ ದಿನಬಳಕೆಯ ವಸ್ತುಗಳ ಬೆಲೆ, ಹಣ್ಣು, ತರಕಾರಿಗಳ ದರ ಸದ್ದಿಲ್ಲದೇ ಏರಿಕೆಯಾಗುತ್ತಿದೆ. ಉದಾಹರಣೆಗೆ ಕೇವಲ ಲಿಂಬೆಯೊಂದರ ಬೆಲೆಯೇ ರೂ.10ರಿಂದ 13 ರೂಪಾಯಿಗೆ ತಲುಪಿದೆ. ಮೊಟ್ಟೆಯೊಂದರ ದರ 7 ರೂಪಾಯಿಗೆ ತಲುಪಿದೆ.

ಆಟೋ ರಿಕ್ಷಾದಲ್ಲೂ ರೇಟ್ ವ್ಯತ್ಯಯ

ಇನ್ನು ಆಟೋ ಎಲ್‌ಪಿಜಿ ಕೊರತೆಯ ನೆಪದಲ್ಲಿ ಬಹುತೇಕ ಆಟೋ ಚಾಲಕರು ತಮ್ಮದೇ ರೇಟ್‌ಫಿಕ್ಸ್ ಮಾಡಿದ್ದಾರೆ. ಮಂಗಳೂರು ನಗರದಲ್ಲಿ ಕನಿಷ್ಠ ಆಟೋ ರಿಕ್ಷಾ ಬಾಡಿಗೆ ದರ 35 ರೂ ಇದ್ದರೂ ಹೆಚ್ಚುವರಿ ವಸೂಲಿ ಮಾಡುತ್ತಿರುವುದು ಎಲ್ಲೆಡೆ ಕಂಡುಬರುತ್ತಿದೆ. ಪ್ರಶ್ನಿಸಿದವರಿಗೆ ಎಲ್‌ಪಿಜಿ ದರ ಏರಿಕೆಯ ಉತ್ತರ ದೊರೆಯುತ್ತಿದೆ. ಎಲ್ಲಾ ಕಡೆಯಿಂದಲೂ ಹೊಡೆತ ಬೀಳುತ್ತಿರುವುದು ಜನಸಾಮಾನ್ಯರಿಗೆ ಎಂಬುದಂತೂ ಸ್ಪಷ್ಟ.

ಇಳಿಕೆಯಾಗುವುದು ಅನುಮಾನ

ಸದ್ಯ ಹೊಟೇಲ್‌ಗಳಲ್ಲಿ ತಿಂಡಿ ತಿನಿಸುಗಳ ದರ ವಿಪರೀತ ಏರಿಕೆಯಾಗಿದೆ. ಮುಂದೆ ಗ್ಯಾಸ್ ಸಮಸ್ಯೆ ಬಗೆಹರಿದು ದರದಲ್ಲಿ ವ್ಯತ್ಯಯವಾದರೂ ಹೋಟೆಲ್‌ಗಳ ತಿಂಡಿ, ತಿನಿಸುಗಳ ದರ ಇಳಿಕೆಯಾಗುವುದು ಅನುಮಾನ ಎಂದು ಜನತೆ ಆಡಿಕೊಳ್ಳುತ್ತಿದ್ದಾರೆ.

ಬೆಲೆ ಏರಿಕೆಯಿಂದ ತತ್ತರ

ಮಂಗಳೂರಿನ ಜನತೆಯಂತೂ ಬೆಲೆ ಏರಿಕೆಯಿಂದ ತತ್ತರಿಸಿಹೋಗಿದ್ದಾರೆ. ಇಲ್ಲಿನ ಕ್ಯಾಂಟೀನ್, ತಳ್ಳುಗಾಡಿ, ಹೋಟೆಲ್ ಎಲ್ಲೆಡೆಯೂ ತಿಂಡಿ ತಿನಿಸುಗಳ ಬೆಲೆ ಹೆಚ್ಚಳವಾಗಿದೆ. 35ಕ್ಕೆ ದೊರೆಯುತ್ತಿದ್ದ ಗಂಜಿ ಊಟ ಈಗ 45ರಿಂದ 50ಕ್ಕೆ ತಲುಪಿದೆ. 60 ರೂಪಾಯಿಯ ಊಟ ರೂ.75-80ಕ್ಕೆ ಏರಿಕೆಯಾಗಿದೆ.

ಜ್ಯೂಸ್ ದರವೂ ಹೆಚ್ಚಳ!

ನಗರದ ಹೊಟೇಲೊಂದರಲ್ಲಿ ವಾರದ ಹಿಂದೆ ಇದ್ದ ಎಳ್ಳು ಜ್ಯೂಸ್ ದರ ರೂ.40ರಿಂದ ಭರ್ತಿ 50ಕ್ಕೆ ಏರಿಕೆಯಾಗಿದೆ. ಗ್ಯಾಸ್ ದರ ಹೆಚ್ಚಳಕ್ಕೂ ಜ್ಯೂಸ್‌ದರ ಏರಿಕೆಗೂ ಎಲ್ಲಿಯ ಸಂಬಂಧ ? ಎಂದು ಗ್ರಾಹಕರು ಆಡಿಕೊಳ್ಳುತ್ತಿದ್ದಾರೆ. ಬಹುತೇಕ ಜ್ಯೂಸ್ ಅಂಗಡಿಗಳಲ್ಲಿ ಎಲ್ಲಾ ತರದ ಜ್ಯೂಸ್‌ಗಳ ದರ ಏರಿಕೆ ಕಂಡಿದೆ. ಎಳನೀರ ದರವೂ 75 ರೂಪಾಯಿವರೆಗೆ ತಲುಪಿದ್ದು, ಜನಸಾಮಾನ್ಯರು ಸಂಕಷ್ಟಕ್ಕೀಡಾಗುವಂತಾಗಿದೆ.



ಜೀರ್ಣೋದ್ಧಾರ ಗೊಂಡ ಪಡುಬಿದ್ರಿ ಶ್ರೀ ಮಹಾಲಿಂಗೇಶ್ವರ ಮಹಾಗಣಪತಿ ದೇವಸ್ಥಾನದಲ್ಲಿ ಬ್ರಹ್ಮ ಕುಂಭಾಭಿಷೇಕ ನೆರವೇರಿದ ಶ್ರೀ ಮಹಾಲಿಂಗೇಶ್ವರನ ರಥೋತ್ಸವವು ಸಾವಿರಾರು ಭಕ್ತಾದಿಗಳ ಪಾಲ್ಗೊಳ್ಳುವಿಕೆಯಲ್ಲಿ ಶನಿವಾರ ರಾತ್ರಿ ಜರಗಿತು.

ಖೋಟಾನೋಟು ಚಲಾವಣೆ ಯತ್ನ: ಇಬ್ಬರ ಸೆರೆ

ಬಂಟ್ವಾಳ: ತಾಲೂಕಿನ ಬಡಗಕಜೆಕ್ಕಾರು ಗ್ರಾಮದ ಪಾಂಡವರಕಲ್ಲು ಬಳಿಯ ಕೂಮಿನಡ್ಕ ಎಂಬಲ್ಲಿ 500 ರೂ. ಮುಖಬೆಲೆಯ ಖೋಟಾ ನೋಟು ಚಲಾವಣೆಗೆ ಯತ್ನಿಸಿರುವ ಪ್ರಕರಣವನ್ನು ಬೇಧಿಸಿರುವ ಪುಂಜಾಲಕಟ್ಟೆ ಪೊಲೀಸರು ಈ ಸಂಬಂಧ ಇಬ್ಬರನ್ನು ಬಂಧಿಸಿದ್ದು, ಓರ್ವ ಪರಾರಿಯಾಗಿದ್ದಾನೆ.

ಬಂಧಿತರನ್ನು ಮುಹಮ್ಮದ್ ಸಮೀರ್ (28) ಹಾಗೂ ಮಹಮ್ಮದ್ ಇರ್ಫಾನ್ (26) ಎಂದು ಹೆಸರಿಸಲಾಗಿದ್ದು, ರಶೀದ್ ಕುಂಡಡ್ಕ ಎಂಬಾತ ಸದ್ಯ ತಲೆ ಮರೆಸಿದ್ದಾನೆ.

ಆರೋಪಿಗಳಿಂದ ಕೃತ್ಯಕ್ಕೆ ಬಳಸಿದ ಶಿಫ್ಟ್ ಕಾರು, 2,38 ಲಕ್ಷ ರೂ. ಮೌಲ್ಯದ 500 ರೂ. ಮುಖಬೆಲೆಯ 5 ಖೋಟಾ ನೋಟುಗಳ ಕಟ್ಟು,3 ಮೊಬೈಲ್ ಫೋನ್‌ಗಳನ್ನು ಪೊಲೀಸರು ವಶಪಡಿಸಿದ್ದು, ಸೊತ್ತುಗಳ ಒಟ್ಟು ಮೌಲ್ಯ 7.96 ಲಕ್ಷರೂ.ಎಂದು ಅಂದಾಜಿಸಲಾಗಿದೆ.

ಆರೋಪಿತಗಳು ಅಕ್ರಮವಾಗಿ ಹಣ ಸಂಪಾದಿಸುವ ಉದ್ದೇಶದಿಂದ ಖೋಟಾ ನೋಟುಗಳನ್ನು ಚಲಾವಣೆ ಮಾಡಲು ಯತ್ನಿಸಿ ಪೊಲೀಸರ ಕೈಗೆ ಸಿಕ್ಕಿಬಿದ್ದಿದ್ದಾರೆ.

ಖಚಿತ ಮಾಹಿತಿಯ ಮೇರೆಗೆ ಪುಂಜಾಲಕಟ್ಟೆ ಪೊಲೀಸ್ ಠಾಣೆಯ ಪಿ.ಎಸ್ .ಐ.ರಾಜೇಶ್ ಕೆ.ಪಿ.ಮತ್ತವರ ಸಿಬ್ಬಂದಿಗಳು ಮೇ1 ರಂದು ಮದ್ಯಾಹ್ನ 3.30 ಗಂಟೆಯ ವೇಳೆಗೆ ಕಾರ್ಯಾಚರಣೆ ನಡೆಸಿ ಖೋಟಾ ನೋಟು ಚಲಾವಣಾ ಯತ್ನ ಜಾಲವನ್ನು ಪತ್ತೆ ಹಚ್ಚಿದ್ದಾರೆ.

ಈ ಬಗ್ಗೆ ಪುಂಜಾಲಕಟ್ಟೆ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದ್ದು, ಮುಂದಿನ ತನಿಖೆ ನಡೆಯುತ್ತಿದೆ.ತಲೆ ಮರೆಸಿರುವ ಆರೋಪಿಗಾಗಿ ಶೋಧ ಕಾರ್ಯ ಮುಂದುವರಿದಿದೆ.

- ಸೊತ್ತುಗಳ ಒಟ್ಟು ಮೌಲ್ಯ 7.96 ಲಕ್ಷರೂ.ಎಂದು ಅಂದಾಜು
- ಓರ್ವ ಪರಾರಿ

Hosadigantha Kannada Daily Printed & Published by P.S.Prakash on behalf of Jnanabharathi Prakashana Limited. published at : 2nd Floor, Micasa, Near KSRTC Bus stand, Bejai, Mangaluru - 575 004, Phone : 2497091 to 2497093. Fax : 2497098. RNI:29813/78, Printed at Digantha Mudrana Ltd., D/No.5-184-185, Industrial Estate, Yeyyadi, Mangaluru - 575 008. . Editor: P.S.Prakash, Group Editor: Vinayak S. Bhat, Resident Editor : Prakash Ilanthila.

ಹೊಸ ದಿಗಂತ
ರಾಷ್ಟ್ರ ಜಾಗೃತಿಯ ದೈನಿಕ
ದಕ್ಷಿಣ ಕನ್ನಡ | ಉಡುಪಿ | ಕೊಡಗು | ಕಾಸರಗೋಡು

ಇಂದಿನ ಹವಾಮಾನ

ದಕ್ಷಿಣ ಕನ್ನಡ 36^0 27^0 | ಉಡುಪಿ 35^0 28^0

ಜಿಲ್ಲಾಧಿಕಾರಿ, ಜಿಲ್ಲಾ ಪೊಲೀಸ್ ಮುಖ್ಯಸ್ಥರಿಂದ ಕಾಸರಗೋಡು ಮತ ಎಣಿಕೆ ಕೇಂದ್ರಗಳ ಭದ್ರತೆ ಪರಿಶೀಲನೆ






ಕೇರಳ ವಿಧಾನಸಭಾ ಚುನಾವಣೆಗೆ ಸಂಬಂಧಿಸಿದಂತೆ ಮತ ಎಣಿಕೆ ಕೇಂದ್ರಗಳಿಗೆ ಜಿಲ್ಲಾಧಿಕಾರಿ ಅರ್ಜುನ್ ಪಾಂಡ್ಯನ್, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ವಿಜಯ್ ಭರತ್ ರೆಡ್ಡಿ ಶನಿವಾರ ಭೇಟಿ ನೀಡಿ ಸಿದ್ಧತೆಗಳು ಹಾಗೂ ಭದ್ರತೆಗಳನ್ನು ಪರಿಶೀಲಿಸಿದರು. ಕಾಸರಗೋಡಿನ ಚುನಾವಣಾಧಿಕಾರಿಗಳಾದ ಲಿಪು ಎಸ್.ಲಾರೆನ್ಸ್, ವಿ.ಪಿ.ರಘುಮಣಿ, ಉಪ ಚುನಾವಣಾಧಿಕಾರಿಗಳು ಈ ಸಂದರ್ಭ ಜೊತೆಗಿದ್ದರು.

ಶಾಲಾ ಕಟ್ಟಡಗಳಿಗೆ ಫಿಟ್‌ನೆಸ್ ಸರ್ಟಿಫಿಕೇಟ್

ಹೆಡ್‌ಮಾಸ್ಟ್ರ ಹೈರಾಣ

ಸುಸ್ತಾಗಿಸಿದೆ ಸ್ಥಳೀಯಾಡಳಿತ ನಿಬಂಧನೆ

ಕಾಸರಗೋಡು: ಸಾರ್ವಜನಿಕ ವಲಯದ ಶಾಲಾ ಕಟ್ಟಡ ಸದೃಢತೆ ಖಾತರಿಪಡಿಸುವ ಫಿಟ್‌ನೆಸ್ ಸರ್ಟಿಫಿಕೇಟ್‌ಗಾಗಿ ಈಗ ಸ್ಥಳೀಯಾಡಳಿತ ಸಂಸ್ಥೆಗಳು ಒಡ್ಡುತ್ತಿರುವ ನಿಬಂಧನೆಗಳು ಶಾಲಾ ಮುಖ್ಯೋಪಾಧ್ಯಾಯರುಗಳನ್ನು ತೀವ್ರ ಸಂಕಷ್ಟದಲ್ಲಿ ಸಿಲುಕಿಸುತ್ತಿವೆ.

ಶಾಲೆಗಳಿಗೆ ನಿಬಂಧನೆಯನ್ನು ಹೇರಲಾಗಿದೆ

2026ನೇ ಶೈಕ್ಷಣಿಕ ವರ್ಷ ಆರಂಭಗೊಳ್ಳುವ ಮೊದಲೇ ಶಾಲೆ ಸದೃಢತೆ ಖಾತರಿಯ ಫಿಟ್‌ನೆಸ್ ಸರ್ಟಿಫಿಕೇಟ್ ನೀಡಬೇಕೆಂಬ ನಿಬಂಧನೆ ಹೇರಲಾಗಿದೆ. »ಪುಟ 3

ಪ್ರಾತಿನಿಧಿಕ ಚಿತ್ರ.



ಈಗ ನಿತ್ಯ ಅತ್ತಿತ್ತ ಅಲೆದಾಟ

ಏನೇನಿದೆ ನಿಯಮಗಳು?

ವಿದ್ಯುತ್, ಆರೋಗ್ಯ, ಸಾರಿಗೆ, ಅರಣ್ಯ ಇಲಾಖೆ ಮತ್ತು ಅಗ್ನಿಶಾಮಕ ದಳ ಶಾಲೆಗೆ ಆಗಮಿಸಿ ಶಾಲಾ ಕಟ್ಟಡ ಸ್ಥಿತಿಗತಿಗಳನ್ನು ಪೂರ್ಣ ಪರಿಶೀಲಿಸಿದ ಬಳಿಕ ಈ ಐದು ಇಲಾಖೆಗಳಿಂದ ಆಯಾ ಶಾಲಾ ಮುಖ್ಯೋಪಾಧ್ಯಾಯರು ಸರ್ಟಿಫಿಕೇಟ್ ಪಡೆದುಕೊಳ್ಳಬೇಕೆಂಬ ನಿರ್ದೇಶನವನ್ನು ರಾಜ್ಯ ಸರಕಾರ ನೀಡಿದೆ.

ಮಂಗಳೂರಿನತ್ತ ಈಗ ರಾಜ್ಯದ ಚಿತ್ತ

ಕುಡ್ಲ ಬೀಚ್‌ಗಳಲ್ಲಿ ಪ್ರವಾಸಿಗರ ಹೆದ್ದೆರೆ

ಸಾಥ್ ನೀಡಿದ ಸಾಲುಸಾಲು ರಜೆ

ಸುರತ್ಕಲ್: ಶೈಕ್ಷಣಿಕ ರಜೆ ಹಾಗೂ ಸಾಲು ಸಾಲು ಸರ್ಕಾರಿ ರಜೆಗಳ ಹಿನ್ನಲೆ ಪಣಂಬೂರು, ತಣ್ಣೀರುಬಾವಿಯ ಬೀಚ್‌ಗಳಲ್ಲಿ ಪ್ರವಾಸಿಗರ 'ಹೆದ್ದೆರೆ'ಯೇ ಕಂಡುಬಂದಿದೆ!

ರಾಜ್ಯದ ವಿವಿಧ ಭಾಗಗಳಿಂದ ಪ್ರವಾಸಿಗರು ಕುಟುಂಬ ಸಮೇತ ಆಗಮಿಸಿ, ಬಿರುಬಿಸಿಲಿನ ನಡುವೆಯೂ ಸಮುದ್ರ ತೀರದಲ್ಲಿ ವಿಶ್ರಾಂತಿ ಪಡೆಯುತ್ತಾ, ಅಲೆಗಳ ಜೊತೆಯಲ್ಲಿ ಆಟವಾಡಿ ಸಂತಸ ವ್ಯಕ್ತಪಡಿಸಿದರು. »ಪುಟ 3



ಭಾವನೆಗಳಿಗೆ ಬೆಲೆ ನೀಡಿದ ಆಡಳಿತ

ನೆಲದ ಮೇಲೆ ಇದ್ದ ಕನ್ನಡ ಫಲಕ ತೆರವು

ಭಾಷಾ ಪ್ರೇಮಿಗಳು ಖುಷ್



ಕುಂದಾಪುರ: ಗಂಗೊಳ್ಳಿ ಪ್ರಾಥಮಿಕ ಆರೋಗ್ಯ ಕೇಂದ್ರದಲ್ಲಿ ನೆಲದ ಮೇಲೆ ಅಂಟಿಸಲಾಗಿದ್ದ ಕನ್ನಡ ಅಕ್ಷರಗಳ ಸೂಚನಾ ಫಲಕ ತೆರವಾಗಿದೆ.

ಆರೋಗ್ಯ ಕೇಂದ್ರದಲ್ಲಿ ನಡೆದಾಡುವ ನೆಲದ ಮೇಲೆ ಕನ್ನಡ ಅಕ್ಷರದಲ್ಲಿ ಬರೆದ ಸೂಚನಾ ಫಲಕ ಅಂಟಿಸಲಾಗಿತ್ತು. ಇದು ಸಾರ್ವಜನಿಕ ವಲಯದ ತೀವ್ರ ಆಕ್ರೋಶಕ್ಕೆ ಕಾರಣವಾಗಿತ್ತು.

ಎಚ್ಚೆತ್ತುಕೊಂಡ ಆಡಳಿತ

ಗೋಡೆ ಮೇಲೆ ಅಂಟಿಸಬೇಕಾಗಿದ್ದ ಸೂಚನಾ ಫಲಕಗಳನ್ನು ನಡೆದಾಡುವ ನೆಲದ ಮೇಲೆ ಅಂಟಿಸಿರುವುದು ಕನ್ನಡ ಭಾಷಾ ಪ್ರೇಮಿಗಳ ಆಕ್ರೋಶಕ್ಕೆ ತುತ್ತಾಗಿತ್ತು. ನಡೆದಾಡುವ ನೆಲದ ಮೇಲೆ ಎಲ್ಲಾ ಕಡೆ ಕನ್ನಡ ಅಕ್ಷರದಲ್ಲಿ ಬರೆದ ಸೂಚನಾ ಫಲಕಗಳನ್ನು ಅಂಟಿಸಿರುವುದು ಭಾರೀ ವಿವಾದಕ್ಕೆ ಕಾರಣವಾಗಿತ್ತು. ಕೂಡಲೇ ಈ ಬಗ್ಗೆ ಕ್ರಮಕೈಗೊಳ್ಳುವಂತೆ ಸಾರ್ವಜನಿಕರು, ಕನ್ನಡ ಪ್ರೇಮಿಗಳು ಆಗ್ರಹಿಸಿದ್ದರು. ಇದರಿಂದ ಕೂಡಲೇ ಎಚ್ಚೆತ್ತುಕೊಂಡ ಆಸ್ಪತ್ರೆಯ ವೈದ್ಯಾಧಿಕಾರಿಗಳು ನೆಲದ ಮೇಲೆ ಕನ್ನಡ ಅಕ್ಷರಗಳಲ್ಲಿ ಬರೆದು ಅಂಟಿಸಲಾದ ಸೂಚನಾ ಫಲಕಗಳನ್ನು ತೆರವುಗೊಳಿಸಿದ್ದಾರೆ.

ಹೊಸದಿಗಂತ ವರದಿ ಮಾಡಿತ್ತು

ಹೊಸದಿಗಂತ ಪತ್ರಿಕೆ ಈ ಬಗ್ಗೆ ಸಚಿತ್ರ ವರದಿ ಪ್ರಕಟಿಸಿ ಇಲಾಖಾಧಿಕಾರಿಗಳ ಗಮನ ಸೆಳೆಯುವ ಕಾರ್ಯ ನಡೆಸಿತ್ತು.

ಪ್ರೇಕ್ಷಕರ ಮನರಂಜಿಸಿತು 'ನೃತ್ಯ' ಸಂಭ್ರಮ



ನಿಡ್ವಾಳ ಶ್ರೀ ಮಹಾವಿಷ್ಣು ದೇವಸ್ಥಾನದ ಪುನಃಪ್ರತಿಷ್ಠಾಪ್ಟಬಂಧ ಬ್ರಹ್ಮಕಲಶೋತ್ಸವದ ಅಂಗವಾಗಿ ನೃತ್ಯ ಸಂಭ್ರಮವು ನೆರವೇರಿತು.

ಹರೇಕಳ ಶಾಲೆಯ ಬಳಿ ಕಾಡುಕೋಣ?

ಪ್ರಾತಿನಿಧಿಕ ಚಿತ್ರ.



ಕೋಣಾಜೆ: ಹರೇಕಳ ಶಾಲೆಯ ಬಳಿ ತಡರಾತ್ರಿ ವೇಳೆ ಕಾಡುಕೋಣ ಪತ್ತೆಯಾಗಿದ್ದು, ಸ್ಥಳೀಯರಲ್ಲಿ ಆತಂಕವನ್ನು ಸೃಷ್ಟಿ ಮಾಡಿದೆ.

ಹರೇಕಳ ಶಾಲಾ ಸಮೀಪ ಕೆಲವು ಮಂದಿ ಸ್ಥಳೀಯರು ನಿಂತಿದ್ದಾಗ ಏಕಾಏಕಿ ಬೃಹತ್ ಗಾತ್ರದ ಕಾಡು ಕೋಣ ಪ್ರತ್ಯಕ್ಷವಾಗಿದೆ ಎನ್ನಲಾಗಿದೆ. ತಕ್ಷಣವೇ ಕೋಣವನ್ನು ಕಂಡ ಸಾರ್ವಜನಿಕರು ಸ್ಥಳದಿಂದ ಪರಾರಿಯಾಗಿದ್ದಾರೆ. ಇಲ್ಲಿ ಕಾಡುಕೋಣ ಇರುವುದನ್ನು ಕಾರಿನಲ್ಲಿ ತೆರಳುತ್ತಿದ್ದ ತಂಡವೊಂದು ಮೊಬೈಲ್ ಮುಖೇನ ದೃಶ್ಯ ಸೆರೆ ಹಿಡಿದಿದೆ. ಈ ಬಗ್ಗೆ ಅರಣ್ಯ ಇಲಾಖೆಯ ಆರ್‌ಎಫ್‌ಒ ಅವರಿಗೆ ಮಾಹಿತಿ ನೀಡಲಾಗಿದ್ದು ಅರಣ್ಯ ಇಲಾಖೆ ಸಿಬ್ಬಂದಿಗಳು ಸ್ಥಳಕ್ಕೆ ತೆರಳಿ ಪರಿಶೀಲನೆ ನಡೆಸಿದ್ದು, ಬಳಿಕ ಹರೇಕಳ ಪರಿಸರದಲ್ಲಿ ಎಲ್ಲಿಯೂ ಕಾಣಸಿಕ್ಕಿಲ್ಲ ಎಂದು ತಿಳಿದುಬಂದಿದೆ.

ಪಡುಬಿದ್ರಿ, ದೇವಸ್ಥಾನದಲ್ಲಿ ಕಂಡಿತು ಅದ್ದೂರಿಯ ಮಹಾರಥೋತ್ಸವ ಸಂಭ್ರಮ 6

ಸುತ್ತಮುತ್ತ

ನಿರೀಕ್ಷಣಾ ಮಂದಿರ ಶೀಘ್ರ ಪೂರ್ಣಕ್ಕೆ ಶಾಸಕ ಕೋಟ್ಯಾನ್ ಸೂಚನೆ



ಮುಲ್ಕಿ: ಶಾಸಕ ಉಮಾನಾಥ ಕೋಟ್ಯಾನ್ ರವರು ಶನಿವಾರ ರಾಷ್ಟ್ರೀಯ ಹೆದ್ದಾರಿ ಕಾರ್ನಾಡ್ ಬೈಪಾಸ್ ಬಳಿ ಸುಮಾರು ಎರಡು ಕೋಟಿ ವೆಚ್ಚದಲ್ಲಿ ನೂತನವಾಗಿ ನಿರ್ಮಾಣ ಹಂತದಲ್ಲಿರುವ ಲೋಕೋಪಯೋಗಿ ಇಲಾಖೆಯ ನಿರೀಕ್ಷಣಾ ಮಂದಿರಕ್ಕೆ ಭೇಟಿ ನೀಡಿ, ಕಾಮಗಾರಿಯ ಪ್ರಗತಿಯನ್ನು ವೀಕ್ಷಿಸಿದರು. ಈ ಸಂದರ್ಭ ಲೋಕೋಪಯೋಗಿ ಇಲಾಖೆಯ ಇಂಜಿನಿಯರ್ ವಸಂತ್ ರಾಜ್ ಕಾಮಗಾರಿ ಬಗ್ಗೆ ಶಾಸಕರಿಗೆ ಮಾಹಿತಿ ನೀಡಿ ನಿರೀಕ್ಷಣಾ ಮಂದಿರದ ಕಾಮಗಾರಿಗಳು ಮುಕ್ತಾಯದ ಹಂತದಲ್ಲಿದ್ದೆ. ಕಟ್ಟಡಕ್ಕೆ ನೂತನ ಪೀಠೋಪಕರಣಗಳ ಕಾಮಗಾರಿ ಟೆಂಡರ್ ಕರೆಯಲಾಗಿದ್ದು ತಾಂತ್ರಿಕ ಪರಿಶೀಲನೆಯಲ್ಲಿದೆ, ಅನುಮೋದನೆ ದೊರೆತ ಕೂಡಲೇ ಕಾಮಗಾರಿ ನಡೆಸಲಾಗುವುದು ಎಂದರು. ಶಾಸಕ ಉಮಾನಾಥ ಕೋಟ್ಯಾನ್ ಮಾತನಾಡಿ, ಇಂಜಿನಿಯರ್ ಹಾಗೂ ಗುತ್ತಿಗೆದಾರರಿಗೆ ಆದಷ್ಟು ಬೇಗ ನಿರೀಕ್ಷಣಾ ಮಂದಿರದ ಉಳಿದ ಕಾಮಗಾರಿಗಳನ್ನು ನಡೆಸುವಂತೆ ಸೂಚನೆ ನೀಡಲಾಗಿದೆ. ರಾಷ್ಟ್ರೀಯ ಹೆದ್ದಾರಿಯಿಂದ ನಿರೀಕ್ಷಣಾ ಮಂದಿರಕ್ಕೆ ಸಂಪರ್ಕ ರಸ್ತೆ ,ಹಾಗೂ ಕಟ್ಟಡದ ಎದುರು ಭಾಗದಲ್ಲಿ ಕಾಂಕ್ರೀಟ್ ಹಾಕುವ ಮೂಲಕ ಸುಸಜ್ಜಿತವಾಗಿ ಕಾಮಗಾರಿ ನಡೆಸಲು ಸೂಚನೆ ನೀಡಿದ್ದೇನೆ ಎಂದರು. ಜಿಲ್ಲಾ ಬಿಜೆಪಿ ಉಪಾಧ್ಯಕ್ಷ ಸುನಿಲ್ ಆಳ್ವ,ಮುಲ್ಕಿ ನಗರ ಪಂಚಾಯತ್ ಮಾಜೀ ಅಧ್ಯಕ್ಷ ಸತೀಶ್ ಅಂಚನ್, ಮಾಜೀ ಸದಸ್ಯ ಶೈಲೇಶ್ ಕುಮಾರ್, ಬಿಜೆಪಿ ನಾಯಕರಾದ ರಂಗನಾಥ ಶೆಟ್ಟಿ ಅಶೋಕ್ ಜನನಿ ಗುತ್ತಿಗೆದಾರ ಲಾಯ್ಡ್ ಮತ್ತಿತರರು ಉಪಸ್ಥಿತರಿದ್ದರು

ಕುದನೆ ವಾಸುಕೀವನ ಕ್ಷೇತ್ರದಲ್ಲಿ ಶ್ರೀ ನರಸಿಂಹ ಜಯಂತಿ

ಬಂಟ್ವಾಳ: ಇಲ್ಲಿನ ಕುದನೆ ವಾಸುಕೀವನ ಶ್ರೀ ಲಕ್ಷ್ಮೀನರಸಿಂಹ ದೇವಸ್ಥಾನದಲ್ಲಿ ಶ್ರೀ ನರಸಿಂಹ ಜಯಂತಿ ಸಂಭ್ರಮದಿಂದ ನೆರವೇರಿತು. ಬೆಳಿಗ್ಗೆ ಶ್ರೀ ನರಸಿಂಹ ಮಹಾಮಂತ್ರ ಹವನ, ಆರಂಭಗೊಂಡು ಮಧ್ಯಾಹ್ನ ಯಜ್ಞದ ಪೂರ್ಣಾಹುತಿ, ಮಹಾಪೂಜೆ ಬಳಿಕ ಅನ್ನಸಂತರ್ಪಣೆಯ ನಡೆಯಿತು.

ಮಧ್ಯಾಹ್ನದ ನಂತರ ಗ್ರಾಮ ದೈವ ಅಣ್ಣಪ್ಪಪಂಜುರ್ಲಿಗೆ ನೇಮ, ಸಂಜೆ ಕ್ಷೇತ್ರದ ಪರಿವಾರ ದೈವಗಳಾದ ರಕೇಶ್ವರಿ, ಮೈಸಂದಾಯ, ಕಲ್ಲುರ್ಟಿ, ಪಂಜುರ್ಲಿ ದೈವಗಳಿಗೆ ಗಗ್ಗರಸೇವೆ ನಡೆಯಿತು.ಮಾಜಿ ಸಚಿವ ಬಿ. ರಮಾನಾಥ ರೈ ಸಹಿತ ಹಲವಾರು ಗಣ್ಯರು, ಸ್ಥಳೀಯ ಪ್ರಮುಖರು ಆಗಮಿಸಿ ದೈವ, ದೇವರ ಪ್ರಸಾದ ಸ್ವೀಕರಿಸಿದರು. ಮಾಗಣೆ ಧರ್ಮ ಚಾವಡಿಯ ಆಡಳಿತದಾರರಾದ ವರದ್ ರಾಜ್ ವಾಸುಕೀವನ, ಗುರುದತ್ ವಾಸುಕೀವನ ಶ್ರೀಗುರುಮೂರ್ತಿ ನಂದಿಗಮ್ ಮೊದಲಾದವರಿದ್ದರು.

ಸಂತ ಫಿಲೋಮಿನಾ ಕಾಲೇಜಿನಲ್ಲಿ ಸಾಕ್ಷರತಾ ಕಾರ್ಯಾಗಾರ

ಪುತ್ತೂರು: ಸಂತ ಫಿಲೋಮಿನಾ ಪದವಿ ಪೂರ್ವ ಕಾಲೇಜಿನ ಗಣಕ ವಿಜ್ಞಾನ ವಿಭಾಗದ ಆಶ್ರಯದಲ್ಲಿ ಪುತ್ತೂರಿನ ಆಸುಪಾಸಿನಲ್ಲಿ ಕಲಿಯುತ್ತಿರುವ ವಿವಿಧ ಶಾಲಾ ಕಾಲೇಜ್‌ಗಳ ವಿದ್ಯಾರ್ಥಿಗಳಿಗೆ 20 ದಿನಗಳ 60 ಗಂಟೆಗಳ ಕಂಪ್ಯೂಟರ್ ಸಾಕ್ಷರತಾ ಕಾರ್ಯಗಾರವನ್ನು ಆಯೋಜಿಸಲಾಯಿತು. ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದ ಕಾಲೇಜಿನ ಪ್ರಾಂಶುಪಾಲ ರೆ.ಫಾ. ಅಶೋಕ್ ರಾಯನ್ ಕ್ರಾಸ್ತಾ ಮಾತನಾಡಿ, ವಿದ್ಯಾರ್ಥಿಗಳು ತಮ್ಮ ಬಿಡುವಿನ ಸಮಯವನ್ನು ವ್ಯರ್ಥ ಮಾಡದೇ ಇಂತಹ ತರಬೇತಿಗಳಲ್ಲಿ ಪಾಲ್ಗೊಂಡು ಉತ್ತಮ ಕೌಶಲ್ಯಗಳನ್ನು ಬೆಳೆಸಿಕೊಳ್ಳುವುದು ಸಹಕಾರಿಯಾಗಲಿದೆ. ಮುಂದಿನ ದಿನಗಳಲ್ಲಿ ಪುತ್ತೂರಿನ ಆಸುಪಾಸಿನ ಎಲ್ಲಾ ವಿದ್ಯಾರ್ಥಿಗಳಿಗೆ ಇಂತಹ ತರಬೇತಿಗಳನ್ನು ಬೃಹತ್ ಆಗಿ ನಡೆಸುವುದು ನಮ್ಮ ಯೋಜನೆಯಾಗಿದೆ ಎಂದರು. ಗಣಕ ವಿಭಾಗದ ಮುಖ್ಯಸ್ಥ ಗೋವಿಂದ ಪ್ರಕಾಶ್ ಪ್ರಾಸ್ತಾವಿಸಿದರು. ಉಪನ್ಯಾಸಕ ಚಂದ್ರಾಕ್ಷ ಕಾರ್ಯಕ್ರಮ ನಿರ್ವಹಿಸಿದರು. ಪುತ್ತೂರು ಮತ್ತು ಆಸುಪಾಸಿನ ಶಾಲಾ ಕಾಲೇಜ್‌ಗಳ ಒಟ್ಟು 27 ವಿದ್ಯಾರ್ಥಿಗಳು ಈ ಕಾರ್ಯಕ್ರಮದ ಪ್ರಯೋಜನವನ್ನು ಪಡೆದುಕೊಂಡರು.

ಪುತ್ತೂರು ವಿವೇಕಾನಂದ ಕಾಲೇಜಿನಲ್ಲಿ 2026ನೇ ವರ್ಷದ ನಿರಂಜನ, ಶಂಕರ ಸಾಹಿತ್ಯ ಪ್ರಶಸ್ತಿ ಪ್ರದಾನ

ಭಾವನೆಗಳ ಮಹತ್ವ ತಿಳಿಸಲು ಭಾಷೆಗಳು ಅವಶ್ಯ: ಡಾ. ಭಟ್

ಪುತ್ತೂರು: ನಮ್ಮ ಸಂಸ್ಕೃತಿಗೆ ಭಾವನಾತ್ಮಕವಾಗಿ ಹತ್ತಿರವಾಗಿರುವ ಭಾಷೆ ನಮಗೆ ಮುಖ್ಯವಾಗಿರುತ್ತದೆ. ಭಾವನೆಗಳಿಗೆ ಅದರದ್ದೇ ಆದ ಶಕ್ತಿ ಇದೆಯಲ್ಲದೆ ಅವುಗಳ ಆಧಾರದ ಮೇಲೆ ನಮ್ಮ ಜೀವನ ಸಾಗುತ್ತದೆ. ಹೀಗಿರುವ ಭಾವನೆಗಳನ್ನು ಉಳಿಸಿಕೊಳ್ಳಲು ಹಾಗೂ ಮಹತ್ವವನ್ನು ತಿಳಿಸಲು ಭಾಷೆಗಳು ಅವಶ್ಯ ಎಂದು ಪುತ್ತೂರು ವಿವೇಕಾನಂದ ವಿದ್ಯಾವರ್ಧಕ ಸಂಘದ ಅಧ್ಯಕ್ಷ ಡಾ. ಕಲ್ಲಡ್ಕ ಪ್ರಭಾಕರ ಭಟ್ ಹೇಳಿದರು.

ನಗರದ ವಿವೇಕಾನಂದ ಕಲಾ, ವಿಜ್ಞಾನ, ವಾಣಿಜ್ಯ ಕಾಲೇಜಿನ (ಸ್ವಾಯತ್ತ) ಸುವರ್ಣ ಮಹೋತ್ಸವ ಸಭಾಂಗಣದಲ್ಲಿ ವಿವೇಕಾನಂದ ಸಂಶೋಧನಾ ಕೇಂದ್ರ, ಡಾ.ಕೆ. ಶಿವರಾಮ ಕಾರಂತ ಅಧ್ಯಯನ ಕೇಂದ್ರ ಮತ್ತು ಕನ್ನಡ ವಿಭಾಗದ ಸಹಯೋಗದೊಂದಿಗೆ ನಡೆದ 2026ನೇ ವರ್ಷದ ನಿರಂಜನ ಪ್ರಶಸ್ತಿ ಹಾಗೂ ಶಂಕರ ಸಾಹಿತ್ಯ ಪ್ರಶಸ್ತಿ ಪ್ರದಾನ ಸಮಾರಂಭದ ಅಧ್ಯಕ್ಷತೆ ವಹಿಸಿ, ಮಾತನಾಡಿದರು.

ನಾವು ಬದುಕಲು ಸುತ್ತಮುತ್ತಲಿನ ಪರಿಸರ ಅವಶ್ಯವಾಗಿ ಬೇಕು. ಇಲ್ಲಿ ಜೀವ ಸಂಕುಲ, ಮರಗಿಡಗಳು ಇತ್ಯಾದಿಗಳು ಅಲ್ಲದೇ ನೀರಿನ ಒಂದೊಂದು ಬಿಂದು ಕೂಡಾ ತುಂಬಾ ಮುಖ್ಯವಾಗಿರುತ್ತದೆ.





ಪ್ರಶಸ್ತಿ ಪುರಸ್ಕೃತರು

ಸಾಹಿತಿ, ಹಿರಿಯ ಚಿಂತಕ, ವಿಶ್ರಾಂತ ಪ್ರಾಧ್ಯಾಪಕ ಪ್ರೊ. ನರೇಂದ್ರ ರೈ ದೇರ್ಲ ಅವರಿಗೆ ನಿರಂಜನ ಪ್ರಶಸ್ತಿ ಹಾಗೂ ಸಾಹಿತಿ, ವಿದ್ವಾಂಸ ವಿದ್ವಾನ್ ಜಗದೀಶ ಶರ್ಮಾ ಸಂಪ ಅವರಿಗೆ ಶಂಕರ ಸಾಹಿತ್ಯ ಪ್ರಶಸ್ತಿಯನ್ನು ನೀಡಿ ಪುರಸ್ಕರಿಸಲಾಯಿತು.

ಪರಿಸರ ವ್ಯವಸ್ಥೆ ಉಳಿಯಲು ನಾವು ಅವಕಾಶ ಮಾಡಿಕೊಡಬೇಕು. ಹಿರಿಯರು ನಮ್ಮನ್ನು ಹಾಗೂ ಮುಂದಿನ ಪೀಳಿಗೆಯನ್ನು ಎಚ್ಚರಿಸುವ ಕೆಲಸ ಮಾಡಬೇಕು. ನಾವು ಪ್ರಶ್ನೆಗಳನ್ನು ಕಂಡುಕೊಂಡು ಉತ್ತರವನ್ನು ಪಡೆದು ಒಳಿತು ಕಂಡರೆ ಅದರಂತೆ ನಡೆಯಬೇಕು ಎಂದು ಅವರು ತಿಳಿಸಿದರು.

ಪ್ರಶಸ್ತಿ ಸ್ವೀಕರಿಸಿ ಮಾತನಾಡಿದ ಪ್ರೊ. ನರೇಂದ್ರ ರೈ ದೇರ್ಲ ವಿದ್ಯಾ ಸಂಸ್ಥೆಗಳು ಬುದ್ಧಿಶಕ್ತಿ ಹಾಗೂ ಸಂವೇದನಾಶೀಲತೆಯನ್ನು ಬೆಳೆಸುವ ಕೇಂದ್ರಗಳಾಗಬೇಕು. ಒಂದು ಪ್ರಶಸ್ತಿಯನ್ನು ಅನೇಕ ವರ್ಷಗಳಿಂದ ನೀಡುತ್ತಿದ್ದರೆ ಅದರ ಪರಂಪರೆಗೆ ಒಂದು ಘನತೆ ಇದೆ. ಅದನ್ನು ನಾವು ಗೌರವಿಸಬೇಕು. ಭೂಮಿ ಎನ್ನುವುದು ನಮ್ಮ ಮುಂದಿನ ಪೀಳಿಗೆಗೆ ಸಂಬಂಧಪಟ್ಟದ್ದು, ಅದನ್ನು ನಾವು ಸಂರಕ್ಷಿಸುವುದು ಬಹಳ ಮುಖ್ಯ ಎಂದರು.

ಪ್ರಬಂಧ ಸ್ಪರ್ಧಾ ವಿಜೇತರು

ಪಡೀಲು ಶಂಕರ ಭಟ್ಟ ಸಂಸ್ಮರಣಾರ್ಥ ರಾಜ್ಯ ಮಟ್ಟದ ಪ್ರಬಂಧ ಸ್ಪರ್ಧೆಯ ವಿಜೇತರಾದ ಅಳಿಕೆಯ ಶ್ರೀ ಸತ್ಯಸಾಯಿ ಲೋಕಸೇವಾ ಪದವಿ ಪೂರ್ವ ಕಾಲೇಜಿನ ವಿದ್ಯಾರ್ಥಿನಿ ಧನ್ಯಶಾ ಕಾರಂತ್ (ಪ್ರಥಮ), ಕುಮಟಾದ ಡಾ.ಎ.ವಿ ಬಾಳಿಗಾ ಕಲಾ ಮತ್ತು ವಾಣಿಜ್ಯ ಕಾಲೇಜಿನ ವಿದ್ಯಾರ್ಥಿ ವಿನಾಯಕ ರಮೇಶ ನಾಯ್ಕ (ದ್ವಿತೀಯ) ಹಾಗೂ ಸುಬ್ರಹ್ಮಣ್ಯದ ಶ್ರೀ ಸುಬ್ರಹ್ಮಣ್ಯೇಶ್ವರ ಪ.ಪೂ. ಕಾಲೇಜಿನ ವಿದ್ಯಾರ್ಥಿನಿ ಸ್ನೇಹ ಕೆ. (ತೃತೀಯ) ಅವರಿಗೆ ಬಹುಮಾನ ವಿತರಿಸಲಾಯಿತು.

ಶಂಕರ ಸಾಹಿತ್ಯ ಪ್ರಶಸ್ತಿ ಪುರಸ್ಕೃತ ವಿದ್ವಾನ್ ಜಗದೀಶ ಶರ್ಮಾ ಸಂಪ ಮಾತನಾಡಿ, ಸಾಮಾನ್ಯರನ್ನು ಕೂಡಾ ಎತ್ತರಿಸುವ ಸಂಸ್ಕೃತಿ ಭಾರತದ್ದು. ವಿದ್ವಾಂಸರಾದರೂ ಸರಳವಾದ ರೀತಿಯಲ್ಲಿ ಬದುಕುವವರು ಹಲವರಿದ್ದಾರೆ. ಅವರ ಹೆಸರಿನಲ್ಲಿ ಪ್ರಶಸ್ತಿ ನೀಡಿದಾಗ ಅವರ ಪ್ರಶಸ್ತಿಯೊಂದಿಗೆ ಅವರ ಹೆಸರು ಕೂಡಾ ಜಗತ್ತಿಗೆ ತಿಳಿಯುವಂತಾಗುತ್ತದೆ. ಸಾಹಿತ್ಯಕ್ಕೆ ಸಮಾಜವನ್ನು ಮುನ್ನಡೆಸುವ, ಬದಲಾವಣೆ ತರುವ ಸಾಮರ್ಥ್ಯವಿದೆ. ಹೊಸತನದೊಂದಿಗೆ ಹಳೆಯ ಸಂಸ್ಕೃತಿ ಮರೆಯದೆ ಮುಂದಿನ ಪೀಳಿಗೆಯನ್ನೂ ಸುಸಂಸ್ಕೃತವಾಗಿ ರೂಪಿಸಬೇಕು ಎಂದು ಆಶಿಸಿದರು.

ಮಂಗಳೂರು ವಿವಿ ಕನ್ನಡ ವಿಭಾಗದ ಸಹ ಪ್ರಾಧ್ಯಾಪಕ ಡಾ. ಧನಂಜಯ ಕುಂಬ್ಳೆ ಅಭಿನಂದನೆಗೈದರು. ಕಾಲೇಜಿನ ಆಡಳಿತ ಮಂಡಳಿಯ ಸಂಚಾಲಕ ಮುರಳೀಕೃಷ್ಣ ಕೆ.ಎನ್. ಶುಭಾಶಂಸನೆಗೈದರು. ವಿವೇಕಾನಂದ ವಿದ್ಯಾವರ್ಧಕ ಸಂಘದ ಕಾರ್ಯದರ್ಶಿ ಡಾ. ಕೆ.ಎಂ. ಕೃಷ್ಣ ಭಟ್, ಕಾಲೇಜಿನ ಪ್ರಾಂಶುಪಾಲ ಪ್ರೊ. ಶ್ರೀಕೃಷ್ಣ ಗಣರಾಜ ಭಟ್ ಇದ್ದರು. ಇತಿಹಾಸ ವಿಭಾಗದ ಮುಖ್ಯಸ್ಥ ಶಿವರಾಮ ಕಾರಂತ ಅಧ್ಯಯನ ಕೇಂದ್ರದ ಸಂಯೋಜಕ ಡಾ. ಪ್ರಮೋದ್ ಎಂ.ಜಿ. ಸ್ವಾಗತಿಸಿ, ಸಂಶೋಧನಾ ಕೇಂದ್ರದ ನಿರ್ದೇಶಕ ಡಾ. ವಿಜಯಸರಸ್ವತಿ ಬಿ. ವಂದಿಸಿದರು. ಕನ್ನಡ ವಿಭಾಗದ ಮುಖ್ಯಸ್ಥ ಡಾ. ಮನಮೋಹನ ಎಂ. ಹಾಗೂ ಕನ್ನಡ ವಿಭಾಗದ ಉಪನ್ಯಾಸಕ ಮಧುಕುಮಾರ್ ಕಾರ್ಯಕ್ರಮ ನಿರ್ವಹಿಸಿದರು.

ವಿವೇಕಾನಂದ ಸ್ನಾತಕೋತ್ತರ ಕೇಂದ್ರದ ನೂತನ ಕಟ್ಟಡಕ್ಕೆ ಶಿಲಾನ್ಯಾಸ

ಸಂಸ್ಥೆಯಿಂದ ಭವಿಷ್ಯಕ್ಕೆ ಬೆಳಕು: ಎಡನೀರು ಶ್ರೀ

ಪುತ್ತೂರು: ಕಾಲದಿಂದ ಕಾಲಕ್ಕೆ ಕಾಲೇಜು ಬೆಳೆಯುವುದಲ್ಲದೆ ಅನುಕೂಲತೆಗಳನ್ನು ವೃದ್ಧಿಸುತ್ತಾ ಸಾಗುತ್ತವೆ. ವಿದ್ಯಾರ್ಥಿಗಳು ಇಂತಹ ಸದಾವಕಾಶಗಳನ್ನು ಬಳಸಬೇಕು. ಇದರಿಂದ ವಿದ್ಯಾರ್ಥಿಗಳ ಅಂತರಾಳದಲ್ಲಿರುವ ಬೆಳಕನ್ನು ಸಂಸ್ಥೆ ಹಾಗೂ ಗುರುಗಳಿಗೆ ಬೆಳಗಿಸಲು ಸಾಧ್ಯವಾಗುತ್ತದೆ ಎಂದು ಎಡನೀರು ಮಠದ ಶ್ರೀ ಸಚ್ಚಿದಾನಂದ ಭಾರತೀ ಸ್ವಾಮೀಜಿ ಹೇಳಿದರು.



ವಿವೇಕಾನಂದ ವಿದ್ಯಾವರ್ಧಕ ಸಂಘದ ಅಂಗ ಸಂಸ್ಥೆಯಾದ ವಿವೇಕಾನಂದ ಕಲಾ, ವಿಜ್ಞಾನ ಮತ್ತು ವಾಣಿಜ್ಯ ಕಾಲೇಜಿನ (ಸ್ವಾಯತ್ತ) ಸ್ನಾತಕೋತ್ತರ ಅಧ್ಯಯನ ಮತ್ತು ಸಂಶೋಧನ ಕೇಂದ್ರದ ಉದ್ದೇಶಿತ ನೂತನ ಕಟ್ಟಡದ ಭೂಮಿ ಪೂಜೆ ಮತ್ತು ಶಿಲಾನ್ಯಾಸ ನೆರವೇರಿಸಿ ಬಳಿಕ ಆಶೀರ್ವಚನ ನೀಡಿದರು.

ಅಧ್ಯಕ್ಷತೆ ವಹಿಸಿದ್ದ ವಿವೇಕಾನಂದ ವಿದ್ಯಾವರ್ಧಕ ಸಂಘದ ಅಧ್ಯಕ್ಷ ಡಾ. ಕಲ್ಲಡ್ಕ ಪ್ರಭಾಕರ ಭಟ್, ಭಾರತ ಜ್ಞಾನಕೋಸ್ಕರ ಹಾತೊರೆಯುವ ದೇಶ. ಹಲವಾರು ಮಂದಿ ಹೊಸತು ತಿಳಿದು ದೇಶವನ್ನು ಉನ್ನತ ಸ್ಥಾನಕ್ಕೇರಿಸಿದ್ದಾರೆ. ಇನ್ನೊಬ್ಬರ ನಾಶಕ್ಕಾಗಿ ಬೇರೆ ದೇಶಗಳು ಯೋಜನೆ ತಯಾರಿಸುತ್ತಿರುವಾಗ, ಭಾರತ ಸಮಾಜೋದ್ಧಾರಕರಾಗಿ ಬದುಕುವುದು ಹೇಗೆ ಎಂಬುದನ್ನು ತೋರಿಸಿಕೊಟ್ಟಿದೆ ಎಂದರು.

ಮತ್ತಷ್ಟು ಸೌಕರ್ಯಗಳು

2013ರಲ್ಲಿ ಪ್ರಾರಂಭಿಸಲಾದ ಈ ಸಂಸ್ಥೆಯು, ಹಲವಾರು ವಿದ್ಯಾರ್ಥಿಗಳಿಗೆ ಜ್ಞಾನವನ್ನು ಧಾರೆಯೆರೆದಿದೆ. ಕಟ್ಟಡವನ್ನು ವಿಸ್ತೃತಗೊಳಿಸಿ ವಿದ್ಯಾರ್ಥಿಗಳಿಗೆ ಮತ್ತಷ್ಟು ಉತ್ತಮ ಸೌಕರ್ಯಗಳನ್ನು ನೀಡುವ ಉದ್ದೇಶ ಹೊಂದಲಾಗಿದೆ.

ವಿದ್ಯಾರ್ಥಿಗಳು ಭಾರತೀಯ ಚಿಂತನೆ ಅಧ್ಯಯನ ಮಾಡುವುದರೊಂದಿಗೆ ಉತ್ತಮ ಶಿಕ್ಷಣವನ್ನು ಪಡೆಯಬೇಕು. ಶಿಕ್ಷಣವು ಶಕ್ತಿಯನ್ನು ನೀಡುತ್ತದೆ ಎಂದರು.

ವಿವೇಕಾನಂದ ವಿದ್ಯಾವರ್ಧಕ ಸಂಘದ ಕಾರ್ಯದರ್ಶಿ ಡಾ.ಕೆ.ಎಂ. ಕೃಷ್ಣ ಭಟ್, ಸಂಘದ ಸದಸ್ಯ ಬಲರಾಮ ಆಚಾರ್ಯ, ಡಾ. ಸುಧಾ ರಾವ್, ಸತೀಶ್ ಹಾಗೂ ಕಾಲೇಜ್ ಆಡಳಿತ ಮಂಡಳಿ ಪದಾಧಿಕಾರಿಗಳಾದ ಶ್ರೀನಿವಾಸ ಸಾಮಂತ, ಶುಭಾ ಅಡಿಗ, ಸುಕುಮಾರ್ ರಾವ್, ಶೋಭಾ ಕೊಳತ್ತಾಯ ಮತ್ತು ಉದ್ದೇಶಿತ ಕಟ್ಟಡದ ಇಂಜಿನಿಯರ್ ರವಿರಾಮ್ ಮತ್ತಿತರರು ಉಪಸ್ಥಿತರಿದ್ದರು. ವಿದ್ಯಾರ್ಥಿನಿ ಶ್ರೀವಿದ್ಯಾ ಪಾದೆಕಲ್ಲು ಪ್ರಾರ್ಥಿಸಿದರು. ಕಾಲೇಜಿನ ಪ್ರಾಚಾರ್ಯ ಪ್ರೊ. ಶ್ರೀಷ್ಣ ಗಣರಾಜ್ ಭಟ್ ಸ್ವಾಗತಿಸಿ, ವಿಭಾಗದ ನಿರ್ದೇಶಕಿ ಡಾ. ವಿಜಯ ಸರಸ್ವತಿ ವಂದಿಸಿದರು. ಕಾಲೇಜಿನ ವಿಶೇಷಾಧಿಕಾರಿ ಡಾ. ಮನಮೋಹನ ಎಂ. ನಿರ್ವಹಿಸಿದರು.

ಮೇ 9ಕ್ಕೆ ಬಿ.ಎಸ್. ಯಡಿಯೂರಪ್ಪರ ಅಭಿಮಾನೋತ್ಸವ ಸಂಭ್ರಮ

ಬಂಟ್ವಾಳದಿಂದ 500ರಿಂದ 1000 ಕಾರ್ಯಕರ್ತರು

ಬಂಟ್ವಾಳ: ಚಿತ್ರದುರ್ಗದಲ್ಲಿ ಮೇ 9ರಂದು ನಡೆಯಲಿರುವ ಮಾಜಿ ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ ಅವರ ಅಭಿಮಾನೋತ್ಸವ ಕಾರ್ಯಕ್ರಮದಲ್ಲಿ ದಕ್ಷಿಣ ಕನ್ನಡ ಜಿಲ್ಲೆಯ 8 ವಿಧಾನಸಭಾ ಕ್ಷೇತ್ರಗಳಿಂದ 5000 ಕಾರ್ಯಕರ್ತರು, ಅಭಿಮಾನಿಗಳು ಭಾಗಿಯಾಗಲಿದ್ದಾರೆ ಎಂದು ಮಂಗಳೂರು ದಕ್ಷಿಣ ಶಾಸಕ, ಅಭಿಮಾನೋತ್ಸವದ ಜಿಲ್ಲಾ ಸಂಚಾಲಕ ವೇದವ್ಯಾಸ ಕಾಮತ್ ಹೇಳಿದ್ದಾರೆ.



ಶನಿವಾರ ಬಂಟ್ವಾಳ ಪ್ರೆಸ್‌ಕ್ಲಬ್‌ನಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿ, ಈಗಾಗಲೇ ಕ್ಷೇತ್ರ ಮಟ್ಟದಲ್ಲಿ ಈ ಕುರಿತು ಪಕ್ಷದ ಪ್ರಮುಖರ, ಕಾರ್ಯಕರ್ತರ ಸಮಾಲೋಚನಾ ಸಭೆಗಳನ್ನು ನಡೆಸಲಾಗುತ್ತಿದ್ದು ಬಂಟ್ವಾಳ ಕ್ಷೇತ್ರದಿಂದ ಶಾಸಕ ರಾಜೇಶ್ ನ್ಯಾಕ್ ನೇತೃತ್ವದಲ್ಲಿ 500ರಿಂದ 1000 ಕಾರ್ಯಕರ್ತರು, ಅಭಿಮಾನಿಗಳು ಭಾಗವಹಿಸುವ ನಿರೀಕ್ಷೆ ಇದೆ ಎಂದರು.

ಮಾಜಿ ಮುಖ್ಯಮಂತ್ರಿ, ರೈತನಾಯಕ ಬಿ.ಎಸ್. ಯಡಿಯೂರಪ್ಪ ಅವರು ರಾಜಕೀಯ ಪ್ರವೇಶಿಸಿ ಐವತ್ತು ವರ್ಷಗಳಾಗುತ್ತಿರುವ ಹಿನ್ನೆಲೆಯಲ್ಲಿ ಅವರು ರಾಜ್ಯದ ಅಭಿವೃದ್ಧಿಯಲ್ಲಿ ಅವರು ನೀಡಿರುವ ಕೊಡುಗೆಗಳನ್ನು ಸ್ಮರಿಸುವ ಹಾಗೂ ಅಭಿನಂದನೆ ಹೇಳುವ ಸಲುವಾಗಿ ಈ ಅಭಿಮಾನೋತ್ಸವ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ ಎಂದರು.

> ಬಿ.ಎಸ್.ಯಡಿಯೂರಪ್ಪ ಅವರು ಬಂಟ್ವಾಳದ ಬಗ್ಗೆ ವಿಶೇಷ ನಂಟು ಹೊಂದಿದ್ದು ಅವರಿಗೆ ಸಾಕಷ್ಟು ಮಂದಿ ಕಾರ್ಯಕರ್ತರು ಸಹಿತ ಅಭಿಮಾನಿಗಳಿದ್ದಾರೆ. ಯಡಿಯೂರಪ್ಪ ಅವರು ಪಕ್ಷಕ್ಕೆ ಹಾಗೂ ಕ್ಷೇತ್ರಕ್ಕೆ ಕೊಟ್ಟ ಕೊಡುಗೆ ಹಿನ್ನೆಲೆ ಅಭಿಮಾನದ ದ್ಯೋತಕವಾಗಿ ಕಾರ್ಯಕ್ರಮದಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಲು ತಯಾರಿ ನಡೆಸಲಾಗಿದೆ.
> ● ರಾಜೇಶ್ ನ್ಯಾಕ್

ಕೇಂದ್ರ ಗೃಹ ಸಚಿವ ಅಮಿತ್ ಶಾ ಸೇರಿದಂತೆ ಪಕ್ಷದ ಕೇಂದ್ರ, ರಾಜ್ಯ ನಾಯಕರು ಭಾಗವಹಿಸಲಿದ್ದಾರೆ. 8 ರಿಂದ 10 ಲಕ್ಷ ಮಂದಿ ಪಾಲ್ಗೊಳ್ಳುವ ನಿರೀಕ್ಷೆ

ಅಭಿವೃದ್ಧಿ ಶೂನ್ಯ

ರಾಜ್ಯದಲ್ಲಿ ಕಾಂಗ್ರೆಸ್ ಪಕ್ಷ ಅಧಿಕಾರಕ್ಕೆ ಬಂದು 3 ವರ್ಷಗಳಾದರೂ ಅಭಿವೃದ್ಧಿ ಶೂನ್ಯ. ಕಾಂಗ್ರೆಸ್ ನಾಯಕರು ಪ್ರತಿನಿತ್ಯ ಮುಖ್ಯಮಂತ್ರಿಗಳ ಕುರ್ಚಿಗಾಗಿ ಕಿತ್ತಾಟದಲ್ಲಿ ತೊಡಗಿದ್ದಾರೆಯೇ ಹೊರತು ಯಾವುದೇ ಅಭಿವೃದ್ಧಿ ಕೆಲಸಗಳು ನಡೆಯುತ್ತಿಲ್ಲ ಎಂದರು.

ಬಂಟ್ವಾಳ ಶಾಸಕ ರಾಜೇಶ್ ನ್ಯಾಕ್ ಮಾತನಾಡಿದರು. ಬಿಜೆಪಿ ಬಂಟ್ವಾಳ ಕ್ಷೇತ್ರಾಧ್ಯಕ್ಷ ಆರ್. ಚೆನ್ನಪ್ಪ ಕೋಟ್ಯಾನ್, ಬಿಜೆಪಿ ಜಿಲ್ಲಾ ಪ್ರಧಾನ ಕಾರ್ಯದರ್ಶಿ ಪ್ರೇಮನಾಥ ಶೆಟ್ಟಿ ಉಪಾಧ್ಯಕ್ಷ ರಾಕೇಶ್ ರೈ, ಕಾರ್ಯದರ್ಶಿ ದಿನೇಶ್ ಅಮ್ಟೂರು, ಬಂಟ್ವಾಳ ಮಂಡಲದ ಪ್ರಧಾನ ಕಾರ್ಯದರ್ಶಿ ಸುದರ್ಶನ ಬಜ, ಶಿವಪ್ರಸಾದ್ ಶೆಟ್ಟಿ ಕ್ಷೇತ್ರ ಮಾಧ್ಯಮ ಪ್ರಮುಖ್ ಪುರುಷೋತ್ತಮ ಶೆಟ್ಟಿ ವಾಮದಪದವು, ಪಕ್ಷ ಪ್ರಮುಖರಾದ ಡೊಂಬಯ್ಯ ಅರಳ, ಪ್ರಣಾಮ್ ರಾಜ್ ಅಜ್ಜಿಬೆಟ್ಟು ಉಪಸ್ಥಿತರಿದ್ದರು.

ಬಿಎಸ್‌ವೈ ಅಭಿಮಾನೋತ್ಸವ ಕಾರ್ಯಕ್ರಮದ ಪೋಸ್ಟರ್ ಬಿಡುಗಡೆ



ಬೆಳ್ತಂಗಡಿ: ಮಾಜಿ ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ ಅವರ 55 ವರ್ಷಗಳ ರಾಜಕೀಯ ಜೀವನದ ಸಾಧನೆಯನ್ನು ಸಂಭ್ರಮಿಸುವ ಉದ್ದೇಶದಿಂದ ಮೇ 9 ರಂದು ಚಿತ್ರದುರ್ಗದಲ್ಲಿ ನಡೆಯಲಿರುವ ಬೃಹತ್ ಅಭಿಮಾನೋತ್ಸವಕಾರ್ಯಕ್ರಮದ ಪೋಸ್ಟರ್ ಬಿಡುಗಡೆ ಸಮಾರಂಭವು ಮೇ 2ರಂದು ಗುರುವಾಯನಕೆರೆ ನಮ್ಮ ಮನೆ ಹವ್ಯಕ ಭವನದಲ್ಲಿ ನೆರವೇರಿತು.

ಬೆಳ್ತಂಗಡಿ ಶಾಸಕ ಹರೀಶ್ ಪೂಂಜಾ ರವರು ಪೋಸ್ಟರ್ ಬಿಡುಗಡೆ ಮಾಡಿ ಕಾರ್ಯಕ್ರಮದ ಮಹತ್ವ ವಿವರಿಸಿದರು. ಕಾರ್ಯಕ್ರಮದಲ್ಲಿ ಮಂಗಳೂರು ವಿಭಾಗ ಸಹ ಪ್ರಭಾರಿ ಜಯಂತ್ ಕೋಟ್ಯಾನ್, ಜಿಲ್ಲಾ ಪ್ರಧಾನ ಕಾರ್ಯದರ್ಶಿ ಯತೀಶ್ ಆರ್ವರ್, ಬೆಳ್ತಂಗಡಿ ಬಿಜೆಪಿ ಮಂಡಲ ಅಧ್ಯಕ್ಷ ಶ್ರೀನಿವಾಸ್ ರಾವ್, ಪ್ರಧಾನ ಕಾರ್ಯದರ್ಶಿ ಪ್ರಶಾಂತ್ ಎಂ. ಪಾರೆಂಕಿ, ಮನ್ ಕೀ ಬಾತ್ ಪ್ರಮುಖ್ ಸೀತಾರಾಮ್ ಬೆಳಾಲು, ಜಿಲ್ಲಾ ಕಾರ್ಯದರ್ಶಿ ವಸಂತಿ ಮಚ್ಚಿನ, ಹಾಗೂ ಪಕ್ಷದ ಜವಾಬ್ದಾರಿಯ ಪ್ರಮುಖರು ಉಪಸ್ಥಿತರಿದ್ದರು.

ಮೇ 5ರಂದು ಏಳಿಂಜೆಯಲ್ಲಿ ಸಂಕಷ್ಟಿ ಪೂಜೆ

ಕಿನ್ನಿಗೋಳಿ: ಏಳಿಂಜೆ ಶ್ರೀ ಲಕ್ಷ್ಮೀ ಜನಾರ್ದನ ಮಹಾಗಣಪತಿ ದೇವಸ್ಥಾನದಲ್ಲಿ ಮೇ 5ಕ್ಕೆ ಅಂಗಾರಿಕ ಸಂಕಷ್ಟಹರ ಪೂಜೆ ನಡೆಯಲಿದೆ. ಬೆಳಿಗ್ಗೆ 5ಕ್ಕೆ ಬಾಲಗಣಪತಿ ಹೋಮ, ಬಳಿಕ 108 ಕಾಯಿ ಗಣಪತಿ ಹೋಮ, ವಿಷ್ಣು ಸಹಸ್ರನಾಮ ಹೋಮ, ಮಧ್ಯಾಹ್ನ ಮಹಾಪೂಜೆ, ಅನ್ನ ಸಂತರ್ಪಣೆ, ಫಲಹಾರ. ಸಂಜೆ 4ರಿಂದ 108 ತೆಂಗಿನ ಕಾಯಿ ಗಣ ಹೋಮ, ಬಳಿಕ ತಾಳಮದ್ದಳೆ, ರಾತ್ರಿ 8 ರಿಂದ ಶ್ರೀದೇವರಿಗೆ ರಂಗ ಪೂಜೆ, ಮಹಾ ಗಣಪತಿ ಸನ್ನಿಧಿಯಲ್ಲಿ ರಂಗ ಪೂಜೆ ಚಂದ್ರೋದಯ ಮಹಾ ಪೂಜೆ ಅನ್ನ ಸಂತರ್ಪಣೆ ನಡೆಯಲಿದೆ.

ಕುಮಾರಧಾರಾ ನದಿಯಲ್ಲಿ ನೃಸಿಂಹ ಶ್ರೀದೇವರ ಅವಭೃತೋತ್ಸವ ಸಂಪನ್ನ



ಸುಬ್ರಹ್ಮಣ್ಯ: ನರಸಿಂಹ ಸ್ವಾಮಿ ಸುಬ್ರಹ್ಮಣ್ಯ ಮಠದಲ್ಲಿ ಶ್ರೀ ನರಸಿಂಹ ಜಯಂತಿ ಮಹೋತ್ಸವದ ಅಂಗವಾಗಿ ಕುಮಾರಧಾರ ನದಿಯ ಅಗ್ರಹಾರದ ಪಂಚಮಿ ತೀರ್ಥದಲ್ಲಿ ಶ್ರೀ ದೇವರ ಅವಭೃತೋತ್ಸವ ಶನಿವಾರ ಸುಸಂಪನ್ನಗೊಂಡಿತು.

ಕುಮಾರಧಾರಾದಲ್ಲಿ ಸುಬ್ರಹ್ಮಣ್ಯ ಮಠದ ಶ್ರೀ ವಿದ್ಯಾಪ್ರಸನ್ನತೀರ್ಥ ಸ್ವಾಮೀಜಿಗಳು ಅವಭೃತ ಸ್ನಾನದ ವಿಧಿವಿಧಾನಗಳನ್ನು ನೆರವೇರಿಸಿದರು. ಪ್ರಧಾನ ಅರ್ಚಕ ಶ್ರೀಕರ ಉಪಾಧ್ಯಾಯ ಉತ್ಸವದ ವೈದಿಕ ವಿಧಾನ ನೆರವೇರಿಸಿದರು. ಶನಿವಾರ ಬೆಳಗ್ಗೆ ಶ್ರೀ ನರಸಿಂಹ ದೇವರಿಗೆ ಕಟ್ಟೆಪೂಜೆ ನಡೆಯಿತು. ನಂತರ ಓಕುಳಿ ಪೂಜೆ ಹಾಗೂ ಓಕುಳಿ ಸಂಪ್ರೋಕ್ಷಣೆ ನೆರವೇರಿತು. ಬಳಿಕ ಭಕ್ತರಿಗೆ ಓಕುಳಿ ವಿತರಣೆಯಾಯಿತು. ನಂತರ ಶ್ರೀ ದೇವರು ಬಂಡಿ ರಥದಲ್ಲಿ ದೇವಳದಿಂದ ಅಗ್ರಹಾರ ಸೋಮನಾಥ ದೇವಾಲಯದ ಸಮೀಪದ ಕುಮಾರಧಾರ ನದಿ ತಟದವರೆಗೆ ಸಾಗಿ ಬಂದರು. ಅಗ್ರಹಾರದ ಪುಣ್ಯತೀರ್ಥದಲ್ಲಿ ಶ್ರೀ ವಿದ್ಯಾಪ್ರಸನ್ನ ತೀರ್ಥ ಶ್ರೀಪಾದರು ಶ್ರೀ ದೇವರಿಗೆ ಜಲಾಭಿಷೇಕ, ಶಂಖಾಭಿಷೇಕ ನೆರವೇರಿಸಿ ಸೀಯಾಳಾಭಿಷೇಕಸಮರ್ಪಿಸಿದರು. ನಂತರ ದೇವರ ಅವಭೃತ ಸ್ನಾನ ನೆರವೇರಿತು.

ಶ್ರೀ ದೇವರ ಅವಭೃತೋತ್ಸವದ ಬಳಿಕ ನೃಸಿಂಹ ದೇವರಿಗೆ ಮಠದಲ್ಲಿ ವಸಂತಪೂಜೆ ನೆರವೇರಿತು. ಬಳಿಕ ಶ್ರೀಗಳು ಭಕ್ತರಿಗೆ ಫಲಮಂತ್ರಾಕ್ಷತೆ ನೀಡಿದರು. ಈ ಸಂದರ್ಭ ಶ್ರೀಮಠದ ದಿವಾನ ಸುದರ್ಶನ ಜೋಯಿಸ, ಪ್ರಮುಖರಾದ ಕೆ. ಯಜ್ಞೇಶ್ ಆಚಾರ್, ವೇಣುಗೋಪಾಲ ಶಾಸ್ತ್ರಿ, ಗುರುಪ್ರಸಾದ್ ಭಟ್, ಶಂಕರ ಭಟ್, ರವೀಂದ್ರ ಭಟ್, ಶಿವ ಭಟ್ ಕಾಂಚನ, ಸುಹಾಸ್ ಉಪಾಧ್ಯಾಯ ದೇವರಗದ್ದೆ, ಶ್ರೀಕೃಷ್ಣ ಶರ್ಮ ಮತ್ತಿತರರು ಉಪಸ್ಥಿತರಿದ್ದರು.

ಪಿಯು ಪರೀಕ್ಷೆಯಲ್ಲಿ ಸಾಧನೆಗೈದ ವಿದ್ಯಾರ್ಥಿನಿ ಹರ್ಷಿತಾಗೆ ಸನ್ಮಾನ



ಮಂಗಳೂರು: ದ್ವಿತೀಯ ಪಿಯುಸಿ ವಿಜ್ಞಾನ ವಿಭಾಗದ ಪರೀಕ್ಷೆಯಲ್ಲಿ ಶೇ. 96.67 ಫಲಿತಾಂಶದೊಂದಿಗೆ 580 ಅಂಕ ಪಡೆದು ಮತ್ತು ಅತ್ಯುನ್ನತ ಶ್ರೇಣಿಯಲ್ಲಿ ಉತ್ತೀರ್ಣರಾದ ಮೂಡುಬಿದಿರೆ ಆಳ್ವಾಸ್ ಪಿ.ಯು ಕಾಲೇಜಿನ ವಿದ್ಯಾರ್ಥಿನಿ ಹರ್ಷಿತಾ ಯು. ಪೂಜಾರಿ ಅವರನ್ನು ಮೂಡುಪೆರಾರ–ಮಿತ್ತಕೊಳಪಿಲ ಶ್ರೀ ರಾಘವೇಂದ್ರ ಯುವಕ ಮಂಡಲದ ವತಿಯಿಂದ ಇತ್ತೀಚೆಗೆ ಶ್ರೀ ರಾಘವೇಂದ್ರ ಭಜನಾ ಮಂದಿರದ ಸಭಾಭವನದಲ್ಲಿ ಸನ್ಮಾನಿಸಲಾಯಿತು.

ಈ ಸಂದರ್ಭ ಶ್ರೀ ರಾಘವೇಂದ್ರ ಯುವಕ ಮಂಡಲದ ಅಧ್ಯಕ್ಷ ಚಂದ್ರಹಾಸ ಪೂಜಾರಿ, ಶ್ರೀ ರಾಘವೇಂದ್ರ ಭಜನಾ ಮಂದಿರದ ಅಧ್ಯಕ್ಷ ನಾರಾಯಣ ಗೌಡ, ದುರ್ಗಾಪ್ರಸಾದ್ ಶೆಟ್ಟಿ ಕೊಳಪಿಲ, ಶಿವಚರಣ್ ರೈ

- ಈಕೆ ಆಳ್ವಾಸ್ ಪಿ.ಯು ಕಾಲೇಜಿನ ವಿದ್ಯಾರ್ಥಿನಿ
- ಪಿಯುಸಿ ವಿಜ್ಞಾನ ವಿಭಾಗದ ಪರೀಕ್ಷೆಯಲ್ಲಿ ಶೇ. 96.67 ಫಲಿತಾಂಶ
- ಮೂಡುಪೆರಾರ–ಮಿತ್ತಕೊಳಪಿಲ ಶ್ರೀ ರಾಘವೇಂದ್ರ ಯುವಕ ಮಂಡಲದಿಂದ ಸನ್ಮಾನ


ಮುಂಡಬೆಟ್ಟುಗುತ್ತು, ಮೂಲ್ಕಿ ಚಿತ್ರಾಪು ಸರಕಾರಿ ಪ್ರೌಢಶಾಲೆಯ ಶಿಕ್ಷಕ ಮಂಜುನಾಥ್ ನಾಯ್ಕ್, ಅಂಗನವಾಡಿ ಶಿಕ್ಷಕಿ ಪುಷ್ಪಲತಾ, ದಿನೇಶ್ ಪೂಜಾರಿ ಹಿತ್ತಿಲು, ನವೀನ್ ಕುಮಾರ್ ಪೆರಾರ, ಹರೀಶ್ ಕೊಡೆತ್ತೂರು ಮೊದಲಾದವರು ಇದ್ದರು.

ಸಂಘ ಶತಾಬ್ಧಿ ಪ್ರಯುಕ್ತ ಮಾನವೀಯ ಕಾರ್ಯ | ಇಂದು ಗೃಹ ಪ್ರವೇಶ ಕಾರ್ಯಕ್ರಮ | ಪತಿ, ಪುತ್ರನನ್ನು ಕಳಕೊಂಡ ವೃದ್ಧೆ ಬದುಕಿಗೆ ಹೊಸ ಬೆಳಕು

ಕುಂಪಲ ರಾಷ್ಟ್ರೀಯ ಸೇವಾ ಭಾರತಿ ಕೇಸರಿ ಶಾಖೆಯಿಂದ ಬಡ ವೃದ್ಧೆಗೆ ಸೂರು ನಿರ್ಮಾಣ

■ ದಿನೇಶ್ ನಾಯಕ್ ಪಿಲಾರು

ಉಳ್ಳಾಲ: ರಾಷ್ಟ್ರೀಯ ಸ್ವಯಂ ಸೇವಕ ಸಂಘದ ಶತಾಬ್ಧಿಯ ಪ್ರಯುಕ್ತ ಸಂಘದ ಅಂಗ ಸಂಸ್ಥೆಯಾದ ಕುಂಪಲದ ರಾಷ್ಟ್ರೀಯ ಸೇವಾ ಭಾರತಿ ಕೇಸರಿ ಶಾಖೆಯ ಮುಂದಾಳತ್ವದಲ್ಲಿ ಕುಂಪಲ ಕೇಸರಿ ಮಿತ್ರ ವೃಂದ ಸೇವಾ ಟ್ರಸ್ಟ್, ಕೇಸರಿ ಮಿತ್ರ ವೃಂದ, ಕೇಸರಿ ಮಾತೃ ಮಂಡಳಿಯ ಸಹಯೋಗ ಹಾಗೂ ಸಮಾಜದ ದಾನಿಗಳ ಸಹಕಾರದಿಂದ ಪತಿ ಮತ್ತು ಮಗನನ್ನ ಕಳಕೊಂಡು ವಿಧವೆ ಸೊಸೆ ಹಾಗೂ ಮೊಮ್ಮಕ್ಕಳೊಂದಿಗೆ ವಾಸವಿರುವ ಕುಂಪಲ ಬಗಂಬಿಲದ ಅಮೃತನಗರ ನಿವಾಸಿ ವೀರಮ್ಮ (60) ಅವರಿಗೆ ನಿರ್ಮಿಸಿ ಕೊಡಲಾದ ಸುಸಜ್ಜಿತ ತಾರಸಿ ಮನೆ 'ವೀರಮ್ಮ ನಿಲಯ'ದ ಗೃಹ ಪ್ರವೇಶ ಸಮಾರಂಭ ಇಂದು ನಡೆಯಲಿದೆ.



ಹಳೆ ಮನೆ



ಹೊಸ ಮನೆ

ಕುಟುಂಬಕ್ಕೆ ಹೃದಯಾಘಾತಗಳ ಆಘಾತ

ಮೂಲತಃ ತಮಿಳುನಾಡು ನಿವಾಸಿ ವೀರಮ್ಮ ಮತ್ತು ರಂಗಸ್ವಾಮಿ ದಂಪತಿ ಕಳೆದ ಐವತ್ತು ವರುಷಗಳ ಹಿಂದೆ ಜಿಲ್ಲೆಗೆ ವಲಸೆ ಬಂದು ಕುಂಪಲದ ಬಗಂಬಿಲದಲ್ಲಿ ನೆಲೆಸಿದ್ದರು. ಜೀವನೋಪಾಯಕ್ಕಾಗಿ ದಂಪತಿ ಮಾಡೂರಿನ ಕಲ್ಲಿನ ಕ್ವಾರಿಯೊಂದರಲ್ಲಿ ಕೂಲಿ ಕೆಲಸ ನಿರ್ವಹಿಸುತ್ತಿದ್ದರು. ದಂಪತಿಗೆ ಆಧಾರವಾಗಿದ್ದ ಏಕೈಕ ಪುತ್ರ ವಿಶ್ವನಾಥ್ ಅವರು ಏಳು ವರ್ಷದ ಹಿಂದೆ

> ಶಿಥಿಲಗೊಂಡ ಹಳೆಯ ಮನೆಯಲ್ಲಿ ವಯಸ್ಸಾದ ಅತ್ತೆ ಹಾಗೂ ಮೂರು ಮಕ್ಕಳೊಂದಿಗೆ ವಾಸಿಸಲು ಸದಾ ಜೀವ ಭಯ ಕಾಡುತ್ತಿತ್ತು. ಕೂಲಿ ಕೆಲಸ ಮಾಡಿ ಮಕ್ಕಳನ್ನು ಸಾಕುವುದೇ ಕಷ್ಟ, ಇನ್ನು ಮನೆಯನ್ನ ಕಟ್ಟುವುದು ನಮ್ಮಿಂದ ಸಾಧ್ಯವಾಗದ ವಿಚಾರವಾಗಿತ್ತು. ರಾಷ್ಟ್ರೀಯ ಸೇವಾ ಭಾರತಿ ಕೇಸರಿ ಶಾಖೆಯ ಸದಸ್ಯರು ನಮ್ಮ ಕಷ್ಟವನ್ನ ಮನಗಂಡು ನೂತನ ಮನೆಯನ್ನ ಕಟ್ಟಿ ಕೊಟ್ಟಿದ್ದು, ತುಂಬಾ ಖುಷಿಯಾಗಿದೆ.
> ● ಮಲ್ಲಿಕಾ, ವೀರಮ್ಮರ ಸೊಸೆ

ಹೃದಯಾಘಾತದಿಂದ ಮೃತಪಟ್ಟಿದ್ದರು. ವಿಶ್ವನಾಥ್ ಅವರ ಪತ್ನಿ ಮಲ್ಲಿಕಾ ಅವರು ವಿಧವೆಯಾದದ್ದಲ್ಲದೇ ಫ್ಯಾಕ್ಟರಿಯೊಂದರಲ್ಲಿ ಕೂಲಿ ಕೆಲಸ ಮಾಡಿ ತನ್ನ ಮೂರು (2 ಹೆಣ್ಣು ಒಂದು ಗಂಡು) ಮಕ್ಕಳನ್ನ ಸಾಕುತ್ತಿದ್ದರು. ಕಳೆದ ಮೂರು ವರ್ಷದ ಹಿಂದೆ ವೀರಮ್ಮ ಅವರ ಪತಿ ರಂಗಸ್ವಾಮಿಯವರೂ ಹೃದಯಾಘಾತದಿಂದ ಸಾವನ್ನಪ್ಪಿದ ಬಳಿಕ ಕುಟುಂಬಕ್ಕೆ ದಿಕ್ಕೇ ತೋಚದಂತಾಗಿತ್ತು. ಸಂಪಾದನೆ ಮಾಡಿ ಮನೆಗೆ ಆಧಾರವಾಗಿದ್ದ ಪತಿ ಮತ್ತು ಮಗ ಸಾವನ್ನಪ್ಪಿದ ಬಳಿಕ ವೃದ್ಧೆ ವೀರಮ್ಮ ಹಾಗೂ ಸೊಸೆ ಮಲ್ಲಿಕಾ ದಿಕ್ಕೇ ತೋಚದಂತಾಗಿದ್ದರು. ಪತಿಯ ಸಾವಿನ ಬಳಿಕ ವೀರಮ್ಮ ಅವರು ದೇವಸ್ಥಾನಗಳಿಗೆ ತೆರಳಿ ಶುಚಿತ್ವದ ಕೆಲಸ ಮಾಡುತ್ತಿದ್ದರು.

ಮಾನವೀಯತೆ ಕಾರ್ಯ

ಪತಿ ಮತ್ತು ಪುತ್ರನನ್ನು ಕಳಕೊಂಡು ಕಂಗಾಲದ ವೀರಮ್ಮ ಮತ್ತು ಸೊಸೆ ಮಲ್ಲಿಕಾ ಅವರಿಗೆ ಕುಟುಂಬ ನಿರ್ವಹಣೆಯೇ ಸವಾಲಾಗಿತ್ತು. ಬಗಂಬಿಲದ ಹಳೆಯ ಮುರುಕಲು ಗುಡಿಸಲಲ್ಲಿ ವಾಸವಿದ್ದ ಕುಟುಂಬಕ್ಕೆ ಮಳೆಗಾಲ ಬಂತೆಂದರೆ ಮನೆಯೊಳಗೆ ವಾಸಿಸಲು ಕಷ್ಟಕರ ಸ್ಥಿತಿ ಎದುರಾಗಿತ್ತು. ಸಂಪೂರ್ಣ ಶಿಥಿಲಗೊಂಡಿದ್ದ ಹಂಚಿನ ಛಾವಣಿಯ ಮನೆಯು ಈಗಲೋ, ಆಗಲೋ ಎಂಬಂತೆ ಬೀಳಲು ರೆಡಿಯಾಗಿತ್ತು. ವೀರಮ್ಮ ಅವರ ಕುಟುಂಬದ ದಯನೀಯ ಸ್ಥಿತಿಯನ್ನ ಅರಿತ ಕುಂಪಲದ ರಾಷ್ಟ್ರೀಯ ಸೇವಾ ಭಾರತಿ ಕೇಸರಿ ಶಾಖೆಯ ಸ್ವಯಂ ಸೇವಕರು ದಾನಿಗಳ ಸಹಕಾರದಿಂದ ಇದೀಗ ಸುಸಜ್ಜಿತ ತಾರಸಿ ಮನೆಯೊಂದನ್ನ ನಿರ್ಮಿಸಿ ಕೊಟ್ಟು ಮಾದರಿ ಕಾರ್ಯ ನಡೆಸಿದ್ದಾರೆ.ಇಂದು ನೂತನ ಮನೆಯ ಗೃಹ ಪ್ರವೇಶ ಸಮಾರಂಭ ನಡೆಯಲಿದೆ.

ಸುತ್ತಮುತ್ತ

ನಾಳೆ ಗಂಜಿಮಠದಲ್ಲಿ ಷಡಾಧಾರ ಪ್ರತಿಷ್ಠೆ

ಕೈಕಂಬ: ಮಂಗಳೂರು ತಾಲೂಕಿನ ಗಂಜಿಮಠದಲ್ಲಿರುವ 1100 ವರ್ಷಗಳ ಇತಿಹಾಸ ಹೊಂದಿರುವ ಶ್ರೀ ಮೃತ್ಯುಂಜಯೇಶ್ವರ ದೇವಸ್ಥಾನದ ಪುನರ್ ನಿರ್ಮಾಣದ ಪ್ರಯುಕ್ತ, ಬಡಗ ಎಡಪದವು ವೇದಮೂರ್ತಿ ಶ್ರೀ ಟಿ. ಮುರಳೀಧರ ತಂತ್ರಿಗಳ ನೇತೃತ್ವದಲ್ಲಿ ಮೇ 4ರಂದು ಬೆಳಿಗ್ಗೆ 9.15ರ ವೃಷಭ ಲಗ್ನ ಸುಮುಹೂರ್ತದಲ್ಲಿ ಶ್ರೀದೇವರ ಗರ್ಭಗುಡಿಗೆ ನಿಧಿಕುಂಭ ಪೂರ್ವಕ ಷಡಾಧಾರ ಪ್ರತಿಷ್ಠೆ ನಡೆಯಲಿದೆ ಎಂದು ಪ್ರಕಟಣೆ ತಿಳಿಸಿದೆ.

ಮೇ 5ರಂದು ಕಸಾಪ ಸಂಸ್ಥಾಪನಾ ದಿನಾಚರಣೆ

ಶಿರ್ವ: ಉಡುಪಿ ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತು ಮತ್ತು ಕಾಪು ತಾಲೂಕು ಕಸಾಪ ಘಟಕದ ಸಹಭಾಗಿತ್ವದಲ್ಲಿ ಮೇ 5ರಂದು ಅಪರಾಹ್ನ ಗಂಟೆ 3ಕ್ಕೆ ಕಾಪು ಸಾರ್ವಜನಿಕ ಗ್ರಂಥಾಲಯದಲ್ಲಿ 'ಕಸಾಪ 112ನೇ ಸಂಸ್ಥಾಪನಾ ದಿನಾಚರಣೆ' ಕಾರ್ಯಕ್ರಮ ಜರುಗಲಿದೆ. ಕಾಪು ಕ್ಷೇತ್ರದ ಶಾಸಕ ಗುರ್ಮೆ ಸುರೇಶ್ ಶೆಟ್ಟಿ ಕಾರ್ಯಕ್ರಮವನ್ನು ಉದ್ಘಾಟಿಸಲಿದ್ದು, ಕಸಾಪ ಕಾಪು ತಾಲೂಕು ಅಧ್ಯಕ್ಷ ಬಿ.ಪುಂಡಲೀಕ ಮರಾಠೆ ಅಧ್ಯಕ್ಷತೆ ವಹಿಸುವರು. ಉಡುಪಿ ಜಿಲ್ಲಾ ಕಸಾಪ ಅಧ್ಯಕ್ಷ ನೀಲಾವರ ಸುರೇಂದ್ರ ಅಡಿಗ ಆಶಯ ನುಡಿಗಳನ್ನಾಡುವರು. ಕಾಪು ಪುರಸಭಾ ಮುಖ್ಯ ಅಧಿಕಾರಿ ನೀಲಕಂಠ ಮೇಸ್ತ ದಿಕ್ಸೂಚಿ ಭಾಷಣ ಮಾಡುವರು. ಮುಖ್ಯ ಅತಿಥಿಗಳಾಗಿ ಕಾಪು ತಾಲೂಕು ತಹಶೀಲ್ದಾರ್ ಅನಂತ ಶಂಕರ ಬಿ, ಕಾಪು ಪುರಸಭಾ ಅಧ್ಯಕ್ಷೆ ಮೋಹಿನಿ ಶೆಟ್ಟಿ, ಉಪಾಧ್ಯಕ್ಷೆ ಸರಿತಾ, ಕಾಪು ತಾಲೂಕು ಕಾರ್ಯನಿರತ ಪತ್ರಕರ್ತರ ಸಂಘದ ಅಧ್ಯಕ್ಷ ಅಬ್ದುಲ್ ಹಮೀದ್ ಪಡುಬಿದ್ರಿ, ಉಡುಪಿ ಜಿಲ್ಲಾ ಕಸಾಪ ಗೌರವ ಕಾರ್ಯದರ್ಶಿ ಸುಬ್ರಹ್ಮಣ್ಯ ಶೆಟ್ಟಿ, ಕಸಾಪ ಜಿಲ್ಲಾ ಪ್ರತಿನಿಧಿ ಕಟ್ಟಿಂಗೇರಿ ದೇವದಾಸ್ ಹೆಬ್ಬಾರ್ ಭಾಗವಹಿಸುವರು. ಈ ವೇಳೆ ಕಾಪು ಪುರಸಭಾ ವ್ಯಾಪ್ತಿಯ ಗ್ರಂಥಾಲಯ ಮೇಲ್ವಿಚಾರಕಿ ಪೂರ್ಣಿಮಾ ಕಾಪು, ಆಶಾ ಉಳಿಯಾರಗೋಳಿ, ನಸ್ರಿನ್ ಫಾತಿಮಾ ಮಲ್ಲಾರು ಅವರನ್ನು ಸನ್ಮಾನಿಸಲಾಗುವುದು ಮತ್ತು ಗ್ರಂಥಾಲಯಗಳಿಗೆ ಕಾಪು ಸಾಹಿತ್ಯ ಪರಿಷತ್ತು ವತಿಯಿಂದ ಪುಸ್ತಕಗಳನ್ನು ಹಸ್ತಾಂತರಿಸಲಾಗುವುದು ಎಂದು ಕಸಾಪ ಕಾಪು ತಾಲೂಕು ಘಟಕದ ಪ್ರಕಟಣೆ ತಿಳಿಸಿದೆ.

ಅತಿಥಿ ಉಪನ್ಯಾಸಕರ ಹುದ್ದೆಗಳಿಗೆ ಅರ್ಜಿ ಆಹ್ವಾನ

ಉಡುಪಿ: ಮೈಸೂರಿನ ಚಾಮರಾಜೇಂದ್ರ ಸರ್ಕಾರಿ ದೃಶ್ಯಕಲಾ ಕಾಲೇಜಿನಲ್ಲಿ ಪ್ರಸಕ್ತ ಶೈಕ್ಷಣಿಕ ಸಾಲಿಗೆ ಮಾತ್ರ ಅತಿಥಿ ಉಪನ್ಯಾಸಕ, ಸಂಪನ್ಮೂಲ ವ್ಯಕ್ತಿಯಾಗಿ ಬೋಧನೆ ಮಾಡಲು ಇಚ್ಛಿಸುವ ಅಭ್ಯರ್ಥಿಗಳು ಗೌರವ ಸಂಭಾವನೆ ಆಧಾರದ ಮೇಲೆ ಷರತ್ತು ಹಾಗೂ ನಿಬಂಧನೆಗಳನ್ವಯ ಕಾರ್ಯನಿರ್ವಹಿಸಲು ಅರ್ಜಿ ಆಹ್ವಾನಿಸಲಾಗಿದೆ. ಮೇ 15ರಂದು ಅರ್ಜಿ ಸ್ವೀಕರಿಸಲು ಕೊನೆಯ ದಿನವಾಗಿದ್ದು, ಮೇ 19 ರಂದು ಬೆಳಿಗ್ಗೆ 11 ಗಂಟೆಗೆ ಸಂಸ್ಥೆಯಲ್ಲಿ ಸಂದರ್ಶನ ನಡೆಯಲಿದೆ. ಆಸಕ್ತ ಅಭ್ಯರ್ಥಿಗಳು ಹೆಚ್ಚಿನ ಮಾಹಿತಿಗಾಗಿ ವೆಬ್‌ಸೈಟ್ www.mysore.nic.in ಅಥವಾ www.cavamysore.karnataka.gov.in ಅಥವಾ ದೂರವಾಣಿ ಸಂಖ್ಯೆ 0821-2438931 ಅನ್ನು ಸಂಪರ್ಕಿಸಬಹುದಾಗಿದೆ ಎಂದು ಕಾವಾ ಪ್ರಕಟಣೆ ತಿಳಿಸಿದೆ.

ಮೊದಲನೇ ಪುಟದಿಂದ

ಪ್ರವಾಸಿಗರ ಹೆದ್ದೆರೆ

ಎಲ್ಲಾ ಕ್ರಮಗಳನ್ನು ಪೂರ್ತಿಕರಿಸಿದ ನಂತರ ಅಂತಹ ಸರ್ಟಿಫಿಕೇಟ್‌ಗಳ ಸಹಿತ ಕೆ-ಸ್ಮಾರ್ಟ್ ಆಫ್‌ನ ಮೂಲಕ ಸ್ಥಳೀಯಾಡಳಿತ ಸಂಸ್ಥೆಯ ಅಸಿಸ್ಟೆಂಟ್ ಇಂಜಿನಿಯರ್‌ಗೆ ಫಿಟ್‌ನೆಸ್ ಸರ್ಟಿಫಿಕೇಟ್‌ಗಾಗಿ ಅರ್ಜಿ ಸಲ್ಲಿಸಬೇಕು. ಮಾತ್ರವಲ್ಲ ಶಾಲಾ ಸುರಕ್ಷಾ ನಿಗಾ ಸಮಿತಿ ಮತ್ತು ಉಪ ಸಮಿತಿಯ ಶಿಫಾರಸನ್ನು ಇದರ ಜೊತೆಗೆ ಕಳುಹಿಸಿಕೊಡಬೇಕಾಗಿದೆ. ಇದನ್ನೆಲ್ಲಾ ಪರಿಶೀಲಿಸಿದ ಬಳಿಕವಷ್ಟೇ ಅಂತಹ ಶಾಲೆಗೆ ಫಿಟ್‌ನೆಸ್ ಸರ್ಟಿಫಿಕೇಟ್ ನೀಡಲಾಗುವುದೆಂಬ ನಿಬಂಧನೆಯನ್ನು ಸ್ಥಳೀಯಾಡಳಿತ ಸಂಸ್ಥೆಗಳು ನೀಡಿವೆ. ಇಂತಹ ನಿಬಂಧನೆಗಳು ಶಾಲಾ ಮುಖ್ಯೋಪಾಧ್ಯಾಯರನ್ನು ಸಂಬಂಧಪಟ್ಟ ಇಲಾಖೆಗಳ ಕಚೇರಿಗಳಿಗೆ ಅತ್ತಿತ್ತ ಓಡಾಡುವಂತೆ ಮಾಡತೊಡಗಿದೆ.

ಹೆಡ್‌ಮಾಸ್ತ್ರು ಹೈರಾಣ

ಬೀಚ್ ಪ್ರದೇಶಗಳಲ್ಲಿ ಬೋಟ್ ಸವಾರಿ, ಒಂಟೆ ಸವಾರಿ, ಕುದುರೆ ಸವಾರಿ, ತೇಲುವ ಸೇತುವೆ ಸೇರಿದಂತೆ ವಿವಿಧ ಮನರಂಜನಾ ಚಟುವಟಿಕೆಗಳು ಪ್ರವಾಸಿಗರನ್ನು ಆಕರ್ಷಿಸಿವೆ. ಮಕ್ಕಳು ಹಾಗೂ ಯುವಕರು ಉಲ್ಲಾಸದಿಂದ ಆಟವಾಡಿ, ಸ್ನೇಹಿತರು?ಕುಟುಂಬದವರೊಂದಿಗೆ ನೆನಪಿನ ಕ್ಷಣಗಳನ್ನು ಕಳೆಯುವ ದೃಶ್ಯ ಸಾಮಾನ್ಯವಾಗಿತ್ತು.

ಯಾವುದೇ ದುರ್ಘಟನೆ ನಡೆಯದಂತೆ ಇಲ್ಲಿ ಭದ್ರತಾ ವ್ಯವಸ್ಥೆಯನ್ನು ಬಲಪಡಿಸಲಾಗಿದ್ದು, ಜೀವ ರಕ್ಷಕ ಸಿಬ್ಬಂದಿ (ಲೈಫ್‌ಗಾರ್ಡ್‌ಗಳು) ಹೆಚ್ಚಿನ ಸಂಖ್ಯೆಯಲ್ಲಿ ನಿಯೋಜನೆಗೊಂಡು, ಸಮುದ್ರದ ಆಳ ಪ್ರದೇಶಗಳಿಗೆ ಯಾರೂ ತೆರಳದಂತೆ ಎಚ್ಚರಿಕೆ ನೀಡುತ್ತಿದ್ದರು. ತೇಲುವ ಸೇತುವೆ ಹಾಗೂ ನೀರಿನ ಚಟುವಟಿಕೆಗಳಲ್ಲಿ ಭಾಗವಹಿಸುವವರಿಗೆ ಜೀವ ರಕ್ಷಕ ಜಾಕೆಟ್‌ಗಳನ್ನು ಕಡ್ಡಾಯವಾಗಿ ನೀಡಲಾಗಿದ್ದು, ಸುರಕ್ಷತೆಗಾಗಿ ಅಗತ್ಯ ಕ್ರಮಗಳನ್ನು ಕೈಗೊಳ್ಳಲಾಗಿದೆ. ಬೀಚ್ ಸುತ್ತಮುತ್ತಲಿನ ಆಹಾರ ಮಳಿಗೆಗಳಲ್ಲಿ ಜನಸಂದಣಿ ಹೆಚ್ಚಾಗಿ ಕಂಡುಬಂದಿದ್ದು, ಪ್ರವಾಸಿಗರು ಮಂಗಳೂರು ಶೈಲಿಯ ಮೀನು ತಿಂಡಿ, ಗೋಳಿ ಬಜೆ, ಬಜ್ಜಿ, ಬನ್ಸ್, ಐಸ್ ಕ್ರೀಮ್ ಸೇರಿದಂತೆ ವಿವಿಧ ರುಚಿಕರ ಖಾದ್ಯ ಆಸ್ವಾದಿಸಿದರು.

ಸಂಜೆ ವೇಳೆ ಸೂರ್ಯಾಸ್ತದ ಸೌಂದರ್ಯ ಕಣ್ತುಂಬಿಕೊಳ್ಳಲು ಅನೇಕರು ಮೊಬೈಲ್‌ಗಳೊಂದಿಗೆ ಸಜ್ಜಾಗಿ ನಿಂತು ಸೆಲ್ಫಿ ತೆಗೆದು, ಆ ಕ್ಷಣಗಳನ್ನು ಸಂಗ್ರಹಿಸಿಕೊಂಡರು. ಒಟ್ಟಾರೆ, ರಜೆಗಳ ಸಡಗರದಲ್ಲಿ ಪಣಂಬೂರು ತಣ್ಣೀರುಬಾವಿ ಬೀಚ್‌ಗಳು ಪ್ರವಾಸಿಗರ ಸಂಭ್ರಮಕ್ಕೆ ಸಾಕ್ಷಿಯಾದವು.

ಮಳೆಗಾಲ ಆರಂಭವಾಗಲು ಇನ್ನು ಕೆಲವೇ ವಾರ ಬಾಕಿ | ನಾಲ್ಕು ಸ್ಥಳಗಳಲ್ಲಿ ಕಿರು ಸೇತುವೆಗಳ ನಿರ್ಮಾಣ

ತಿಂಗಳೊಳಗೆ ಕಾಮಗಾರಿ ಮುಗಿಯದಿದ್ದರೆ ಸಂಚಾರಕ್ಕೆ ಅಡ್ಡಿ

ಬೆಳ್ತಂಗಡಿ: ಮಳೆಗಾಲ ಆರಂಭವಾಗಲು ಇನ್ನು ಕೆಲವೇ ವಾರಗಳಿದ್ದು ಅದರೊಳಗೆ ತಾಲೂಕಿನ ಕೆಲವು ಕಡೆ ಮುಖ್ಯರಸ್ತೆಗಳಲ್ಲಿ ನಿರ್ಮಾಣವಾಗುತ್ತಿರುವ ಕಿರು ಸೇತುವೆಗಳ ಕೆಲಸ ಪೂರ್ಣಗೊಳ್ಳಬೇಕಿದೆ.

ದಿಡುಪೆ-ಪೈಚಾರು ರಾಜ್ಯ ಹೆದ್ದಾರಿಯ ಮುಂಡಾಜೆ- ಕಲ್ಮಂಜ-ಧರ್ಮಸ್ಥಳ ರಸ್ತೆಯ ಪಿಲತ್ತಡ್ಕ, ಒಂಜರೆಬೈಲು ಹಾಗೂ ಕೊತ್ತಳಿಗೆ ಎಂಬ ಮೂರು ಸ್ಥಳಗಳಲ್ಲಿ ಕಿರು ಸೇತುವೆಗಳು 3.75 ಕೋಟಿ ರೂ. ಅನುದಾನದಲ್ಲಿ ಲೋಕೋಪಯೋಗಿ ಇಲಾಖೆ ವತಿಯಿಂದ ನಿರ್ಮಾಣಗೊಳ್ಳುತ್ತಿವೆ.

ಫೆಬ್ರವರಿಯಲ್ಲಿ ಕಾಮಗಾರಿ ಆರಂಭವಾಗಿದ್ದು ಈಗ ಕಾಮಗಾರಿ ಪ್ರಗತಿಯಲ್ಲಿದೆ. ಮುಂದಿನ 1 ತಿಂಗಳೊಳಗೆ ಈ ಕಿರು ಸೇತುವೆಗಳ ಕಾಮಗಾರಿ ಪೂರ್ಣಗೊಳ್ಳದಿದ್ದರೆ ಮಳೆಗಾಲದಲ್ಲಿ ಹೆಚ್ಚಿನ ಸಮಸ್ಯೆ ಉಂಟಾಗಲಿದೆ. ಮುಂಡಾಜೆ-ಕಲ್ಮಂಜ- ಧರ್ಮಸ್ಥಳ ರಸ್ತೆ ಧರ್ಮಸ್ಥಳ, ಕೊಕ್ಕಡ ನಿಡ್ಲೆ, ಮುಂಡಾಜೆ, ಚಾರ್ಮಾಡಿ ಮೊದಲಾದ ಭಾಗಗಳಿಗೆ ತೀರಾ ಸಮೀಪದ ಸಂಪರ್ಕವಾಗಿದೆ. ಸುಮಾರು 6 ಕಿ.ಮೀ ವ್ಯಾಪ್ತಿಯನ್ನು ಕಡಿಮೆಗೊಳಿಸುವ ಈ ರಸ್ತೆಯಲ್ಲಿ



ಪ್ರತಿದಿನ ನೂರಾರು ಪ್ರವಾಸಿ ವಾಹನಗಳಲ್ಲದೇ ಸ್ಥಳೀಯವಾಗಿ ಹೆಚ್ಚಿನ ವಾಹನಗಳ ಓಡಾಟವಿದೆ. ಈ ರಸ್ತೆಯ ಆರು ಕಡೆ ಅಪಾಯಕಾರಿ, ಅಗಲ ಕಿರಿದಾದ, ಶಿಥಿಲಾವಸ್ಥೆ ತಲುಪಿರುವ ಕಿರು ಸೇತುವೆಗಳಿದ್ದು ಈಗ ಮೂರು ಕಡೆ ಹೊಸ ಸೇತುವೆಗಳ ನಿರ್ಮಾಣ ಕಾರ್ಯ ನಡೆಯುತ್ತಿದೆ.

ಅಂಬಡಬೆಟ್ಟು ಸೇತುವೆ

ಉಜಿರೆಯಿಂದ ನಿಡಿಗಲ್ ಮೂಲಕ ನಡ, ಇಂದಬೆಟ್ಟುಕೊಲ್ಲಿ, ಗುರಿಪಳ್ಳಪಡ್ಪು ಮೊದಲಾದ

ಬೇಡಿಕೆ ಈಡೇರಿದೆ

ಅಂಬಡಬೆಟ್ಟು ಎಂಬಲ್ಲಿ ಕಿರು ಸೇತುವೆ ಅತ್ಯಗತ್ಯವಾಗಿತ್ತು. ಈ ಕಿರು ಸೇತುವೆ ನಿರ್ಮಾಣದಿಂದ ಬಹು ವರ್ಷದ ಬೇಡಿಕೆ ಈಡೇರಿದೆ. ಮಳೆಗಾಲದೊಳಗೆ ಕೆಲಸ ಪೂರ್ಣಗೊಳ್ಳುವ ಭರವಸೆ ಸಿಕ್ಕಿದೆ.

● ರಾಧಾಕೃಷ್ಣ, ವಾಹನ ಸವಾರ, ಇಂದಬೆಟ್ಟು

6 ಸೇತುವೆ ಅಗತ್ಯ

ಕಲ್ಮಂಜ ರಸ್ತೆಗೆ 6 ಕಿರು ಸೇತುವೆಗಳ ಅಗತ್ಯವಿದ್ದು ಈಗ 3 ಕಡೆ ಕಾಮಗಾರಿ ಪ್ರಗತಿಯಲ್ಲಿದೆ. ಮಳೆ ಆರಂಭಕ್ಕೆ ಮುಂಚೆ ಕಾಮಗಾರಿ ಪೂರ್ಣಗೊಳ್ಳದಿದ್ದರೆ ಸಂಚಾರ ಸಮಸ್ಯೆ ಉಂಟಾಗಲಿದೆ.

● ಸತೀಶ್ ಭಟ್, ಸ್ಥಳೀಯ, ಕಲ್ಮಂಜ

ಶೀಘ್ರ ಮುಕ್ತಾಯ

ಕಲ್ಮಂಜದ ಮೂರು ಕಡೆ ಹಾಗೂ ಅಂಬಡಬೆಟ್ಟಿನಲ್ಲಿ ನಿರ್ಮಾಣವಾಗುತ್ತಿರುವ ಕಿರು ಸೇತುವೆಗಳ ಕಾಮಗಾರಿ ತ್ವರಿತ ಗತಿಯಲ್ಲಿ ನಡೆಯುತ್ತಿದೆ. ಇದು ಮಳೆಗಾಲ ಆರಂಭದೊಳಗೆ ಪೂರ್ಣಗೊಳ್ಳಲಿದೆ.

● ಬಕಪ್ಪ, ಎಇಇ, ಪಿಡಬ್ಲ್ಯುಡಿ, ಬೆಳ್ತಂಗಡಿ

ಪ್ರದೇಶಗಳ ಸಾವಿರಾರು ಕುಟುಂಬಗಳಿಗೆ ಸಂಪರ್ಕ ಕಲ್ಪಿಸುವ ಅಂಬಡಬೆಟ್ಟು ಕಿರು ಸೇತುವೆ 2.50 ಕೋಟಿ ರೂ. ವೆಚ್ಚದಲ್ಲಿ ನಿರ್ಮಾಣವಾಗುತ್ತಿದ್ದು, 15 ದಿನಗಳ ಹಿಂದಷ್ಟೇ ಕಾಮಗಾರಿ ಆರಂಭವಾಗಿದೆ. ಈ ಕಿರು ಸೇತುವೆ ಕಾಮಗಾರಿ ಮಳೆಗಾಲದೊಳಗೆ ಪೂರ್ಣಗೊಳ್ಳದಿದ್ದರೆ ಹಲವಾರು ಅಡಚಣೆ ಉಂಟಾಗಲಿವೆ.

ಮಳೆಯಲ್ಲಿ ಸಂಪರ್ಕ ಕಡಿತಗೊಂಡರೆ ಇಲ್ಲಿನ ಹಲವಾರು ಪ್ರದೇಶಗಳ ಜನರು ಹಲವು ಕಿ.ಮೀ. ದೂರದ ಸುತ್ತು ಬಳಸಿನ ರಸ್ತೆಗೆ ಮೊರೆ ಹೋಗಬೇಕಾದ ಅನಿವಾರ್ಯತೆ ಉಂಟಾಗುತ್ತದೆ. 4 ಕಿರು ಸೇತುವೆಗಳು ನಿರ್ಮಾಣವಾಗುತ್ತಿರುವ ಪ್ರದೇಶದಲ್ಲಿ ಸಮೀಪದಲ್ಲಿ ಬದಲಿ ರಸ್ತೆ ನಿರ್ಮಿಸಿ ಕೊಡಲಾಗಿದೆ. ಜೋರಾದ ಮಳೆ ಬಂದರೆ ಮಣ್ಣು ಕುಸಿಯುವ ಸಾಧ್ಯತೆಯಿದೆ.

ಬಹು ವರ್ಷದ ಬೇಡಿಕೆ

ಮುಂಡಾಜೆ- ಧರ್ಮಸ್ಥಳ ರಸ್ತೆಯ ಮೂರು ಹಾಗೂ ಅಂಬಡಬೆಟ್ಟು ಎಂಬಲ್ಲಿ ನಿರ್ಮಾಣವಾಗುತ್ತಿರುವ ಕಿರು ಸೇತುವೆಗಳಿಗೆ ಸ್ಥಳೀಯರು ಹಲವಾರು ವರ್ಷಗಳಿಂದ ಬೇಡಿಕೆ ಸಲ್ಲಿಸುತ್ತಾ ಬಂದಿದ್ದರು. ಈಗ ಸೇತುವೆ ನಿರ್ಮಾಣ ಕಾಮಗಾರಿ ಆರಂಭವಾಗಿದೆ. 2024ರ ಮಳೆಗಾಲದಲ್ಲಿ ಈ ಎರಡು ರಸ್ತೆಗಳಲ್ಲಿ ಜನ ವಾಹನ ಸಂಚಾರಕ್ಕೆ ಜಿಲ್ಲಾಧಿಕಾರಿ ನಿಷೇಧವನ್ನು ಹೇರಿದ್ದರು. ಮುಂಡಾಜೆ- ಧರ್ಮಸ್ಥಳ ರಸ್ತೆಯಲ್ಲಿ ಡಿಸಿಯವರ ಆದೇಶ ದಾಖಲೆಗಳಿಗೆ ಮಾತ್ರ ಸೀಮಿತವಾಗಿದ್ದರೆ, ಉಜಿರೆ-ಇಂದಬೆಟ್ಟು ರಸ್ತೆಯಲ್ಲಿ ಘನವಾಹನ ಸಂಚಾರ ನಡೆಯುತ್ತಿರಲಿಲ್ಲ.

ವಿದ್ಯಾರ್ಥಿಗಳಿಗೆ ಅಭಿನಂದನೆ | ವಸಂತ ಅಡ್ಯಂತಾಯ ಅಭಿಪ್ರಾಯ

ಸೂಕ್ತ ಮಾರ್ಗದರ್ಶನದಿಂದ ಸ್ವಸ್ಥ ಸಮಾಜ ನಿರ್ಮಾಣ

ಮಂಗಳೂರು: ಶೈಕ್ಷಣಿಕ ವಿಚಾರಕ್ಕೆ ಆರ್ಥಿಕ, ಸಾಮಾಜಿಕ ಬೆಂಬಲ ನೀಡುವ ಕಾರ್ಯ ಶ್ಲಾಘನೀಯ. ಪ್ರತಿಭೆಗಳಿಗೆ ಸರಿಯಾದ ಮಾರ್ಗದರ್ಶನ ನೀಡಿದರೆ ಸ್ವಸ್ಥ ಸಮಾಜ ನಿರ್ಮಾಣ ಸಾಧ್ಯ ಎಂದು ವಿಶ್ವಕರ್ಮ ಸಹಕಾರ ಬ್ಯಾಂಕ್ ವ್ಯವಸ್ಥಾಪಕ ನಿರ್ದೇಶಕ ವಸಂತ ಅಡ್ಯಂತಾಯ ಹೇಳಿದರು.

ನಗರದ ರಥಬೀದಿಯಲ್ಲಿರುವ ವಿಶ್ವಕರ್ಮ ಸಹಕಾರ ಬ್ಯಾಂಕ್‌ನ ದಿ.ಹರೀಶ್ಚಂದ್ರ ಆಚಾರ್ಯ ತರಬೇತಿ ಕೇಂದ್ರ ಸಭಾಂಗಣದಲ್ಲಿ ಎಜುಕಾರುಣ್ಯ ಚಾರಿಟೆಬಲ್ ಟ್ರಸ್ಟ್ ಮಂಗಳೂರು ಇದರ ವಾರ್ಷಿಕ ಮಹಾಸಭೆ ಹಾಗೂ ಅಭಿನಂದನಾ ಸಮಾರಂಭವನ್ನು ಶುಕ್ರವಾರ ಉದ್ಘಾಟಿಸಿ ಅವರು ಮಾತನಾಡಿದರು.

ಹಿಂದೆ ಶಿಕ್ಷಣ ಪಡೆಯುವುದೇ ಸವಾಲಿನ ಕಾರ್ಯವಾಗಿತ್ತು. ಅನೇಕ ಪ್ರತಿಭಾನ್ವಿತರು ಆರ್ಥಿಕ ಮುಗ್ಗಟ್ಟಿನ ಕಾರಣದಿಂದ ವಿದ್ಯಾಭ್ಯಾಸದಿಂದ ವಿಮುಖರಾಗುತ್ತಿದ್ದರಿಂದ ಅವರ ಭವಿಷ್ಯ ಕಮರಿ ಹೋಗುತ್ತಿತ್ತು ಎಂದು ಹೇಳಿದರು.

ಶ್ರೇಷ್ಠ ನಾಗರಿಕರಾಗಿ

ಅಂಕ ಗಳಿಕೆ ವಿದ್ಯಾರ್ಥಿಯ ಬೌದ್ಧಿಕ ಸಾಮರ್ಥ್ಯವನ್ನು ಅಳೆಯುವ ಮಾನದಂಡವಲ್ಲ. ಜೀವನಪಾಠವನ್ನು ಸಿದ್ಧಿಸಿಕೊಂಡು ಶ್ರೇಷ್ಠ ನಾಗರಿಕರಾದಾಗ



ಸನ್ಮಾನ, ಗೌರವಾರ್ಪಣೆ

ಇದೇ ಸಂದರ್ಭ ದ್ವಿತೀಯ ಪಿಯುಸಿ ವಿಜ್ಞಾನ ವಿಭಾಗದಲ್ಲಿ ಶೇ.93.66 ಅಂಕ ಪಡೆದ ಟ್ರಸ್ಟ್ ವಿದ್ಯಾರ್ಥಿನಿ ಭೂಮಿಕಾ ಅವರನ್ನು ಅಭಿನಂದಿಸಲಾಯಿತು. ಅಲ್ಲದೆ ಪತ್ರಕರ್ತ ರಾಜೇಶ್ ಶೆಟ್ಟಿ ದೋಟ ಅವರನ್ನು ಗೌರವಿಸಲಾಯಿತು.

ಮಾತ್ರ ಪಡೆದ ಸಹಾಯಕ್ಕೆ ಕೃತಜ್ಞತೆ ಸಲ್ಲಿಸಿದಂತಾಗುತ್ತದೆ. ಸಮಾಜದಿಂದ ಪಡೆದದ್ದನ್ನು ಮರಳಿ ಸಮಾಜಕ್ಕೆ ನೀಡುವ ಮನೋಭಾವ ಇರಬೇಕು. ಎಜುಕಾರುಣ್ಯ ಟ್ರಸ್ಟ್ ಕಾರ್ಯ ಶ್ಲಾಘನೀಯ ಎಂದು ಹೇಳಿದರು.

ವಕೀಲ ಜಿತಿನ್ ಜೇಜೋ ವಿದ್ಯಾರ್ಥಿಗಳಿಗೆ ಮಾಹಿತಿ ಕಾರ್ಯಾಗಾರ ನಡೆಸಿಕೊಟ್ಟರು. ತುಲುವೆರೆ ಕಲ ಟ್ರಸ್ಟ್ ಅಧ್ಯಕ್ಷೆ ಗೀತಾ ಲಕ್ಷ್ಮೀಶ್, ಯುವವಾಹಿನಿ ಮಂಗಳೂರು ಘಟಕ ಅಧ್ಯಕ್ಷ ಹರೀಶ್ ಕುಮಾರ್, ಕರಾವಳಿ ಕುರುಬರ ಸಂಘದ ಅಧ್ಯಕ್ಷ ನಿರಂಜನ್, ಉದ್ಯಮಿಗಳಾದ ರಮೇಶ್ ಕೋಟ್ಯಾನ್, ರಾಜೇಶ್ ಅತ್ತಾವರ, ಆದಿತ್ಯ ಎಸ್.ಎಸ್., ಎಜುಕಾರುಣ್ಯ ಟ್ರಸ್ಟ್ ಕಾರ್ಯದರ್ಶಿ ರಮೇಶ್ ಶೆಟ್ಟಿ ವಿವೇಕನಗರ, ಟ್ರಸ್ಟಿಗಳಾದ ಪ್ರಶಾಂತ್ ಮೇಗಿನಹಿತ್ಲು, ದಿನೇಶ್ ನಾಯ್ಕ ಕಾಶಿಪಟ್ಣ ಮತ್ತಿತರರು ಉಪಸ್ಥಿತರಿದ್ದರು.

ಕಾರುಣ್ಯವಾರಿಧಿ ಪ್ರಾರ್ಥಿಸಿದರು. ಎಜುಕಾರುಣ್ಯ ಟ್ರಸ್ಟ್ ಅಧ್ಯಕ್ಷ ಮೋಹನ್ ದಾಸ್ ಮರಕಡ ಸ್ವಾಗತಿಸಿದರು. ಪ್ರಸ್ತಾಪಿಸಿದರು. ಬಬಿತಾ ಎಂ.ಮರಕಡ ವಂದಿಸಿದರು. ವಿದ್ಯಾರ್ಥಿನಿ ವಿನುತಾ ಕಾರ್ಯಕ್ರಮ ನಿರೂಪಿಸಿದರು.

ಡಾ.ಬಿ.ಬಿ. ಹೆಗ್ಡೆ ಕಾಲೇಜು ವಾರ್ಷಿಕೋತ್ಸವ | ಡಾ. ಶ್ರೀನಿವಾಸ ಮೂರ್ತಿ ಹೇಳಿಕೆ

ನಮ್ಮ ಬದುಕನ್ನು ರೂಪಿಸುವ ಶಿಲ್ಪಿಗಳು ನಾವೇ

ಕುಂದಾಪುರ: ಸ್ವಾಮಿ ವಿವೇಕಾನಂದರು ಹೇಳಿದಂತೆ ನಮ್ಮ ಬದುಕನ್ನು ರೂಪಿಸುವ ಶಿಲ್ಪಿಗಳು ನಾವೇ. ಶಾಲಾ-ಕಾಲೇಜು ಶಿಕ್ಷಣದಿಂದ ಶೇಕಡಾ 25ರಷ್ಟು ಮಾತ್ರ ಪ್ರಯೋಜನ ಪಡೆಯಬಹುದು. ಉಳಿದ ಎಲ್ಲವೂ ನಮ್ಮ ಅನುಭವದಿಂದ ಪಡೆಯಬೇಕು. ಬದುಕನ್ನು ಹೇಗೆ ಕಟ್ಟಿಕೊಳ್ಳಬೇಕು ಅನ್ನುವುದನ್ನು ನಾವೇ ನಿರ್ಧಾರ ಮಾಡಬೇಕು ಎಂದು ಶಿವಮೊಗ್ಗದ ವ್ಯಾಲ್ಯೂ ಪ್ರಾಡಕ್ಟ್ ಸಂಸ್ಥೆಯ ಆಡಳಿತ ನಿರ್ದೇಶಕ ಡಾ. ಎ.ಕೆ. ಶ್ರೀನಿವಾಸ ಮೂರ್ತಿ ಹೇಳಿದರು.

ಕುಂದಾಪುರದ ಡಾ. ಬಿ.ಬಿ. ಹೆಗ್ಡೆ ಪ್ರಥಮ ದರ್ಜೆ ಕಾಲೇಜಿನ ವಾರ್ಷಿಕೋತ್ಸವ ಸಮಾರಂಭದಲ್ಲಿ ಮುಖ್ಯ ಅತಿಥಿಯಾಗಿ ಮಾತನಾಡಿದ ಅವರು, ಶಿಕ್ಷಣದಿಂದ ಕೇವಲ ಉದ್ಯೋಗ ಪಡೆಯುವುದಷ್ಟೇ ಅಲ್ಲ, ಜೀವನ ಸಾರ್ಥಕ ಪಡಿಸುವತ್ತ ಯುವ ಸಮುದಾಯ ಪ್ರಯತ್ನಪಡಬೇಕು ಎಂದರು.

ಇನ್ನೋರ್ವ ಅತಿಥಿ ಜಿ.ಎಸ್. ಶಾಮಿಲಿ 'ಇನ್ಫ್ರಾಸ್ಟ್ರಕ್ಚರ್' ಪ್ರೈವೇಟ್ ಲಿಮಿಟೆಡ್‌ನ ವ್ಯವಸ್ಥಾಪಕ ನಿರ್ದೇಶಕಿ ಶಾಮಿಲಿ ಶಂಕರ್ ಮಾತನಾಡಿ, ಶಿಕ್ಷಣವೆಂದರೆ ಕೇವಲ ಅಂಕಗಳಿಕೆಯೊಂದೇ ಅಲ್ಲ, ಬದುಕಿಗೆ ಭವಿಷ್ಯದ ಸಾಧನೆಗೆ ಬೇಕಾದ ಕೌಶಲ, ನಾಯಕತ್ವ ಗುಣ, ಶಿಸ್ತನ್ನು ಕಲಿಸುವುದು



ವಿವಿ ಮಟ್ಟದ ರ‍್ಯಾಂಕ್ ವಿಜೇತರಿಗೆ ಸನ್ಮಾನ

ಮಂಗಳೂರು ವಿವಿ ಮಟ್ಟದಲ್ಲಿ ರ‍್ಯಾಂಕ್ ವಿಜೇತ ವಿದ್ಯಾರ್ಥಿಗಳಾದ ಶ್ರೇಯಾ, ಸುಹಾನಿ, ನಿವಿತಾ, ಶ್ರದ್ಧಾ ಆರ್. ಅವರನ್ನು ಕುಂದಾಪುರ ಎಜುಕೇಶನ್ ಸೊಸೈಟಿ ಅಧ್ಯಕ್ಷ ಬಿ.ಎಂ. ಸುಕುಮಾರ ಶೆಟ್ಟಿ ಸನ್ಮಾನಿಸಿದರು.

ಸಹ ಶಿಕ್ಷಣದ ಭಾಗ. ಕಾಲೇಜಿನ ಅದ್ಭುತ ಕ್ಷಣಗಳನ್ನು ಆನಂದಿಸಿ, ಸಿಕ್ಕ ಅವಕಾಶ ಸದುಪಯೋಗಪಡಿಸಿಕೊಂಡು, ಮುನ್ನಡೆಯಿರಿ ಎಂದರು.

ಕುಂದಾಪುರ ಎಜುಕೇಶನ್ ಸೊಸೈಟಿ ಅಧ್ಯಕ್ಷ ಬಿ.ಎಂ. ಸುಕುಮಾರ ಶೆಟ್ಟಿ ಅಧ್ಯಕ್ಷತೆ ವಹಿಸಿದ್ದರು. ಸಂಸ್ಥೆಯ ಕಾರ್ಯದರ್ಶಿ ಸೀತಾರಾಮ ನಕ್ಕತ್ತಾಯ, ಜೊತೆ ಕಾರ್ಯದರ್ಶಿ ಸುಧಾಕರ್ ಶೆಟ್ಟಿ ಬಾಂಡ್ಯ, ಗವರ್ನಿಂಗ್ ಕೌನ್ಸಿಲ್ ಸದಸ್ಯರಾದ ನಾರಾಯಣ್ ನಾಯಕ್ ನೇರಳಕಟ್ಟೆ, ಕೆ.ಸಿ. ರಾಜೇಶ್, ಶೀನಾ ಪೂಜಾರಿ ಮುದೂರು ಉಪಸ್ಥಿತರಿದ್ದರು. ಉಪ ಪ್ರಾಂಶುಪಾಲ ಡಾ. ಚೇತನ್ ಶೆಟ್ಟಿ ಕೋವಾಡಿ ಸ್ವಾಗತಿಸಿದರು. ಕಾಲೇಜಿನ ಪ್ರಾಂಶುಪಾಲ ಪ್ರೊ. ಡಾ. ಕೆ. ಉಮೇಶ್ ಶೆಟ್ಟಿ ವಾರ್ಷಿಕ ವರದಿ ವಾಚಿಸಿದರು. ವಾಣಿಜ್ಯ ವಿಭಾಗದ ಸಹಾಯಕ ಪ್ರಾಧ್ಯಾಪಕ ಅಣ್ಣಪ್ಪ ಶೆಟ್ಟಿ ಹಾಗೂ ಗಣಕ ವಿಜ್ಞಾನ ವಿಭಾಗದ ಸಹಾಯಕ ಪ್ರಾಧ್ಯಾಪಕ ಪ್ರಣಮ್ ಆರ್. ಅತಿಥಿಗಳನ್ನು ಪರಿಚಯಿಸಿದರು. ಆಡಳಿತ ನಿಕಾಯಕ ರಕ್ಷಿತ್ ರಾವ್ ಗುಜ್ಜಾಡಿ ಸಾಧಕರ ಪಟ್ಟಿ ವಾಚಿಸಿದರು. ಕಾರ್ಯಕ್ರಮ ಸಂಯೋಜಕ ಮಹೇಶ್ ಕುಮಾರ್ ವಂದಿಸಿದರು. ಪೂಜಾ ಕುಂದರ್ ನಿರೂಪಿಸಿದರು.

ಕಡಬ ಒಕ್ಕಲಿಗ ಗೌಡ ಸೇವಾ ಸಂಘ: ಶೈಕ್ಷಣಿಕ ಮಾಹಿತಿ ಕಾರ್ಯಾಗಾರ



ಕಡಬ: ಕಡಬ ತಾಲೂಕು ಒಕ್ಕಲಿಗ ಗೌಡ ಸೇವಾ ಸಂಘದ ವತಿಯಿಂದ ಕಡಬ ತಾಲೂಕಿನ ಪ್ರೌಢ ಹಾಗೂ ಪಿಯುಸಿಯಲ್ಲಿ ವ್ಯಾಸಂಗ ಮಾಡುತ್ತಿರುವ ವಿದ್ಯಾರ್ಥಿಗಳಿಗಾಗಿ ಶೈಕ್ಷಣಿಕ ಮಾಹಿತಿ ಕಾರ್ಯಾಗಾರ ಹೊಸಮಠ ಒಕ್ಕಲಿಗ ಗೌಡ ಸಮುದಾಯ ಭವನದಲ್ಲಿ ನಡೆಯಿತು.

ಕನ್ನಡ ಸಾಹಿತ್ಯ ಪರಿಷತ್‌ನ ಕಡಬ ತಾಲೂಕು ಘಟಕದ ಮಾಜಿ ಅಧ್ಯಕ್ಷ ಜನಾರ್ದನ ಗೌಡ ಪಣೆಮಜಲು ಉದ್ಘಾಟಿಸಿದರು. ಒಕ್ಕಲಿಗ ಗೌಡ ಸೇವಾ ಸಂಘದ ಮಾತೃ ಸಮಿತಿಯ ಉಪಾಧ್ಯಕ್ಷ ತಮ್ಮಯ್ಯ ಗೌಡ ಸುಳ್ಯ ಅಧ್ಯಕ್ಷತೆ ವಹಿಸಿದ್ದರು. ಮೈಸೂರು ವಿಶ್ವೇಶ್ವರಯ್ಯ ತಾಂತ್ರಿಕ ವಿಶ್ವವಿದ್ಯಾನಿಲಯದ ಸ್ನಾತಕೋತ್ತರ ಅಧ್ಯಯನ ಮತ್ತು ಸಂಶೋಧನಾ ಕೇಂದ್ರದ ಇಂಜಿನಿಯರಿಂಗ್ ವಿಭಾಗದ ಮುಖ್ಯಸ್ಥೆ ಡಾ. ಕೀರ್ತಿ ಗೌಡ ಬಿ.ಎಸ್., ಅಬಕಾರಿ ಇಲಾಖೆಯ ನಿವೃತ್ತ ಜಂಟಿ ಆಯುಕ್ತ ಗೋಪಾಲಕೃಷ್ಣ ಗೌಡ ಪುಯಿಲ, ಬೆಳಗಾಂ ವಿಶ್ವೇಶ್ವರಯ್ಯ ತಾಂತ್ರಿಕ ವಿಶ್ವವಿದ್ಯಾನಿಲಯದ ನಿವೃತ್ತ ಪ್ರಾದೇಶಿಕ ನಿರ್ದೇಶಕ ಡಾ. ಶಿವಕುಮಾರ್ ಹೊಸೊಳಿಕೆ ಸಂಪನ್ಮೂಲ ವ್ಯಕ್ತಿಗಳಾಗಿದ್ದರು. ಒಕ್ಕಲಿಗ ಗೌಡ ಸ್ಪಂದನ ಸ್ವಸಹಾಯ ಟ್ರಸ್ಟ್‌ನ ಸಮನ್ವಯಾಧಿಕಾರಿ ವಾಸುದೇವ ಕೋಲ್ಪೆ, ಟ್ರಸ್ಟ್‌ನ ಪ್ರಧಾನ ಸಂಚಾಲಕ ಬಾಲಕೃಷ್ಣ ಗೌಡ ಕೋಲ್ಪೆ, ಪ್ರಮುಖರಾದ ಚೇತನ್ ಕುಮಾರ್ ಆನೆಗುಂಡಿ, ಪೂರ್ಣೇಶ್ ಗೌಡ ಬಾಬ್ಲುಬೆಟ್ಟು, ಆಶಾ ತಿಮ್ಮಪ್ಪ ಗೌಡ, ಎ.ಪಿ. ಗಿರೀಶ್ ಇದ್ದರು. ಸಮಾರೋಪ ಸಮಾರಂಭದಲ್ಲಿ ಕಡಬ ತಾಲೂಕು ಒಕ್ಕಲಿಗ ಗೌಡ ಸೇವಾ ಸಂಘದ ಅಧ್ಯಕ್ಷ ಸುರೇಶ್ ಗೌಡ ಬೈಲು ಅಧ್ಯಕ್ಷತೆ ವಹಿಸಿದ್ದರು. ಒಕ್ಕಲಿಗ ಗೌಡ ಸೇವಾ ಸಂಘದ ವ್ಯವಸ್ಥಾಪಕ ಅಶೋಕ್ ಶೇಡಿ ಸ್ವಾಗತಿಸಿದರು. ಜನಾರ್ದನ ಗೌಡ ಪಾಡ್ಲ ವಂದಿಸಿದರು.

ಯಕ್ಷ ಧ್ರುವ ಪಟ್ಲ ಫೌಂಡೇಶನ್ ಕಿನ್ನಿಗೋಳಿ ಘಟಕದ ವಾರ್ಷಿಕೋತ್ಸವ



ಕಿನ್ನಿಗೋಳಿ: ಯಕ್ಷ ಧ್ರುವ ಪಟ್ಲ ಫೌಂಡೇಶನ್ ಕಿನ್ನಿಗೋಳಿ ಘಟಕದ ವಾರ್ಷಿಕೋತ್ಸವ ಕಿನ್ನಿಗೋಳಿ ಬಸ್ ನಿಲ್ದಾಣದಲ್ಲಿ ಹಾಕಲಾದ ಪಾವಂಜೆ ಮೇಳದ ರಂಗಸ್ಥಳದಲ್ಲಿ ನಡೆಯಿತು.

ಕಟೀಲು ದೇವಳದ ಅರ್ಚಕ ಲಕ್ಷ್ಮೀನಾರಾಯಣ ಅಸ್ರಣ್ಣ, ಕಿನ್ನಿಗೋಳಿ ಘಟಕದ ಅಧ್ಯಕ್ಷ ಪುರುಷೋತ್ತಮ ಶೆಟ್ಟಿ, ಸ್ಥಾಪಕಾಧ್ಯಕ್ಷರಾದ ಯಕ್ಷಧ್ರುವ ಪಟ್ಲ ಸತೀಶ್ ಶೆಟ್ಟಿ, ಪಟ್ಲ ಫೌಂಡೇಶನ್ನಿನ ಟ್ರಸ್ಟಿಗಳಾದ ಸಿತ್ಲ ದಿವಾಕರ ರಾವ್, ಭುವನಾಭಿರಾಮ ಉಡುಪ, ಪೃಥ್ವಿರಾಜ್ ಆಚಾರ್ಯ, ಉದ್ಯಮಿ ಧನಪಾಲ್ ಶೆಟ್ಟಿ ತಾಳಿಪಾಡಿಗುತ್ತು, ಸತೀಶ್ ಎಂ, ಕಿನ್ನಿಗೋಳಿ ಪಟ್ಟಣ ಪಂಚಾಯತ್ ಅಧ್ಯಕ್ಷರಾದ ಗುರುರಾಜ್ ಮಲ್ಲಿಗೆ ಅಂಗಡಿ, ದಾಮೋದರ ಶೆಟ್ಟಿ ಕೊಡೆತ್ತೂರು ಸದಸ್ಯರಾದ ಜಯ ಚೌಟ, ಸ್ವರಾಜ್ ಶೆಟ್ಟಿ ಮುಂಡ್ಕೂರು, ಮಂಜುನಾಥ್, ಮೋಹನ್ ಮೂರುಕಾವೇರಿ, ದೇವಿಪ್ರಸಾದ್ ಶೆಟ್ಟಿ ದೇವಸ್ಯ, ಉಪಸ್ಥಿತರಿದ್ದರು.

ಯಕ್ಷಗಾನ ತಾಳಮದ್ದಳೆ ಅರ್ಥದಾರಿ ಶ್ರೀಧರ ಶೆಟ್ಟಿ ಕೊಕ್ಕಾರುಗುತ್ತು ಹಾಗೂ ಪಾವಂಜೆ ಮೇಳದ ಹಾಸ್ಯಗಾರರು ಸಂದೇಶ ಮಂದಾರ ಅವರನ್ನು ಸಂಮಾನಿಸಲಾಯಿತು.

ಶಶಿಕಾಂತ್ ಶೆಟ್ಟಿ ಕಾರ್ಕಳ ಮತ್ತು ಶಶಿಕಲಾ ಇವರಿಗೆ ವೈದ್ಯಕೀಯ ನೆರವು ಹಾಗೂ ಕುಮಾರಿ ಅನ್ನ ಆಚಾರ್ಯ ಇವರಿಗೆ ಪ್ರತಿಭಾ ಪುರಸ್ಕಾರ ನೀಡಲಾಯಿತು. ಯಕ್ಷಧ್ರುವ ಪಟ್ಲ ಸತೀಶ್ ಶೆಟ್ಟಿ ಇವರನ್ನು ಗೌರವಿಸಲಾಯಿತು. ದಿವಾಕರ ಕರ್ಕೇರ ಸನ್ಮಾನಪತ್ರ ವಾಚಿಸಿದರು, ಸಾಯಿನಾಥ ಶೆಟ್ಟಿ ಮುಂಡ್ಕೂರು ಸ್ವಾಗತಿಸಿ ಶರತ್ ಶೆಟ್ಟಿ ಕಿನ್ನಿಗೋಳಿ ನಿರೂಪಿಸಿ ವಂದಿಸಿದರು. ಪಾವಂಜೆ ಮೇಳದವರಿಂದ ಶ್ರೀ ದೇವಿ ಮಹಾತ್ಮೆ ಯಕ್ಷಗಾನ ಜರುಗಿತು.

ಎ.ಬಿ.ಸುಬ್ಬಯ್ಯ ನಿವಾಸಕ್ಕೆ ಶಾಸಕ ಪೊನ್ನಣ್ಣ ಭೇಟಿ



ಮಡಿಕೇರಿ: ಭಾರತ ಹಾಕಿಯ ಧ್ರುವತಾರೆ ಎಂದು ಬಿಂಬಿತರಾಗಿರುವ ಖ್ಯಾತ ಅಂತರರಾಷ್ಟ್ರೀಯ ಹಾಕಿ ಪಟು, ಮಾಜಿ ಒಲಂಪಿಯನ್, ಭಾರತ ಹಾಕಿ ತಂಡದ ಮಾಜಿ ಗೋಲ್ ಕೀಪರ್ ಎ.ಬಿ.ಸುಬ್ಬಯ್ಯ ನಿವಾಸಕ್ಕೆ ಶಾಸಕ ಎ.ಎಸ್. ಪೊನ್ನಣ್ಣ ಶುಕ್ರವಾರ ಭೇಟಿ ನೀಡಿದರು. ಎ.ಬಿ.ಸುಬ್ಬಯ್ಯ ಅವರ ತಂದೆ ಅಂಜಪರವಂಡ ಬೋಪಯ್ಯ (92) ಅವರು ಗುರುವಾರ ನಿಧನರಾದ ಹಿನ್ನಲೆಯಲ್ಲಿ ಅವರ ಕುಟುಂಬಕ್ಕೆ ಸಾಂತ್ವನ ಹೇಳಲು ಪೊನ್ನಣ್ಣ ಅವರು ಸುಬ್ಬಯ್ಯ ನಿವಾಸಕ್ಕೆ ಭೇಟಿ ನೀಡಿದರು. ನಿವೃತ್ತ ಡಿಸಿಎಫ್ ವಾಟೇರಿರ ಕಾರ್ಯಪ್ಪ, ಸೂರಜ್ ಹೊಸೂರು, ತೆನ್ನಿರ ಮೈನಾ ಇದ್ದರು.



ಪಂಜ ಸೀಮೆಯ ಶ್ರೀ ಸದಾಶಿವ ಪರಿವಾರ ಪಂಚಲಿಂಗೇಶ್ವರ ದೇವಸ್ಥಾನದಲ್ಲಿ ಪ್ರತಿಷ್ಠಾ ವಾರ್ಷಿಕೋತ್ಸವ ನಡೆಯಿತು. ವ್ಯವಸ್ಥಾಪನಾ ಸಮಿತಿ ಅಧ್ಯಕ್ಷ ಡಾ.ದೇವಿ ಪ್ರಸಾದ್ ಕಾನತ್ತೂರು, ಸದಸ್ಯರಾದ ಸಂತೋಷ್ ಕುಮಾರ್ ರೈ, ಧರ್ಮಣ್ಣ ನಾಯ್ಕ ಗರಡಿ, ಮೋಯಿಲಪ್ಪ ಎಣ್ಮೂರು, ಧರ್ಮಪಾಲ ಮರಕಡ, ಪವಿತ್ರ ಮಲ್ಲೆಟಿ ಇದ್ದರು.

ಉಜಿರೆ ಶ್ರೀ ಜನಾರ್ದನ ದೇವಸ್ಥಾನ, ತುಳು ಶಿವಳ್ಳಿ ಸಭಾದ ವಸಂತ ವೇದ ಪಾಠ ಶಿಬಿರ ಸಮಾರೋಪ | ಡಾ. ಶ್ರೀಧರ ಭಟ್ ಬಣ್ಣನೆ

ಗುರು ಅನುಗ್ರಹ, ಮಂತ್ರದ ಪ್ರಭಾವ, ವೇದಮಂತ್ರ ಪಠಣದಿಂದ ಜೀವನಕ್ಕೆ ರಕ್ಷೆ

ಬೆಳ್ತಂಗಡಿ: ಬ್ರಾಹ್ಮಣ್ಯದಿಂದ ವಂಚಿತರಾಗಬಾರದೆಂಬ ಕಾರಣಕ್ಕಾಗಿ ಉಪನೀತ ವಟುಗಳಿಗೆ ವಸಂತ ವೇದ ಪಾಠ ಶಿಬಿರದ ಮೂಲಕ ಸಂಧ್ಯಾವಂದನೆ, ಸೂಕ್ತಗಳು, ಶ್ರೀ ರುದ್ರ, ಗಾಯತ್ರಿ ಮಂತ್ರ, ನಿತ್ಯ ಪೂಜಾ ಪದ್ಧತಿ ಇತ್ಯಾದಿ ಸಂಸ್ಕಾರ, ಅಧ್ಯಯನ ಕಲಿಸಿಕೊಡಲಾಗುತ್ತಿದೆ. ಗುರುವಿನ ಅನುಗ್ರಹವಿಲ್ಲದೆ ಯಾವ ವಿದ್ಯೆಯೂ ಫಲಿಸುವುದಿಲ್ಲ, ಗುರುವಿನ ಅನುಗ್ರಹ, ಮಂತ್ರದ ಪ್ರಭಾವ, ವೇದಮಂತ್ರ ಪಠಣ ನಮ್ಮನ್ನು ಜೀವನ ಪರ್ಯಂತ ರಕ್ಷಿಸುತ್ತದೆ. ಭಕ್ತಿ, ಶ್ರದ್ಧೆಯಿಂದ ಕಲಿತ ಒಳ್ಳೆಯ ಸಂಸ್ಕಾರ, ನಮ್ಮ ಸಂಸ್ಕೃತಿ, ಬ್ರಾಹ್ಮಣ್ಯವನ್ನು ಯಾವತ್ತೂ ಬಿಡಬಾರದು ಎಂದು ಉಜಿರೆ ಎಸ್‌ಡಿಎಂ ಕಾಲೇಜಿನ ಸಂಸ್ಕೃತ ವಿಭಾಗದ ಮುಖ್ಯಸ್ಥ ಡಾ. ಶ್ರೀಧರ ಭಟ್ ನುಡಿದರು.

ಅವರು ಉಜಿರೆ ಶ್ರೀ ರಾಮಕೃಷ್ಣ ಸಭಾಮಂಟಪದಲ್ಲಿ ಶ್ರೀ ಜನಾರ್ದನ ದೇವಸ್ಥಾನದ ಆಶ್ರಯದಲ್ಲಿ ತಾಲೂಕು ತುಳು ಶಿವಳ್ಳಿ ಸಭಾ ಸಹಯೋಗದೊಂದಿಗೆ ನಡೆದ 15 ದಿನಗಳ ವಸಂತ ವೇದ ಪಾಠ ಶಿಬಿರದ ಸಮಾರೋಪ ಸಮಾರಂಭದಲ್ಲಿ ಅವರು ಮಾತನಾಡಿದರು.



ಅಧ್ಯಕ್ಷತೆ ವಹಿಸಿದ್ದ ತಾಲೂಕು ತುಳು ಶಿವಳ್ಳಿ ಸಭಾ ಅಧ್ಯಕ್ಷ ರಾಜಪ್ರಸಾದ್ ಪೋಲ್ನಾಯ ವಟುಗಳಿಗೆ ಬ್ರಾಹ್ಮಣ್ಯ, ಸಂಸ್ಕಾರ ಉಳಿಯಬೇಕು. ಜೀವನ ಪಾಠ ಕಲಿಸಬೇಕು. ಮುಂದೆ ಅವರು ಸತ್ಪ್ರಜೆಗಳಾಗಿ, ನೀತಿವಂತರಾಗಿ ಬಾಳುವುದೇ ವಸಂತ ವೇದ ಪಾಠ ಶಿಬಿರದ ಉದ್ದೇಶವಾಗಿದೆ ಎಂದರು.

ಶ್ರೀ ಜನಾರ್ದನ ದೇವಸ್ಥಾನದ ಆನುವಂಶಿಕ ಆಡಳಿತ ಮೊಕ್ತೇಸರ ಶರತ್‌ಕೃಷ್ಣ ಪಡುವೆಟ್ನಾಯ ಸ್ವಾಗತಿಸಿ, ಪ್ರಸ್ತಾವಿಸಿ ಕಳೆದ 2 ದಶಕಗಳಿಂದ ಉಪನೀತ ವಟುಗಳಿಗೆ ಬ್ರಾಹ್ಮಣ್ಯದ ಸಂಸ್ಕಾರ ನೀಡುವ ಪ್ರಯತ್ನ ಶಿಬಿರದ ಮೂಲಕ ನಡೆಸಲಾಗುತ್ತಿದೆ. ಅದು ಅವರ ಮುಂದಿನ ಜೀವನಕ್ಕೆ ಪ್ರಯೋಜನಕಾರಿಯಾಗಿ, ಭವಿಷ್ಯದ ಜೀವನಕ್ಕೆ ಸುಗಮಹಾದಿ ರೂಪಿಸುವಲ್ಲಿ ಸಹಕಾರಿಯಾಗಲಿದೆ. ಶಿಬಿರಕ್ಕೆ ಸಹಕರಿಸಿದವರಿಗೆ ಕೃತಜ್ಞತೆಗಳನ್ನು ಅರ್ಪಿಸಿದರು.

ಗುರುಗಳಾದ ಗುರುರಾಜ ಆಚಾಯ, ಶಿಬಿರದ ಪಾಲಕ ವಿಠಲ ಅಮ್ಮಣ್ಣಾಯ ಮಾತನಾಡಿದರು. ಶಿಬಿರಾರ್ಥಿಗಳಾದ ಶ್ರೀಪಾಲ, ಅನಿಶ್ ಸೋಮಯಾಜಿ, ಹೃತ್ವಿಕ್ ಮತ್ತು ಧ್ರುವ ಅನಿಸಿಕೆ ವ್ಯಕ್ತಪಡಿಸಿದರು. ವೇದಿಕೆಯಲ್ಲಿ ತಾಲೂಕು ತುಳು ಶಿವಳ್ಳಿ ಮಹಿಳಾ ಘಟಕ ಅಧ್ಯಕ್ಷೆ ಜಯಾ ಅನಂತಕೃಷ್ಣ ಆರ್ಮುಡತ್ತಾಯ, ಗುರುಗಳಾದ ಬೆಂಗಳೂರು ಶ್ರೀ ಪೂರ್ಣಪ್ರಜ್ಞ ವಿದ್ಯಾಪೀಠದ ವಾದಿರಾಜ ಆಚಾರ್ಯ, ಗುರುರಾಜ ಆಚಾರ್ಯ, ಅಮೋಘ ಆಚಾರ್ಯ ಮತ್ತು ವಿಷ್ಣುಮೂರ್ತಿ ಆಚಾರ್ಯ ಇದ್ದರು. ವಿದ್ಯಾರ್ಥಿಗಳಿಗೆ ಬಹುಮಾನ ಹಾಗೂ ಭಾಗವಹಿಸಿದ ಶಿಬಿರಾರ್ಥಿಗಳಿಗೆ ಪ್ರಮಾಣ ಪತ್ರ ವಿತರಿಸಲಾಯಿತು. ಶಿಬಿರಕ್ಕೆ ಸಹಕರಿಸಿದ ಕಾರ್ತಿಕ್ ದಾಮ್ಲೆ, ಪ್ರಭಾತ್ ರಾವ್, ನಾಗರತ್ನ ರಾಜಕುಮಾರ್, ರಮಾ, ಪ್ರಿಯಾ, ಸೇಸಪ್ಪ ದೇವಾಡಿಗ, ಶ್ಯಾಂಪ್ರಸಾದ್ ದೇಸಾಯಿ, ಮ್ಯಾನೇಜರ್ ಹರ್ಷಕುಮಾರ್ ಕೆದಿಲಾಯ ಅವರನ್ನು ಗೌರವಿಸಲಾಯಿತು. ಶಿಕ್ಷಕ ರಾಮಕೃಷ್ಣ ಮಡವುಳಿತ್ತಾಯ ನಿರೂಪಿಸಿದರು. ಹರ್ಷಕುಮಾರ್ ಕೆದಿಲಾಯ ವಂದಿಸಿದರು.

ಸುತ್ತ ಮುತ್ತ

ಬ್ರಹ್ಮಶ್ರೀ ರಿಕ್ಷಾ ನಿಲ್ದಾಣ ಉದ್ಘಾಟನೆ


ಬಂಟ್ವಾಳ: ಭಾರತ್ ಆಗ್ರೋವೆಟ್ ಇಂಡಸ್ಟ್ರಿ ವತಿಯಿಂದ ಬ್ರಹ್ಮರಕೊಟ್ಲು ಬಳಿ ಬ್ರಹ್ಮಶ್ರೀ ರಿಕ್ಷಾ ಚಾಲಕ ಮತ್ತು ಮಾಲಕರ ಸಂಘಕ್ಕೆ ಕೊಡುಗೆಯಾಗಿ ನಿರ್ಮಿಸಿಕೊಟ್ಟ ಬ್ರಹ್ಮಶ್ರೀ ರಿಕ್ಷಾ ನಿಲ್ದಾಣವನ್ನು ಜ್ಯೋತಿಷಿ, ಸಂಸ್ಕಾರ ಭಾರತಿಯ ತಾಲೂಕು ಅಧ್ಯಕ್ಷ ಅನಿಲ್ ಪಂಡಿತ್ ವಳವೂರು ಅವರು ಉದ್ಘಾಟಿಸಿದರು. ಪ್ರಗತಿಪರ ಕೃಷಿಕ ಜ್ಯೋತೀಂದ್ರ ಶೆಟ್ಟಿ ಮುಂಡಾಜೆಗುತ್ತು, ಬಿ.ಸಿ.ರೋಡಿನ ಯುವ ನ್ಯಾಯವಾದಿ ಅರುಣ್ ರೋಷನ್ ಡಿಸೋಜ, ತಾ ಪಂ ಮಾಜಿ ಉಪಾಧ್ಯಕ್ಷ ಪುರುಷ ಸಾಲ್ಯಾನ್ ನೆತ್ತರಕೆರೆ, ಬ್ರಹ್ಮರಕೊಟ್ಲು ಶ್ರೀರಾಮ ಭಜನಾ ಮಂದಿರದ ಅಧ್ಯಕ್ಷ ಶಶಿಧರ ಬ್ರಹ್ಮರಕೊಟ್ಲು ಕಳ್ಳಿಗೆ ಗ್ರಾಪಂ ಸದಸ್ಯರಾದ ಮನೋಜ್ ವಳವೂರು,ರವಿರಾಜ್ ಜೈನ್ ಮಾಡಂಗೆ, ಸಾಮಾಜಿಕ ಕಾರ್ಯಕರ್ತೆ ಪ್ರಿಯ ಸುನೀಲ್ ದರಿಬಾಗಿಲು, ಸಮಿತಿಯ ಅಧ್ಯಕ್ಷರಾದ ರೂಪೇಶ್ ಜ್ಯೋತಿಗುಡ್ಡೆ, ಹಿರಿಯ ರಿಕ್ಷಾ ಚಾಲಕ ಸತೀಶ್ ಬ್ರಹ್ಮರಕೊಟ್ಲು ಮತ್ತಿತರರು ಉಪಸ್ಥಿತರಿದ್ದರು. ಕುಮಾರಿ ಧರಿತ್ರಿ ಪ್ರಾರ್ಥಿಸಿ, ಪ್ರವೀಣ್ ಲೋಬೋ ಸ್ವಾಗತಿಸಿದರು, ಪೂವಪ್ಪ ದರಿಬಾಗಿಲು ವಂದಿಸಿದರು. ಮೊಹಮ್ಮದ್ ಆಲಿ ಕಾರ್ಯಕ್ರಮ ನಿರೂಪಿಸಿದರು.

ಕೋಡಿ ಬೀಚ್‌ನಲ್ಲಿ ಸ್ವಚ್ಛತಾ ಕಾರ್ಯ

ಕುಂದಾಪುರ: ಕುಂದಾಪುರದ ಮೂಡ್ಲಕಟ್ಟೆ ತಾಂತ್ರಿಕ ವಿದ್ಯಾಲಯದ ಎಂಬಿಎ ವಿಭಾಗದ ವತಿಯಿಂದ ಭಾರತ್ ಎನ್ವಿರಾನ್ಮೆಂಟ್ ಪ್ರೋಗ್ರಾಮ್ – ಅರ್ಥ್ ವೀಕ್ ಸೆಲೆಬ್ರೇಶನ್ ಕಾರ್ಯಕ್ರಮ ನಡೆಯಿತು. ಎಂಬಿಎ ಮುಖ್ಯಸ್ಥೆ ಡಾ. ಸುಚಿತ್ರ ಪೂಜಾರಿ ಅವರ ನೇತೃತ್ವದಲ್ಲಿ ಕೋಡಿ ಬೀಚ್‌ನಲ್ಲಿ ಸ್ವಚ್ಛತಾ ಕಾರ್ಯ ನಡೆಸಲಾಯಿತು. ಪ್ಲಾಸ್ಟಿಕ್ ಬ್ಯಾಗ್‌ನ ಉಪಯೋಗವನ್ನು ಕಡಿಮೆ ಮಾಡಿ ಬಟ್ಟೆಯಿಂದ ತಯಾರಿಸಿದ ಬ್ಯಾಗ್‌ಗಳನ್ನು ಉಪಯೋಗಿಸಲು ಪ್ರೋತ್ಸಾಹಿಸುವ ಉದ್ದೇಶದಿಂದ ಪ್ರತಿ ಮನೆಗೂ ಒಂದೊಂದು ಬಟ್ಟೆಯಿಂದ ತಯಾರಿಸಿದ ಬ್ಯಾಗ್ ಗಳನ್ನು ವಿತರಿಸಲಾಯಿತು. ಎಂಬಿಎ ವಿಭಾಗದ ಸಹಾಯಕ ಪ್ರಾಧ್ಯಾಪಕರಾದ ತಿಲಕ ಲಕ್ಷ್ಮೀ, ಚೈತ್ರಾಲಿ ಮತ್ತು ನಾಗವೇಣಿ ಅವರು ಕಾರ್ಯಕ್ರಮದ ಉಸ್ತುವಾರಿ ವಹಿಸಿದ್ದರು.

ಮೇ 15ರಂದು ಕನಕದಾಸರ ಸಮಗ್ರ ಸಾಹಿತ್ಯ ಕೃತಿ ಬಿಡುಗಡೆ

ಮಡಿಕೇರಿ: ಕೊಡಗಿನ ಹಿರಿಯ ಸಾಹಿತಿ ನಾಗೇಶ್ ಕಾಲೂರು ಕೊಡವ ಭಾಷಾ ಆವೃತ್ತಿಗೆ ಸಂಪಾದಕರಾಗಿರುವ ಕನಕದಾಸರ ಸಮಗ್ರ



ಸಾಹಿತ್ಯ ಕೃತಿ ಮೇ 15 ರಂದು ಬೆಂಗಳೂರಿನಲ್ಲಿ ಲೋಕಾರ್ಪಣೆಯಾಗಲಿದೆ. ಕನಕದಾಸರ ಸಮಗ್ರ ಸಾಹಿತ್ಯವು ಕೊಡವ ಭಾಷೆ ಸೇರಿದಂತೆ ಭಾರತದ 14 ಭಾಷೆಗಳಿಗೆ ಅನುವಾದಿಸಲ್ಪಟ್ಟಿದೆ. ಸಂತಕವಿ ಕನಕದಾಸ ಮತ್ತು ತತ್ವಪದಕಾರರ ಅಧ್ಯಯನ ಕೇಂದ್ರದಿಂದ ಈ ಕೃತಿಗಳನ್ನು ಪ್ರಕಟಿಸಲಾಗಿದೆ. ಸಂತಕವಿ ಕನಕದಾಸ ಮತ್ತು ತತ್ವಪದಕಾರರ ಅಧ್ಯಯನ ಕೇಂದ್ರವು 2013–24 ನೇ ಸಾಲಿನಲ್ಲಿ ಕನಕದಾಸರ ಸಮಗ್ರ ಸಾಹಿತ್ಯವನ್ನು ಕೊಡವ ಸೇರಿದಂತ ಭಾರತದ 14 ಭಾಷೆಗಳಿಗೆ ಅನುವಾದ ಮಾಡುವ ಯೋಜನೆ ಹಮ್ಮಿಕೊಂಡಿತ್ತು. ಪ್ರತೀ ಭಾಷೆಯೂ 3 ಸಂಪುಟಗಳಲ್ಲಿ ಮುದ್ರಣಗೊಂಡಿದೆ. ಕೊಡವ ಮತ್ತು ಕನ್ನಡ ಸಾಹಿತ್ಯ ಜಗತ್ತಿನಲ್ಲಿ ವಚನ ಸಾಹಿತ್ಯ ಬಿಟ್ಟರೆ ಇಷ್ಟೂ ಭಾಷೆಗಳಲ್ಲಿ ಕೃತಿಯೊಂದು ಪ್ರಕಟವಾಗಿರುವುದು ಇದೇ ಮೊದಲ. ಕನಕದಾಸರ ಸಮಗ್ರ ಸಾಹಿತ್ಯ ಕೃತಿ ಯು ಕೊಡವ, ಇಂಗ್ಲೀಷ್, ಹಿಂದಿ, ಬೆಂಗಾಳಿ, ಮರಾಠಿ, ಪಂಜಾಬಿ, ಅಸ್ಸಾಮಿ, ಉರ್ದು, ತೆಲುಗು, ತಮಿಳು, ಮಲಯಾಳಂ, ಕೊಂಕಣಿ, ಬ್ಯಾರಿ, ತುಳು, ತೆಲುಗು, ಮುಂತಾದ 14 ಭಾಷೆಗಳಲ್ಲಿ ಅನುವಾದಗೊಂಡಿದೆ. ಕೊಡವ ಭಾಷಾ ಕೃತಿಗಳಿಗೆ ಸಂಪಾದಕರಾಗಿ ನಾಗೇಶ್ ಕಾಲೂರು ಕಾರ್ಯನಿರ್ವಹಿಸಿದ್ದು, ಅನುವಾದಕರಾಗಿ ನಾಗೇಶ್ ಕಾಲೂರು, ಬಾಚರಣಿಯಂಡ ಅಪ್ಪಣ್ಣ, ರಾಣುಅಪ್ಪಣ್ಣ, ಮೊಣ್ಣಂಡ ಶೋಭಾ ಸುಬ್ಬಯ್ಯ, ಬಡಕಡಮ್ಮಂಡ ಕಸ್ತೂರಿ ಗೋವಿಂದಮಯ್ಯ, ದಿ. ಮುಲ್ಲೇಂಗಡ ಬೇಬಿ ಚೋಂದಮ್ಮ, ಮುಲ್ಲೇಗಂಡ ರೇವತಿ ಪೂವಯ್ಯ ಕಾರ್ಯನಿರ್ವಹಿಸಿದ್ದಾರೆ. ಮೇ 15 ರಂದು ಬೆಂಗಳೂರಿನ ಮಲ್ಲತ್ತಹಳ್ಳಿ ಕಲಾಗ್ರಾಮದ ಸಾಂಸ್ಕೃತಿಕ ಸಮುಚ್ಚಯದಲ್ಲಿ ಸಂಜೆ 5 ಗಂಟೆಗೆ ಕನಕಶಿಲ್ಪವನದ ಲೋಕಾರ್ಪಣೆಯೊಂದಿಗೆ 14 ಕೃತಿಗಳ ಲೋಕಾರ್ಪಣೆಯನ್ನು ಮುಖ್ಯಮಂತ್ರಿ ಸಿದ್ಧರಾಮಯ್ಯ ನೆರವೇರಿಸಲಿದ್ದಾರೆ. ಈ ಕ?ತಿಯ ಅನುವಾದವೇ ಸವಾಲಿನದ್ದಾಗಿತ್ತು. ಕೊಡವ ಭಾಷೆಯಲ್ಲಿನ ಪದಗಳನ್ನು ಮೂಲಕ ಕೃತಿಯ ಪದಗಳಿಗೆ ಸರಿಹೊಂದಿಸುವ ಕಾರ್ಯವೇ ಲೇಖಕರಿಗೆ ನಿಜವಾ ಸವಾಲಾಗಿತ್ತು.

ಬಸ್ ಡಿಕಿ: ಸವಾರ ಗಂಭೀರ

ಮುಲ್ಕಿ: ರಾಷ್ಟ್ರೀಯ ಹೆದ್ದಾರಿ 66ರ ಮುಲ್ಕಿ ಬಸ್ ನಿಲ್ದಾಣದ ಪೆಟ್ರೋಲ್ ಬಂಕ್ ಬಳಿ ಸ್ಕೂಟರ್ ಗೆ ತಡೆರಹಿತ ಬಸ್ ಡಿಕ್ಕಿಯಾಗಿ ಸವಾರ ಗಂಭೀರ ಗಾಯಗೊಂಡು ಆಸ್ಪತ್ರೆಗೆ ದಾಖಲಾಗಿದ್ದರೆ, ಮಗು ಅಲ್ಪಸ್ವಲ್ಪ ಗಾಯಗಳೊಂದಿಗೆ ಪವಾಡ ಸದೃಶ ಪಾರಾಗಿದೆ. ಗಾಯಾಳು ಸ್ಕೂಟರ್ ಸವಾರನನ್ನು ಮುಲ್ಕಿ ಸಮೀಪದ ಅಂಗರಗುಡ್ಡೆ ನಿವಾಸಿಗಳಾದ ವಿಜಯ ದೇವಾಡಿಗ (45) ಹಾಗೂ ಮಗು ಧನ್ವಿ(6) ಎಂದು ಗುರುತಿಸಲಾಗಿದೆ. ಗಾಯಾಳು ಸ್ಕೂಟರ್ ಸವಾರ ವಿಜಯ್ ಮುಲ್ಕಿ ಬಸ್ ನಿಲ್ದಾಣದ ಬಳಿ ರಾಷ್ಟ್ರೀಯ ಹೆದ್ದಾರಿಯಲ್ಲಿ ಚಲಿಸುತ್ತಿರುವಾಗ ಹಿಂದಿನಿಂದ ಅತಿ ವೇಗದಿಂದ ಬಂದ ತಡೆರಹಿತ ಬಸ್ಸು ಸ್ಕೂಟರ್ ಗೆ ಡಿಕ್ಕಿ ಹೊಡೆದಿದೆ. ಅಪಘಾತದ ರಭಸಕ್ಕೆ ಸ್ಕೂಟರ್ ಸವಾರ ವಿಜಯ್ ನಿಯಂತ್ರಣ ತಪ್ಪಿ ರಸ್ತೆ ಮೇಲೆ ಬಿದ್ದು ಗಂಭೀರ ಗಾಯಗೊಂಡು ಮುಕ್ಕ ಆಸ್ಪತ್ರೆಗೆ ದಾಖಲಾಗಿದ್ದರೆ, ಮಗು ಸಣ್ಣಪುಟ್ಟ ಗಾಯಗಳೊಂದಿಗೆ ಪಾರಾಗಿದೆ. ಸ್ಥಳಕ್ಕೆ ಮಂಗಳೂರು ಉತ್ತರ ಟ್ರಾಫಿಕ್ ಪೊಲೀಸರು ಭೇಟಿ ನೀಡಿ ಪರಿಶೀಲಿಸಿದ್ದಾರೆ.

ಗಾಂಧಿನಗರ ಶ್ರೀ ಚಾಮುಂಡೇಶ್ವರಿ ಕ್ಷೇತ್ರದ ಪ್ರತಿಷ್ಠಾ ಕಲಶೋತ್ಸವ | ಧಾರ್ಮಿಕ ಸಭಾ ಕಾರ್ಯಕ್ರಮ

ಧಾರ್ಮಿಕ ನಂಬಿಕೆಗಳೇ ಕರಾವಳಿ ಮಣ್ಣಿನ ಶಕ್ತಿ: ಖಾದರ್

ಉಳ್ಳಾಲ: ಧಾರ್ಮಿಕ ನಂಬಿಕೆಗಳು ಈ ಮಣ್ಣಿನ ದೊಡ್ಡ ಶಕ್ತಿಯಾಗಿದೆಯೇ ಹೊರತು ಅದು ನಮ್ಮ ದೌರ್ಬಲ್ಯವಲ್ಲ. ಸಾಮರಸ್ಯ ಭರಿತ ಸಮಾಜ ನಿರ್ಮಾಣವೇ ನಮ್ಮೆಲ್ಲರಿರುವ ಒಗ್ಗಟ್ಟಿನ ಧ್ಯೇಯವಾಗಿರಬೇಕೆಂದು ಕರ್ನಾಟಕ ವಿಧಾನಸಭೆಯ ಸಭಾಧ್ಯಕ್ಷ ಯು.ಟಿ. ಖಾದರ್ ಅಭಿಪ್ರಾಯಪಟ್ಟರು.

ತೊಕ್ಕೊಟ್ಟು ಗಾಂಧಿನಗರದ ಶ್ರೀ ಚಾಮುಂಡೇಶ್ವರಿ ದೇವಸ್ಥಾನದಲ್ಲಿ ಶುಕ್ರವಾರದಂದು ನೆರವೇರಿದ ಶ್ರೀ ಚಾಮುಂಡೇಶ್ವರಿ ಅಮ್ಮನವರು ಹಾಗೂ ಪರಿವಾರ ಸಾನಿಧ್ಯಗಳ ಪುನರ್ ಪ್ರತಿಷ್ಠಾಪನಾ ಕಲಶೋತ್ಸವದ ಪ್ರಯುಕ್ತ ರಾತ್ರಿ ನಡೆದ ಧಾರ್ಮಿಕ ಸಭಾ ಕಾರ್ಯಕ್ರಮ ಉದ್ದೇಶಿಸಿ ಅವರು ಮಾತನಾಡಿದರು.

ಚಾಮುಂಡೇಶ್ವರಿ ಕ್ಷೇತ್ರದ ಜೀರ್ಣೋದ್ಧಾರದಿಂದ ಪ್ರದೇಶದಲ್ಲಿ ನೆಮ್ಮದಿ, ಶಾಂತಿಯ ವಾತಾವರಣ ಸೃಷ್ಟಿಯಾಗಲಿ. ಯಾವುದೇ ವಿಚಾರಗಳಲ್ಲೂ ಭಿನ್ನಾಭಿಪ್ರಾಯಗಳು ಸಹಜವಾಗಿಯೇ ಇರುತ್ತದೆ. ಭಿನ್ನಾಭಿಪ್ರಾಯಗಳನ್ನು ಸಕಾರಾತ್ಮಕವಾಗಿ ಸ್ವೀಕರಿಸಿ ಪರಸ್ಪರ ಒಬ್ಬರನ್ನೊಬ್ಬರು ಅರ್ಥೈಸಿ ಎಲ್ಲರೂ ಜತೆಯಾಗಿ ಮುನ್ನಡೆಯಲು ಈ ಕ್ಷೇತ್ರವು ಶಕ್ತಿ ಕೇಂದ್ರವಾಗಲಿ ಎಂದು ಆಶಿಸಿದರು.



ಉಳ್ಳಾಲ ಶ್ರೀ ಚೀರುಂಭ ಭಗವತಿ ಕ್ಷೇತ್ರದ ಪ್ರಧಾನ ಅರ್ಚಕ ಮಂಜಪ್ಪ ಕಾರ್ನವರ್ ಮಾತನಾಡಿ, ತುಳುವರ ಪರಿಶುದ್ಧ ಮನಸ್ಸು ಮತ್ತು ಶ್ರದ್ಧೆಯ ದೇವರಿಗೆ ಪ್ರಿಯವಾದುದರಿಂದಲೇ ಅವಿಭಜಿತ ಉಡುಪಿ–ದಕ್ಷಿಣಕನ್ನಡ ಜಿಲ್ಲೆಯಲ್ಲಿ ಪ್ರತೀ ವರುಷವೂ ಸಾಲು ಸಾಲಾಗಿ ಧಾರ್ಮಿಕ ಕ್ಷೇತ್ರಗಳ ಪುನರ್ ಪ್ರತಿಷ್ಠೆ ಬ್ರಹ್ಮಕಲಶೋತ್ಸವಗಳು ಸುಸಾಂಗವಾಗಿ ನಡೆಯುತ್ತಲೇ ಇದೆ ಎಂದರು.

ಗಾಣಿಗರ ಸಂಘದ ಜಿಲ್ಲಾಧ್ಯಕ್ಷ ವಿಶ್ವಾಸ್ ಕುಮಾರ್ ದಾಸ್ ಧಾರ್ಮಿಕ ಸಭೆ ಉದ್ಘಾಟಿಸಿದರು.

ಬ್ರಹ್ಮಕಲಶೋತ್ಸವ ಸಮಿತಿಯ ಕಾರ್ಯಾಧ್ಯಕ್ಷ ಭಾಸ್ಕರ ತೊಕ್ಕೊಟ್ಟು ಅಧ್ಯಕ್ಷತೆ ವಹಿಸಿದ್ದರು. ಗೇರು ಅಭಿವೃದ್ಧಿ ನಿಗಮದ ಅಧ್ಯಕ್ಷೆ ಮಮತಾ ಡಿ.ಎಸ್ ಗಟ್ಟಿ, ಮೂಡ ಅಧ್ಯಕ್ಷ ಸದಾಶಿವ ಉಳ್ಳಾಲ್, ಕೆಎಸ್ಆರ್‌ಟಿಸಿ ವಿಭಾಗೀಯ ನಿಯಂತ್ರಣಾಧಿಕಾರಿ ರಾಜೇಶ್ ಶೆಟ್ಟಿ, ಬಿಜೆಪಿ ಜಿಲ್ಲಾ ಉಪಾಧ್ಯಕ್ಷ ಕೆ.ರವೀಂದ್ರ ಶೆಟ್ಟಿ ಉಳಿದೊಟ್ಟು, ಜೀರ್ಣೋದ್ಧಾರ ಸಮಿತಿಯ ಅಧ್ಯಕ್ಷ ಸುರೇಶ್ ಭಟ್ನಗರ, ಉಪಾಧ್ಯಕ್ಷ ವಿಜಯ ಲಕ್ಷ್ಮಿ ಕಟೀಲು, ಪಿಲಾರು ಸಾಯಿಬಾಬಾ ಮಂದಿರದ ದಿನೇಶ್ ಶರ್ಮ,ದಾಸ್ ಪ್ರಮೋಶನ್ಸ್ ನ ಆಡಳಿತ ನಿರ್ದೇಶಕ ಲಯನ್ ಅನಿಲ್ ದಾಸ್,ಉದ್ಯಮಿ ಜಿತೇಂದ್ರ ಶೆಟ್ಟಿ ತಲಪಾಡಿ ಗುತ್ತು, ಶ್ರೀ ವೀರಮಾರುತಿ ವ್ಯಾಯಾಮ ಶಾಲೆಯ ಅಧ್ಯಕ್ಷ ಪುರುಷೋತ್ತಮ ಗಟ್ಟಿ ಚೆಂಬುಗುಡ್ಡೆ ಬ್ರಹ್ಮಶ್ರೀ ಮುಗೇರ ಮಹಾಕಾಳಿ ದೈವಸ್ಥಾನದ ಅಧ್ಯಕ್ಷ ಹರೀಶ್ಚಂದ್ರ ಕಾಪಿಕಾಡು, ನಿವೃತ್ತ ಬ್ಯಾಂಕ್ ಅಧಿಕಾರಿ ಆಸ್ಟಿನ್ ಅಲಿ, ಚಾಮುಂಡೇಶ್ವರಿ ಕ್ಷೇತ್ರದ ಆಡಳಿತ ಮೊಕ್ತೇಸರರಾದ ಗಿರೀಶ್ ಕುಮಾರ್ ಯು.ಕೆ, ಪ್ರಮುಖರಾದ ಜಗದೀಶ್ ಪೂಜಾರಿ ಜಪ್ಪಿನಮೊಗರು ಮೊದಲಾದವರು ಇದ್ದರು.

ರೋಹಿತ್ ಉಳ್ಳಾಲ್ ಸ್ವಾಗತಿಸಿ, ಪ್ರವೀಣ್ ಬಸ್ತಿ ಕಾರ್ಯಕ್ರಮ ನಿರೂಪಿಸಿದರು.

> **ಸತ್ಕರ್ಮಗಳ ಮೂಲಕ ಮಾನವ ಜನ್ಮವನ್ನು ಸಾರ್ಥಕಗೊಳಿಸಬೇಕಿದೆ. ಹೆತ್ತವರನ್ನು ನಾವು ಗೌರವಿಸಿ ಅವರಲ್ಲಿ ದೇವರನ್ನು ಕಾಣಬೇಕಿದೆ. ಭಾರತೀಯ ಭವ್ಯ ಸಂಸ್ಕೃತಿಯ ಮೌಲ್ಯವು ಇಡೀ ಜಗತ್ತಿಗೆ ವ್ಯಾಪಿಸಿ ಪ್ರಖ್ಯಾತಿ ಪಡೆದಿದೆ.**
> ● ಮಮತಾ ಡಿ.ಎಸ್ ಗಟ್ಟಿ, ಅಧ್ಯಕ್ಷರು, ಗೇರು ಅಭಿವೃದ್ಧಿ ನಿಗಮ

ಕ್ಷೇತ್ರದ ಅಭಿವೃದ್ಧಿಗೆ ಶ್ರಮಿಸಿದವರಿಗೆ ಸನ್ಮಾನ

ಚಾಮುಂಡೇಶ್ವರಿ ಕ್ಷೇತ್ರದ ಅಭಿವೃದ್ಧಿಗೆ ಅವಿರತವಾಗಿ ಶ್ರಮಿಸಿದ ಬ್ರಹ್ಮಕಲಶೋತ್ಸವ ಸಮಿತಿಯ ಕಾರ್ಯಾಧ್ಯಕ್ಷ ಭಾಸ್ಕರ್ ತೊಕ್ಕೊಟ್ಟು, ಜೀರ್ಣೋದ್ಧಾರ ಸಮಿತಿಯ ಪ್ರಧಾನ ಕಾರ್ಯದರ್ಶಿ ಸತೀಶ್ ದೀಪಕ್, ಬ್ರಹ್ಮಕಲಶೋತ್ಸವ ಸಾಂಸ್ಕೃತಿಕ ಸಮಿತಿಯ ಪ್ರಧಾನ ಸಂಚಾಲಕ ಪ್ರಕಾಶ್ ಸಿಂಪೋಣಿ, ಮಹಿಳಾ ಸಮಿತಿಯ ಪ್ರಧಾನ ಸಂಚಾಲಕಿ ಸುಲೋಚನಾ ಚಂದ್ರಹಾಸ್, ನಗರಸಭೆ ಮಾಜಿ ಸದಸ್ಯ ರವಿ ಎಸ್.ಗಾಂಧಿನಗರ, ತಲವಾಡು ಚಾವಡಿ ನಿರ್ಮಾಣದ ರೂವಾರಿ ಉಮೇಶ್ ಅಬ್ಬಂಜರ ಅವರನ್ನು ಸನ್ಮಾನಿಸಲಾಯಿತು.

ಯಿಫಾ ಹಾಕಿ ಚಾಂಪಿಯನ್ ಟ್ರೋಫಿ: ಶಾಸಕ ಮಂಥರ್‌ರಿಂದ ಜರ್ಸಿ ಅನಾವರಣ



ಸೋಮವಾರಪೇಟೆ: ಯಂಗ್ ಇಂಡಿಯನ್ ಫಾರ್ಮರ್ಸ್ ಅಸೋಸಿಯೇಷನ್ ವತಿಯಿಂದ ಸೋಮವಾರಪೇಟೆಯ ಸಿಂಥೆಟಿಕ್ ಟರ್ಫ್ ಮೈದಾನದಲ್ಲಿ ಮೇ 7 ರಿಂದ 10ರವರೆಗೆ ಆಯೋಜಿಸಿರುವ ಯಿಫಾ ಹಾಕಿ ಚಾಂಪಿಯನ್ ಟ್ರೋಫಿ ಕ್ರೀಡಾಕೂಟದ ಆತಿಥೇಯ ಯಿಫಾ ತಂಡದ ಜರ್ಸಿಗಳನ್ನು ಶಾಸಕ ಡಾ. ಮಂಥರ್ ಗೌಡ ಅವರು ಶಾಸಕರ ಕಚೇರಿ ಆವರಣದಲ್ಲಿ ಅನಾವರಣ ಮಾಡಿದರು.

ನಂತರ ಮಾತನಾಡಿದ ಶಾಸಕರು, ಯುವ ಜನಾಂಗಕ್ಕೆ ಹಾಕಿ ಕ್ರೀಡೆಯ ಬಗ್ಗೆ ಜಾಗೃತಿ ಮೂಡಿಸುವ ನಿಟ್ಟಿನಲ್ಲಿ ರಾಜ್ಯಮಟ್ಟದ ಕ್ರೀಡಾಕೂಟ ಆಯೋಜಿಸಿರುವುದು ಶ್ಲಾಘನೀಯ ಎಂದರು.

ಹಾಕಿ ಕ್ರೀಡೆಗಳು ನಿರಂತರವಾಗಿ ನಡೆಯಬೇಕು. ಎಲ್ಲಾ ಜಾತಿ, ಜನಾಂಗ, ಪಕ್ಷದವರನ್ನು ಒಂದುಗೂಡಿಸಲು ಕ್ರೀಡೆಯಿಂದ ಮಾತ್ರ ಸಾಧ್ಯ ಎಂದರು.

ಯಂಗ್ ಇಂಡಿಯನ್ ಫಾರ್ಮರ್ಸ್ ಅಸೋಸಿಯೇಷನ್‌ನ ಅಧ್ಯಕ್ಷ ಶ್ರೀನಿಧಿ ಲಿಂಗಪ್ಪ ಮಾತನಾಡಿ, ಕೊಡಗಿನಲ್ಲಿ 25 ವರ್ಷಗಳ ನಂತರ ರಾಜ್ಯಮಟ್ಟದ ಹಾಕಿ ಪಂದ್ಯಾವಳಿ ಆಯೋಜಿಸಲಾಗಿದೆ. ಕ್ರೀಡಾಕೂಟದಲ್ಲಿ ರಾಜ್ಯಮಟ್ಟದ ಪ್ರತಿಷ್ಠಿತ ತಂಡಗಳಾದ ಕೆನರಾ ಬ್ಯಾಂಕ್, ಕರ್ನಾಟಕ ಸ್ಟೇಟ್ ಪೊಲೀಸ್, ಎಜಿಓಆರ್.ಸಿ., ಸೌತ್ ವೆಸ್ಟರ್ನ್ ರೈಲ್ವೇಸ್, ಕಸ್ಟಮ್ಸ್, ಡಿವೈಇಎಸ್, ಸೌತರ್ನ್ ಕಮಾಂಡ್ ಹಾಗೂ ಆತಿಥೇಯ ಯಿಫಾ ತಂಡಗಳು ಭಾಗವಹಿಸುತ್ತಿವೆ ಎಂದು ಹೇಳಿದರು. ಪಂದ್ಯಾಟದಲ್ಲಿ ಚಾಂಪಿಯನ್ ಆಗಿ ಹೊರಹೊಮ್ಮುವ ತಂಡಕ್ಕೆ 2 ಲಕ್ಷ ರೂ, ನಗದು ಹಾಗೂ ಆಕರ್ಷಕ ಟ್ರೋಫಿ, ದ್ವಿತೀಯ ಸ್ಥಾನ ಪಡೆಯುವ ತಂಡಕ್ಕೆ 1 ಲಕ್ಷ ರೂ, ನಗದು ಹಾಗೂ ಟ್ರೋಫಿ, ತೃತೀಯ ಸ್ಥಾನ ಪಡೆಯುವ ತಂಡಕ್ಕೆ 50 ಸಾವಿರ ರೂ, ನಗದು ಹಾಗೂ ಟ್ರೋಫಿ ನೀಡಲಾಗುವುದು. ಇದರೊಂದಿಗೆ ವೈಯುಕ್ತಿಕ ವಿಭಾಗದಲ್ಲಿಯೂ ಪ್ರಶಸ್ತಿಗಳನ್ನು ವಿತರಿಸಲಾಗುವುದು ಎಂದರು. ಯಿಫಾ ಸಂಘಟನೆಯ ಉಪಾಧ್ಯಕ್ಷ ಹರ್ಷಿತ್ ಶಿವಪ್ಪ ಕಾರ್ಯದರ್ಶಿ ಸಜನ್ ಮಂದಣ್ಣ, ಖಜಾಂಚಿ ಮೋಹಿತ್ ತಿಮ್ಮಯ್ಯ, ಪ್ರಣವ್ ಫೌಂಡೇಷನ್ ಅಧ್ಯಕ್ಷ ರಾಕೇಶ್ ರೈ ಅವರುಗಳು ಇದ್ದರು.

ಆತ್ಮಶಕ್ತಿ ವಿವಿಧೋದ್ದೇಶ ಸಹಕಾರಿ ಸಂಘ: ಮಾಣಿ ಶಾಖೆಯ 3ನೇ ವಾರ್ಷಿಕೋತ್ಸವ



ಮಂಗಳೂರು: ಆತ್ಮಶಕ್ತಿ ವಿವಿಧೋದ್ದೇಶ ಸಹಕಾರಿ ಸಂಘ ಮಾಣಿ ಶಾಖೆಯ ತೃತೀಯ ವಾರ್ಷಿಕೋತ್ಸವ ಹಾಗೂ ಗ್ರಾಹಕರ ಸಭೆಯು ಸಂಘದ ಅಧ್ಯಕ್ಷ ಸಹಕಾರ ರತ್ನ ಚಿತ್ತರಂಜನ್ ಬೋಳಾರ್ ಅವರ ಅಧ್ಯಕ್ಷತೆಯಲ್ಲಿ ಮಾಣಿ ಶಾಖೆಯಲ್ಲಿ ಜರುಗಿತು.

ಸಂಘದ ಗ್ರಾಹಕ ಕಮಲಾಕ್ಷ, ಪುಷ್ಪರಾಜ್ ಕೆ., ಶಿವಣ್ಣ ಎಸ್. ಎಸ್., ಪ್ರಕಾಶ್, ಪ್ರದೀಪ್, ಅಬ್ದುಲ್ ರಝಾಕ್ ಮತ್ತು ಅಬ್ದುಲ್ ರಿಯಾಜ್ ಎನ್. ಅವರು ದೀಪ ಪ್ರಜ್ವಲನೆ ಮಾಡುವುದರ ಮೂಲಕ ಕಾರ್ಯಕ್ರಮ ಉದ್ಘಾಟಿಸಿದರು.

ಸಂಘದ ಮುಖ್ಯಕಾರ್ಯನಿರ್ವಹಣಾಧಿಕಾರಿ ಸೌಮ್ಯ ವಿಜಯ್ ಪ್ರಾಸ್ತಾವಿಕ ನುಡಿಗಳನ್ನಾಡಿ, ಸಂಘದ ಮಾಣಿ ಶಾಖೆಯಲ್ಲಿ ಗ್ರಾಹಕರ ಸಹಕಾರದಿಂದ ಉತ್ತಮ ರೀತಿಯಲ್ಲಿ ನಿರಖು ಠೇವಣಿ ಹಾಗೂ ಆಭರಣ ಸಾಲವನ್ನು ನೀಡಲಾಗಿದೆ. ಶಾಖೆಯು ಉತ್ತಮ ಲಾಭದಾಯಕವಾಗಿ ಕಾರ್ಯಾಚರಿಸುತ್ತಿದೆ ಎಂದು ತಿಳಿಸಿದರು. ನಮ್ಮ ಎಲ್ಲಾ ಶಾಖೆಗಳಲ್ಲಿ ಇ–ಮುದ್ರಾಂಕ, ನೆಫ್ಟ್ ಆರ್‌ಟಿಜಿಎಸ್ ಸೇವೆಯು ವ್ಯವಹಾರದ ಸಮಯದಲ್ಲಿ ಲಭ್ಯವಿದ್ದು ಆದೇ ರೀತಿ ಎಲ್ಲಾ ಕಂಪೆನಿಗಳ ವಿಮಾ ಸೌಲಭ್ಯಗಳು ಲಭ್ಯವಿರುತ್ತದೆ. ಎಲ್ಲಾ ಗ್ರಾಹಕರು ಇದರ ಪ್ರಯೋಜನ ಪಡೆಯಬೇಕೆಂದು ವಿನಂತಿಸಿದರು.

ಅಧ್ಯಕ್ಷತೆ ವಹಿಸಿದ್ದ ಸಂಘದ ಅಧ್ಯಕ್ಷ ಸಹಕಾರ ರತ್ನ ಚಿತ್ತರಂಜನ್ ಬೋಳಾರ್ ಮಾತನಾಡಿ, ಗ್ರಾಹಕರ ಪ್ರೋತ್ಸಾಹದಿಂದ ಸಂಘವು ಉತ್ತಮ ಪ್ರಗತಿ ಹೊಂದಿದೆ. ಸಂಘದ ಸದಸ್ಯರಿಗೆ ಅನುಕೂಲವಾಗುವ ನಿಟ್ಟಿನಲ್ಲಿ ಚಿನ್ನಾಭರಣ ಸಾಲದ ಸೇವೆಯನ್ನು ಹೆಚ್ಚಾಗಿ ನೀಡುತಿದ್ದು ಈಗಾಗಲೇ ಸುಮಾರು 200 ಕೋಟಿಗೂ ಮಿಕ್ಕಿ ಹೆಚ್ಚಿನ ಚಿನ್ನಾಭರಣ ಸಾಲವನ್ನು ನೀಡಲಾಗಿದ್ದು ಗ್ರಾಹಕರ ಸಹಕಾರದಿಂದ ಮಾತ್ರ ಇದು ಸಾಧ್ಯ ಎಂಬುವುದಾಗಿ ತಿಳಿಸಿದರು. ಸಂಸ್ಥೆಯು ಕೇವಲ ಬ್ಯಾಂಕಿಂಗ್ ಮಾತ್ರವಲ್ಲದೆ, ಜೀವ ವಿಮೆ, ಆರೋಗ್ಯ ವಿಮೆ ಮತ್ತು ವಾಹನ ವಿಮಾ ಸೌಲಭ್ಯಗಳನ್ನು ಹೊಂದಿರುವುದಾಗಿ ತಿಳಿಸಿದರು. ಆಯ್ದ ರಜಾ ದಿನಗಳಲ್ಲಿ ನಮ್ಮ ಸೇವೆಯು ನಿರಂತರವಾಗಿರುತ್ತದೆ. ಮುಂದಿನ ದಿನಗಳಲ್ಲಿ ಆರೋಗ್ಯ ಶಿಬಿರ ನಡೆಸುವುದಾಗಿ ತಿಳಿಸಿದರು. ಶಾಖೆಯ ಸಿಬ್ಬಂದಿ ದೀಪ್ತಿ ಡಿ.ಎನ್. ಸ್ವಾಗತಿಸಿ, ಶಾಖೆಯ ಶಾಖಾಧಿಕಾರಿ ಚಿತ್ರಾವತಿ ಎಚ್. ಕಾರ್ಯಕ್ರಮ ನಿರೂಪಿಸಿದರು.

ಶ್ರೀ ಮಹಾಕೈಲಾಸ ಯಂತ್ರಸ್ಥಿತ ಸಹಸ್ರ ಪಾರ್ಥಿವ ಲಿಂಗ ಪೂಜೆ



ಮಂಗಳೂರು: ಅಳಪೆಯ ಪರಂಜ್ಯೋತಿ ನಗರ, ಶ್ರೀ ಪರಂಜ್ಯೋತಿ ಸೇವಾ ಸಮಿತಿ ಮತ್ತು ಹಿಂದೂ ಯುವಸೇನೆ, ಪರಂಜ್ಯೋತಿ ಶಾಖೆಯ 20ನೇ ವಾರ್ಷಿಕೋತ್ಸವ ಹಾಗೂ ಶ್ರೀ ಪರಂಜ್ಯೋತಿ ಭಜನಾ ಮಂಡಳಿಯ 83ನೇ ವಾರ್ಷಿಕೋತ್ಸವ ಇತ್ತೀಚೆಗೆ ನಡೆಯಿತು.

ಇದರ ಅಂಗವಾಗಿ ಶ್ರೀ ನಿತ್ಯಾನಂದ ಯೋಗಾಶ್ರಮ ಕೊಂಡೆವೂರು ಇದರ ಶ್ರೀ ಯೋಗಾನಂದ ಸರಸ್ವತಿ ಸ್ವಾಮೀಜಿ ಅವರ ಆಶೀರ್ವಚನದೊಂದಿಗೆ 'ಶ್ರೀ ಮಹಾಕೈಲಾಸ ಯಂತ್ರ ಸ್ಥಿತ ಸಹಸ್ರ ಪಾರ್ಥಿವ ಲಿಂಗ ಪೂಜೆ' ಜರಗಿತು. ಇದೇ ಸಂದರ್ಭದಲ್ಲಿ ಶ್ರೀ ಆಂಜನೇಯ ಭಜನಾ ಮಂಡಳಿ ಸಾಣೂರು ಕಾರ್ಕಳ ಮತ್ತು ಶಿವರಂಜನಿ ಸುರತ್ಕಲ್ ಅವರಿಂದ ಕುಣಿತ ಭಜನೆ ಮತ್ತು ಭಜನೆ ನಡೆಸಲ್ಪಟ್ಟಿತು. ಅಧ್ಯಕ್ಷ ಮಿಥುನ್ ದೇವಾಡಿಗ ಹಾಗೂ ಸದಸ್ಯರು ಉಪಸ್ಥಿತರಿದ್ದರು. ಕಾರ್ಯದರ್ಶಿ ಚರಣ್ ನಿರೂಪಿಸಿದರು. ವಾರ್ಷಿಕೋತ್ಸವದ ಅಂಗವಾಗಿ ರಕ್ತದಾನ ಶಿಬಿರ ಹಮ್ಮಿಕೊಳ್ಳಲಾಗಿತ್ತು.



ಪುತ್ತೂರಿನ ವಿವೇಕಾನಂದ ಕಾಲೇಜ್ ಆಫ್ ಇಂಜಿನಿಯರಿಂಗ್ ಎಂಡ್ ಟೆಕ್ನಾಲಜಿಯ ಎಂಬಿಎ ವಿಭಾಗ ಮತ್ತು ಇನ್‌ಸ್ಟಿಟ್ಯೂಶನ್ ಇನೋವೇಶನ್ ಸೆಲ್ ಇದರ ಆಶ್ರಯದಲ್ಲಿ ನಡೆದ 'ಇಂಪ್ಯಾಕ್ಟ್ ಸ್ಪಾರ್ಕ್–2026' ಸ್ಪರ್ಧೆಯಲ್ಲಿ ಕೊಣಾಜೆಯ ಯುನಿವರ್ಸಿಟಿ ಕಾಲೇಜಿನ ವಿದ್ಯಾರ್ಥಿಗಳು ಪ್ರಥಮ ಸ್ಥಾನ, ಕಲ್ಲಡ್ಕದ ಶ್ರೀರಾಮ ಕಾಲೇಜ್ ತಂಡ ದ್ವಿತೀಯ ಮತ್ತು ಪುತ್ತೂರು ವಿವೇಕಾನಂದ ಕಾಲೇಜ್ (ಸ್ವಾಯತ್ತ) ತಂಡ ತೃತೀಯ ಸ್ಥಾನವನ್ನು ಪಡೆದುಕೊಂಡರು. ಕಾಲೇಜಿನ ಪ್ರಾಂಶುಪಾಲ ಡಾ. ಮಹೇಶ್‌ಪ್ರಸನ್ನ ಕೆ. ವಿಜೇತರಿಗೆ ನಗದು ಬಹುಮಾನ ಮತ್ತು ಫಲಕಗಳನ್ನು ನೀಡಿ ಗೌರವಿಸಿದರು.



ಕೂಟ ಮಹಾಜಗತ್ತು ಮಂಗಳೂರು ಅಂಗಸಂಸ್ಥೆ ವತಿಯಿಂದ ನರಸಿಂಹ ಜಯಂತಿ ಕಾರ್ಯಕ್ರಮವನ್ನು ಪಾಂಡೇಶ್ವರದ ಶ್ರೀ ಗುರುನರಸಿಂಹ ಸಭಾ ಭವನದಲ್ಲಿ ಪುರೋಹಿತ ವೆಂಕಟೇಶ್ ಐತಾಳ್ ನೇತೃತ್ವದಲ್ಲಿ ಸಂಪನ್ನಗೊಂಡಿತು. ಭಜನೆ, ನರಸಿಂಹ ಅಷ್ಟೋತ್ತರ, ಸಹಸ್ರ ನಾಮಾವಳಿ ಪಠಿಸಲಾಯಿತು. ವರ್ಕಾಡಿ ಸುಬ್ರಹ್ಮಣ್ಯ ಮಯ್ಯ. ಸಂಸ್ಥೆಯ ಅಧ್ಯಕ್ಷ ಶ್ರೀಧರ ಹೊಳ್ಳ ಪ್ರತಿಮಾ ಶ್ರೀಧರ ದಂಪತಿಗಳು ಪದಾಧಿಕಾರಿಗಳು ಮಹಿಳಾ ಪ್ರತಿನಿಧಿಗಳು ಉಪಸ್ಥಿತರಿದ್ದರು.

ಮುಲ್ಕಿ ಅರಮನೆಯ ವಠಾರದಲ್ಲಿ ವಿಜೃಂಭಣೆಯ ಪವಮಾನ ಯಾಗ



ಮುಲ್ಕಿ: ಪ್ರಾಣ ಪ್ರತಿಷ್ಠಾನದ ಆಯೋಜನೆಯಲ್ಲಿ ಮುಲ್ಕಿ ಸೀಮೆಯ ಅರಸರಾದ ದುಗ್ಗಣ್ಣ ಸಾವಂತರ ಆಶೀರ್ವಾದದೊಂದಿಗೆ ಮುಲ್ಕಿ ಅರಮನೆಯ ವಠಾರದಲ್ಲಿ ಪ್ರಾಣ ಪ್ರತಿಷ್ಠಾನದ ಆಯೋಜನೆಯಲ್ಲಿ ಬ್ರಹ್ಮಶ್ರೀ ವೇದಮೂರ್ತಿ ಕುಂಟಾರು ರವೀಶ್ ತಂತ್ರಿ ನೇತೃತ್ವದಲ್ಲಿ ಪವಮಾನ ಯಾಗ ವಿಜೃಂಭಣೆಯಿಂದ ಶನಿವಾರ ನಡೆಯಿತು.

ಧಾರ್ಮಿಕ ಕಾರ್ಯಕ್ರಮಗಳ ಅಂಗವಾಗಿ ಬೆಳಿಗ್ಗೆ ಪುಣ್ಯಾಹ ವಾಚನ,, ಅಷ್ಟ ದ್ರವ್ಯ ಸಹಿತ ಮಹಾ ಗಣ ಯಾಗ, ಸರ್ವೈಶ್ವರ್ಯ ಪೂಜೆ, ಪವಮಾನಯಾಗ ಬೆಳಿಗ್ಗೆ 11:30ಕ್ಕೆ ಪೂರ್ಣಾಹುತಿ ಮಹಾಪೂಜೆ , ಮಧ್ಯಾಹ್ನ ಮಹಾ ಅನ್ನಸಂತರ್ಪಣೆ ನಡೆಯಿತು. ಈ ಸಂದರ್ಭ ಮಾಜೀ ದಾರ್ಮಿಕ ಪರಿಷತ್ ಸದಸ್ಯ ಕಲೆಕೋಡಿ ಸೂರ್ಯನಾರಾಯಣ ಭಟ್, ಮಾಣಿಲ ಶ್ರೀ ಮೋಹನ ದಾಸ ಸ್ವಾಮೀಜಿ, ಶಾಸಕ ಉಮಾನಾಥ ಕೋಟ್ಯಾನ್, ಗೌತಮ್ ಜೈನ್ ಮುಲ್ಕಿ ಅರಮನೆ, ಜಿಲ್ಲಾ ಬಿಜೆಪಿ ಉಪಾಧ್ಯಕ್ಷ ಸುನಿಲ್ ಆಳ್ವ ಕಾರ್ನಾಡ್ ಶ್ರೀರಾಮ ಸೇವಾ ಮಂಡಳಿಯ ಅಧ್ಯಕ್ಷ ಭಾಸ್ಕರ್ ಶೆಟ್ಟಿಗಾರ್, ಪ್ರಾಣ ಪ್ರತಿಷ್ಠಾನ ಸಂಸ್ಥೆಯ ಮಾರ್ಗದರ್ಶಕ ಯೋಗಿ ಪಿ.ಜಿ ಮತ್ತು ಯೋಗಚಾರ್ಯ ವಿನೋದ್, ಸಂಸ್ಥೆಯ ಟ್ರಸ್ಟಿ ರಂಜಿತ್ ಬಜ್ಪೆ ಗಣೇಶ್ ಮುಲ್ಕಿ ಹಾಗೂ ವಿನೋದ್ ಸಾಲ್ಯಾನ್ ಬೆಳ್ಳಾಯರು, ಧ.ಗ್ರಾ.ಯೋ. ಸೇವಾ ಪ್ರತಿನಿಧಿ ಸವಿತಾ ಶರತ್ ಬೆಳ್ಳಾಯರು, ಗೋಪಾಲಕೃಷ್ಣ ಹಳೆಯಂಗಡಿ, ಶ್ಯಾಮ್ ಪ್ರಸಾದ್ ನವೀನ್ ರಾಜ್ ಚಂದ್ರಕುಮಾರ್, ಹಾಗೂ ಪ್ರಮುಖರು ಉಪಸ್ಥಿತರಿದ್ದರು.

ಕಟೀಲಿನಲ್ಲಿ ಒಂದು ವಾರಗಳ ಹಿಂದೂ ಧಾರ್ಮಿಕ ಶಿಬಿರ ಸಮಾರೋಪ



ಕಟೀಲು: ದೇವರು ನಂಬಿದವರನ್ನು ಕೈಬಿಡಲಾರರು. ದಿನಂಪ್ರತಿ ಒಂದಿಷ್ಟು ಹೊತ್ತು ದೇವರನ್ನು ಪ್ರಾರ್ಥಿಸುವುದಕ್ಕಾಗಿ ಮೀಸಲಿಡಿ. ನಂಬಿಕೆಯಿಟ್ಟು ಭಜಿಸಿ. ಪ್ರಾರ್ಥಿಸಿ. ದೇವರು ಒಲಿದು, ಮುನ್ನಡೆಸುತ್ತಾರೆ. ಎಂದು ವಿದ್ವಾಂಸ ಕುತ್ಪಾಡಿ ಕೃಷ್ಣರಾಜ ಭಟ್ ಹೇಳಿದರು.

ಅವರು ಕಟೀಲು ಶ್ರೀ ದುರ್ಗಾ ಪರಮೇಶ್ವರೀ ದೇವಸ್ಥಾನದ ಆಶ್ರಯದಲ್ಲಿ ಪೇಜಾವರ ಮಠದ ಸಹಯೋಗದಲ್ಲಿ ಒಂದು ವಾರಗಳ ಕಾಲ ನಡೆದ ಹಿಂದೂ ಧಾರ್ಮಿಕ ಶಿಬಿರದಲ್ಲಿ ಮಾತನಾಡಿದರು.

ಕಟೀಲು ದೇಗುಲದ ಅರ್ಚಕ ಶ್ರೀ ಹರಿನಾರಾಯಣದಾಸ ಆಸ್ರಣ್ಣ, ದೇಗುಲದ ಆಡಳಿತ ಸಮಿತಿ ಅಧ್ಯಕ್ಷ ಕೊಡೆತ್ತೂರುಗುತ್ತು ಸನತ್ ಕುಮಾರ ಶೆಟ್ಟಿ, ಕ್ಯಾಪ್ಸ್ ಫೌಂಡೇಶನ್ ಅಧ್ಯಕ್ಷ ಚಂದ್ರಶೇಖರ ಶೆಟ್ಟಿ, ಶಿಕ್ಷಕ ಶ್ರೀವತ್ಸ, ಶೈಲಜಾ, ರಾಜೇಶ್ ಐ, ಕುಸುಮಾವತಿ ಮತ್ತಿತರರಿದ್ದರು. ಶಿಬಿರದಲ್ಲಿ 70ಕ್ಕೂ ಹೆಚ್ಚು ವಿದ್ಯಾರ್ಥಿಗಳಿದ್ದು, ಶಿಬಿರದ ಅನುಭವಗಳನ್ನು ಹೇಳಿದರು. ಪ್ರಾರ್ಥನಾ ಸ್ತೋತ್ರಗಳು, ಭಜನೆ, ಪುರಾಣ ಕಥೆಗಳು, ಧಾರ್ಮಿಕ ಹಬ್ಬಗಳ ಮಹತ್ವ, ಕ್ಷೇತ್ರ ಸಂದರ್ಶನ, ದೇಸೀ ಕ್ರೀಡೆಗಳು ಹೀಗೆ ವಿದ್ಯಾರ್ಥಿಗಳಿಗೆ ಸಾಕಷ್ಟು ತರಬೇತಿ ನೀಡಲಾಯಿತು.

ಮಂಗಳೂರಿಗೆ ಜಲಕ್ಷಾಮ ಭೀತಿ | ತುಂಬೆ ಡ್ಯಾಮ್‌ಗೆ ಭೇಟಿ ನೀಡಿ ನೀರಿನ ವಸ್ತುಸ್ಥಿತಿ ವೀಕ್ಷಿಸಿದ ಶಾಸಕ ವೇದವ್ಯಾಸ್

ಕೂಡಲೇ ಎಎಂಆರ್ ಡ್ಯಾಮ್‌ನಿಂದ ತುಂಬೆ ಡ್ಯಾಮ್‌ಗೆ ನೀರು ಹರಿಸಬೇಕು

ಬಂಟ್ವಾಳ: ಬಿಸಿಲಿನ ಝಳಕ್ಕೆ ಜಿಲ್ಲೆಯ ಜೀವ ನದಿ ನೇತ್ರಾವತಿಯ ನದಿಯಲ್ಲಿ ನೀರಿನ ಮಟ್ಟ ದಿನೇ ದಿನೇ ಕುಸಿಯುತ್ತಿದ್ದು, ತುಂಬೆ ವೆಂಟೆಡ್ ಡ್ಯಾಂನಲ್ಲಿ ಶನಿವಾರ ನೀರಿನ ಮಟ್ಟ ಕೇವಲ 4 ಮೀಟರ್‌ಗೆ ಇಳಿಕೆಯಾಗುವ ಮೂಲಕ ಮಂಗಳೂರು ನಗರದಲ್ಲಿ ಕೃತಕ ಜಲಕ್ಷಾಮವನ್ನು ಸೃಷ್ಟಿಯಾಗುವ ಆತಂಕ ಎದುರಾಗಿದ್ದು, ಕೂಡಲೇ ಎಎಂಆರ್ ಡ್ಯಾಮ್ ನಿಂದ ತುಂಬೆ ಡ್ಯಾಮ್ ಗೆ ನೀರು ಹರಿಸಬೇಕು ಎಂದು ಮಂಗಳೂರು ದಕ್ಷಿಣ ಶಾಸಕ ವೇದವ್ಯಾಸ ಕಾಮತ್ ರವರು ಆಗ್ರಹಿಸಿದ್ದಾರೆ.

ಶನಿವಾರ ತುಂಬೆ ಡ್ಯಾಮ್‌ಗೆ ಖುದ್ದು ಭೇಟಿ ನೀರಿನ ವಸ್ತುಸ್ಥಿತಿಯನ್ನು ವೀಕ್ಷಿಸಿದ ಶಾಸಕರು, ನಗರ ವ್ಯಾಪ್ತಿಯಲ್ಲಿ ಇಬ್ಬರು ಶಾಸಕರುಗಳಿದ್ದರೂ ಯಾವುದೇ ಮಾಹಿತಿ ನೀಡದೇ ಜಿಲ್ಲಾಡಳಿತ ನೇತೃತ್ವದ



ಪಾಲಿಕೆಯು ನೀರಿನ ರೇಷನಿಂಗ್ ಬಗ್ಗೆ ನಿರ್ಧಾರ ತೆಗೆದುಕೊಂಡಿದೆ. ಆಪತ್ಕಾಲದ ಬಳಕೆಗೆ ಇರುವ ಎಎಂಆರ್ ಡ್ಯಾಮ್ ನಲ್ಲಿ ಸಾಕಷ್ಟು ನೀರಿದ್ದು ತುಂಬೆಗೆ ಹರಿಸಿ ನೀರಿನ ಮಟ್ಟ 6 ಮೀಟರ್ ವರೆಗೆ ಹೆಚ್ಚಿಸಿ ಜನರಿಗೆ ದಿನನಿತ್ಯ ನೀರು ಸರಬರಾಜು ಮಾಡಬಹುದಾಗಿದೆ ಎಂದು ಅವರು ಮಾಧ್ಯಮ ಪ್ರತಿನಿಧಿಗಳಿಗೆ ತಿಳಿಸಿದ್ದಾರೆ. ಈ ಹಿಂದೆ ಪಾಲಿಕೆಯಲ್ಲಿ ಬಿಜೆಪಿ ಆಡಳಿತದಲ್ಲಿದ್ದಾಗ ಇದನ್ನು ಕಾರ್ಯರೂಪಕ್ಕು ತಂದಿತ್ತು.

ಆದರೆ ಈಗ ಕುಡಿಯುವ ನೀರಿಗಾಗಿ ರೇಷನಿಂಗ್ ಜಾರಿಗೆ ಮುಂದಾಗಿರುವ ಅಧಿಕಾರಿಗಳು ಜನರನ್ನು ಆತಂಕಕ್ಕೀಡು ಮಾಡುವುದು ಎಷ್ಟು ಸರಿ ಎಂದು ಪ್ರಶ್ನಿಸಿರುವ ಶಾಸಕ ವೇದವ್ಯಾಸ್ ಕಾಮತ್ ನಾಳೆಯೊಳಗೆ ಎಎಂಆರ್ ಡ್ಯಾಮ್ ನಿಂದ ನೀರು ಬಿಡಲು ಕ್ರಮ ಕೈಗೊಳ್ಳುವಂತೆ ಆಗ್ರಹಿಸಿದರು.

ಈ ಸಂದರ್ಭ ಮಾಜಿ ಮೇಯರ್ ಗಳಾದ ಪ್ರೇಮಾನಂದ ಶೆಟ್ಟಿ ಹಾಗೂ ಸುಧೀರ್ ಶೆಟ್ಟಿ ಕಣ್ಣೂರುರವರು ಮಾತನಾಡಿ, ಸದ್ಯದ ಮಟ್ಟಿಗೆ ನೀರಿನ ಸಮಸ್ಯೆ ಇಲ್ಲ, ಆಡಳಿತ ನಡೆಸುವವರು ಅನುಭವದ ಕೊರತೆಯಿಂದ ಇಂತಹ ನಿರ್ಧಾರ ಕೈಗೊಂಡಂತಾಗಿದೆ. ಇನ್ನಿತರ ಬಳಕೆಗೆ ನೀರು ಬಳಸುವುದನ್ನು ತಡೆಯುವುದು ಬಿಟ್ಟು ಜನರ ಕುಡಿಯುವ ನೀರು ನಿಲ್ಲಿಸುವುದು ಎಷ್ಟು ಸರಿ? ನಗರದ ಹಲವೆಡೆ ನೀರೇ ಪೂರೈಕೆಯಾಗುತ್ತಿಲ್ಲ ಎಂಬ ಆರೋಪವಿದ್ದು, 24 ಗಂಟೆ ಎಲ್ಲಾ ಮನೆಗಳಿಗೂ ನೀರು ತಲುಪುವಂತೆ ಕ್ರಮ ಕೈಗೊಳ್ಳಬೇಕು ಎಂದು ಆಗ್ರಹಿಸಿದರು.

ಪಾಲಿಕೆಯ ನಿಕಟಪೂರ್ವ ಬಿಜೆಪಿ ಸದಸ್ಯರಾದ ಪೂರ್ಣಿಮಾ, ಭಾನುಮತಿ, ವೀಣಾಮಂಗಳ, ಲೀಲಾವತಿ ಪ್ರಕಾಶ್, ಜಯಲಕ್ಷ್ಮಿ ಶೆಟ್ಟಿ ಸಂದೀಪ್ ಗರೋಡಿ, ಭರತ್ ಕುಮಾರ್, ಶೈಲೇಶ್ ಶೆಟ್ಟಿ ಗಣೇಶ್ ಕುಲಾಲ್, ಶೋಭಾ ಪೂಜಾರಿ, ಕಿಶೋರ್ ಕೊಟ್ಟಾರಿ, ಮನೋಹರ್ ಶೆಟ್ಟಿ, ಪ್ರಮುಖರಾದ ಅಶ್ವಿತ್ ಕೊಟ್ಟಾರಿ, ರಮೇಶ್ ಹೆಗ್ಡೆ ಮೋಹನ್ ಪೂಜಾರಿ, ಪಾಲಿಕೆಯ ಹಿರಿಯ ಅಧಿಕಾರಿಗಳಾದ ನರೇಶ್ ಶೆಣೈ, ಅಶ್ವಿನ್ ಉಪಸ್ಥಿತರಿದ್ದರು.

ಸುತ್ತಮುತ್ತ

ಮೊದಲು ಅಂಚೆ ಮತಗಳ ಎಣಿಕೆ ಆರಂಭ

ಕಾಸರಗೋಡು: ಜಿಲ್ಲಾ ಚುನಾವಣಾಧಿಕಾರಿಗಳ ಸಮ್ಮುಖದಲ್ಲಿ ಸ್ಟ್ರಾಂಗ್ ರೂಮ್‌ಗಳನ್ನು ತೆರೆದ ನಂತರ ಮತ ಎಣಿಕೆ ಆರಂಭವಾಗುತ್ತದೆ. ಮೊದಲು ಅಂಚೆ ಮತ ಎಣಿಕೆ ಮಾಡಲಾಗುತ್ತದೆ. ಅಂಚೆ ಮತಗಳ ಎಣಿಕೆ ಬೆಳಿಗ್ಗೆ 7 ಗಂಟೆಗೆ ಪ್ರಾರಂಭವಾಗುತ್ತದೆ ಮತ್ತು ಇಲೆಕ್ಟ್ರಾನಿಕ್ ಮತ ಯಂತ್ರಗಳಲ್ಲಿನ ಮತಗಳ ಎಣಿಕೆ ಬೆಳಿಗ್ಗೆ 8 ಗಂಟೆಗೆ ಪ್ರಾರಂಭವಾಗುತ್ತದೆ ಎಂದು ಜಿಲ್ಲಾ ಚುನಾವಣಾ ವಿಭಾಗವು ತಿಳಿಸಿದೆ.
ಜಿಲ್ಲೆಯಲ್ಲಿ ಒಟ್ಟು 5,525 ಅಂಚೆ ಮತಗಳು, 577 ಇಟಿಪಿಬಿಎಸ್ ಮತಗಳು ಬಂದಿವೆ. ಇದಲ್ಲದೆ 6,679 ಜನರು ಮನೆ ಮತದಾನದ ಮೂಲಕ ಮತ ಚಲಾಯಿಸಿದ್ದಾರೆ. ಇಲೆಕ್ಟ್ರಾನಿಕ್ ಮತ ಯಂತ್ರಗಳಿಂದ ಮತಗಳನ್ನು ಎಣಿಸಲು ಪ್ರತಿ ಕ್ಷೇತ್ರದಲ್ಲಿ 14 ಟೇಬಲ್‌ಗಳನ್ನು ಸ್ಥಾಪಿಸಲಾಗಿದೆ. ಅಂಚೆ ಮತಗಳು, ಇಟಿಪಿಬಿಎಸ್ ಮತಗಳಿಗೆ ಪ್ರತಿ ಕ್ಷೇತ್ರದಲ್ಲಿ ಪ್ರತ್ಯೇಕ ಟೇಬಲ್‌ಗಳನ್ನು ಸ್ಥಾಪಿಸಲಾಗಿದೆ. ಇಟಿಪಿಬಿಎಸ್ ಮತಗಳ ಎಣಿಸಲು ಪ್ರತಿ ಕ್ಷೇತ್ರದಲ್ಲಿ ತಲಾ ಒಂದು ಹೆಚ್ಚುವರಿ ಟೇಬಲ್ ಇರುತ್ತದೆ.
ಎಣಿಕೆ ಕೇಂದ್ರಗಳಲ್ಲಿ ಕಟ್ಟುನಿಟ್ಟಿನ ಭದ್ರತಾ ವ್ಯವಸ್ಥೆ ಮಾಡಲಾಗಿದೆ. ಎಣಿಕೆ ಮೇಲ್ವಿಚಾರಕರು, ಎಣಿಕೆ ಸಹಾಯಕರು, ಸೂಕ್ಷ್ಮ ವೀಕ್ಷಕರು ಕಾರ್ಯ ಕಲಾಪಗಳ ಮೇಲ್ವಿಚಾರಣೆ ನಡೆಸಲಿದ್ದಾರೆ. ಪ್ರತಿ ಮತ ಎಣಿಕೆ ಕೇಂದ್ರದಲ್ಲಿ ಪತ್ರಕರ್ತರಿಗಾಗಿ ಪ್ರತ್ಯೇಕ ಮಾಧ್ಯಮ ಕೊಠಡಿ ಸ್ಥಾಪಿಸಲಾಗಿದೆ. ಪಾಸ್‌ಗಳನ್ನು ಹೊಂದಿರುವ ಎಣಿಕೆ ಏಜೆಂಟ್‌ಗಳಿಗೆ ಮಾತ್ರ ಎಣಿಕೆ ಸಭಾಂಗಣಕ್ಕೆ ಪ್ರವೇಶ ನೀಡಲಾಗುವುದು. ಪ್ರತಿ ಎಣಿಕೆ ಮೇಜಿನಲ್ಲೂ ಎಣಿಕೆ ಮೇಲ್ವಿಚಾರಕರು, ಎಣಿಕೆ ಸಹಾಯಕರು ಮತ್ತು ಸೂಕ್ಷ್ಮ ವೀಕ್ಷಕರು ಕಾರ್ಯಕಲಾಪ ಗಮನಿಸುತ್ತಾರೆ.

ಜಿಲ್ಲಾಮಟ್ಟದ ಮಾಧ್ಯಮ ಕೇಂದ್ರ ಸ್ಥಾಪನೆ

ಕಾಸರಗೋಡು: ವಿಧಾನಸಭಾ ಚುನಾವಣೆಯ ಮತ ಎಣಿಕೆ ಕಾರ್ಯದ ಅಂಗವಾಗಿ ಕಾಸರಗೋಡು ಕಲೆಕ್ಟರೇಟ್‌ನಲ್ಲಿರುವ ಮಿನಿ ಕಾನ್ಫರೆನ್ಸ್ ಹಾಲ್‌ನಲ್ಲಿ ಮಾಧ್ಯಮ ಕೇಂದ್ರ ಸ್ಥಾಪಿಸಲಾಗಿದ್ದು, ಅಲ್ಲಿ ಟ್ರೆಂಡ್ ಫಲಿತಾಂಶ ಲಭ್ಯವಿರುತ್ತವೆ. ಎಲ್ಲಾ ಮಾಧ್ಯಮ ಪ್ರತಿನಿಧಿಗಳಿಗೆ ಜಿಲ್ಲಾ ಮಟ್ಟದ ಮಾಧ್ಯಮ ಕೇಂದ್ರಕ್ಕೆ ಪ್ರವೇಶ ನೀಡಲಾಗುವುದು. ಈ ಕೇಂದ್ರದಲ್ಲಿ ಇತರ ರಾಜ್ಯಗಳ ಚುನಾವಣಾ ಫಲಿತಾಂಶ ಮಾಹಿತಿ ಲಭ್ಯವಾಗುವಂತೆ ಮಾಡಲಾಗುವುದು.
ಮಂಜೇಶ್ವರ, ಕಾಸರಗೋಡು, ಉದುಮ ವಿಧಾನಸಭಾ ಕ್ಷೇತ್ರಗಳ ಚುನಾವಣಾ ಫಲಿತಾಂಶ ಒದಗಿಸಲು ಕಾಸರಗೋಡು ಸರಕಾರಿ ಕಾಲೇಜಿನ ಮುಂಭಾಗದಲ್ಲಿ ವಿಶೇಷ ಮಾಧ್ಯಮ ಕೇಂದ್ರ ಸ್ಥಾಪಿಸಲಾಗಿದೆ.
ಕಾಞಂಗಾಡು, ತೃಕ್ಕರೀಪ್ಪುರ ವಿಧಾನಸಭಾ ಕ್ಷೇತ್ರಗಳ ಚುನಾವಣಾ ಫಲಿತಾಂಶ ಒದಗಿಸಲು ಕಾಞಂಗಾಡು ದುರ್ಗಾ ಹೈಯರ್ ಸೆಕೆಂಡರಿ ಸ್ಕೂಲ್ ಬಳಿಯ ಸಭಾಂಗಣದಲ್ಲಿ ಮಾಧ್ಯಮ ಕೇಂದ್ರ ಸ್ಥಾಪಿಸಲಾಗಿದೆ. ಫಲಿತಾಂಶ ಗಳನ್ನು ಕಾಲಕಾಲಕ್ಕೆ ಲಭ್ಯವಾದ ತಕ್ಷಣ ಚುನಾವಣಾ ಆಯೋಗ ಮಾಧ್ಯಮಗಳಿಗೆ ತಿಳಿಸುತ್ತದೆ. ಚುನಾವಣಾ ಅಧಿಕಾರಿಗಳಿಂದ ಮಾಹಿತಿ ಸಂಗ್ರಹಿಸಿ ಒದಗಿಸುವ ಕಾರ್ಯ ಪ್ರತಿನಿಧಿಗಳಿಗೆ ವಹಿಸಲಾಗಿದೆ.

ಮುಂಗಾರು ಸ್ವಾಗತಕ್ಕೆ ಮುಳಿಯಾರಿನಲ್ಲಿ ಸ್ವಚ್ಛತಾ ಅಭಿಯಾನ

ಕಾಸರಗೋಡು: 'ಹೊಸ ಮಳೆಯನ್ನು ಸ್ವಾಗತಿಸೋಣ, ಸ್ವಚ್ಛತೆಗಾಗಿ ಒಂದಾಗೋಣ' ಎಂಬ ಘೋಷಣೆ ಯೊಂದಿಗೆ ಮುಳಿಯಾರು ಗ್ರಾ.ಪಂ.ನ ವಿವಿಧ ಪ್ರದೇಶಗಳಲ್ಲಿ ಮಳೆಗಾಲದ ರೋಗಗಳನ್ನು ಎದುರಿಸಲು ಸ್ವಚ್ಛತಾ ಅಭಿಯಾನ ನಡೆಸಲಾಯಿತು. ಸ್ವಚ್ಛತಾ ಅಭಿಯಾನ ನೇತೃತ್ವ ವಹಿಸಿದ್ದ ಮುಳಿಯಾರು ಗ್ರಾ.ಪಂ. ಅಧ್ಯಕ್ಷ ಕೆ.ಬಿ.ಮಹಮ್ಮದ್ ಕುಂಞಿ ಪಂಚಾಯತ್ ಮಟ್ಟದ ಉದ್ಘಾಟನೆ ನೆರವೇರಿಸಿ ದರು.
ಬೋವಿಕ್ಕಾನ, ಪೊವ್ವಲ್, ಇರಿಯಣ್ಣಿ, ಎರಿಂಜೇರಿ, ಕೋಟೂರು, ಕಾನತ್ತೂರು, ಅಲ್ಲಾಮ ನಗರ, ಮಾಸ್ತಿಕುಂಡು, ಎಡನೀರು, ತೇಜಸ್ ಕಾಲನ್ ಮತ್ತು ಅಮ್ಮಂಗೋಡು, ಲಕ್ಷದ್ವೀಪ್ ಕಾಲನಿಗಳಲ್ಲಿ ವಿಶೇಷ ಸಂಘಟನಾ ಸಮಿತಿ ರಚಿಸಲಾಯಿತು.
ಬೋವಿಕ್ಕಾನ ಪೇಟೆಯಲ್ಲಿ ನಡೆದ ಸ್ವಚ್ಛತಾ ಅಭಿಯಾನದ ನೇತೃತ್ವ ವಹಿಸಿದ್ದ ಗ್ರಾ.ಪಂ. ಅಧ್ಯಕ್ಷ ಕೆ.ಬಿ.ಮುಹಮ್ಮದ್‌ಕುಂಞಿ ಪಂಚಾಯತ್ ಮಟ್ಟದ ಉದ್ಘಾಟನೆಯನ್ನು ನೆರವೇರಿಸಿದರು. ಉಪಾಧ್ಯಕ್ಷೆ ಸಿ.ಕೆ.ಪುಷ್ಪಕುಮಾರಿ, ಬ್ಲಾಕ್ ಪಂಚಾಯತ್ ಸದಸ್ಯೆ ಶಾಂತಿನಿದೇವಿ, ಗ್ರಾ.ಪಂ. ಆರೋಗ್ಯ ಮತ್ತು ಶಿಕ್ಷಣ ಸ್ಥಾಯೀ ಸಮಿತಿ ಅಧ್ಯಕ್ಷೆ ಅನಿಸಾ ಮನ್ಸೂರ್ ಮಲ್ಲತ್, ಸದಸ್ಯರಾದ ಇ.ಮೋಹನನ್, ಜಯಕೃಷ್ಣನ್ ಮಾಸ್ಟರ್, ನಜೀರ್ ಮೂಲಡ್ಕಂ, ರಮೇಶ ಮುದಲಪ್ಪಾರ, ಅನನ್ಯ ಎಂ. ಲುಬ್ನಾ ಮುನೀರ್, ಮಿಸಿರಿಯಾ ರಫೀಕ್, ಗ್ರಾ.ಪಂ. ಕಾರ್ಯದರ್ಶಿ ಡಾ.ಪ್ರೇಮಲತಾ, ಕುಂಞಿಕೃಷ್ಣನ್, ಯೋಜನಾ ಸಮಿತಿ ಸದಸ್ಯ ಶರೀಫ್ ಕೊಡವಂಜಿ, ಸಾರ್ವಜನಿಕ ಕಾರ್ಯಕರ್ತರದ ಮನ್ಸೂರ್ ಮಲ್ಲತ್, ಸಿದ್ದಿಕ್ ಬೋವಿಕ್ಕಾನ, ಅಬ್ದುಲ್ ಖಾದರ್ ಕುನ್ನಿಲ್, ಅಬ್ದುಲ್ಲ ಹಾಜಿ, ಹಮ್ಜಾ ಚಾಯ್ಸ್, ಮುಸ್ತಫಾ, ಭಾಸ್ಕರ ಚೆಡೇಕಲ್, ಶ್ರೀನಿ ಬೋವಿಕ್ಕಾನ, ಫೈಸಲ್ ಪೊವ್ವಲ್ ನೇತೃತ್ವ ವಹಿಸಿದ್ದರು.

ಮೇ 4: ಜಿಲ್ಲೆಯಲ್ಲಿ ಡ್ರೈ ಡೇ

ಕಾಸರಗೋಡು: ವಿಧಾನಸಭಾ ಚುನಾವಣೆಗೆ ಸಂಬಂಧಿಸಿ ಮತ ಎಣಿಕೆ ದಿನವಾದ ಮೇ 4 ರಂದು ಸರಕಾರವು ಡ್ರೈ ಡೇ ಘೋಷಿಸಿದೆ. ಆದ್ದರಿಂದ ಮದ್ಯದಂಗಡಿಗಳು ಕಾರ್ಯನಿರ್ವಹಿಸುವುದಿಲ್ಲ. ಕೇಂದ್ರ ಚುನಾವಣಾ ಆಯೋಗದ ನಿರ್ದೇಶನದಂತೆ ರಾಜ್ಯದಲ್ಲಿ ಮದ್ಯ ನಿಷೇಧ (ಡ್ರೈ ಡೇ) ಜಾರಿಗೊಳಿಸಲಾಗಿದೆ. ಹೊಟೇಲ್‌ಗಳು, ರೆಸ್ಟೋರೆಂಟ್‌ಗಳು, ಕ್ಲಬ್‌ಗಳು, ಮದ್ಯದಂಗಡಿಗಳು ಸೇರಿದಂತೆ ಮದ್ಯ ಪೂರೈಸುವ ಅಥವಾ ಮಾರಾಟ ಮಾಡುವ ಎಲ್ಲಾ ಸಾರ್ವಜನಿಕ, ಖಾಸಗಿ ಸ್ಥಳಗಳಲ್ಲಿ ಈ ನಿರ್ಬಂಧ ಅನ್ವಯಿಸುತ್ತದೆ. ಸ್ಟಾರ್ ಹೊಟೇಲ್‌ಗಳು ಮತ್ತು ವಿವಿಧ ಕ್ಲಬ್‌ಗಳು ಸೇರಿದಂತೆ ಯಾವುದೇ ರೀತಿಯ ಮದ್ಯ ಪರವಾನಗಿ ಹೊಂದಿರುವ ಸಂಸ್ಥೆಗಳು ಈ ದಿನದಂದು ಮದ್ಯ ಪೂರೈಸಬಾರದು. ವ್ಯಕ್ತಿಗಳು ಮದ್ಯ ಸಂಗ್ರಹಿಸುವುದರ ಮೇಲೂ ಕಟ್ಟುನಿಟ್ಟಿನ ನಿರ್ಬಂಧಗಳಿವೆ. ಅಬಕಾರಿ ಕಾಯ್ದೆಯಡಿ ಅಕ್ರಮ ವಾಗಿ ಮದ್ಯ ಸಂಗ್ರಹಿಸುವವರ ವಿರುದ್ಧ ಕಠಿಣ ಕ್ರಮ ಕೈಗೊಳ್ಳಲಾಗುವುದು. ನೆರೆಯ ರಾಜ್ಯಗಳಿಂದ ಮದ್ಯ ಕಳ್ಳ ಸಾಗಾಟ ತಡೆಯಲು ಕಟ್ಟುನಿಟ್ಟಿನ ತಪಾಸಣೆ ನಡೆಸಲು ಸೂಚಿಸಲಾಗಿದೆ.

ಪ್ರವಾಸೋದ್ಯಮ ವಲಯದ ಸರ್ವತೋಮುಖ ಅಭಿವೃದ್ಧಿಗೆ ಅಧಿಕಾರಿಗಳಿಂದ ಸಿದ್ಧವಾಗಿದೆ ವಿಶೇಷ ರೂಪರೇಷೆ

ಜಿಲ್ಲೆಯ ಕರಾವಳಿ ರಸ್ತೆಗಳ ನವೀಕರಣಕ್ಕೆ ಸಮಗ್ರ ಯೋಜನೆ

ಕಾಸರಗೋಡು: ಜಿಲ್ಲೆಯ ಸಮುದ್ರ ಕರಾವಳಿ ರಸ್ತೆಗಳ ನವೀಕರಣಕ್ಕೆ ಸಮಗ್ರ ಯೋಜನೆಗಳನ್ನು ತಯಾರಿಸಲಾಗಿದ್ದು, ಕರಾವಳಿ ಪ್ರವಾಸೋದ್ಯಮ ವಲಯದ ಸರ್ವತೋಮುಖ ಅಭಿವೃದ್ಧಿಯ ಗುರಿಯೊಂದಿಗೆ ಅಧಿಕಾರಿಗಳು ವಿಶೇಷ ರೂಪುರೇಷೆ ಸಿದ್ಧಪಡಿಸಿದ್ದಾರೆ.
ಮಂಜೇಶ್ವರ, ಕಾಸರಗೋಡು, ಉದುಮ, ಕಾಞಂಗಾಡು, ತೃಕ್ಕರೀಪ್ಪುರ ವಿಧಾನಸಭಾ ಕ್ಷೇತ್ರಗಳ ವ್ಯಾಪ್ತಿಯಲ್ಲಿರುವ ಪ್ರಕೃತಿ ರಮಣೀಯ ಕಡಲತೀರಗಳನ್ನು ಇನ್ನಷ್ಟು ಸುಂದರವಾಗಿಸಿ ಕರಾವಳಿ ಪ್ರವಾಸೋದ್ಯಮ ಕ್ಷೇತ್ರವನ್ನು ಅಭಿವೃದ್ಧಿಗೊಳಿಸಲು ಸಂಬಂಧಪಟ್ಟ ಇಲಾಖೆಗಳ ಅಧಿಕಾರಿಗಳು ಸಜ್ಜಾಗಿದ್ದಾರೆ.
ಕರಾವಳಿ ಪ್ರದೇಶದ ಎಲ್ಲಾ ರಸ್ತೆಗಳನ್ನು ನವೀಕರಣಗೊಳಿಸಿ ಪ್ರಯಾಣ ಸೌಲಭ್ಯಗಳ ಉತ್ತಮಗೊಳಿಸುವ ಉದ್ದೇಶ ಹೊಂದಲಾಗಿದೆ. ಈ ಮೂಲಕ ಪ್ರವಾಸಿಗರನ್ನು ಆಕರ್ಷಿಸುವುದಕ್ಕಾಗಿ ವಿಶೇಷ ಯೋಜನೆಗಳನ್ನು ತಯಾರಿಸಲಾಗುತ್ತಿದೆ. ಅದರಲ್ಲಿ ಕರಾವಳಿ ಭಾಗದ ರಸ್ತೆ ಅಭಿವೃದ್ಧಿಯೂ ಒಳಗೊಂಡಿದೆ.
ಮಂಜೇಶ್ವರ ವಿಧಾನಸಭಾ ಕ್ಷೇತ್ರದ ಪ್ರವಾಸೋದ್ಯಮ



ಯೋಜನೆಗಳಿಗೆ ಜೀವ ತುಂಬಲು 4.30 ಕೋಟಿ ರೂ.ವೆಚ್ಚದ ಬೃಹತ್ ಯೋಜನೆಗಳಿಗೆ ಟೆಂಡರ್ ಪ್ರಕ್ರಿಯೆಗಳು ಪೂರ್ಣಗೊಂಡಿವೆ. ಶಾಸಕರ ನಿಧಿಯಿಂದ ಮಂಜೂರುಗೊಳಿಸಲಾದ ಈ ಅನುದಾನ ಉಪಯೋ ಗಿಸಿಕೊಂಡು ಮುಟ್ಟಂ, ಬೇರಿಕೆ, ಪೆರಿಂಗಡಿ, ಮಣಿಮುಂಡ, ಮೂಸೋಡಿ ಮೊದಲಾದ ಭಾಗಗಳ ಕರಾವಳಿ ರಸ್ತೆಗಳನ್ನು ಅಭಿವೃದ್ಧಿಪಡಿಸಲಾಗುವುದು.
ಇದರೊಂದಿಗೆ ಕಡಲ್ಕೊರೆತದಿಂದ ಹದಗೆಟ್ಟ ಪೆರಿಂಗಡಿ ಸಮುದ್ರ ಕಿನಾರೆಯ ರಸ್ತೆಯ ಹೊರತು ಸಮಾನಾಂತರವಾಗಿ ಹೊಸದಾಗಿ ಪ್ರಯಾಣ ಮಾರ್ಗ ನಿರ್ಮಿಸಲು ಅಧಿಕಾರಿಗಳು ಕ್ರಮ ಕೈಗೊಂಡಿದ್ದಾರೆ.
ಈ ಹಿಂದೆ ಜಿಯೋ ಬ್ಯಾಗ್‌ಗಳನ್ನು ಬಳಸಿಕೊಂಡು ಕರಾವಳಿ ರಸ್ತೆಗಳನ್ನು ಸಂರಕ್ಷಿಸಲು ಪ್ರಯತ್ನಿಸಿದರೂ ಕಾಸರಗೋಡು ಜಿಲ್ಲೆಯ ವಿವಿಧೆಡೆ ರಸ್ತೆಯನ್ನೇ ಸಂಪೂರ್ಣ ಕಡಲು ಆವರಿಸಿಕೊಂಡಿತ್ತು.
ಪ್ರಸ್ತುತ ಬಂದರು ಇಲಾಖೆಯ ಅನುಮತಿ ಲಭಿಸದ ಹಿನ್ನೆಲೆಯಲ್ಲಿ ಮಣಿಮುಂಡದವರೆಗೆ ಸಮಾನಾಂತರ ನೂತನ ರಸ್ತೆ ನಿರ್ಮಿಸಿ ಪ್ರಯಾಣ ಸಮಸ್ಯೆ ಪರಿಹರಿಸಲು ಆಲೋಚಿಸಲಾಗುತ್ತಿದೆ. ಬಳಿಕದ ಹಂತಗಳಲ್ಲಿ ಜಿಲ್ಲೆಯಾದ್ಯಂತ ಸಮಾನಾಂತರ ರಸ್ತೆ ನಿರ್ಮಾಣ ಯೋಜನೆ ವಿಸ್ತರಿಸಲು ನಿರ್ಧರಿಸಲಾಗಿದೆ.

ನವೀಕರಿಸಲಾಗಿದೆ

ಪ್ರವಾಸಿಗರಿಗೆ ಸುಗಮವಾಗಿ ತಲುಪುವುದಕ್ಕಾಗಿ 87 ಲ.ರೂ. ವೆಚ್ಚದಲ್ಲಿ ಮಂಜೇಶ್ವರದ ಹೊಸಬೆಟ್ಟು ಕಡಲ ಕಿನಾರೆಗಿರುವ ರಸ್ತೆಯನ್ನು ಈಗಾಗಲೇ ಸಂಪೂರ್ಣವಾಗಿ ನವೀಕರಿಸಲಾಗಿದೆ. ಬಂಡ್ಯೋಡು ಸಮೀಪದ ಬೇರಿಕೆ ಬೀಚ್‌ನ ಪ್ರವಾಸೋದ್ಯಮ ಅಭಿವೃದ್ಧಿ ಸಾಧ್ಯತೆ ಬಳಸಿಕೊಳ್ಳಲು ಮುಂದಿನ ಹಂತಗಳಲ್ಲಿ ಯೋಜನೆ ರೂಪಿಸಲಾಗುವುದು.

ಕಣ್ವತೀರ್ಥ ಭಾಗದ ಸಂಪೂರ್ಣ ಪ್ರಗತಿ
ಪ್ರಧಾನ ಪ್ರವಾಸೋದ್ಯಮ ಕೇಂದ್ರವಾದ ಕಣ್ವತೀರ್ಥದಲ್ಲಿ ಕಳೆದ ವರ್ಷಗಳಲ್ಲಿ ಕಡಲ್ಕೊರೆತದಿಂದ ಕಟ್ಟಡಗಳು ನಾಶಗೊಂಡಿದ್ದರೂ ಪ್ರಸ್ತುತ ಸಂಜೆ ಸಮಯದಲ್ಲಿ ಈ ಭಾಗಗಳಲ್ಲಿ ಭಾರೀ ಜನದಟ್ಟಣೆ ಕಂಡುಬರುತ್ತಿದೆ. ಪ್ರವಾಸಿಗರಿಗೆ ವಿಶ್ರಾಂತಿ ಪಡೆಯಲು ಪ್ರಸ್ತುತ ಈ ಪ್ರದೇಶದಲ್ಲಿ ಶೆಡ್ ಸ್ಥಾಪಿಸಲಾಗಿದೆ. ಸುರಕ್ಷತೆ ಖಾತರಿಪಡಿಸುವುದಕ್ಕಾಗಿ ಮಂಜೇಶ್ವರ ಗ್ರಾ.ಪಂ.ನಿಂದ ಅಪಘಾತ ಮುನ್ನೆಚ್ಚರಿಕೆ ಫಲಕಗಳನ್ನು ಅಳವಡಿಸಲಾಗಿದೆ. ಮುಂದಿನ ದಿನಗಳಲ್ಲಿ ಕಣ್ವತೀರ್ಥ ಪ್ರದೇಶಕ್ಕೆ ಉತ್ತಮವಾದ ರಸ್ತೆ ನಿರ್ಮಿಸುವ ಗುರಿ ಇರಿಸಲಾಗಿದೆ.

ಜಿಲ್ಲೆಯ ಬೀಚ್‌ಗಳಿಗೆ ಭೂಪಟದಲ್ಲಿ ಸ್ಥಾನ

ಕಾಸರಗೋಡು ಜಿಲ್ಲೆಯ ಎಲ್ಲಾ ಕರಾವಳಿ ಭಾಗಗಳ ರಸ್ತೆಗಳು ನವೀಕರಣಗೊಂಡರೆ ಮಂಜೇಶ್ವರ, ಕಾಸರಗೋಡು, ಹೊಸದುರ್ಗ ಮತ್ತು ವೆಳ್ಳರಿಕುಂಡು ತಾಲೂಕುಗಳ ಬೀಚ್‌ಗಳು ಪ್ರವಾಸೋದ್ಯಮದ ಭೂಪಟ ದಲ್ಲಿ ಪ್ರಮುಖ ಸ್ಥಾನ ಗಿಟ್ಟಿಸಿಕೊಳ್ಳಲಿವೆ. ಈ ಮೂಲಕ ಪ್ರಾದೇಶಿಕ ಆರ್ಥಿಕ ಕ್ಷೇತ್ರದಲ್ಲಿ ಬಹಳಷ್ಟು ಪ್ರಗತಿ ಸಾಧಿಸಲು ಅನುಕೂಲವಾಗಲಿದೆ. ಇದಕ್ಕಾಗಿ ಅಧಿಕಾರಿಗಳು ಕರಾವಳಿ ರಸ್ತೆಗಳನ್ನು ಅಭಿವೃದ್ಧಿಪಡಿಸಲು ನಿರ್ಧಾರ ಕೈಗೊಂಡಿದ್ದಾರೆ. ಕಡಲತೀರದ ರೋಡ್‌ಗಳ ಪುನರುದ್ಧಾರ ಜಿಲ್ಲೆಯ ಸಮಗ್ರ ಅಭಿವೃದ್ಧಿಗೆ ಪೂರಕವಾಗಬಹುದೆಂದು ನಿರೀಕ್ಷಿಸಲಾಗಿದೆ.

ಮನಸ್ಸನ್ನು ಏಕಾಗ್ರತೆಯತ್ತ ಕೊಂಡೊಯ್ಯುವ ತಾಣವೇ ದೇವಾಲಯ: ಒಡಿಯೂರು ಶ್ರೀ



ಕಾಸರಗೋಡು: ದೇವರು ಎಲ್ಲೆಡೆ ಇದ್ದಾನೆ. ಚಂಚಲ ಮನಸ್ಸನ್ನು ಏಕಾಗ್ರತೆಯತ್ತ ಒಯ್ಯುವಲ್ಲಿ ದೇವಾಲಯಗಳು ಸೂಕ್ತ ತಾಣಗಳು ಎಂದು ಒಡಿಯೂರು ಶ್ರೀ ಗುರುದೇವದತ್ತ ಸಂಸ್ಥಾನದ ಶ್ರೀ ಗುರುದೇವಾನಂದ ಸ್ವಾಮೀಜಿ ಹೇಳಿದ್ದಾರೆ.
ಕಾಳ್ಯಂಗಾಡು ಶ್ರೀ ಮೂಕಾಂಬಿಕಾ ಕ್ಷೇತ್ರದ ಬ್ರಹ್ಮಕಲಶೋತ್ಸವ ಸಂಪನ್ನಗೊಂಡು ಈ ಸಂಬಂಧ ಶುಕ್ರವಾರ ಸಂಜೆ ನಡೆದ ಸಮಾರೋಪ ಸಭೆಯನ್ನು ಉದ್ಘಾಟಿಸಿ ಅವರು ಆಶೀರ್ವಚನ ನೀಡಿದರು.
ಸಾಮಾಜಿಕ ಒಗ್ಗಟ್ಟಿನಿಂದ ಗಮನಾರ್ಹ ಸಾಧನೆಗಳು ಸಾಧ್ಯ ಎಂಬುದನ್ನು ಧಾರ್ಮಿಕತೆ ಈಗಾಗಲೇ ಸಾಬೀತುಪಡಿಸಿದೆ. ಅನೇಕ ದೇವಾಲಯಗಳ ಪುನರುದ್ಧಾರಣ ಇದಕ್ಕೆ ಸಾಕ್ಷಿ ಎಂದವರು ವಿಶ್ಲೇಷಿಸಿದರು.
ಅಧ್ಯಕ್ಷತೆ ವಹಿಸಿದ್ದ ಜೀರ್ಣೋದ್ಧಾರ ಸಮಿತಿ ಗೌರವಾಧ್ಯಕ್ಷ ಮತ್ತು ಜೀರ್ಣೋದ್ಧಾರ ಸಮಿತಿ ಅಧ್ಯಕ್ಷ ಡಾ.ಕೆ.ಎನ್.ವೆಂಕಟ್ರಮಣ ಹೊಳ್ಳ ಮತ್ತು ಹಾರ್ಮೋನಿಯಂ ಹಿರಿಯ ವಾದಕ ಭಾಸ್ಕರ ಕಾಳ್ಯಂಗಾಡು ಅವರಿಗೆ ಗೌರವಾರ್ಪಣೆ ನಡೆಯಿತು.
ಜಾನಪದವಿದ್ವಾಂಸಡಾ.ರವೀಶ್‌ಪಡುಮಲೆ ಧಾರ್ಮಿಕ ಭಾಷಣ ಮಾಡಿದರು. ಪತ್ರಕರ್ತ ವೀಜಿ.ಕಾಸರಗೋಡು ಅಭಿನಂದನೆ ಭಾಷಣ ಮಾಡಿದರು. ಕಾಳ್ಯಂಗಾಡು ಕ್ಷೇತ್ರದ ಆಡಳಿತ ಮೊಕ್ತೇಸರ ಅಚ್ಯುತ ಕಾಳ್ಯಂಗಾಡು, ಧರ್ಮದರ್ಶಿ ನಾರಾಯಣ ಕಾಳ್ಯಂಗಾಡು, ಕೂಡ್ಲು ಕುತ್ಯಾಳ ಕ್ಷೇತ್ರದ ಮೊಕ್ತೇಸರ ಕೆ.ಜಿ.ಶ್ಯಾನುಭೋಗ್, ಮಂಗಳೂರು ಆತ್ಮಶಕ್ತಿ ವಿವಿಧೋದ್ದೇಶ ಸಹಕಾರಿ ಸಂಘದ ಅಧ್ಯಕ್ಷ ಚಿತ್ತರಂಜನ್ ಬೋಳಾರ್, ಜೀರ್ಣೋದ್ಧಾರ ಸಮಿತಿ ಗೌರವ ಸಲಹೆಗಾರ ರಘು ಕೆ.ಮೀಪುಗುರಿ, ದೇವರಗುಡ್ಡೆ ಕ್ಷೇತ್ರದ ಮಹಾಬಲ ರೈ, ಶೇಷವನ ಕ್ಷೇತ್ರದ ಅಧ್ಯಕ್ಷ ವೇಣುಗೋಪಾಲ ಮಾಸ್ಟರ್, ಪಾರೆಕಟ್ಟೆ ಶ್ರೀ ಮುತ್ತಪ್ಪನ್ ಕ್ಷೇತ್ರದ ರಘುವೀರ್ ಶೆಟ್ಟಿ, ಕಾಳ್ಯಂಗಾಡು ಎಸ್‌ಎಂಎಸ್ ಕ್ಲಬ್ ಪ್ರಧಾನ ಕಾರ್ಯದರ್ಶಿ ಅಜಯ್ ಮತ್ತಿತರರಿದ್ದರು.
ಪ್ರಶಾಂತಿ ಪ್ರಶಾಂತ್ ಟೀಚರ್ ಕಾರ್ಯಕ್ರಮ ನಿರೂಪಿಸಿದರು. ಜಗದೀಶ್ ಕೂಡ್ಲು ಪ್ರಸ್ತಾವನೆಗೈದರು. ಶಾಂತಕುಮಾರ್ ಮುಂಡಿತ್ತಡ್ಕ ಸ್ವಾಗತಿಸಿ, ಸುರೇಖಾ ದಯಾನಂದ ಟೀಚರ್ ವಂದಿಸಿದರು.

ಎಲ್ಲೆಂದರಲ್ಲಿ ವಾಹನ ಪಾರ್ಕಿಂಗ್: ಇಲ್ಲಿ ಪಾದಚಾರಿಗಳ ಬವಣೆ ಕೇಳೋರೇ ಇಲ್ಲ



ಕಾಸರಗೋಡು: ಕಾಸರಗೋಡು ನಗರದ ಪ್ರಮುಖ ರಸ್ತೆಗಳು ಹಾಗೂ ಫುಟ್‌ಪಾತ್‌ಗಳು ಈಗ ವಾಹನ ಪಾರ್ಕಿಂಗ್ ಸ್ಥಳವಾಗಿ ಬಿಟ್ಟಿವೆ. ಎಲ್ಲೆಂದರಲ್ಲಿ ವಾಹನಗಳು ನಿಲುಗಡೆಯಾಗುತ್ತಿದ್ದು, ಪಾದಚಾರಿಗಳು ಅಪಘಾತ ಭೀತಿಯಿಂದ ಸಂಚರಿಸುವಂತಾಗಿದೆ.
ದಿನೇ ದಿನೇ ಈ ಸಮಸ್ಯೆಯು ಉಲ್ಬಣಿಸುತ್ತಿದ್ದು, ಅಧಿಕಾರಿ ವರ್ಗ ಮಾತ್ರ ಮೌನಕ್ಕೆ ಶರಣಾಗಿದೆ. ರಸ್ತೆಗಳಲ್ಲಿಯೇ ವಾಹನಗಳು ನಿಲ್ಲುವುದರಿಂದ ಟ್ರಾಫಿಕ್ ಜಾಮ್ ಕೂಡ ಉಂಟಾಗುತ್ತಿದ್ದು, ಸಾರ್ವಜನಿಕರಿಗೆ ತೊಂದರೆಯಾಗುತ್ತಿದೆ.

ಎಲ್ಲೆಲ್ಲಿ ಹೆಚ್ಚು ಸಮಸ್ಯೆ ?
ಕಾಸರಗೋಡು ನಗರದ ಹೊಸ ಬಸ್ ನಿಲ್ದಾಣ, ಎಂಜಿ ರೋಡ್, ಹಳೆ ಬಸ್ ನಿಲ್ದಾಣ, ಟ್ರಾಫಿಕ್ ಜಂಕ್ಷನ್, ರೈಲ್ವೆ ಸ್ಟೇಷನ್ ರೋಡ್, ಬ್ಯಾಂಕ್ ರೋಡ್, ಕೆ.ಪಿ.ಆರ್. ರಾವ್ ರೋಡ್, ನಾಯಕ್ಸ್ ರೋಡ್, ಕರಂದಕ್ಕಾಡು ಪರಿಸರ, ಮಧೂರು ರಸ್ತೆ ತಿರುವು, ನುಳ್ಳಿಪ್ಪಾಡಿ, ಅಣಂಗೂರು, ವಿದ್ಯಾನಗರ, ಬಿ.ಸಿ.ರೋಡ್, ನಾಯನ್ಮಾರಮೂಲೆ, ತಾಳಿಪಡ್ಪು, ಅಡ್ಕತ್ತಬೈಲು ಮೊದಲಾದ ಪ್ರಮುಖ ಪ್ರದೇಶಗಳಲ್ಲಿ ವ್ಯಾಪಕವಾಗಿ ಫುಟ್‌ಪಾತ್‌ಗಳಲ್ಲೇ ಕಾರು, ಬೈಕ್ ಸಹಿತ ವಾಹನಗಳನ್ನು ಗಂಟೆಗಟ್ಟಲೆ ನಿಲುಗಡೆಗೊಳಿಸುತ್ತಿರುವುದು ಕಂಡುಬರುತ್ತಿದೆ.

ಪ್ರಯಾಣಿಕರಿಗೆ ತೊಂದರೆ

ಸರ್ವಿಸ್ ರಸ್ತೆಗಳಲ್ಲೂ ಇದೇ ಸಮಸ್ಯೆ ಫುಟ್‌ಪಾತ್ ಮಾತ್ರವಲ್ಲದೆ ರಾಷ್ಟ್ರೀಯ ಹೆದ್ದಾರಿಯ ಸರ್ವೀಸ್ ರಸ್ತೆಗಳಲ್ಲೂ ಹಗಲು ರಾತ್ರಿಯೆನ್ನದೆ ವಾಹನಗಳನ್ನು ನಿಲ್ಲಿಸುತ್ತಿರುವುದು ಕಂಡಬರುತ್ತಿದೆ.ಈ ಹಿನ್ನೆಲೆಯಲ್ಲಿ ಪಾದಚಾರಿಗಳು ಅಲ್ಲದೆ ದಿನನಿತ್ಯದ ಪ್ರಯಾಣಿಕರಿಗೆ ಭಾರೀ ತೊಂದರೆ ಎದುರಾಗುತ್ತಿದೆ.

ಆನೆಕಲ್ಲು ಶಾಲೆಯಲ್ಲಿ ತ್ರಿದಿನ ಬೇಸಿಗೆ ಶಿಬಿರ: ವಿವಿಧ ಚಟುವಟಿಕೆ ಆಯೋಜನೆ



ಮಂಜೇಶ್ವರ: ಎಸ್‌ಎಸ್‌ಕೆ ಕಾಸರಗೋಡು, ಬಿಆರ್‌ಸಿ ಮಂಜೇಶ್ವರ ಇವುಗಳ ಆಶ್ರಯದಲ್ಲಿ ಮೂರು ದಿನಗಳ ವೈವಿಧ್ಯಮಯ ಬೇಸಿಗೆ ಶಿಬಿರ ಆನೆಕಲ್ಲು ಶಾಲೆಯಲ್ಲಿ ಜರಗಿತು.
ಶಿಬಿರದಲ್ಲಿ ಮೂರು ದಿನಗಳಲ್ಲಿ ಪೇಪರ್ ಕ್ರಾಫ್ಟ್, ಥಿಯೇಟರ್ ಗೇಮ್, ವಿವಿಧ ಆಟಗಳು, ಸಿನಿಮಾ, ಅಭಿನಯ ಮುಂತಾದ ವಿಚಾರಗಳಲ್ಲಿ ಸರೋಜ ಟೀಚರ್, ರಾಜೇಶ್ವರಿ ಟೀಚರ್, ರಶ್ಮಿ ಟೀಚರ್, ಮೊಯ್ದಿನ್ ಮಾಸ್ಟರ್, ಸದಾಶಿವ ಮಾಸ್ಟರ್, ಪ್ರಕಾಶ್ ಮಾಸ್ಟರ್, ರಾಜು ಮಾಸ್ಟರ್, ಚಂದ್ರಿಕಾ ಟೀಚರ್, ಶ್ಯಾಮಲಾ ಟೀಚರ್ ವಿವಿಧ ಚಟುವಟಿಕೆಗಳ ನಡೆಸಿಕೊಟ್ಟರು.

ಸಮಾರೋಪ ಸಮಾರಂಭ
ಸಮಾರೋಪದಲ್ಲಿ ಶಾಲಾ ರಕ್ಷಕ ಶಿಕ್ಷಕ ಸಂಘದ ಉಪಾಧ್ಯಕ್ಷ ಅಶೋಕ್ ಕೊಡ್ಲಮೊಗರು ಅಧ್ಯಕ್ಷತೆ ವಹಿಸಿದ್ದರು. ಶಾಲಾ ಮುಖ್ಯೋಪಾಧ್ಯಾಯರಾದ ರವಿಶಂಕರ್, ಸಿತಾರ ಟೀಚರ್ ಶುಭ ಹಾರೈಸಿದರು. ಈ ಸಂದರ್ಭ ಎಲ್ಲಾ ಶಿಬಿರಾರ್ಥಿಗಳಿಗೂ ಸ್ಮರಣಿಕೆ ನೀಡಿ ಅಭಿನಂದಿಸಲಾಯಿತು. ಚೈತ್ರಾ ಟೀಚರ್ ಬಗಂಬಿಲ ಸ್ವಾಗತಿಸಿ, ಸಿಆರ್‌ಸಿ ಕೋ ಓರ್ಡಿನೇಟರ್ ಶೈಲಜಾ ಟೀಚರ್ ವಂದಿಸಿದರು. ತಿಲಕ ಟೀಚರ್ ಕಾರ್ಯಕ್ರಮ ನಿರೂಪಿಸಿದರು.

ಬದಿಯಡ್ಕ ಗ್ರಾಮ ಪಂಚಾಯತ್‌ನಲ್ಲಿ ಮಳೆಗಾಲ ಪೂರ್ವ ಸ್ವಚ್ಛತಾ ಸಂದೇಶ ರ‍್ಯಾಲಿ



ಬದಿಯಡ್ಕ: ರೋಗ ಬಂದ ಮೇಲೆ ಚಿಕಿತ್ಸೆ ಮಾಡುವುದರ ಬದಲು ರೋಗ ಬಾರದಂತೆ ತಡೆಗಟ್ಟಲು ಬೇಕಾದ ವ್ಯವಸ್ಥೆಯನ್ನು ಮಾಡಿಕೊಳ್ಳುವುದೇ ಜಾಣತನ. ಮಳೆಗಾಲದಲ್ಲಿ ಅನೇಕ ಸಾಂಕ್ರಾಮಿಕ ರೋಗಗಳು ಹುಟ್ಟಿಕೊಳ್ಳುತ್ತವೆ. ಇದಕ್ಕೆಲ್ಲಾ ಪ್ರಧಾನ ಕಾರಣ ನಮ್ಮ ಪರಿಸರವೇ ಆಗಿರುತ್ತದೆ. ಈ ನಿಟ್ಟಿನಲ್ಲಿ ಸ್ವಚ್ಛತೆಗೆ ಆದ್ಯತೆ ನೀಡಬೇಕಾಗಿರುವುದು ನಮ್ಮೆಲ್ಲರ ಕರ್ತವ್ಯ ಎಂದು ಬದಿಯಡ್ಕ ಗ್ರಾ.ಪಂ. ಉಪಾಧ್ಯಕ್ಷೆ ಅಶ್ವಿನಿ ಕೆ.ಎಂ. ಹೇಳಿದ್ದಾರೆ.
ಬದಿಯಡ್ಕ ಗ್ರಾ.ಪಂ.ನ ನೇತೃತ್ವದಲ್ಲಿ ಮಳೆಗಾಲ ಪೂರ್ವ ಸ್ವಚ್ಛತಾ ಕಾರ್ಯದ ಅಂಗವಾಗಿ ನಡೆದ ಸಂದೇಶ ರ‍್ಯಾಲಿಯನ್ನು ಉದ್ಘಾಟಿಸಿ ಅವರು ಮಾತನಾಡಿದರು.
ಅಭಿವೃದ್ಧಿ ಸ್ಥಾಯೀ ಸಮಿತಿ ಅಧ್ಯಕ್ಷ ಹಮೀದ್ ಕೆಡೆಂಜಿ ಅಧ್ಯಕ್ಷತೆ ವಹಿಸಿದ್ದರು. ಜಿ.ಪಂ. ಸದಸ್ಯ ರಾಮಪ್ಪ ಮಂಜೇಶ್ವರ, ಕ್ಷೇಮಕಾರ್ಯ ಸ್ಥಾಯೀ ಸಮಿತಿ ಅಧ್ಯಕ್ಷೆ ರಜನಿ ಜಿ.ಆರ್., ಆರೋಗ್ಯ ಮತ್ತು ವಿದ್ಯಾಭ್ಯಾಸ ಸ್ಥಾಯೀ ಸಮಿತಿ ಅಧ್ಯಕ್ಷ ಅವಿನಾಶ್ ರೈ ವಿ., ವಾರ್ಡ್ ಸದಸ್ಯರಾದ ಬಾಲಕೃಷ್ಣ ಶೆಟ್ಟಿ, ಶ್ಯಾಮಪ್ರಸಾದ್ ಸರಳಿ, ಹರೀಶ, ಮಧುಸೂದನ, ಅನ್ವರ್ ಬೀವಿ, ಬಿಂದ್ಯಾ ಎಂ., ಉಷಾ ಪಳ್ಳತ್ತಡ್ಕ, ಪಂ. ಕಾರ್ಯದರ್ಶಿ ಮನೋಜ್ ಕುಮಾರ್, ಸಹಾಯಕ ಕಾರ್ಯದರ್ಶಿ ಪಿ.ಕೆ.ಸಜಿ, ಹೆಲ್ತ್ ಸೂಪರ್‌ವೈಸರ್ ಎಂ.ಮಧುಸೂದನನ್, ಹೆಲ್ತ್ ಇನ್‌ಸ್ಪೆಕ್ಟರ್ ರಾಜೇಶ್ ನಂಬ್ಯಾರ್, ಪಿ.ಕೆ. ಬಾಬುರಾಜ್, ಸೂರಜ್, ಕೇರಳ ವ್ಯಾಪಾರಿ ವ್ಯವಸಾಯಿ ಏಕೋಪನ ಸಮಿತಿ ಕಾರ್ಯದರ್ಶಿ ರವಿ ನವಶಕ್ತಿ ನೇತೃತ್ವ ನೀಡಿದರು.
ಬಳಿಕ ಬದಿಯಡ್ಕ ಪೇಟೆ (ಟೌನ್), ಸಮುದಾಯ ಆರೋಗ್ಯ ಕೇಂದ್ರ ಪರಿಸರ, ಪಂ.ಪರಿಸರದಲ್ಲಿ ನಡೆದ ಸ್ವಚ್ಛತಾ ಕಾರ್ಯದಲ್ಲಿ ನೂರಕ್ಕೂ ಹೆಚ್ಚು ಮಂದಿ ಭಾಗವಹಿಸಿದ್ದರು.

ಚುನಾವಣೆ: ಮತ ಎಣಿಕೆಗೆ ಜವಾಬ್ದಾರರಾಗಿರುವ ಅಧಿಕಾರಿಗಳ 2ನೇ ಹಂತದ ರ‍್ಯಾಂಡಮೈಸೇಷನ್



ಕಾಸರಗೋಡು: ಜಿಲ್ಲೆಯ ಎಲ್ಲಾ 5 ವಿಧಾನಸಭಾ ಕ್ಷೇತ್ರಗಳ ಚುನಾವಣೆಗೆ ಸಂಬಂಧಿಸಿದಂತೆ ಮತ ಎಣಿಕೆಗೆ ಜವಾಬ್ದಾರರಾಗಿರುವ ಅಧಿಕಾರಿಗಳ 2ನೇ ಹಂತದ ರ‍್ಯಾಂಡಮೈಸೇಷನ್ (ಮತ ಎಣಿಕೆ ಕಾರ್ಯದ ಅಧಿಕಾರಿಗಳ ಆಯ್ಕೆ ಪ್ರಕ್ರಿಯೆ) ಶನಿವಾರ ಕಾಸರಗೋಡು ಕಲೆಕ್ಟರೇಟ್‌ನಲ್ಲಿ ಜರಗಿತು.
ಎಲ್ಲಾ ಕ್ಷೇತ್ರಗಳಲ್ಲಿ ಪ್ರತಿ ಇವಿಎಂ ಟೇಬಲ್‌ಗೆ 20 ಎಣಿಕೆ ಮೇಲ್ವಿಚಾರಕರು, 20 ಎಣಿಕೆ ಸಹಾಯಕರು ಮತ್ತು 20 ಸೂಕ್ಷ್ಮ ವೀಕ್ಷಕರು ಇರುತ್ತಾರೆ. ಅಂಚೆ ಮತಪತ್ರಗಳ ಟೇಬಲ್ ಕರ್ತವ್ಯವನ್ನು ಸಹ ಪರಿಗಣಿಸಿದರೆ ಜಿಲ್ಲೆಯಲ್ಲಿ ಒಟ್ಟು 540 ಮಂದಿ ಅಧಿಕಾರಿಗಳಿಗೆ ಮತಗಳ ಎಣಿಕೆಯ ಕರ್ತವ್ಯವನ್ನು ವಹಿಸಲಾಗಿದೆ. ಎಲ್ಲಾ ಎಣಿಕೆ ಮೇಲ್ವಿಚಾರಕರು ಗಜೆಟೆಡ್ ಶ್ರೇಣಿಯವರಾಗಿದ್ದಾರೆ. ಅಂಚೆ ಮತಪತ್ರಗಳ ಟೇಬಲ್‌ನ ಉಸ್ತುವಾರಿ ಹೊಂದಿರುವ ಎಣಿಕೆ ಸಹಾಯಕರು ಗಜೆಟೆಡ್ ಶ್ರೇಣಿಯವರಾಗಿದ್ದಾರೆ. ಸೂಕ್ಷ್ಮ ವೀಕ್ಷಕರು ಕೇಂದ್ರ ಸರಕಾರಿ ನೌಕರರಾಗಿರುತ್ತಾರೆ. ಶೇ.40ರಷ್ಟು ಹೆಚ್ಚುವರಿಯಾಗಿ ಮತ ಎಣಿಕೆ ಕಾರ್ಯಕ್ಕೆ ಅಧಿಕಾರಿಗಳನ್ನು ನಿಯೋಜಿಸಲಾಗಿದೆ. ಪ್ರತಿ ಕ್ಷೇತ್ರದಲ್ಲಿ 14 ಇವಿಎಂ ಟೇಬಲ್‌ಗಳು ಇರುತ್ತವೆ. ಇದೇ ವೇಳೆ ಮತ ಎಣಿಕೆಯ ಜವಾಬ್ದಾರಿಯುತ ಅಧಿಕಾರಿಗಳಿಗೆ ಸಮಗ್ರ ತರಬೇತಿ ನೀಡಲಾಯಿತು. ಎಣಿಕೆ ಕಾರ್ಯಕ್ಕೆ ಸಂಬಂಧಿಸಿದ 2ನೇ ಹಂತದ ರ‍್ಯಾಂಡಮೈಸೇಷನ್ ಯಶಸ್ವಿಯಾಗಿ ಮುಕ್ತಾಯವಾಯಿತು. ಮೇ 4 ರಂದು ಬೆಳಗ್ಗೆ 5 ಗಂಟೆಗೆ ಆಯಾ ಕ್ಷೇತ್ರದ ಚುನಾವಣಾ ಅಧಿಕಾರಿಗಳ ನೇತೃತ್ವದಲ್ಲಿ 3ನೇ ಹಂತದ ರ‍್ಯಾಂಡಮೈಸೇಷನ್ ಮತ ಎಣಿಕೆ ಕೇಂದ್ರಗಳಲ್ಲಿ ನಡೆಯಲಿದೆ.
ಮೊದಲ ಮತ್ತು 2ನೇ ಹಂತದ ರ‍್ಯಾಂಡಮೈಸೇಷನ್‌ಗೆ ಸಂಬಂಧಿಸಿದ ಕಾರ್ಯಗಳ ಬಗ್ಗೆ ಮಾಹಿತಿ ಆದೇಶ ಸಾಫ್ಟ್‌ವೇರ್ ಮೂಲಕ ಲಭ್ಯವಾಗುವಂತೆ ಮಾಡಲಾಗುವುದು, 3ನೇ, ಅಂತಿಮ ಹಂತದ ರ‍್ಯಾಂಡಮೈಸೇಷನ್ ಕುರಿತು ಮಾಹಿತಿ ಎಣಿಕೆ ಕೇಂದ್ರಗಳಲ್ಲಿ ಚುನಾವಣಾ ಅಧಿಕಾರಿಗಳು ನೇರ ಒದಗಿಸಲಿದ್ದಾರೆ.

110ಕೆವಿ ಲೈನ್ ನವೀಕರಣ ಕಾಮಗಾರಿ ಆರಂಭ: ವಿದ್ಯುತ್ ವ್ಯತ್ಯಯ ಸಾಧ್ಯತೆ



ಕಾಸರಗೋಡು: ಜಿಲ್ಲೆಯಲ್ಲಿ 110 ಕೆವಿ ಮೈಲಾಟಿ – ವಿದ್ಯಾನಗರ (ಐಎಂವೈಎಡಿ) ಫೀಡರ್‌ನ ಸಾಮರ್ಥ್ಯ ಹೆಚ್ಚಿಸುವ ಭಾಗವಾಗಿ ನವೀಕರಣ ಕಾರ್ಯ ಪ್ರಾರಂಭಗೊಂಡಿದ್ದು, ಯೋಜನೆ ಪೂರ್ಣಗೊಳ್ಳುವವರೆಗೆ ಅಂದರೆ ಜೂನ್ ಮಧ್ಯ ಭಾಗದ ವರೆಗೆ ಕೆಲಸ ಯಾವುದೇ ಅಡೆತಡೆಯಿಲ್ಲದೆ ಮುಂದುವರಿಯುತ್ತದೆ ಎಂದು ಕೆಎಸ್‌ಇಬಿ ತಿಳಿಸಿದೆ. ನವೀಕರಣ ಕಾರ್ಯವನ್ನು ಪ್ರತಿದಿನ ಬೆಳಿಗ್ಗೆ 8 ರಿಂದ ಸಂಜೆ 5ರ ವರೆಗೆ ಕೈಗೊಳ್ಳಲಾಗುವುದು.

ವಿದ್ಯುತ್ ಸರಬರಾಜು ವ್ಯವಸ್ಥೆಗಳು
ಕಾರ್ಯ ಅವಧಿಯಲ್ಲಿ ಕಾಸರಗೋಡು ಉತ್ತರ ವಲಯಕ್ಕೆ ಕರ್ನಾಟಕದಿಂದ ಸರಬರಾಜು ಮತ್ತು ಸೌರ ಸ್ಥಾವರಗಳ ಮೂಲಕ ವಿದ್ಯುತ್ ಸರಬರಾಜು ವ್ಯವಸ್ಥೆ ಮಾಡಲಾಗುತ್ತದೆ. ರಾತ್ರಿ ಮತ್ತು ಪೀಕ್ ಅವರ್‌ಗಳಲ್ಲಿ ಹೆಚ್ಚಿದ ವಿದ್ಯುತ್ ಬೇಡಿಕೆ ಪರಿಗಣಿಸಿ, ಎಚ್‌ಟಿ ಲೈನ್‌ನ್ನು ಪ್ರತಿದಿನ ಸಂಜೆ 5.30ರ ಹೊತ್ತಿಗೆ ಪುನರ್ ಸ್ಥಾಪಿಸಲಾಗುತ್ತದೆ. ಹಗಲಿನ ವಿದ್ಯುತ್ ಬೇಡಿಕೆ ಕರ್ನಾಟಕ –ಸೌರ ವಿದ್ಯುತ್ ಸ್ಥಾವರಗಳ ಪೂರೈಕೆ ಮೇಲೆ ಸಂಪೂರ್ಣ ಅವಲಂಬಿತವಾಗಿರುತ್ತದೆ.

ಗ್ರಿಡ್ ಸ್ಥಗಿತಗೊಳ್ಳುವ ಸಾಧ್ಯತೆ
ವಿದ್ಯುತ್ ಸರಬರಾಜಿನಲ್ಲಿ ಯಾವುದೇ ತಾಂತ್ರಿಕ ಅಡಚಣೆ ಉಂಟಾದರೆ ಆ ಪ್ರದೇಶದ ಗ್ರಿಡ್ ಸಂಪೂರ್ಣ ಸ್ಥಗಿತಗೊಳ್ಳುವ ಸಾಧ್ಯತೆಯಿದೆ ಎಂದು ಅಧಿಕಾರಿಗಳು ಎಚ್ಚರಿಕೆ ನೀಡಿದ್ದಾರೆ.
ಈ ತುರ್ತು ಪರಿಸ್ಥಿತಿಯಲ್ಲಿ ಗಮನದಲ್ಲಿಟ್ಟುಕೊಂಡು ಕೆಎಸ್‌ಇಬಿ ನಿರಂತರ ವಿದ್ಯುತ್ ಪೂರೈಕೆ ಖಚಿತ ಪಡಿಸಿಕೊಳ್ಳಲು ಮುನ್ನೆಚ್ಚರಿಕೆಯನ್ನು ತೆಗೆದುಕೊಂಡಿದೆ.

ವಿದ್ಯುತ್ ಕಡಿತ ಪ್ರದೇಶ
ನವೀಕರಣ ಕಾಮಗಾರಿ ನಡೆಸುವ ಅವಧಿಯಲ್ಲಿ ಈ ಕೆಳಗಿನ ಸಬ್ ಸ್ಟೇಷನ್‌ಗಳಿಂದ ವಿದ್ಯುತ್ ಸರಬ ರಾಜು ಭಾಗಶಃ ಅಡ್ಡಿ ಉಂಟಾಗಬಹುದಾಗಿದೆ. 110 ಕೆವಿ ಸಬ್ ಸ್ಟೇಷನ್‌ಗಳು: ವಿದ್ಯಾನಗರ, ಮುಳ್ಳೇರಿಯ, ಕುಬಣೂರು, ಮಂಜೇಶ್ವರ 33 ಕೆವಿ ಸಬ್ ಸ್ಟೇಷನ್‌ಗಳು: ಅನಂತಪುರ, ಕಾಸರಗೋಡು ನಗರ, ಬದಿಯಡ್ಕ, ಪೆರ್ಲ. ನವೀಕರಣ ಕಾರ್ಯ 1ರಿಂದ ಎರಡು ತಿಂಗಳೊಳಗೆ ಪೂರ್ಣ ಗೊಳಿಸುವ ಗುರಿ ಹೊಂದಿದೆ. ಈ ಅವಧಿಯಲ್ಲಿ ಗ್ರಾಹಕರು ಸಹಕರಿಸಬೇಕೆಂದು ಕೆಎಸ್‌ಇಬಿ ತಿಳಿಸಿದೆ.

ವಿದ್ಯುತ್ ಸಮಸ್ಯೆಗೆ ಸಿಗಲಿದೆ ಶಾಶ್ವತ ಪರಿಹಾರ

ವಿದ್ಯುತ್ ಲೈನ್‌ಗಳ ಸಾಮರ್ಥ್ಯ ಹೆಚ್ಚಿಸುವ ಮೂಲಕ ಭವಿಷ್ಯ ದಲ್ಲಿ ಕಾಸರಗೋಡು ಪ್ರದೇಶ ದಲ್ಲಿ ವೋಲ್ಟೇಜ್ ಕೊರತೆ, ವಿದ್ಯುತ್ ಕಡಿತಕ್ಕೆ ಶಾಶ್ವತ ಪರಿಹಾರ ಉಂಟಾಗುವ ನಿರೀಕ್ಷೆ ಇದೆ.

ವಿಧಾನಸಭಾ ಚುನಾವಣೆಯ ಮತ ಎಣಿಕೆ ಕಾರ್ಯದ ಅಂಗವಾಗಿ ವಿವಿಧ ರಾಜಕೀಯ ಪಕ್ಷಗಳ ಸಭೆ

ಶಾಂತಿಯುತವಾಗಿ ಮತ ಎಣಿಕೆ ನಡೆಯಲು ಎಲ್ಲರ ಸಹಕಾರ ಅತ್ಯಗತ್ಯ : ಜಿಲ್ಲಾಧಿಕಾರಿ

ಕಾಸರಗೋಡು: ವಿಧಾನಸಭಾ ಚುನಾವಣೆ ಮತ ಎಣಿಕೆ ಕಾರ್ಯದ ಅಂಗವಾಗಿ ವಿವಿಧ ರಾಜಕೀಯ ಪಕ್ಷಗಳ ಸಭೆ ಕಾಸರಗೋಡು ಕಲೆಕ್ಟರೇಟ್‌ನಲ್ಲಿ ಶನಿವಾರ ಜರಗಿತು. ಜಿಲ್ಲಾ ಚುನಾವಣಾಧಿಕಾರಿ ಜಿಲ್ಲಾಧಿಕಾರಿ ಅರ್ಜುನ್ ಪಾಂಡ್ಯನ್ ಅಧ್ಯಕ್ಷತೆ ವಹಿಸಿದ್ದರು.
ವಿಧಾನಸಭಾ ಚುನಾವಣೆಯ ಮತ ಎಣಿಕೆ ದಿನದಂದು ಶಾಂತಿ, ನೆಮ್ಮದಿ ಮತ್ತು ಸುವ್ಯವಸ್ಥೆಯನ್ನು ಕಾಪಾಡಿಕೊಳ್ಳಲು ಎಲ್ಲಾ ರಾಜಕೀಯ ಪಕ್ಷಗಳ ಕಾರ್ಯಕರ್ತರು, ಸಾರ್ವಜನಿಕರು ಸಹಕರಿಸಬೇಕೆಂದು ಸಭೆಯಲ್ಲಿ ನಿರ್ಧರಿಸಲಾಯಿತು. ವಿಧಾನಸಭಾ ಚುನಾವಣೆಯನ್ನು ಶಾಂತಿಯುತವಾಗಿ ನಡೆಸಲು ಸಹಕರಿಸಿದ ಎಲ್ಲರಿಗೂ ಜಿಲ್ಲಾಧಿಕಾರಿ ಧನ್ಯವಾದ ಸಮರ್ಪಿಸಿದರು. ಮತ ಎಣಿಕೆಗೆ ಎಲ್ಲಾ ಸಿದ್ಧತೆ ಪೂರ್ಣಗೊಂಡಿವೆ ಎಂದು ಹೇಳಿದರು.



ವಿಜಯೋತ್ಸವ ಮೆರವಣಿಗೆ ಆರಂಭದ ಸ್ಥಳ, ಅಂತ್ಯದ ಸ್ಥಳ, ಸಮಯ ಮತ್ತು ಮಾರ್ಗವನ್ನು ಪೊಲೀಸ್ ಅಧಿಕಾರಿಗಳೊಂದಿಗೆ ಸಮಾಲೋಚಿಸಿ ಮುಂಚಿತವಾಗಿ ತೀರ್ಮಾನಿಸಬೇಕು ಮತ್ತು ಸೂಚನೆಗಳನ್ನು ಕಟ್ಟುನಿಟ್ಟಾಗಿ ಪಾಲಿಸಬೇಕು ಎಂದು ಜಿಲ್ಲಾ ಪೊಲೀಸ್ ಮುಖ್ಯಸ್ಥ ವಿಜಯ್ ಭರತ್ ರೆಡ್ಡಿ ಹೇಳಿದರು.
ಮದ್ಯ ಅಥವಾ ಇತರ ಮಾದಕ ವಸ್ತುಗಳ ಪ್ರಭಾವದಲ್ಲಿ ಕಾರ್ಯಕರ್ತರು ಭಾಗವಹಿಸುವುದನ್ನು ನಾಯಕರು ಕಟ್ಟುನಿಟ್ಟಾಗಿ ತಡೆಯಬೇಕು. ಕಾನೂನು ಉಲ್ಲಂಘಿಸುವ ವಾಹನಗಳು ಕಂಡುಬಂದರೆ ಅವುಗಳನ್ನು ವಶಪಡಿಸಿಕೊಂಡು ಕಾನೂನು ಕ್ರಮ ಕೈಗೊಳ್ಳಲಾಗುವುದು. ಪೂರ್ವಾನುಮತಿ ಇಲ್ಲದೆ ಡಿಜೆ ವ್ಯವಸ್ಥೆಗಳು ಅಥವಾ ಧ್ವನಿವರ್ಧಕಗಳನ್ನು ಬಳಸುವಂತಿಲ್ಲ, ಧ್ವನಿವರ್ಧಕಗಳ ಪ್ರಮಾಣವು ಅನುಮತಿಸಲಾದ ಮಿತಿ ಮೀರಬಾರದು.
ಚುನಾವಣೆಗೆ ಸಂಬಂಧಿಸಿದ ಎಲ್ಲಾ ಅಭ್ಯರ್ಥಿಗಳ ಫ್ಲೆಕ್ಸ್, ಬೋರ್ಡ್‌ಗಳು, ಪೋಸ್ಟರ್‌ಗಳನ್ನು ತಕ್ಷಣ ತೆಗೆದು ಹಾಕಬೇಕು ಎಂದು ಸಭೆಯಲ್ಲಿ ತಿಳಿಸಲಾಯಿತು. ಕಾನೂನು ಉಲ್ಲಂಘನೆ ಕಂಡುಬಂದರೆ ಕಠಿಣ ಕಾನೂನು ಕ್ರಮ ಕೈಗೊಳ್ಳಲಾಗುವುದು ಎಂದು ಜಿಲ್ಲಾ ಪೊಲೀಸ್ ಮುಖ್ಯಸ್ಥರು ತಿಳಿಸಿದ್ದಾರೆ.
ವಿವಿಧ ರಾಜಕೀಯ ಪಕ್ಷಗಳ ಪ್ರತಿನಿಧಿಗಳಾದ ಪಿ.ಕೆ. ಫೈಸಲ್, ಎಂ.ಎ.ಕರೀಮ್, ಎನ್.ಬಾಬುರಾಜ್, ಹ್ಯಾರಿಸ್ ಚೂರಿ, ಮುಹಮ್ಮದ್ ಫಿರೋಜ್ ಎ., ಕೆ. ವಿಜಯಕುಮಾರ್, ವಿಜಯಕುಮಾರ್, ಚುನಾವಣಾ ಉಪ ಕಲೆಕ್ಟರ್ ಎ.ಎನ್.ಗೋಪ ಕುಮಾರ್ ವಿಶೇಷದಳ ಡಿವೈಎಸ್‌ಪಿ ಎಂ.ಸುನೀಲ್ ಕುಮಾರ್, ಜಿಲ್ಲಾ ಮಾಹಿತಿ ಅಧಿಕಾರಿ ಎಂ.ಮಧುಸೂಧನನ್ ಸಭೆಯಲ್ಲಿದ್ದರು.

ಸಮಯಮಿತಿ ಪಾಲಿಸಿ

ಮತ ಎಣಿಕೆಯ ದಿನದಂದು ರಾತ್ರಿ 7 ಗಂಟೆ ನಂತರ ಯಾವುದೇ ರೀತಿಯ ವಿಜಯೋತ್ಸವ ಅಥವಾ ಕಾರ್ಯಕ್ರಮಗಳನ್ನು ನಡೆಸಬಾರದು. ಸಮಯ ಮಿತಿಯನ್ನು ಕಟ್ಟುನಿಟ್ಟಾಗಿ ಪಾಲಿಸಬೇಕು. ಸಾರ್ವಜನಿಕ ಸ್ಥಳಗಳಲ್ಲಿ, ರಸ್ತೆಗಳಲ್ಲಿ ಅಥವಾ ಇತರ ಪಕ್ಷಗಳ ಕಾರ್ಯಕರ್ತರ ಮನೆಗಳ ಬಳಿ ಪಟಾಕಿಗಳನ್ನು ಬಳಸುವುದನ್ನು ಕಟ್ಟುನಿಟ್ಟಾಗಿ ನಿಷೇಧಿಸಲಾಗಿದೆ.
• ವಿಜಯ್ ಭರತ್ ರೆಡ್ಡಿ

ಸುತ್ತಮುತ್ತ

ಮೇ 6: ಮೆಸ್ಕಾಂ ಕೋಟ ಕಚೇರಿಯಲ್ಲಿ ಜನಸಂಪರ್ಕ ಸಭೆ

ಕೋಟ: ಮೆಸ್ಕಾಂ ಕೋಟ ಉಪವಿಭಾಗ ಕಚೇರಿಯಲ್ಲಿ ಮೇ 6ರಂದು ಸಮಯ ಬೆಳಿಗ್ಗೆ 10.30ರಿಂದ 12ಗಂಟೆಯವರೆಗೆ ಸಂಪರ್ಕ ಸಭೆ ನಡೆಯಲಿದ್ದು, ಮೆಸ್ಕಾಂನ ಅಧಿಕಾರಿಗಳು ಭಾಗವಹಿಸಲಿದ್ದಾರೆ. ಈ ಸಭೆಯಲ್ಲಿ ಸಂಬಂಧಪಟ್ಟ ಪ್ರದೇಶದ ಗ್ರಾಹಕರ ಅಹವಾಲುಗಳನ್ನು ಸ್ವೀಕರಿಸಲಾಗುವುದು. ಹೆಚ್ಚಿನ ಮಾಹಿತಿಗೆ ದೂರವಾಣಿ ಸಂಖ್ಯೆ 0820-2565386ನ್ನು ಸಂಪರ್ಕಿಸಬಹುದು ಎಂದು ಪ್ರಕಟಣೆ ತಿಳಿಸಿದೆ.

ಮೇ 5ರಂದು ವಿದ್ಯುತ್ ವ್ಯತ್ಯಯ

ಕುಂದಾಪುರ: ನಾವುಂದ ವಿದ್ಯುತ್ ಉಪಕೇಂದ್ರದಿಂದ ಹೊರಡುವ ಹೇರೂರು, ಕಿರಿಮಂಜೇಶ್ವರ, ಮರವಂತೆ, ಕಂಬದಕೋಣೆ ಹಾಗೂ ಬೈಂದೂರು ಮತ್ತು ಕೊಲ್ಲೂರು ಮಾರ್ಗದಲ್ಲಿ ತುರ್ತು ನಿರ್ವಹಣಾ ಕಾಮಗಾರಿಯನ್ನು ಮೇ 5ರಂದು ಬೆಳಿಗ್ಗೆ 9.30ರಿಂದ ಸಂಜೆ 5 ಗಂಟೆಯವರೆಗೆ ಹಮ್ಮಿಕೊಂಡಿರುವುದರಿಂದ ಬೈಂದೂರು ಮತ್ತು ಕೊಲ್ಲೂರು ಉಪಕೇಂದ್ರದಿಂದ ಹೊರಡುವ ಬೈಂದೂರು, ಉಪ್ಪುಂದ, ತಗ್ಗರ್ಸೆ, ಶಿರೂರು, ತೂದಳ್ಳಿ, ಗಂಗನಾಡು, ಯಳಜಿತ್, ಕೊಲ್ಲೂರು ಮತ್ತು ಮುದೂರು ಹಾಗೂ ನಾವುಂದ ವಿದ್ಯುತ್ ಉಪಕೇಂದ್ರದಿಂದ ಹೊರಡುವ ಹೇರೂರು, ಕಿರಿಮಂಜೇಶ್ವರ, ಮರವಂತೆ, ಕಂಬದಕೋಣೆ ಫೀಡರುಗಳಲ್ಲಿ ಬೈಂದೂರು, ಶಿರೂರು, ಪಡುವರಿ, ಉಪ್ಪುಂದ, ಯಡ್ತರೆ, ಬಿಜೂರು, ತಗ್ಗರ್ಸೆ, ಗಂಗನಾಡು, ಯಳಜಿತ್, ಮುದೂರು, ಕೊಲ್ಲೂರು, ನಾಯ್ಕನಕಟ್ಟೆ, ಕೆರ್ಗಾಲ್, ಅರೆಶಿರೂರು, ಗೋಳಿಹೊಳೆ, ಇಡೂರು, ಕಂಬದಕೋಣೆ, ಕಿರಿಮಂಜೇಶ್ವರ, ಮರವಂತೆ ಮತ್ತು ಹೇರೂರು ಗ್ರಾಮಗಳ ಸುತ್ತಮುತ್ತಲಿನ ಪ್ರದೇಶಗಳಲ್ಲಿ ವಿದ್ಯುತ್ ಸರಬರಾಜಿನಲ್ಲಿ ವ್ಯತ್ಯಯ ಮಾಡಲಾಗುತ್ತದೆ.

ಬೆಳ್ಳೆ ಸಡಂಬೈಲು -ಶ್ರೀ ಮರಳು ಧೂಮಾವತಿ ದೈವಸ್ಥಾನದಲ್ಲಿ ಪ್ರತಿಷ್ಠೆ

ಶಿರ್ವ: ಬೆಳ್ಳೆ ಗ್ರಾ.ಪಂ. ವ್ಯಾಪ್ತಿಯ ಸಡಂಬೈಲಿನ ಕಾರಣಿಕ ತಾಣ ಶ್ರೀ ಮರಳು ಧೂಮಾವತಿ ದೈವಸ್ಥಾನದಲ್ಲಿ ಮರಳು ಧೂಮಾವತಿ ದೈವದ ಪುನರ್ ಪ್ರತಿಷ್ಠೆ ಮತ್ತು ಬ್ರಹ್ಮಕಲಶಾಭಿಷೇಕ, ನೇಮ ಕಾರ್ಯಕ್ರಮಗಳು ವೇದಮೂರ್ತಿ ಅಂಡಾರು ವಿಶ್ವನಾಥ ತಂತ್ರಿಗಳ ನೇತೃತ್ವ, ಚಾಕರಿ ವರ್ಗದವರ ಸಹಭಾಗಿತ್ವದಲ್ಲಿ ಮೇ 6ರಂದು ಬೆಳಿಗ್ಗೆ 10.45ಕ್ಕೆ ನೆರವೇರಲಿದೆ. ಪೂರ್ವಭಾವಿಯಾಗಿ ಮೇ 5ರಂದು ನಾಂದಿ ಶ್ರಾದ್ಧ ಆಚಾರ್ಯ ವರಣ,ಆಚಾರ್ಯ ಸಂಕಲ್ಪ ತೋರಣ ಮುಹೂರ್ತ, ದ್ವಾದಶ ನಾರಿಕೇಲ ಗಣಯಾಗ, ಸಂಜೆ 5ರಿಂದ ಸಪ್ತಶುದ್ಧಿ ಸ್ಥಾನಶುದ್ಧಿ ಹೋಮ,ಪ್ರಾಸಾದ ಶುದ್ಧೀ ಪ್ರಕ್ರಿಯಾ, ವಾಸ್ತು ವಿದ್ಯಾ ಕಲಾಪಗಳು, ರಾಕ್ಷೋಘ್ನ ಹೋಮ, ವಾಸ್ತುಹೋಮ, ವಾಸ್ತು ಪೂಜಾ,ವಾಸ್ತು ಬಲಿ, ಜೀರ್ಣೋದ್ಧಾರ ಕಾಲದಲ್ಲಿ ಕ್ಷೇತ್ರದಲ್ಲಿ ಮಾಡಿದ ಖನನಾದಿ ದೋಷ ನಿವಾರಣೆಗೆ ತನು ತರ್ಪಣ, ಮಂಡಲಾರಾಧನೆ, ಬಿಂಬ ಶುದ್ಧಿ ಪ್ರಕ್ರಿಯಾ ಅ ವಾಸ, ಮೇ 6ರಂದು ಬೆಳಿಗ್ಗೆ 7ರಿಂದ ಬ್ರಹ್ಮಕಲಶ ಅಧಿವಾಸ, ಅಧಿವಾಸ ಹೋಮ, ಚಂಡಿಕಾ ಯಾಗಾರಂಭ, ಸುಮುಹೂರ್ತದಲ್ಲಿ ದೈವದ ಪ್ರತಿಷ್ಠೆ ಬ್ರಹ್ಮಕಲಶಾಭಿಷೇಕ, ಮಧ್ಯಾಹ್ನ 12ಕ್ಕೆ ಚಂಡಿಕಾ ಯಾಗದ ಪೂರ್ಣಾಹುತಿ, ದೈವದ ದರ್ಶನ ಸೇವೆ, ಸಂಜೆ 4ರಿಂದ ಭಂಡಾರ ಇಳಿದು ದೈವಗಳ ನೇಮ ನೇಮ ನೆರವೇರಲಿದೆ ಎಂದು ಜೀರ್ಣೋದ್ಧಾರ ಸಮಿತಿಯ ಪ್ರಕಟಣೆ ತಿಳಿಸಿದೆ.

ದ್ವಿತೀಯ ಪಿಯುಸಿಯಲ್ಲಿ ವಕ್ವಾಡಿ ಗುರುಕುಲಕ್ಕೆ ಶೇ. 100 ಫಲಿತಾಂಶ

ಕುಂದಾಪುರ: ಕೋಟೇಶ್ವರ ಬಾಂಡ್ಯ ಎಜುಕೇಶನಲ್ ಟ್ರಸ್ಟ್‌ನ ವಕ್ವಾಡಿ ಗುರುಕುಲ ಪದವಿ ಪೂರ್ವ ಕಾಲೇಜಿನ 35 ವಿದ್ಯಾರ್ಥಿಗಳು 2025 -26 ನೇ ಸಾಲಿನ ದ್ವಿತೀಯ ಪಿಯುಸಿ ವಾರ್ಷಿಕ ಪರೀಕ್ಷೆಗೆ ಹಾಜರಾಗಿದ್ದು 35 ವಿದ್ಯಾರ್ಥಿಗಳು ಉತ್ತೀರ್ಣರಾಗಿ ಶೇಕಡ 100 ಫಲಿತಾಂಶ ಬಂದಿದೆ. ಇದರಲ್ಲಿ 12 ಮಂದಿ ವಿಶಿಷ್ಟ ಶ್ರೇಣಿ ಮತ್ತು 23 ಮಂದಿ ಪ್ರಥಮ ದರ್ಜೆಯಲ್ಲಿ ಉತ್ತೀರ್ಣರಾಗಿದ್ದಾರೆಂದು ಕಾಲೇಜಿನ ಪ್ರಾಂಶುಪಾಲ ಡಾ. ರೂಪಾ ಶೆಣೈ ತಿಳಿಸಿದ್ದಾರೆ. ಕಾಲೇಜಿನ ವಿಜ್ಞಾನ ವಿಭಾಗದ ಅಮೃತ್ ಎಸ್. ಕೆ. (568), ಅಭಿಷೇಕ್ (566),ಯಶ್ವಂತ್ ಗೌಡ ಕೆ (552) ,ವಿಘ್ನೇಶ್ ಸಂತೋಷ ನಾಯ್ಕ್ (547), ವಾಣಿಜ್ಯ ವಿಭಾಗದ ಶಿಲ್ಪಾ ವಿ (566), ದರ್ಶನ್ ಎಂ ವೈ (561) ಕುಶಾಲ್ ಡಿ (538) ರವರು ಉತ್ತಮ ಅಂಕಗಳನ್ನು ಗಳಿಸಿದ್ದಾರೆ.

ಮೇ 5 ರಂದು ಮಣಿಪಾಲದಲ್ಲಿ ನೇರ ಸಂದರ್ಶನ

ಉಡುಪಿ: ಉದ್ಯೋಗ ಆಕಾಂಕ್ಷಿಗಳಿಗೆ ಮೇ 5 ರಂದು ಬೆಳಗ್ಗೆ 10.30 ಕ್ಕೆ ಮಣಿಪಾಲ್‌ನ ಮನೋಹರ್ ಭವನ ಹೋಟೆಲ್ ಮುಂಭಾಗದ ಮಣಿಪಾಲ್ ಪೇಮೆಂಟ್ ಐಡೆಂಟಿಟಿ ಸೊಲ್ಯೂಷನ್ ಲಿಮಿಟೆಡ್ ಇಲ್ಲಿ ವಿವಿಧ ಹುದ್ದೆಗಳಿಗೆ ನೇರ ಸಂದರ್ಶನ ಆಯೋಜಿಸಲಾಗಿದೆ. ಡಿಪ್ಲೋಮಾ, ಐ.ಟಿ.ಐ ಮತ್ತು ಇತರೆ ಪದವಿ ವಿದ್ಯಾರ್ಹತೆಯೊಂದಿಗೆ ಉತ್ತೀರ್ಣರಾದ ಅಭ್ಯರ್ಥಿಗಳು ತಮ್ಮ ಅಂಕಪಟ್ಟಿ ಸ್ವವಿವರವುಳ್ಳ ರೆಸ್ಯೂಮ್, ಸಿವಿ ಹಾಗೂ ಆಧಾರ್ ಕಾರ್ಡ್ನ ಪ್ರತಿಯೊಂದಿಗೆ ನೇರ ಸಂದರ್ಶನದಲ್ಲಿ ಭಾಗವಹಿಸಬಹುದಾಗಿದೆ. ಹೆಚ್ಚಿನ ಮಾಹಿತಿಗಾಗಿ ಜಿಲ್ಲಾ ಉದ್ಯೋಗ ವಿನಿಮಯ ಕಚೇರಿ, ಜಿಲ್ಲಾಧಿಕಾರಿ ಸಂಕೀರ್ಣ, ರಜತಾದ್ರಿ, ಮಣಿಪಾಲ, ಉಡುಪಿ ದೂರವಾಣಿ ಸಂಖ್ಯೆ: 8105618291, 9945856670 ಹಾಗೂ 9901472710 ಅನ್ನು ಸಂಪರ್ಕಿಸಬಹುದಾಗಿದೆ ಎಂದು ಜಿಲ್ಲಾ ಉದ್ಯೋಗ ವಿನಿಮಯ ಕೇಂದ್ರದ ಉದ್ಯೋಗಾಧಿಕಾರಿಗಳ ಕಚೇರಿ ಪ್ರಕಟಣೆ ತಿಳಿಸಿದೆ.





ಪಡುಬಿದ್ರಿ ಶ್ರೀ ಮಹಾಲಿಂಗೇಶ್ವರ ಮಹಾಗಣಪತಿ ದೇವಸ್ಥಾನದಲ್ಲಿ ಅದ್ದೂರಿ ಮಹಾರಥೋತ್ಸವ ಸಂಭ್ರಮ

ಶ್ರೀ ಮಹಾಲಿಂಗೇಶ್ವರ ದೇವರಿಗೆ ಬ್ರಹ್ಮ ಕುಂಭಾಭಿಷೇಕ

ಪಡುಬಿದ್ರಿ: ರೂ.33 ಕೋಟಿ ವೆಚ್ಚದಲ್ಲಿ ಸಮಗ್ರವಾಗಿ ಜೀರ್ಣೋದ್ಧಾರಗೊಂಡ ಪಡುಬಿದ್ರಿ ಶ್ರೀ ಮಹಾಲಿಂಗೇಶ್ವರ ಮಹಾಗಣಪತಿ ದೇವಸ್ಥಾನದಲ್ಲಿ ನೂತನವಾಗಿ ನಿರ್ಮಿಸಲ್ಪಟ್ಟ ಶಿಲಾಮಯ ಗರ್ಭಗುಡಿಯಲ್ಲಿ ಪ್ರತಿಷ್ಠಾಪನೆಗೊಂಡ ಶ್ರೀ ಮಹಾಲಿಂಗೇಶ್ವರ ದೇವರಿಗೆ ಬ್ರಹ್ಮ ಕುಂಭಾಭಿಷೇಕವು ಶ್ರೀ ಕ್ಷೇತ್ರದ ತಂತ್ರಿ ಕಂಬ್ಳಕಟ್ಟ ರಾಧಾಕೃಷ್ಣ ಉಪಾಧ್ಯಾಯರ ನೇತೃತ್ವದಲ್ಲಿ ಶನಿವಾರ ಜರಗಿತು.

ಆ ಪ್ರಯುಕ್ತ ಮೇ 2ರಂದು 2 ಗಂಟೆಯಿಂದ ಅಷ್ಟೋತ್ತರಶತ ನಾರಿಕೇಲ ಗಣಯಾಗ, ಮಹಾರುದ್ರಯಾಗ, ಗಣಪತಿದೇವರ ತತ್ವಕಲಶ ಪ್ರತಿಷ್ಠೆ, ತತ್ವಯಾಗ ಈಶ್ವರ ದೇವರ ಬ್ರಹ್ಮಕುಂಭ ಸಹಿತ ಸಹಸ್ರದ್ರವ್ಯ ಕಲಶಾಧಿವಾಸ, ಅ ವಾಸಯಾಗ, ಕಲಶಾಭಿಷೇಕ ಆರಂಭಗೊಂಡು ದಿವಾ ಗಂಟೆ 8.05ರ ವೃಷಭಲಗ್ನ ಸುಮುಹೂರ್ತದಲ್ಲಿ ಬ್ರಹ್ಮಕುಂಭಾಭಿಷೇಕವು ಜರಗಿತು.

ಬಳಿಕ ಪ್ರಸನ್ನ ಪೂಜೆ, ನ್ಯಾಸ ಪೂಜೆ, ಅವಭೃತ ಬಲಿ, ಮಹಾಪೂಜೆ, ಪ್ರತ್ಯಕ್ಷ ಗೋದಾನ, ಗಣಪತಿ ದೇವರ ತತ್ವಕಲಶಾಭಿಷೇಕ, ಪ್ರಸನ್ನ ಪೂಜೆ, ನ್ಯಾಸ ಪೂಜೆ, ಪಲ್ಲಪೂಜೆ, ರಥಾಧಿವಾಸ ಯಾಗ ರಥ ಸಂಪ್ರೋಕ್ಷಣೆ 11 ಗಂಟೆಗೆ ರಥಾರೋಹಣವು ವಿಜೃಂಭಣೆಯಿಂದ ನೆರವೇರಿತು. ಮಧ್ಯಾಹ್ನ ಮಹಾ ಅನ್ನಸಂತರ್ಪಣೆ ನಡೆಯಿತು. ಸಂಜೆ ದುರ್ಗಾರಾಧನೆ, ರಾತ್ರಿ ಗಂಟೆ 8ಕ್ಕೆ ಮಹಾರಥೋತ್ಸವವು ಸಾವಿರಾರು ಭಕ್ತರ ಪಾಲ್ಗೊಳ್ಳುವಿಕೆಯಲ್ಲಿ ವೈಭವೋಪೇತವಾಗಿ ಜರಗಿತು.

ಶ್ರೀಗಳಿಗೆ ಸಂಸ್ಥಾನ ಪೂಜೆ

ಬಳಿಕ ರಾತ್ರಿ ಪೂಜೆ, ನಿತ್ಯ ಬಲಿ, ಭೂತ ಬಲಿ, ಕವಾಟ ಬಂಧನ ಜರಗಿತು. ಜಗದ್ಗುರು ಶ್ರೀಮಧ್ವಾಚಾರ್ಯ ಮೂಲ ಮಹಾಸಂಸ್ಥಾನ ಶ್ರೀ ಪಲಿಮಾರು ಮಠಾಧೀಶ ಶ್ರೀ ವಿದ್ಯಾಧೀಶತೀರ್ಥ ಶ್ರೀಪಾದರು ಮತ್ತು ಕಿರಿಯ ಶ್ರೀಗಳಾದ ಶ್ರೀ ವಿದ್ಯಾರಾಜೇಶ್ವರತೀರ್ಥ ಶ್ರೀಪಾದರ ದಿವ್ಯಸಾನಿಧ್ಯ ಮತ್ತು ಸಂಸ್ಥಾನ ಪೂಜೆಯು ಜರಗಿತು.

ಈ ಸಂದರ್ಭ ಜೀರ್ಣೋದ್ಧಾರ ಸಮಿತಿಯ ಅಧ್ಯಕ್ಷ ಡಾ. ಕೆ.ಪ್ರಕಾಶ್ ಶೆಟ್ಟಿ ಗೌರವಾಧ್ಯಕ್ಷ ಶಾಸಕ



ಗುರ್ಮೆ ಸುರೇಶ್ ಶೆಟ್ಟಿ, ಮಾಜಿ ಸಚಿವರಾದ ವಿನಯ ಕುಮಾರ್ ಸೊರಕೆ, ಕೊರ್ನಾಯ ಪದ್ಮನಾಭ ರಾವ್, ಆನುವಂಶಿಕ ಮೊಕ್ತೇಸರ ರತ್ನಾಕರರಾಜ ಅರಸು ಕಿನ್ನಿಕ್ಕ ಬಲ್ಲಾಳ್, ಪೇಟೆಮನೆ ಭವಾನಿಶಂಕರ್ ಹೆಗ್ಡೆ, ಕೊರ್ನಾಯ ಶ್ರೀಪತಿ ರಾವ್, ಕಾರ್ಯ ನಿರ್ವಹಣಾಧಿಕಾರಿ ಕೆ. ರಾಜಗೋಪಾಲ ಉಪಾಧ್ಯಾಯ, ಅರ್ಚಕ ಎಚ್.ಪದ್ಮನಾಭ ಭಟ್, ವೈ. ಗುರುರಾಜ ಭಟ್, ಜೀರ್ಣೋದ್ಧಾರ ಸಮಿತಿಯ ಪ್ರಧಾನ ಕಾರ್ಯದರ್ಶಿ ಪಿ. ರಾಘವೇಂದ್ರ ನಾವಡ, ಕಾರ್ಯದರ್ಶಿಗಳಾದ ಶ್ರೀನಾಥ್ ಹೆಗ್ಡೆ ನಡ್ಸಾಲ್ ಗುತ್ತು, ವೈ. ಸುಕುಮಾರ್, ಸಹಕಾರ್ಯದರ್ಶಿಗಳಾದ ನವೀನ್‌ಚಂದ್ರ ಜೆ. ಶೆಟ್ಟಿ ಸುಚರಿತಾ, ಖಜಾಂಚಿ ಕಾರ್ಯನಿರ್ವಾಹಕ ಅಧಿಕಾರಿ ರಾಜಗೋಪಾಲ ಉಪಾಧ್ಯಾಯ, ಉಪಾಧ್ಯಕ್ಷರಾದ ರವೀಂದ್ರನಾಥ ಜಿ. ಹೆಗ್ಡೆ ಸದಾಶಿವ ಪಡುಬಿದ್ರಿ, ಪ್ರಶಾಂತ್ ಶೆಣೈ, ಭಾಸ್ಕರ್ ಕೆ., ಪ್ರಕಾಶ್ ದೇವಾಡಿಗ, ಸುಕುಮಾರ್ ಶ್ರೀಯಾನ್, ಸದಸ್ಯರಾದ ವೈ. ಗುರುರಾಜ್ ಭಟ್, ರಾಜೇಶ್ ಪಿ., ಪಿ.ಕೆ. ಸದಾನಂದ, ಬ್ರಹ್ಮಕಲಶೋತ್ಸವ ಸಮಿತಿಯ ಪ್ರಧಾನ ಕಾರ್ಯದರ್ಶಿ ಮುರಳಿನಾಥ ಶೆಟ್ಟಿ, ಉಪಾಧ್ಯಕ್ಷರಾದ ವೈ.ಎನ್. ರಮಚಂದ್ರ ರಾವ್, ಕೃಷ್ಣ ಶೆಟ್ಟಿ ಕಂಕಣಗುತ್ತು, ಪಿ.ಕೆ. ಸದಾನಂದ, ಅಶೋಕ್ ಸಾಲ್ಯಾನ್, ಪ್ರಶಾಂತ್ ಶೆಣೈ, ಭರತ್ ದೇವಾಡಿಗ, ಕಾರ್ಯದರ್ಶಿಗಳಾದ ಪ್ರಕಾಶ್ ದೇವಾಡಿಗ, ರಮಾಕಾಂತ್ ರಾವ್, ಗುರುಪ್ರಸಾದ್ ರಾವ್, ಪ್ರಮುಖರಾದ ಮಾತೃಮಂಡಳಿಯ ಗೌರವಾಧ್ಯಕ್ಷೆ ಆಶಾ ಪ್ರಕಾಶ್ ಶೆಟ್ಟಿ, ಶಕುಂತಳಾ ಬಿ. ಹೆಗ್ಡೆ, ಹೊರೆಕಾಣಿಕೆ ಸಮರ್ಪಣೆ ಸಮಿತಿ ಸಂಚಾಲಕರಾದ ಡಾ. ದೇವಿಪ್ರಸಾದ್ ಶೆಟ್ಟಿ ಬೆಳಪು, ಕೃಷ್ಣಾಪುರ ಶಾಖಾ ಮಠದ ಶ್ರೀನಿವಾಸ ಉಪಾಧ್ಯಾಯ, ಮಿಥುನ್ ಹೆಗ್ಡೆ, ಜಯ ಶೆಟ್ಟಿ ಪದ್ರ, ಉದಯ ಶೆಟ್ಟಿ ದರಟಗುತ್ತು, ಪೇಟೆಮನೆ ಪ್ರಕಾಶ್ ಶೆಟ್ಟಿ, ಮುರುಡಿ ಜಗದೀಶ್ ರಾವ್, ಸದಾಶಿವ ಆಚಾರ್, ವಿಷ್ಣುಮೂರ್ತಿ ಆಚಾರ್ಯ, ಶಶಿಕಾಂತ್ ಪಡುಬಿದ್ರಿ, ಪ್ರಕಾಶ್ ಶೆಟ್ಟಿ ಪಾದೆಬೆಟ್ಟು, ಸತೀಶ್ ಆಚಾರ್ಯ, ರಮಾಕಾಂತ ದೇವಾಡಿಗ, ಮುಂಬೈ ಸಮಿತಿ ಮಹೇಶ್ ಶೆಟ್ಟಿ, ಬೆಂಗಳೂರು ಸಮಿತಿಯ ಉಪೇಂದ್ರ ಶೆಟ್ಟಿ, ಡಾ. ವೈ. ಎನ್. ಶೆಟ್ಟಿ ಸುಧಾ ಆರ್. ನಾವಡ, ಬ್ರಹ್ಮಕಲಶೋತ್ಸವ ಮತ್ತು ಜೀರ್ಣೋದ್ಧಾರ ಸಮಿತಿಯ ಪದಾಧಿಕಾರಿಗಳು, ವಿವಿಧ ಉಪಸಮಿತಿಗಳ ಸಂಚಾಲಕರು, ಸರ್ವ ಸದಸ್ಯರು ಊರಿನ ಹತ್ತು ಸಮಸ್ತರು, ಭಕ್ತರು ಉಪಸ್ಥಿತರಿದ್ದರು.

> **ಭವ್ಯ-ಅದ್ಭುತವಾದ ದೇವಾಲಯ**
>
> ರುದ್ರ ದೇವರ ವಿಶೇಷ ಸನ್ನಿಧಾನವುಳ್ಳ ಈ ಪಡುಬಿದ್ರಿ ಕ್ಷೇತ್ರ ಒಂದು ದೇವಸ್ಥಾನ ಮತ್ತು ಭಕ್ತರು ಎಷ್ಟು ಗಟ್ಟಿಯಾಗಿದ್ದಾರೆ ಎಂಬುದಕ್ಕೆ ಒಳ್ಳೆಯ ಉದಾಹರಣೆಯಾಗಿದೆ. ಭವ್ಯ-ಅದ್ಭುತವಾದ ದೇವಾಲಯ ಪಡುಬಿದ್ರಿಯಲ್ಲಿ ನಿರ್ಮಾಣಗೊಳ್ಳುವಂತಾಗಿದೆ. ಸಮಸ್ತರಿಗೂ ಭಗವಂತನ ಅನುಗ್ರಹ ಇರಲಿ.
>
> ● ಶ್ರೀ ವಿದ್ಯಾರಾಜೇಶ್ವರತೀರ್ಥ ಶ್ರೀಪಾದರು, ಶ್ರೀ ಪಲಿಮಾರು ಮಠದ ಕಿರಿಯ ಶ್ರೀಗಳು

> **ರುದ್ರ ದೇವರ ಅನುಗ್ರಹ ರಕ್ಷೆ ಇರಲಿ**
>
> ಪಡುಬಿದ್ರಿ ಶ್ರೀ ಮಹಾಲಿಂಗೇಶ್ವರ ಮಹಾಗಣಪತಿ ದೇವಸ್ಥಾನವು ಭವ್ಯ ದೇಗುಲವಾಗಿ ಮೆರೆಯುತ್ತಿದ್ದು, ಜೀರ್ಣೋದ್ಧಾರ, ಬ್ರಹ್ಮಕಲಶೋತ್ಸವ ಈಡೇರಿಸುತ್ತಿರುವುದು ನಮ್ಮೆಲ್ಲರ ದೊಡ್ಡ ಸೌಭಾಗ್ಯ. ದಿನವೂ ನಡೆಯುವ ರುದ್ರಯಾಗಾದಿಗಳು ಜಗತ್ತಿಗೆ ಶಾಂತಿಯನ್ನು ಉಂಟುಮಾಡಲಿ. ಇನ್ನಷ್ಟು ವೃದ್ಧಿಯನ್ನು ಕರುಣಿಸಲಿ. ಎಲ್ಲಾ ಭಗವದ್ಭಕ್ತರಿಗೆ ರುದ್ರ ದೇವರ ಅನುಗ್ರಹ ರಕ್ಷೆ ಇರಲಿ.
>
> ● ಶ್ರೀ ವಿದ್ಯಾಧೀಶತೀರ್ಥ ಶ್ರೀಪಾದರು, ಶ್ರೀ ಪಲಿಮಾರು ಮಠಾಧೀಶರು

> **ಇಂದು ಮಹಾಗಣಪತಿ ದೇವರ ಬ್ರಹ್ಮಕುಂಭಾಭಿಷೇಕ**
>
> ಮೇ 3ರಂದು ಬೆಳಿಗ್ಗೆ ಗಂಟೆ 6ರಿಂದ ಕವಾಟೋದ್ಘಾಟನೆ, ದಂತಧಾವನಾದಿ ಪ್ರಕ್ರಿಯೆಗಳು, ಸುವರ್ಣೋತ್ಸವ, ಅಷ್ಟೋತ್ತರಶತ ನಾರಿಕೇಲ ಗಣಯಾಗ, ಮಹಾರುದ್ರ ಯಾಗ, ಗಣಪತಿ ದೇವರ ಬ್ರಹ್ಮಕುಂಭ ಸಹಿತ ತ್ರಿಶತ ಕಲಶಾಧಿವಾಸ, ಅಧಿವಾಸ ಯಾಗ, ದಿವಾ ಘಂಟೆ 9.49ರ ಮಿಥುನ ಲಗ್ನ ಸುಮುಹೂರ್ತದಲ್ಲಿ ಬ್ರಹ್ಮಕುಂಭಾಭಿಷೇಕ ಜರಗಲಿದೆ.

ಕಕುರ್ಂಜೆ: ಗೌತಮ ಬುದ್ಧ 2570ನೇ ಜಯಂತ್ಯುತ್ಸವ, ಕಾರ್ಮಿಕ ದಿನಾಚರಣೆ



ಕುಂದಾಪುರ: ಬೌದ್ಧವಿಹಾರ್ ಬುದ್ಧನಜೆಡ್ಡು ಟ್ರಸ್ಟ್ ಹಾಗೂ ಕರ್ನಾಟಕ ದಲಿತ ಸಂಘರ್ಷ ಸಮಿತಿ (ಭೀಮಘರ್ಜನೆ) ಜಿಲ್ಲಾ ಸಮಿತಿ, ಉಡುಪಿ ಇವರ ಸಂಯುಕ್ತ ಆಶ್ರಯದಲ್ಲಿ ಗೌತಮ ಬುದ್ಧ ಅವರ 2570ನೇ ಜಯಂತ್ಯುತ್ಸವ ಮತ್ತು ಕಾರ್ಮಿಕ ದಿನಾಚರಣೆ ಕಕುರ್ಂಜೆಯ ಬುದ್ಧನ ಜೆಡ್ಡುವಿನಲ್ಲಿ ಶುಕ್ರವಾರ ನಡೆಯಿತು.

ಬೌದ್ಧ ಉಪಾಸಕ ಮಂಜುನಾಥ ಗುಡ್ಡೆಯಂಗಡಿ, ಬುದ್ಧನ ಉಪದೇಶಗಳಾದ ಶಾಂತಿ, ಸಮಾನತೆ, ಸಹಜೀವನದ ಮಹತ್ವವನ್ನು ತಿಳಿಸಿದರು.

ಕರ್ನಾಟಕ ದಲಿತ ಸಂಘರ್ಷ ಸಮಿತಿ (ಭೀಮಘರ್ಜನೆ) ಸಂಸ್ಥಾಪಕ, ರಾಜ್ಯ ಸಂಚಾಲಕ ಉದಯ್ ಕುಮಾರ್ ತಲ್ಲೂರು, ಬುದ್ಧನ ವಿಚಾರಧಾರೆಗಳ ಬಗ್ಗೆ ಡಾ. ಬಿ.ಆರ್. ಅಂಬೇಡ್ಕರ್ ಬೌದ್ಧ ಧರ್ಮವನ್ನು ಸ್ವೀಕರಿಸಿದ ಬಗ್ಗೆ ಹಾಗೂ ಕಾರ್ಮಿಕ ಮಂತ್ರಿಯಾಗಿ ಅವರು ಕಾರ್ಮಿಕರಿಗೆ ನೀಡಿದ ಹಕ್ಕುಗಳು ಮತ್ತು ಸವಲತ್ತುಗಳ ಕುರಿತು ಮಾಹಿತಿ ನೀಡಿದರು. ರಾಜ್ಯ ಸದಸ್ಯ ಚಂದ್ರ ಅಲ್ತಾರ, ಜಿಲ್ಲಾ ಸಂಘಟನಾ ಸಂಚಾಲಕ ರಾಘು ಶಿರೂರು, ಬೈಂದೂರು ತಾಲೂಕು ಸಂಚಾಲಕ ಸಂದೇಶ್ ನಾಡ, ಕುಂದಾಪುರ ಸಂಘಟನಾ ಸಂಚಾಲಕ ರಾಮ ಬೆಳ್ಳಾಲ, ಕಾರ್ಕಳ ತಾಲೂಕು ಮಹಿಳಾ ಸಂಘಟನಾ ಸಂಚಾಲಕಿ ದುರ್ಗಿ ನಕ್ರೆ, ಜಿಲ್ಲಾ ಸಂಘಟನಾ ಸಂಚಾಲಕ ಸುರೇಂದ್ರ ಬಜಗೋಳಿ, ಸಿದ್ದಾಪುರ ಗ್ರಾಮ ಶಾಖೆಯ ಸಂಚಾಲಕ ಚಂದ್ರ ಕಾಸನ್ ಕಟ್ಟೆ, ಚಂದ್ರಮ ತಲ್ಲೂರು, ಸಂದೀಪ್ ನಾಡ, ಸದಾಶಿವ ಕೊಡ್ಲಾಡಿ, ನಾಗೇಶ್ ಅರಾಟ್, ರಾಘವೇಂದ್ರ ಹೆಂಜಾಲು, ಸತ್ಯನಾರಾಯಣ ಬೆಳ್ಳಾಲ, ಸಾದು ಗುಡ್ಡೆಯಂಗಡಿ, ಮಾರಿಯಪ್ಪ ಪಿಂಗಾಣಿ, ಗೌತಮ ತಲ್ಲೂರು, ಗಗನ್ ತಲ್ಲೂರು, ಜ್ಯೋತಿ ತಲ್ಲೂರು ಇದ್ದರು.

ಸಾಲಿಗ್ರಾಮ ಗಂಗಾರತಿ ಮಾದರಿಯಲ್ಲಿ ಶ್ರೀ ದೇವರಿಗೆ ನೆರವೇರಿತು ವಿಶಿಷ್ಟ ಸೇವೆ



ಕೋಟ: ಸಾಲಿಗ್ರಾಮ ಶ್ರೀ ಗುರು ನರಸಿಂಹ ದೇವಸ್ಥಾನದಲ್ಲಿ ಕೂಟ ಮಹಾ ಜಗತ್ತು ಸಾಲಿಗ್ರಾಮ ಸಂಸ್ಥೆ ನೇತೃತ್ವದಲ್ಲಿ ಶ್ರೀ ಗುರು ನರಸಿಂಹ ಜಯಂತಿಯ ಪ್ರಯುಕ್ತ ಶ್ರೀ ಗುರು ನರಸಿಂಹ ಮತ್ತು ಶ್ರೀ ಆಂಜನೇಯ ದೇವರಿಗೆ ಬೃಹತ್ ಮಟ್ಟದಲ್ಲಿ ವೈಭವ ಪೂರ್ಣ ರಥಾರತಿ ಕಾರ್ಯಕ್ರಮ ಆಯೋಜಿಸಿತು.

ಬೆಳಿಗ್ಗೆ ವಿವಿಧ ವಿಶೇಷ ಧಾರ್ಮಿಕ ಕಾರ್ಯಕ್ರಮಗಳು ಜರಗಿದವು. ಸಂಜೆ 6 ಗ. ಕಾಶಿ ಆಯೋಧ್ಯ ಹರಿದ್ವಾರ ಮುಂತಾದ ಪವಿತ್ರ ಕ್ಷೇತ್ರಗಳಲ್ಲಿ ಜರುಗುವ ವೈಭವದ ಗಂಗಾರತಿಯ ಮಾದರಿಯಲ್ಲಿ ಶ್ರೀ ಗುರು ನರಸಿಂಹ, ಶ್ರೀ ಆಂಜನೇಯ, ಪರಿವಾರ ದೇವರಿಗೆ ವಿಶಿಷ್ಟ ಸೇವೆ ಸಲ್ಲಿಸಲಾಯಿತು.

ರಥಾರತಿ ಹಿನ್ನೆಲೆ ರಾಜ್ಯದ ಮೂಲೆ ಮೂಲೆಗಳಿಂದ ಭಕ್ತಾದಿಗಳು ಆಗಮಿಸಿ ದೇವರ ಕೃಪೆಗೆ ಪಾತ್ರರಾದರು. ರಥಾರತಿ ಕಾರ್ಯಕ್ರಮವನ್ನ ಅಖಿಲ ಕರ್ನಾಟಕ ಬ್ರಾಹ್ಮಣ ಮಹಾಸಭೆಯ ಯುವ ವಿಭಾಗದ ರಾಜ್ಯ ಸಂಚಾಲಕ ಉಮೇಶ್ ಶಾಸ್ತ್ರೀ ದೇಗುಲದ ಅಧ್ಯಕ್ಷ ಪ್ರಕಾಶ್ ಕಾರಂತ್ ಪರಿಕಲ್ಪನೆ ಮತ್ತು ಉಸ್ತುವಾರಿಯಲ್ಲಿ ಉಡುಪಿ ಜಿಲ್ಲೆಯ ಹಲವಾರು ಸಂಘ ಸಂಸ್ಥೆಗಳ ಸಹಯೋಗದೊಂದಿಗೆ ನೆರವೇರಿತು. ಈ ನೂತನ ವಿಶಿಷ್ಟ ರಥಾರತಿ ಮಹಾ ಸೇವೆಯನ್ನು ಸುಮಾರು 3000ಕ್ಕೂ ಹೆಚ್ಚಿನ ಗುರುಭಕ್ತರು ಕಣ್ತುಂಬಿಕೊಂಡರು.

ಶಿರೂರು: ಎಸ್ಸೆಸ್ಸೆಲ್ಸಿ, ಪಿಯುಸಿ ಸಾಧಕ ವಿದ್ಯಾರ್ಥಿಗಳಿಗೆ ಸನ್ಮಾನ



ಬೈಂದೂರು: 2025-26ನೇ ಸಾಲಿನ ಶಿರೂರು ಸರ್ಕಾರಿ ಪ್ರೌಢಶಾಲೆಯ ಎಸ್ಸೆಸೆಲ್ಸಿ ಪರೀಕ್ಷೆಯಲ್ಲಿ ಪ್ರಥಮ ಸ್ಥಾನ ಪಡೆದ ಡುಬುಲ್ ಆಯಿಷಾ ನಿದಾ ಹಾಗೂ ಪದವಿ ಪೂರ್ವ ಕಾಲೇಜಿನ ಪಿಯುಸಿ ಕಲಾ ವಿಭಾಗದಲ್ಲಿ ಉಡುಪಿ ಜಿಲ್ಲೆಗೆ ಟಾಪರ್ ಆಗಿರುವ ಅಮೀಮಾ ಅಂಜುಮ್ ಇವರಿಗೆ ಕರ್ನಾಟಕ ರಾಜ್ಯ ಶಾಲಾ ಅಭಿವೃದ್ಧಿ ಮತ್ತು ಮೇಲುಸ್ತುವಾರಿ ಸಮಿತಿ ಸಮನ್ವಯ ವೇದಿಕೆ ಸಂಘಟನೆ ಮಹಾಪೋಷಕ, ಶಿಕ್ಷಣ ತಜ್ಞ, ಸಂಘಟನೆಯ ಸಂಸ್ಥಾಪಕ ಡಾ. ವಿ.ಪಿ. ನಿರಂಜನ್ ಆರಾಧ್ಯ ಮಾರ್ಗದರ್ಶನದಂತೆ ಸನ್ಮಾನಿಸಲಾಯಿತು. ಈ ಸಾಲಿನ ಅತ್ಯುತ್ತಮ ಫಲಿತಾಂಶಕ್ಕೆ ಕಾರಣರಾದ ಉಪ ಪ್ರಾಂಶುಪಾಲೆ ಜಯಂತಿ ಶೆಟ್ಟಿ ಇವರಿಗೂ ಗೌರವಿಸಲಾಯಿತು.

ಜಿಲ್ಲಾ ಸಂಚಾಲಕ, ಬೈಂದೂರು ತಾಲೂಕು ಅಧ್ಯಕ್ಷ ಹರಿಶ್ಚಂದ್ರ ಆಚಾರ್ಯ, ಎನ್‌ಡಬ್ಲ್ಯುಎ ಸದಸ್ಯ ಮಝುರುದ್ದೀನ್, ಅಲಿಬಾವು ಕಲಾಂ, ಬುವಾಜಿ ಮೊಹ್ಸಿನ್, ದುಬೈ ಸಮಿತಿಯ ಸದಸ್ಯ ಎಚ್. ಕಾಸಿಂ, ಶಿಕ್ಷಕಿ ನಾಗವೇಣಿ ಪಟಗಾರ, ಉಪಾಧ್ಯಕ್ಷೆ ಬೀಬಿ ಅಸ್ಮಾ, ಎಸ್‌ಡಿಎಂಸಿ ಸಮನ್ವಯ ವೇದಿಕೆ ಸಂಘಟನಾ ಕಾರ್ಯದರ್ಶಿ ಗೀತಾ ಶೆಟ್ಟಿ, ವಿನೋದ್ ಪೂಜಾರಿ, ನಾಗರತ್ನ ಹಾಗೂ ವಿದ್ಯಾಭಿಮಾನಿಗಳು ಉಪಸ್ಥಿತರಿದ್ದರು. ಎಸ್‌ಡಿಎಂಸಿ ಸಮನ್ವಯ ವೇದಿಕೆ ಜಿಲ್ಲಾಧ್ಯಕ್ಷೆ ಹಾಗೂ ರಾಜ್ಯ ಖಜಾಂಚಿ ಜ್ಯೋತಿ ಜಯರಾಮ್ ಶೆಟ್ಟಿ ಸ್ವಾಗತಿಸಿದರು. ಹಡವಿನಕೋಣೆ ಶಾಲೆಯ ಎಸ್‌ಡಿಎಂಸಿ ಅಧ್ಯಕ್ಷ ಕಚ್ಚಿ ಮೊಹಮ್ಮದ್ ಮುಷ್ತಾಕ್ ವಂದಿಸಿದರು.

ಶ್ರೀ ಅಘೋರೇಶ್ವರ ಮೆಲೋಡೀಸ್ ಗ್ರೂಪ್ ಸಂಗೀತ ತರಬೇತಿ ಕೇಂದ್ರದಿಂದ ಚಿತ್ರಕಲಾ ಸ್ಪರ್ಧೆ | ನರೇಂದ್ರಕುಮಾರ್ ಅಭಿಪ್ರಾಯ

ಡಾ.ಬಿ.ಆರ್. ಅಂಬೇಡ್ಕರ್ ಕೊಡುಗೆ ಸರ್ವ ಜನಾಂಗಕ್ಕೂ ದಾರಿದೀಪವಾದದ್ದು

ಕೋಟ: ಶ್ರೀ ಅಘೋರೇಶ್ವರ ಮೆಲೋಡೀಸ್ ಗ್ರೂಪ್ ಸಂಗೀತ ತರಬೇತಿ ಕೇಂದ್ರ ಕೋಟ ಆರ್ಪಿಸುವ, ಡಾ. ಬಿ.ಆರ್. ಅಂಬೇಡ್ಕರ್ ಅವರ 135ನೇ ಜನ್ಮದಿನದ ಪ್ರಯುಕ್ತ ತಾಲೂಕು ಮಟ್ಟದ ಚಿತ್ರಕಲಾ ಸ್ಪರ್ಧೆ ಶ್ರೀ ಅಮೃತೇಶ್ವರಿ ಸಭಾಭವನದಲ್ಲಿ ನಡೆಯಿತು.

ಕಾರ್ಯಕ್ರಮದಲ್ಲಿ ದೀಪ ಬೆಳಗಿಸಿ ಮಾತನಾಡಿದ ಜಿಲ್ಲಾ ರಾಜ್ಯೋತ್ಸವ ಪ್ರಶಸ್ತಿ ಪುರಸ್ಕೃತ ಶಿಕ್ಷಕ ನರೇಂದ್ರಕುಮಾರ್ ಕೋಟ, ಸುಮಾರು ವರ್ಷಗಳಿಂದ ಹಲವಾರು ಗಾಯಕರನ್ನು ಹುಟ್ಟು ಹಾಕಿ, ಹಲವಾರು ಕಲಾವಿದರನ್ನು ಬೆಳೆಸಿದ ಶ್ರೀ ಅಘೋರೇಶ್ವರ ಮೆಲೋಡೀಸ್ ತಂಡದ ಮೂಲಕ ಈ ಭಾಗದಲ್ಲಿರುವ ಸಂಗೀತಗಾರರಿಗೆ ವೇದಿಕೆಯನ್ನು ಕಲ್ಪಿಸಿದ ರವಿ ಬನ್ನಾಡಿಯ ಕಾರ್ಯ ನಿಜಕ್ಕೂ ಶ್ಲಾಘನೀಯ ಎಂದರು.



ಡಾ.ಬಿ.ಆರ್. ಅಂಬೇಡ್ಕರ್ ಕೊಡುಗೆ ಒಂದು ಜನಾಂಗಕ್ಕೆ ಅಲ್ಲ, ಅದು ಸರ್ವ ಜನಾಂಗಕ್ಕೂ ದಾರಿದೀಪವಾದದ್ದು ಎಂದು ಹೇಳಿದರು.

ಕಾರ್ಯಕ್ರಮದಲ್ಲಿ ಮುಖ್ಯ ಅತಿಥಿಗಳಾಗಿ ವಕೀಲ ಟಿ. ಮಂಜುನಾಥ್ ಗಿಳಿಯಾರು ಮಾತನಾಡಿ, ಶ್ರೀ ಅಘೋರೇಶ್ವರ ಮೆಲೋಡೀಸ್ ಗ್ರೂಪ್ ಕೋಟ ಇವರು ಬಹಳ ವೈಶಿಷ್ಟ್ಯ ಪೂರ್ಣ ಕಾರ್ಯಕ್ರಮ ಜೊತೆಗೆ ಈ ಸಂಗೀತ ಸಂಸ್ಥೆಗೆ ಅಭಿನಂದನೆಗಳನ್ನು ಸಲ್ಲಿಸುತ್ತಿದ್ದೇನೆ. ಹಾಗೆ ಅಂಬೇಡ್ಕರ್ ಅವರ 135 ದಿನ ಜನ್ಮದಿನಾಚರಣೆ ಅಂಗವಾಗಿ ಸಂಸ್ಥೆ ಒಳ್ಳೆಯ ಕಾರ್ಯಕ್ರಮವನ್ನು ಹಮ್ಮಿಕೊಂಡಿದೆ. ತಾಲೂಕು ಮಟ್ಟದ ಚಿತ್ರಕಲಾ ಸ್ಪರ್ಧೆಯನ್ನು ಏರ್ಪಡಿಸಿದ್ದು ಕರಾವಳಿ ಭಾಗದ ಮಕ್ಕಳಿಗೆ ಅಂಬೇಡ್ಕರ್ ಭಾವಚಿತ್ರವನ್ನು ಬಿಡಿಸುವ ಒಂದು ಸುಂದರ ಕಾರ್ಯಕ್ರಮವನ್ನು ಹಮ್ಮಿಕೊಂಡಿದ್ದು ನಿಜಕ್ಕೂ ಶ್ಲಾಘನೀಯ ಎಂದರು.

ಮಕ್ಕಳು ಅಂಬೇಡ್ಕರ್ ಅವರ ಜೀವನ ಗಾಥೆಯ ಪುಸ್ತಕವನ್ನು ಎಲ್ಲ ಮಕ್ಕಳು ಅದನ್ನು ಓದಿ ಅರಿತುಕೊಳ್ಳಬೇಕು. ಅಂಬೇಡ್ಕರ್ ಅವರು ಈ ದೇಶದ ಮಹಾನಾಯಕ ಎಂದು ಬಣ್ಣಿಸಿದರು. ಶ್ರೀ ಅಮೃತೇಶ್ವರಿ ವ್ಯವಸ್ಥಾಪನ ಸಮಿತಿಯ ಅಧ್ಯಕ್ಷ ಆನಂದ ಸಿ ಕುಂದರ್ ಶುಭ ಹಾರೈಸಿದರು.

ವಿಶೇಷ ಆಹ್ವಾನಿತ ಜೀ ಕನ್ನಡದ ಕಾಮಿಡಿ ಕಿಲಾಡಿ ಕಲಾವಿದ ನಾಗರಾಜ್ ತೆಕ್ಕಟ್ಟೆ ಇವರನ್ನು ಗೌರವಿಸಲಾಯಿತು. ರವಿ ಬನ್ನಾಡಿ ಫೇಸ್‌ಬುಕ್ ಪೇಜ್ 50ನೇ ಸಂಚಿಕೆಯ ಅಂಗವಾಗಿ ಚಿತ್ರಕಲಾ ಸ್ಪರ್ಧೆಯನ್ನು ಆಯೋಜಿಸಲಾಗಿತ್ತು. ಶ್ರೀ ಶಾಸ್ತ ಮೊಬೈಲ್ ಸೆಂಟರ್ ಕೋಟ ಮಾಲಿಕ ಆದಿತ್ಯ ಕೋಟ ಹಾಗೂ ಚಿತ್ರಕಲಾ ಸ್ಪರ್ಧೆಯ ನಿರ್ಣಾಯಕರಾಗಿರುವ ಗಿರೀಶ್ ಆಚಾರ್ಯ ವಕ್ವಾಡಿ ಇವರು ತಾಲೂಕು ಮಟ್ಟದ ಚಿತ್ರಕಲ ಸ್ಪರ್ಧೆಯಲ್ಲಿ ವಿಜೇತರಾದ ಮಕ್ಕಳಿಗೆ ಬಹುಮಾನವನ್ನು ವಿತರಿಸಿದರು.

ಕುಂದಾಪುರ ತಾಲೂಕು ಪ್ರಧಾನ ಸಂಚಾಲಕ ರಾಜು ಬೆಟ್ಟಿನಮನೆ, ನೇತಾಜಿ ಹಿರಿಯ ಪ್ರಾಥಮಿಕ ಶಾಲೆಯ ಎಸ್‌ಡಿಎಂಸಿ ಸದಸ್ಯರಾದ ದಿನಕರ ಆಚಾರ್ಯ ಕಂಡ್ಲೂರು, ಶ್ರೀ ಅಮೃತೇಶ್ವರಿ ವ್ಯವಸ್ಥಾಪನ ಸಮಿತಿಯ ಸದಸ್ಯ ಗಣೇಶ್ ನೆಲ್ಲಿಬೆಟ್ಟು, ಕೋಟ ಸಿಎ ಬ್ಯಾಂಕ್ ನಿರ್ದೇಶಕ ರಂಜಿತ ಬಾರಿಕೆರೆ ಉಪಸ್ಥಿತರಿದ್ದರು.